ಶನಿವಾರ, ಡಿಸೆಂಬರ್ 2, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 332 | ಪುಟ 18
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಪ್ರಜಾಪ್ರಭುತ್ವದ ಪ್ರತಿಪಾದಕಿ. ಸಮಾನತೆಗಾಗಿ ಸದಾ ಶ್ರಮಿಸುವ, ಮಿಡಿಯುವ ಜೀವ ನಜ್ಮಾ ಬಾಗಿ



ಕರ್ನಾಟಕ 30 25 ವರ್ಷಗಳ ಮುನ್ನೋಟ 9
ಇ.ಡಿ ಅಧಿಕಾರಿ ಬಂಧನ 3A
‘ತಡೆಹಿಡಿದ ಮಸೂದೆ ರಾಷ್ಟ್ರಪತಿಗೆ ಕಳಿಸುವಂತಿಲ್ಲ’ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
67,481 ▲	20,267 ▲	₹64,650 (ಬೆಂಗಳೂರು)	₹78,100 (ಬೆಂಗಳೂರು)	83.33 ▲

ಬೆಂಗಳೂರಿನ 68 ಶಾಲೆಗಳಿಗೆ ಇ– ಮೇಲ್‌ನಲ್ಲಿ ಬೆದರಿಕೆ, ಪೋಷಕರಲ್ಲಿ ಆತಂಕ

ತಲ್ಲಣ ತಂದ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವ್ಯಾಪ್ತಿಯ 48 ಹಾಗೂ ಗ್ರಾಮಾಂತರ ವಿಭಾಗದ 20 ಶಾಲೆಗಳೂ ಸೇರಿದಂತೆ ಒಟ್ಟು 68 ಶಾಲೆಗಳಿಗೆ ಶುಕ್ರವಾರ ಬೆಳಿಗ್ಗೆ ತಲುಪಿದ ಬಾಂಬ್ ಬೆದರಿಕೆ ಹೊತ್ತ ಇ-ಮೇಲ್, ಶಾಲೆಗಳ ಆವರಣದಲ್ಲಿ ತಲ್ಲಣಕ್ಕೆ ಕಾರಣವಾಯಿತು.

ಬಾಂಬ್ ಬೆದರಿಕೆಯ ಸುದ್ದಿ ಕಿವಿಗೆ ಬೀಳುತ್ತಿದ್ದಂತೆ ತಮ್ಮ ಮಕ್ಕಳನ್ನು ಕರೆತರಲು ಪೋಷಕರು ತಂಡೋಪ ತಂಡವಾಗಿ ಶಾಲೆಗಳ ಕಡೆ ದೌಡಾಯಿಸಿದರು. ಇದರಿಂದಾಗಿ ಶಾಲಾ ಅಂಗಳಗಳಲ್ಲಿ ಆತಂಕ ಮನೆ ಮಾಡಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು, ಶಾಲೆಗಳ ಆವರಣಗಳಲ್ಲಿ ಶೋಧ ಆರಂಭಿಸಿದರು. ಸದಾಶಿವ ನಗರದ ಶಾಲೆಯೊಂದಕ್ಕೆ ಭೇಟಿ ಕೊಟ್ಟ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶಿಕ್ಷಕರು, ಮಕ್ಕಳಲ್ಲಿ ಧೈರ್ಯ ತುಂಬುವ ಯತ್ನ ಮಾಡಿದರು. ಪೊಲೀಸರು ಶೋಧ ನಡೆಸಿದ ಬಳಿಕ, ಯಾವುದೇ ಬಾಂಬ್ ಪತ್ತೆಯಾಗದಿದ್ದಾಗ ಇದೊಂದು ಹುಸಿ ಬೆದರಿಕೆ ಎಂಬುದು ಮಧ್ಯಾಹ್ನದ ಹೊತ್ತಿಗೆ ಖಚಿತವಾಯಿತು.

ಬೆಂಗಳೂರಿನ ಪೂರ್ಣಪ್ರಜ್ಞಾ ಶಾಲೆಯಿಂದ ಪೋಷಕರು ಮಕ್ಕಳನ್ನು ಮನೆಗೆ ಕರೆದುಕೊಂಡು ಹೋದರು –ಪ್ರಜಾವಾಣಿ ಚಿತ್ರ

ಬೆದರಿಕೆಯ ಇ- ಮೇಲ್ ಕಳುಹಿಸಿ, ಭಯ ಸೃಷ್ಟಿಗೆ ಕಾರಣರಾದ ಆರೋಪಿಗಳ ಪತ್ತೆಗೆ ಪೊಲೀಸರು ಕಾರ್ಯಾಚರಣೆ ಚುರುಕುಗೊಳಿಸಿದ್ದಾರೆ.

ನಗರ ವ್ಯಾಪ್ತಿಯಲ್ಲೇ 48 ಪೊಲೀಸ್ ಠಾಣೆ ವ್ಯಾಪ್ತಿಯ ಶಾಲೆಗಳಿಗೆ ಬೆದರಿಕೆ ಬಂದಿದ್ದು, ಪ್ರಕರಣವನ್ನು ಸಿಸಿಬಿಗೆ ವರ್ಗಾಯಿಸಲಾಗಿದೆ. ಸಿಸಿಬಿ ವಿಭಾಗದ ಡಿಸಿಪಿ ಶ್ರೀನಿವಾಸ್‌ಗೌಡ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ.

kharijjitas@bebbel.com ನಿಂದ ಇ-ಮೇಲ್ ಬಂದಿದೆ. ಅಂತರ-ರಾಷ್ಟ್ರೀಯ ವಿಚಾರಗಳನ್ನು ಪ್ರಸ್ತಾಪಿಸಿ ಇ-ಮೇಲ್ ಬರೆಯಲಾಗಿದ್ದು, ವಿಪಿಎನ್ ಸಂಪರ್ಕದ ಮೂಲಕ ವಿದೇಶದಿಂದ ಇ-ಮೇಲ್ ಬಂದಿರುವಂತೆ ರವಾನಿಸಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಲ್ಲಾಹುವಿನ ಶತ್ರುಗಳನ್ನು ಬಿಡುವುದಿಲ್ಲ’

‘ಶಾಲಾ ಮೈದಾನದಲ್ಲಿ ಸ್ಫೋಟಕಗಳನ್ನು ಇರಿಸಲಾಗಿದೆ. ನ.26ರಂದು ಅಲ್ಲಾಹುವಿನ ಮಾರ್ಗದಲ್ಲಿ ನಮ್ಮ ಹುತಾತ್ಮರು ನೂರಾರು ಮೂರ್ತಿ ಪೂಜಕರನ್ನು ಹತ್ಯೆ ಮಾಡಿದ್ದಾರೆ. ನೂರಾರು ಮುಜಾಹಿದ್‌ಗಳು ಅಲ್ಲಾಹುವಿನ ಮಾರ್ಗದಲ್ಲಿ ಹೋರಾಟ ನಡೆಸಲು ಈಗ ಸಜ್ಜಾಗಿದ್ದೇವೆ. ನೀವು ಅಲ್ಲಾಹುವಿನ ಶತ್ರುಗಳು. ನಿಮ್ಮನ್ನು ಹಾಗೂ ನಿಮ್ಮ ಮಕ್ಕಳನ್ನು ಬಿಡುವುದಿಲ್ಲ’ ಎಂದು ಇ- ಮೇಲ್‌ನಲ್ಲಿ ಪ್ರಸ್ತಾಪಿಸಲಾಗಿದೆ.

4ನೇ ಪುಟ ನೋಡಿ

‘ಇ-ಮೇಲ್ ಬಂದಿರುವ ಶಾಲೆಗಳ ಕೊಠಡಿ, ಶಿಕ್ಷಕರ ಕೊಠಡಿ, ಮೈದಾನ ಹಾಗೂ ಇತರೆ ಎಲ್ಲ ಸ್ಥಳಗಳಲ್ಲೂ ಶೋಧ ನಡೆಸಲಾಗಿದೆ’.

4ನೇ ಪುಟ ನೋಡಿ

‘ಶ್ರೀಮಂತ ದೇಶಗಳು ಪರಿಸರಕ್ಕೆ ಇಂಗಾಲ ಸೇರ್ಪಡೆ ತಗ್ಗಿಸಲಿ’

‘ಗ್ರೀನ್ ಕ್ರೆಡಿಟ್ ಉಪಕ್ರಮ’ಕ್ಕೆ ಪ್ರಧಾನಿ ಮೋದಿ ಚಾಲನೆ

ದುಬೈ(ಪಿಟಿಐ/ ರಾಯಿಟರ್ಸ್): ಪರಿಸರಕ್ಕೆ ಇಂಗಾಲದ ಡೈಆಕ್ಸೈಡ್ ಸೇರ್ಪಡೆಗೊಳಿಸುವುದನ್ನು ಶ್ರೀಮಂತ ರಾಷ್ಟ್ರಗಳು 2050ರೊಳಗೆ ಸಂಪೂರ್ಣವಾಗಿ ತಗ್ಗಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಪ್ರತಿಪಾದಿಸಿದ್ದಾರೆ.

ಹವಾಮಾನ ಬದಲಾವಣೆಯಿಂದ ಆಗುವ ಪರಿಣಾಮಗಳನ್ನು ತಡೆಯುವುದಕ್ಕಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ತಂತ್ರಜ್ಞಾನ ವರ್ಗಾವಣೆ ಹಾಗೂ ಹಣಕಾಸು ನೆರವು ನೀಡುವ ಬಗ್ಗೆ ವಿಶ್ವ ಸಮುದಾಯವು ವಾಸ್ತವಿಕ ಫಲಿತಾಂಶ ದೊರೆಯುವುದನ್ನು ಖಾತ್ರಿಪಡಿಸಬೇಕು ಎಂದೂ ಹೇಳಿದ್ದಾರೆ.

ದುಬೈನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ ‘ಸಿಒಪಿ28’ ಹವಾಮಾನ ಶೃಂಗಸಭೆಯಲ್ಲಿ ಗೋಷ್ಠಿಯೊಂದನ್ನು ಉದ್ದೇಶಿಸಿ ಅವರು ಮಾತನಾಡಿದರು.

11ನೇ ಪುಟ ನೋಡಿ

‘ಹವಾಮಾನ ನಿಧಿ’ ಘೋಷಿಸಿದ ಯುಎಇ

ಜಾಗತಿಕವಾಗಿ ಹವಾಮಾನ ಬದಲಾವಣೆಯಿಂದ ಆಗುವ ಪರಿಣಾಮಗಳನ್ನು ತಡೆಯುವುದಕ್ಕಾಗಿ ₹2.5 ಲಕ್ಷ ಕೋಟಿ ಮೊತ್ತದ ‘ಹವಾಮಾನ ನಿಧಿ’ ಸ್ಥಾಪಿಸುವುದಾಗಿ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೇದ್ ಶುಕ್ರವಾರ ಘೋಷಿಸಿದ್ದಾರೆ. ವಿಶ್ವಸಂಸ್ಥೆಯ ‘ಸಿಒಪಿ28’ ಹವಾಮಾನ ಶೃಂಗಸಭೆಯಲ್ಲಿ ಅವರು ಈ ಘೋಷಣೆ ಮಾಡಿದ್ದಾರೆ.

ಈ ದಶಕದ ಅಂತ್ಯದ ವೇಳೆಗೆ, ಹವಾಮಾನ ಬದಲಾವಣೆ ತಡೆಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಈ ನಿಧಿಯು ₹ 20 ಲಕ್ಷ ಕೋಟಿ ಹೂಡಿಕೆಯನ್ನು ಆಕರ್ಷಿಸುವ ಆಶಯವನ್ನು ಅವರು ವ್ಯಕ್ತಪಡಿಸಿದ್ದಾರೆ.

‘ಹವಾಮಾನ ನಿಧಿ’ಯ ಪೈಕಿ ₹ 2 ಲಕ್ಷ ಕೋಟಿ ಮೊತ್ತವನ್ನು ಹವಾಮಾನ ಬದಲಾವಣೆ ತಡೆಯಲು ಜಾರಿಗೊಳಿಸುವ ಕಾರ್ಯತಂತ್ರಗಳಿಗೆ ಒದಗಿಸಲಾಗುತ್ತದೆ. ಉಳಿದ ಮೊತ್ತವನ್ನು ಭೌಗೋಳಿಕವಾಗಿ ದಕ್ಷಿಣದಲ್ಲಿರುವ ದೇಶಗಳಿಗೆ ಪ್ರೋತ್ಸಾಹ ರೂಪದ ಹೂಡಿಕೆಯಾಗಿ ನೀಡಲಾಗುತ್ತದೆ’ ಎಂದು ‘ಸಿಒಪಿ28’ ಅಧ್ಯಕ್ಷರು ತಿಳಿಸಿದ್ದಾರೆ.

‘2028ರ ಶೃಂಗಸಭೆ ಭಾರತದ ಆತಿಥ್ಯ’

2028ರಲ್ಲಿ ನಡೆಯುವ ‘ಸಿಒಪಿ33’ ಹವಾಮಾನ ಶೃಂಗಸಭೆಯ ಆತಿಥ್ಯವನ್ನು ಭಾರತ ವಹಿಸಲಿದೆ ಎಂಬ ಪ್ರಸ್ತಾವನೆಯನ್ನು ಎಂದು ಪ್ರಧಾನಿ ನರೇಂದ್ರ ಮೋದಿ ಮಂಡಿಸಿದ್ದಾರೆ.

‘ಇಡೀ ವಿಶ್ವವೇ ನಮ್ಮನ್ನು ಗಮನಿಸುತ್ತಿದೆ. ತನ್ನನ್ನು ಸಂರಕ್ಷಿಸುವಂತೆ ಭೂ ಮಾತೆಯೂ ನಮ್ಮತ್ತ ನೋಡುತ್ತಿದ್ದಾಳೆ. ಈ ವಿಷಯದಲ್ಲಿ ನಾವು ಯಶಸ್ಸು ಕಾಣಬೇಕು’ ಎಂದು ಹೇಳಿದರು.

‘ಜೈ ಶ್ರೀರಾಮ್’ ಹೇಳಲು ಒತ್ತಡ, ಹಲ್ಲೆ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ನಗರದಲ್ಲಿ ಇತ್ತೀಚೆಗೆ ಮನೆಗೆ ತೆರಳಲು ಆಟೊಗಾಗಿ ಕಾಯುತ್ತಿದ್ದ ಮುಸ್ಲಿಂ ಸಮುದಾಯದ ಅಂಧ ವೃದ್ಧರೊಬ್ಬರನ್ನು ‘ಜೈ ಶ್ರೀರಾಮ್’ ಎಂದು ಘೋಷಣೆ ಕೂಗುವಂತೆ ದುಷ್ಕರ್ಮಿಗಳ ಗುಂಪು ಒತ್ತಡ ಹಾಕಿ ಹಲ್ಲೆ ನಡೆಸಿದೆ.

ಹುಸೇನಸಾಬ

‘ಹೊಸಪೇಟೆಗೆ ಹೋಗಿದ್ದ ನಾನು ನ. 25ರಂದು ಮಧ್ಯರಾತ್ರಿ ಗಂಗಾವತಿಗೆ ಬಂದು ಮನೆಗೆ ಹೋಗಲು ಆಟೊ ನಿಲ್ದಾಣದ ಬಳಿ ಕಾಯುತ್ತಿದ್ದೆ. ಆಗ ಬೈಕ್ ಮೇಲೆ ಬಂದ ಕೆಲ ಯುವಕರು

> **ಗಂಗಾವತಿಯಲ್ಲಿ ನಡೆದ ಮುಸ್ಲಿಂ ಸಮುದಾಯದ ವ್ಯಕ್ತಿ ಮೇಲಿನ ಹಲ್ಲೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಆರೋಪಿಗಳ ಪತ್ತೆಗಾಗಿ ಹುಡುಕಾಟ ಆರಂಭಿಸಿದ್ದೇವೆ**
> **ಯಶೋಧಾ ವಂಟಗೋಡಿ**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕೊಪ್ಪಳ

ಎಲ್ಲಿಗೆ ಹೋಗುತ್ತಿದ್ದಿಯಾ ಎಂದು ಪ್ರಶ್ನಿಸಿದರು. ಬಲವಂತವಾಗಿ ಬೈಕ್ ಮೇಲೆ ಕೂರಿಸಿಕೊಂಡು ಪಂಪಾನಗರ ಬಳಿ ರೈಲ್ವೆ ಸೇತುವೆ ಕೆಳಗೆ ಕರೆದೊಯ್ದು ಜೈ ಶ್ರೀರಾಮ್ ಎನ್ನುವಂತೆ ಒತ್ತಾಯಿಸಿ ಹಲ್ಲೆ ಮಾಡಿದರು’ ಎಂದು ಮೆಹಬೂಬ್ ನಗರದ ನಿವಾಸಿ ಹುಸೇನಸಾಬ್ (65) ದೂರು ನೀಡಿದ್ದಾರೆ.

‘ಮುಸ್ಲಿಂ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ ಕೊಲೆ ಬೆದರಿಕೆ ಹಾಕಿದರು. ನೆಲದ ಮೇಲೆ ಬೀಳಿಸಿ ಹಲ್ಲೆ ಮಾಡಿದ ಯುವಕರು ನನ್ನ ಗಡ್ಡಕ್ಕೆ ಬೆಂಕಿ ಹಚ್ಚಿದರು. ನನಗೆ ಕಣ್ಣು ಕಾಣುವುದಿಲ್ಲ. ನನ್ನಲ್ಲಿದ್ದ ಹಣವನ್ನು ದೋಚಿಕೊಂಡು ಹೋಗಿದ್ದಾರೆ. ಬಳಿಕ ಬೆಳಗಿನ ಜಾವ ಕುರಿ ಕಾಯುವ ಹುಡುಗರು ನನ್ನನ್ನು ರಕ್ಷಣೆ ಮಾಡಿ ಮನೆಗೆ ತಲುಪಿಸಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈ ಕುರಿತು ಗುರುವಾರ ರಾತ್ರಿ ಗಂಗಾವತಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆ ಬಗ್ಗೆ ಮುಸ್ಲಿಂ ಸಮಾಜದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಸುತ್ತಮುತ್ತಲಿನ ಜನರಿಂದ ಮಾಹಿತಿ ಪಡೆದರು.

ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವ ಕೆಲಸ ಮಾಡಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾಲೆಸ್ಟೀನ್ ಪರ ಕಾರ್ಯಕ್ರಮ, ಪ್ರತಿಭಟನೆಗಳಿಗೆ ಅನುಮತಿ ನೀಡದ ಪೊಲೀಸರ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಈ ಕುರಿತು ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸವನ್ನು ಸರ್ಕಾರ ಮಾಡುವುದಿಲ್ಲ’ ಎಂದು ಭರವಸೆ ನೀಡಿದ್ದಾರೆ.

ಬುಧವಾರ ರಂಗ ಶಂಕರದಲ್ಲಿ ಹಮ್ಮಿಕೊಂಡಿದ್ದ ಪ್ಯಾಲೆಸ್ಟೀನ್ ಪರ ಕವಿತೆ ವಾಚನ, ಕಿರು ನಾಟಕ ಪ್ರದರ್ಶನಕ್ಕೆ ಪೊಲೀಸರು ಅನುಮತಿ ನಿರಾಕರಿಸಿದ್ದರು. ಪ್ಯಾಲೆಸ್ಟೀನ್ ಪರವಾದ ಹೋರಾಟ- ಕಾರ್ಯಕ್ರಮಗಳಿಗೆ ರಾಜ್ಯದ ವಿವಿಧೆಡೆ ಅನುಮತಿ ನಿರಾಕರಿಸಲಾಗಿತ್ತು. ರಾಜ್ಯ ಸರ್ಕಾರದ ಈ ಧೋರಣೆ ವಿರುದ್ಧ ಆಕ್ರೋಶ ವ್ಯಕ್ತವಾಗಿತ್ತು.

ಈ ಕುರಿತು ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿರುವ ಸಿದ್ದರಾಮಯ್ಯ, ‘ಸಂವಿಧಾನದ ಮೂಲ ಆಶಯಗಳಡಿ ನಡೆಸುವ ಚಟುವಟಿಕೆಗಳನ್ನು ನಿಲ್ಲಿಸುವ ಅಥವಾ ತಡೆಯುವ ಯಾವುದೇ ಕೆಲಸವನ್ನು ರಾಜ್ಯ ಸರ್ಕಾರ ಮಾಡುವುದಿಲ್ಲ. ಕತೆ, ಕಾವ್ಯ, ನಾಟಕ, ಸಂಗೀತ ಮುಂತಾದ ಸೃಜನಶೀಲ ಅಭಿವ್ಯಕ್ತಿಯನ್ನು ತಡೆಯುವ ಕೆಲಸವನ್ನು ಯಾವುದೇ ಕಾರಣಕ್ಕೂ ಮಾಡುವುದಿಲ್ಲ’ ಎಂದಿದ್ದಾರೆ.

‘ಸಂವಿಧಾನದ ಮೂಲಸ್ಫೂರ್ತಿಗೆ ವಿರುದ್ಧವಾಗದಂತೆ ನಡೆಯುವ ಎಲ್ಲ ಅಭಿವ್ಯಕ್ತಿಯ ಪರವಾಗಿ ನಾವು ಇದ್ದೇವೆ. ಕೆಳಹಂತದ ಪೊಲೀಸ್ ಅಧಿಕಾರಿಗಳ ತಪ್ಪು ತಿಳಿವಳಿಕೆಯಿಂದ ಕೆಲವೆಡೆ ಗೊಂದಲಗಳಾಗಿರುವುದು ಗಮನಕ್ಕೆ ಬಂದಿದೆ. ಈ ರೀತಿಯ ಯಾವುದೇ ಗೊಂದಲಗಳು ಸೃಷ್ಟಿಯಾಗದಂತೆ ಮುನ್ನೆಚ್ಚರಿಕೆ ವಹಿಸಲು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿದ್ದೇನೆ’ ಎಂದು ತಿಳಿಸಿದ್ದಾರೆ.

ಚಿತ್ರ ಮುಖ್ಯಾಂಶ
ಚಿರತೆ ಮರಿ ಕೊಂದ ನಾಯಿಗಳು! 4

ರಸ್ತೆಯಲ್ಲಿ ಪ್ರವಾಹ, ಕಾಫಿ ತೋಟಕ್ಕೆ ಹಾನಿ 4
ಮಹಿಳಾ ನಾಯಕತ್ವಕ್ಕೆ ಕಾಂಗ್ರೆಸ್ ಒತ್ತು 7

ಮಾರ್ಚ್ 2ರಿಂದ ಪಿಯುಸಿ, 25ರಿಂದ 10ನೇ ತರಗತಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಗಳ ತಾತ್ಕಾಲಿಕ ವೇಳಾಪಟ್ಟಿ ಪ್ರಕಟವಾಗಿದ್ದು, ಮಾರ್ಚ್ 2ರಿಂದ ಪಿಯುಸಿ, ಮಾರ್ಚ್ 25ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಲಿವೆ.

ತಾತ್ಕಾಲಿಕ ವೇಳಾಪಟ್ಟಿಗೆ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಆಕ್ಷೇಪ ಸಲ್ಲಿಸಲು ಡಿ.15ರವರೆಗೆ ಅವಕಾಶ ಕಲ್ಪಿಸಲಾಗಿದೆ. ಆಕ್ಷೇಪಣೆಗಳನ್ನು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಇ-ಮೇಲ್ chairpersonkseab@gmail.com ಗೆ ಸಲ್ಲಿಸಬಹುದು.

4 ನೇ ಪುಟ ನೋಡಿ

ವರ್ಗ, ಶ್ರೇಣಿ ಪದ್ಧತಿ ಕೈಬಿಟ್ಟ ಸಿಬಿಎಸ್‌ಇ

ನವದೆಹಲಿ: 10 ಮತ್ತು 12ನೇ ತರಗತಿಗಳ ಬೋರ್ಡ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಧನೆ ಆಧರಿಸಿ ವರ್ಗ ಅಥವಾ ಅತ್ಯುನ್ನತ ಶ್ರೇಣಿ ನೀಡುವ ಕ್ರಮವನ್ನು ಕೈಬಿಡಲು ಕೇಂದ್ರ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು (ಸಿಬಿಎಸ್‌ಇ) ತೀರ್ಮಾನಿಸಿದೆ. 7

ಇಸ್ರೇಲ್–ಹಮಾಸ್ ಮಧ್ಯೆ ಮತ್ತೆ ಯುದ್ಧ 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅಲಿವಿಯೇಟ್
ನೋವು ನಿವಾರಣಾ ಕೇಂದ್ರಗಳು
ಬೆಂಗಳೂರು

ಮಂಡಿ ನೋವಿಗೆ
ಸರ್ಜರಿ ಇಲ್ಲದೇ ಚಿಕಿತ್ಸೆ
ಚಿಕಿತ್ಸೆ ಆದ ದಿನವೇ ತಮ್ಮ ಊರಿಗೆ ಮರಳಿ ನಿಮ್ಮ ಕೆಲಸದಲ್ಲಿ ತೊಡಗಬಹುದು

ದಿನನಿತ್ಯದಲ್ಲಿ ಸಂಪೂರ್ಣವಾಗಿ ಕೆಲಸದಲ್ಲಿ ಕಾರ್ಯ ನಿರ್ವಹಿಸುವ ಪ್ರಕ್ರಿಯೆಯು ಮಂಡಿಯ ಕಾರ್ಯನಿರ್ವಹಿಸುವ ಸಾಮರ್ಥ್ಯದ ಮೇಲೆ ಅವಲಂಬಿಸಿರುತ್ತದೆ. ಮಂಡಿನೋವು ನಿಮ್ಮ ದೈಹಿಕ ಮತ್ತು ಮಾನಸಿಕ ಕ್ರಿಯೆಗಳನ್ನು ನಿಷ್ಕ್ರಿಯಗೊಳಿಸುವ ಸಮಸ್ಯೆ ಆಗಿದ್ದು, ಅದು ನಿಮ್ಮ ಯೋಗಕ್ಷೇಮದ ಮೇಲೆ ತೀವ್ರ ಪರಿಣಾಮ ಬೀರುತ್ತದೆ.

ಬೆಂಗಳೂರಿನ ಸುಪ್ರಸಿದ್ಧ ಅಲಿವಿಯೇಟ್ ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್‌ನಲ್ಲಿ ಲಭ್ಯವಿರುವ ಪ್ಲೇಟ್ಲೆಟ್ ರಿಚ್ ಪ್ಲಾಸ್ಮಾ (ಪಿಆರ್‌ಪಿ) ಚಿಕಿತ್ಸೆಯಂತಹ ಸಾಬೀತಾದ, ನೈಸರ್ಗಿಕ, ಆಪರೇಷನ್ ಮುಕ್ತ ಚಿಕಿತ್ಸೆಯಿಂದಲೇ ಬಹುಪಾಲು ಮಂದಿಗೆ ಉಪಶಮನ ಪಡೆದುಕೊಳ್ಳುವ ಸೌಲಭ್ಯವಿರುತ್ತದೆ.

ಹಾನಿಗೊಳಗಾದ ಮಂಡಿಗೆ ಪಿಆರ್‌ಪಿಯು ಕೋಮಲವಾದ ಸ್ಪರ್ಶವು ನೋವನ್ನು ಕ್ರಮಕ್ರಮವಾಗಿ ಉಪಶಮನಗೊಳಿಸುತ್ತದೆ.

ಮಂಡಿನೋವಿಗೆ ಮಾತ್ರವಲ್ಲದೆ, ಮತ್ತಿತರ ನೋವುಗಳಿಂದ ಬಳಲುತ್ತಿರುವ ಸುಮಾರು ೬೦೦೦ಕ್ಕೂ ಹೆಚ್ಚು ಜನರ ಬಾಳಲ್ಲಿ ಆಶಾಕಿರಣವಾಗಿ ಬಂದಿದೆ ಬೆಂಗಳೂರಿನ ಸುಪ್ರಸಿದ್ಧ ಅಲಿವಿಯೇಟ್ ನೋವು ನಿವಾರಣಾ ಕೇಂದ್ರಗಳು.

ಅಲಿವಿಯೇಟ್‌ನ ಚಿಕಿತ್ಸೆಯ ಲಾಭಗಳು:
- ನೈಸರ್ಗಿಕ ಚಿಕಿತ್ಸಾ ವಿಧಾನ
- ಸರ್ಜರಿ ಇಲ್ಲದೇ ಮಾಡುವ ಹಲವಾರು ಚಿಕಿತ್ಸೆಗಳು
- ಅಡ್ಡಪರಿಣಾಮಗಳು ಇಲ್ಲದೇ ನೋವಿನಿಂದ ಉಪಶಮನ
- ಆಸ್ಪತ್ರೆ ವಾಸದ ಅಗತ್ಯವಿಲ್ಲ

ಅಲಿವಿಯೇಟ್‌ನಲ್ಲಿ ಬೆನ್ನುನೋವು, ಮಂಡಿ, ಕುತ್ತಿಗೆ, ಭುಜ, ಪಾದ, ಕ್ಯಾನ್ಸರ್ ನೋವು, ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆ ನೀಡಲಾಗುತ್ತದೆ.

ಅಲಿವಿಯೇಟ್
ಶಸ್ತ್ರಚಿಕಿತ್ಸೆ ಇಲ್ಲದೇ ನೋವು ನಿವಾರಣೆಗಾಗಿ
ಅಲಿವಿಯೇಟ್ ರವರ ಕ್ಲಿನಿಕ್ಸ್ ಬೆಂಗಳೂರಿನಲ್ಲಿ ಇಲ್ಲಿವೆ
ಸದಾಶಿವನಗರ | ಇಂದಿರಾನಗರ | ಟಿ. ದಾಸರಹಳ್ಳಿ
ಜಯನಗರ | ವೈಟ್ ಫೀಲ್ಡ್
CALL NOW 84949 73146
080 23614888

ಡಿ.10ರಂದು ಕಾನ್‌ಸ್ಟೆಬಲ್ ಲಿಖಿತ ಪರೀಕ್ಷೆ

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ (ಸಿವಿಲ್) ನೇಮಕಾತಿಗೆ ಡಿ.10ರಂದು ಲಿಖಿತ ಪರೀಕ್ಷೆ ನಡೆಯಲಿದೆ.

ಸೇವಾ ನಿರತ ಮತ್ತು ಬ್ಯಾಕ್‌ಲಾಗ್ 454 ಹುದ್ದೆಗಳ ನೇಮಕಾತಿಗೆ ಬೆಂಗಳೂರಿನ 40 ಪರೀಕ್ಷಾ ಕೇಂದ್ರಗಳಲ್ಲಿ 22,620 ಅಭ್ಯರ್ಥಿಗಳಿಗೆ (ಪುರುಷ, ಮಹಿಳೆ, ತೃತೀಯ ಲಿಂಗಿಗಳು, ಕಲ್ಯಾಣ ಕರ್ನಾಟಕ) ಲಿಖಿತ ಪರೀಕ್ಷೆ ನಡೆಸಲಾಗುವುದು.

ಲಿಖಿತ ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಲಾಗುವುದು. ಪ್ರವೇಶಪತ್ರದ ಲಿಂಕ್ ಅನ್ನು ಸಹ ಕಳುಹಿಸಲಾಗುವುದು. ಅಭ್ಯರ್ಥಿಗಳು ಕರೆಪತ್ರ ಡೌನ್‌ಲೋಡ್ ಮಾಡಿಕೊಂಡು ನಿಗದಿತ ದಿನಾಂಕದಂದು ಲಿಖಿತ ಪರೀಕ್ಷೆಗೆ ಹಾಜರಾಗಬಹುದು ಎಂದು ಪ್ರಕಟಣೆ ತಿಳಿಸಿದೆ.

‘ವಿಶ್ವ ಏಡ್ಸ್ ದಿನ–2023’ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ

5 ವರ್ಷದಲ್ಲಿ ರಾಜ್ಯ ಎಚ್‌ಐವಿ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಐದು ವರ್ಷಗಳಲ್ಲಿ ‘ಎಚ್‌ಐವಿ ಮುಕ್ತ ಕರ್ನಾಟಕ’ ರೂಪಿಸಲು ಎಲ್ಲರೂ ಶ್ರಮಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ವಿಶ್ವ ಏಡ್ಸ್ ದಿನ–2023’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅತಿ ಹೆಚ್ಚು ಎಚ್‌ಐವಿ ಪ್ರಕರಣಗಳು ಪತ್ತೆಯಾದ ವಿಶ್ವದ ರಾಷ್ಟ್ರಗಳಲ್ಲಿ ಭಾರತ 3ನೇ ಸ್ಥಾನದಲ್ಲಿದೆ. ನಿರಂತರ ಜಾಗೃತಿ, ಕಾನೂನುಗಳ ಫಲವಾಗಿ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿದೆ. ಐದು ವರ್ಷಗಳಲ್ಲಿ ಸಂಪೂರ್ಣ ನಿಯಂತ್ರಣಕ್ಕೆ ತರಲು ಕರ್ನಾಟಕ ಸೇರಿದಂತೆ ಭಾರತದ ಎಲ್ಲ ರಾಜ್ಯಗಳೂ ಶ್ರಮಿಸಬೇಕು ಎಂದರು.

ಬೆಂಗಳೂರಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವ ಏಡ್ಸ್ ದಿನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ‘ಎಚ್‌ಐವಿ ಮುಕ್ತ ಕರ್ನಾಟಕ’ ಧ್ಯೇಯದ ಕರಪತ್ರ ಬಿಡುಗಡೆ ಮಾಡಿದರು. ನಟ ಪ್ರೇಮ್, ನಟಿ ಸಂಜನಾ ಗಲ್ರಾನಿ, ಸಚಿವ ದಿನೇಶ್ ಗುಂಡೂರಾವ್ ಇದ್ದರು

ಎಚ್‌ಐವಿ ಕುರಿತು ಕೆಲವರಿಗೆ ತಪ್ಪು ತಿಳಿವಳಿಕೆಗಳಿವೆ. ರೋಗಿಗಳೊಂದಿಗೆ ಮಾತನಾಡಿದರೆ ರೋಗ ಬರುತ್ತದೆ ಎಂದು ಆತಂಕ ಇಂದಿಗೂ ಇದೆ. ಈ ಕುರಿತು ಹೆಚ್ಚಿನ ಜಾಗೃತಿ ಮೂಡಿಸಬೇಕು. ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದರೂ, ಏಡ್ಸ್ ರೋಗಕ್ಕೆ ಔಷಧ ಕಂಡುಹಿಡಿಯಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಹೆಚ್ಚಿನ ಸಂಶೋಧನೆ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

2015-2020ರವರೆಗೆ ಎಚ್‌ಐವಿ ಪೀಡಿತರ ಸಂಖ್ಯೆಯನ್ನು ಶೂನ್ಯಕ್ಕಿಳಿಸುವ ಗುರಿ ಹೊಂದಲಾಗಿತ್ತು. ಆದರೆ, ಈ ಗುರಿ ಸಾಧಿಸಲು ಸಾಧ್ಯವಾಗಿಲ್ಲ. ಆರೋಗ್ಯ ಇಲಾಖೆ ಜತೆಗೆ ಇಡೀ ಸಮಾಜ ಸಹಕರಿಸಿದಾಗ ಮಾತ್ರ ಗುರಿ ತಲುಪುವುದು ನಿಶ್ಚಿತ ಎಂದರು.

ಸಮಾರಂಭದ ನಂತರ ಎಚ್‌ಐವಿ ಬಾಧಿತರ ಜತೆ ಮುಖ್ಯಮಂತ್ರಿ ಚರ್ಚಿಸಿದರು. ಎಚ್‌ಐವಿ ದೃಢಪಟ್ಟ ನಂತರವೂ 26 ವರ್ಷಗಳಿಂದ ಜೀವನ ಸಾಗಿಸುತ್ತಿರುವ ವ್ಯಕ್ತಿಯೊಬ್ಬರ ಆತ್ಮಸ್ಥೈರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ನಟ ಪ್ರೇಮ್, ನಟಿ ಸಂಜನಾ ಗಲ್ರಾನಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಎಪಿಎಸ್ ಅಧ್ಯಕ್ಷ ಅಭಯ್ ಸಿಂಗ್ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಕಳವು: 426 ಬೈಕ್ ಜಪ್ತಿ, 118 ಆರೋಪಿಗಳ ಸೆರೆ

ಬೆಂಗಳೂರು: ಒಂದು ವರ್ಷದ ಅವಧಿಯಲ್ಲಿ ಕಳವು ಮಾಡಲಾಗಿದ್ದ 426 ಬೈಕ್‌ಗಳನ್ನು ಪಶ್ಚಿಮ ವಿಭಾಗದ ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ.

ಬೈಕ್ ಕಳವು ಪ್ರಕರಣಗಳಲ್ಲಿ 118 ಮಂದಿಯನ್ನು ಬಂಧಿಸಿದ್ದಾರೆ. ಜಪ್ತಿ ಮಾಡಿಕೊಂಡ ಬೈಕ್‌ಗಳ ಮೌಲ್ಯ ₹2.75 ಕೋಟಿಯಾಗಿದೆ ಎಂದು ಪೊಲೀಸರು ಹೇಳಿದರು.

‘ಜಪ್ತಿ ಮಾಡಿಕೊಂಡ ಬೈಕ್‌ಗಳಲ್ಲಿ 291 ಬೈಕ್‌ಗಳನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ. 135 ಬೈಕ್‌ಗಳು ವಿವಿಧ ಪೊಲೀಸ್ ಠಾಣೆಗಳಲ್ಲಿದ್ದು, ಅವುಗಳನ್ನು ವಾರಸುದಾರರಿಗೆ ಒಪ್ಪಿಸುವ ಪ್ರಕ್ರಿಯೆ ನಡೆಯುತ್ತಿದೆ’ ಎಂದು ಪೊಲೀಸರು ಹೇಳಿದರು.

ಉಪ್ಪಾರಪೇಟೆ ಪೊಲೀಸರು 5, ಸಿಟಿ ಮಾರುಕಟ್ಟೆ 13, ಕಲಾಸಿಪಾಳ್ಯ 18, ಕಾಟನ್‌ಪೇಟೆ 55, ಚಾಮರಾಜಪೇಟೆ 6, ಜೆಜೆ ನಗರ 37, ಬ್ಯಾಟರಾಯನಪುರ 47, ಚಂದ್ರಾಲೇಔಟ್ 14, ಆರ್.ಆರ್.ನಗರ 16, ಕೆಂಗೇರಿ 22, ಬ್ಯಾಡರಹಳ್ಳಿ 27, ಅಂಜನಾಪುರ 30, ಜ್ಞಾನಭಾರತಿ 25, ವಿಜಯನಗರ 29, ಮಾಗಡಿ ರಸ್ತೆ 7, ಕೆ.ಪಿ. ಅಗ್ರಹಾರ 13, ಬಸವೇಶ್ವರ ನಗರ 11, ಕಾಮಾಕ್ಷಿಪಾಳ್ಯ 36, ಗೋವಿಂದರಾನಗರ ಪೊಲೀಸರು 15 ಬೈಕ್‌ಗಳನ್ನು ಇದುವರೆಗೆ ಜಪ್ತಿ ಮಾಡಿಕೊಂಡಿದ್ದಾರೆ.

ಐಐಎಸ್‌ಸಿ: ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆವರಣದಲ್ಲಿ ಶುಕ್ರವಾರ ಕಟ್ಟಡವೊಂದರ ಮೇಲಿಂದ ಜಿಗಿದು ವಿದ್ಯಾರ್ಥಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ದೆಹಲಿಯ ಡೈಮಂಡ್ ಖುಶ್ವಂತ್ (21) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ.

‘ಖುಶ್ವಂತ್ ಅವರು ರಸಾಯನವಿಜ್ಞಾನ ವಿಭಾಗದಲ್ಲಿ ಎರಡನೇ ವರ್ಷದ ಪಿ.ಎಚ್‌ಡಿ ಮಾಡುತ್ತಿದ್ದರು. ಘಟನೆಗೆ ಕಾರಣ ತಿಳಿದುಬಂದಿಲ್ಲ. ಬೆಳಿಗ್ಗೆ 7.10ರ ಸುಮಾರಿಗೆ ಕಟ್ಟಡದ 6ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಾವುದೇ ಡೆತ್‌ನೋಟ್ ಸಿಕ್ಕಿಲ್ಲ. ವಿದ್ಯಾರ್ಥಿ ಪೋಷಕರಿಗೆ ಮಾಹಿತಿ ನೀಡಲಾಗಿದೆ. ಪೋಷಕರು ಬಂದ ಮೇಲೆ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹ ಹಸ್ತಾಂತರ ಮಾಡಲಾಗುವುದು ಎಂದು ಪೊಲೀಸರು ಹೇಳಿದರು.

‘ಐಐಎಸ್‌ಸಿ ಕ್ಯಾಂಪಸ್ ಎಲ್ಲರಿಗೂ ಸುರಕ್ಷಿತ ಸ್ಥಳವಾಗಿದೆ. ಘಟನೆಗೆ ಕಾರಣ ತಿಳಿದುಬಂದಿಲ್ಲ’ ಎಂದು ಸಿಬ್ಬಂದಿ ತಿಳಿಸಿದ್ದಾರೆ.

ಮುಂಬೈ ಪೊಲೀಸರ ಸೋಗಿನಲ್ಲಿ ವಂಚನೆ

ಎಂಟು ಮಂದಿ ಬಂಧನ: 148 ಬ್ಯಾಂಕ್ ಖಾತೆಗಳ ಮುಟ್ಟುಗೋಲು– ಆರೋಪಿಗಳ 11 ಮೊಬೈಲ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಅಪರಾಧ ವಿಭಾಗದ ಪೊಲೀಸರ ಸೋಗಿನಲ್ಲಿ ಸಾರ್ವಜನಿಕರಿಗೆ ಕರೆ ಮಾಡಿ, ನಿಮ್ಮ ಹೆಸರಿನಲ್ಲಿ ಅಕ್ರಮವಾಗಿ ಮಾದಕ ವಸ್ತು ಪೂರೈಕೆ ಆಗುತ್ತಿದೆ ಎಂದು ಸುಳ್ಳು ಹೇಳಿ ಬ್ಯಾಂಕ್ ಖಾತೆಗಳಿಗೆ ಲಕ್ಷಾಂತರ ರೂಪಾಯಿ ಹಾಕಿಸಿಕೊಂಡು ವಂಚಿಸುತ್ತಿದ್ದ ಎಂಟು ಮಂದಿಯನ್ನು ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಸೀಂ, ಹಬೀಬುಲ್ಲ, ನಿಝಾಮುದ್ದೀನ್, ಮುಶ್ರಫ್ ಖಾನ್, ನೂರುಲ್ಲ ಖಾನ್, ಮೊಹಮದ್ ಉಮರ್, ಸೈಯದ್ ಅಹಮ್ಮದ್, ಸೈಯದ್ ಹುಸೇನ್ ಬಂಧಿತರು.

ಬಂಧಿತರಿಂದ ₹13.17 ಲಕ್ಷ ನಗದು, ವಿವಿಧ ಬ್ಯಾಂಕ್ ಖಾತೆಯಲ್ಲಿದ್ದ ₹19 ಲಕ್ಷವನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ವಿವಿಧ ಬ್ಯಾಂಕ್‌ನ 148 ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಅಪರಾಧ ಸುದ್ದಿ

ಕೃತ್ಯಕ್ಕೆ ಬಳಸಿದ 11 ಮೊಬೈಲ್, ಚೆಕ್‌ಬುಕ್, ಪಾಸ್‌ಬುಕ್, ಎಟಿಎಂ ಕಾರ್ಡ್‌ಗಳು ಜಪ್ತಿ ಮಾಡಲಾಗಿದೆ. ಆರೋಪಿಗಳ ಬಂಧನದಿಂದ ಎನ್‌ಸಿಆರ್‌ಬಿ ಪೋರ್ಟಲ್‌ನಲ್ಲಿ ದಾಖಲಾಗಿದ್ದ ಸುಮಾರು 75 ಸೈಬರ್ ವಂಚನೆಯ ಪ್ರಕರಣಗಳು ಪತ್ತೆಯಾಗಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ಮುಂಬೈ ಪೊಲೀಸರ ಸೋಗಿನಲ್ಲಿ ಸಾರ್ವಜನಿಕರಿಗೆ ವಾಟ್ಸ್‌ಆ್ಯಪ್ ಕರೆ ಮಾಡಿ ಫೆಡೆಕ್ಸ್ ಕೊರಿಯರ್‌ನಲ್ಲಿ ನಿಮ್ಮ ಹೆಸರಿನಲ್ಲಿ ಥಾಯ್ಲೆಂಡ್‌ಗೆ ಮಾದಕ ವಸ್ತುಗಳು ಪೂರೈಕೆ ಆಗುತ್ತಿದೆ ಎಂದು ಹೇಳಿ ಸಹಾಯ ಮಾಡುವ ನೆಪದಲ್ಲಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.


ನಿಜಾಮುದ್ದೀನ್ | ಮಹಮ್ಮದ್ | ವಾಸೀಂ | ಹಬೀಬುಲ್ಲಾ | ನುರುಲ್ಲಾ | ಮುಶ್ರಫ್ | ಸೈಯದ್

ಆರೋಪಿಗಳು ನ.10ರಂದು ಮಲ್ಲೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ವ್ಯಕ್ತಿಯೊಬ್ಬರಿಗೆ ಕರೆ ಮಾಡಿದ್ದರು. ನಿಮ್ಮ ಪತ್ನಿ ಹೆಸರಿನಲ್ಲಿ ಮಾದಕ ವಸ್ತು ಪೂರೈಕೆಯಾಗುತ್ತಿದೆ ಎಂದು ಹೇಳಿದ್ದರು. ಮಾದಕ ವಸ್ತು ಹಾಗೂ ದಾಖಲೆಗಳು ಸಿಕ್ಕಿವೆ ಎಂದು ಬೆದರಿಸಿದ್ದರು. ನಿಮ್ಮ ಹೆಸರಿನಲ್ಲಿ ಅಕ್ರಮವಾಗಿ ಹಣ ವರ್ಗಾವಣೆ ಆಗುತ್ತಿದೆ ಎಂದು ಹೇಳಿದ್ದರು. ಆ ವ್ಯಕ್ತಿಯ ಬ್ಯಾಂಕ್ ಖಾತೆ ಮಾಹಿತಿ ಪಡೆದಿದ್ದರು. ನಂತರ, ತನಿಖಾ ವಿಚಾರಣಾ ಸಲುವಾಗಿ ನೀವು ಮುಂಗಡ ಹಣ ನೀಡಬೇಕು. ತನಿಖೆ ಮುಗಿದ ನಂತರ ಆ ಮೊತ್ತವನ್ನು ವಾಪಸ್ ತಮ್ಮ ಖಾತೆಗೆ ಜಮಾ ಮಾಡುತ್ತೇವೆ ಎಂದು ನಂಬಿಸಿದ್ದರು.

ಆರೋಪಿಗಳನ್ನು ಅಸಲಿ ಪೊಲೀಸರೆಂದು ನಂಬಿದ ವ್ಯಕ್ತಿಯು ಎಚ್‌ಡಿಎಫ್‌ಸಿ ಬ್ಯಾಂಕ್ ಖಾತೆಯಿಂದ ₹ 66 ಲಕ್ಷ ಜಮೆ ಮಾಡಿದ್ದರು. ನಂತರ ನೀವು ಕೊಟ್ಟಿರುವ ದುಡ್ಡು ಹಿಂತಿರುಗಿಸಲು ಇನ್ನಷ್ಟು ದುಡ್ಡು ಜಮೆ ಮಾಡುವಂತೆ ಸೂಚಿಸಿ ಹಣ ಪಡೆದು ವಂಚಿಸಿದ್ದರು ಎಂದು ಪೊಲೀಸರು ಹೇಳಿದರು.

ಪ್ರಕರಣ ದಾಖಲಾದ ಮೇಲೆ ಸೈಬರ್ ತನಿಖೆ ಆರಂಭಿಸಿದ್ದರು. ದೂರುದಾರರ ಖಾತೆಯಿಂದ ದುಡ್ಡು ವರ್ಗಾವಣೆಯಾದ ಬ್ಯಾಂಕ್ ಖಾತೆ ಯಾವ ಪ್ರದೇಶದಲ್ಲಿದೆ ಎಂಬುದನ್ನು ಪತ್ತೆ ಹಚ್ಚಿದ್ದರು. ದಾವಣಗೆರೆಯಲ್ಲಿ ಹಣ ಡ್ರಾ ಮಾಡಿಕೊಂಡಿರುವುದು ಪತ್ತೆಯಾಗಿತ್ತು. ದಾವಣಗೆರೆಗೆ ತೆರಳಿದ ಪೊಲೀಸರ ಒಂದು ತಂಡವು ಬ್ಯಾಂಕ್‌ನ ಸಿಸಿ ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದಾಗ ಆರೋಪಿಗಳ ಮುಖಚಹರೆ ಪತ್ತೆಯಾಗಿತ್ತು. ಅದಾದ ಮೇಲೆ ಬಂಧಿಸಿದ್ದರು.

₹2 ಕೋಟಿ ಮೊತ್ತದ ಕಳಪೆ ಬಟ್ಟೆ ಜಪ್ತಿ

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಬ್ರ್ಯಾಂಡ್‌ಗಳ ಹೆಸರಿನಲ್ಲಿ ಕಳಪೆ ಬಟ್ಟೆ ಸಿದ್ಧಪಡಿಸಿ ಮಾರಾಟ ಮಾಡುತ್ತಿದ್ದ ಸ್ಥಳಗಳ ಮೇಲೆ ಕಾರ್ಯಾಚರಣೆ ಮುಂದುರಿಸಿದ್ದು, ಶುಕ್ರವಾರವೂ ₹2 ಕೋಟಿ ಮೊತ್ತದ ಕಳಪೆ ಗುಣಮಟ್ಟದ ಬಟ್ಟೆ ಜಪ್ತಿ ಮಾಡಿಕೊಂಡಿದ್ದಾರೆ.

ಬೊಮ್ಮನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕೋಡಿಚಿಕ್ಕನಹಳ್ಳಿ ಸಮೀಪ ಕಾರ್ಯಾಚರಣೆ ನಡೆಸಲಾಗಿದೆ.

ಯುನೈಟೆಡ್ ಆ್ಯಂಡ್ ಯುನೈಟೆಡ್ ಓವರ್ಸಿಸ್ ಟ್ರೇಡ್ ಮಾರ್ಕ್ ಕಂಪನಿಯ ವಿವಿಧ ಬ್ರ್ಯಾಂಡ್‌ನ ಬಟ್ಟೆಗಳನ್ನು ಪಟೇಲ್ ಎಕ್ಸ್‌ಪೋರ್ಟ್ ಹಾಗೂ ಆರ್ಬಿ ಫ್ಯಾಷನ್ ಫ್ಯಾಕ್ಟರಿಯಲ್ಲಿ ಕಳಪೆ ಗುಣಮಟ್ಟದಲ್ಲಿ ತಯಾರಿಸಿ ಮಾರಾಟ ನಡೆಸುತ್ತಿದ್ದರು. ಆರೋಪಿಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ವಿವಿಧ ಬ್ರ್ಯಾಂಡ್‌ಗಳ 1,607 ಹಾಗೂ 4,478 ಶರ್ಟ್‌ಗಳು, ವಿವಿಧ ಲೇಬಲ್‌ಗಳು, ಹೊಲಿಗೆ ಯಂತ್ರ ಜಪ್ತಿ ಮಾಡಿಕೊಳ್ಳಲಾಗಿದೆ.

ಪ್ರತಿಭಟನೆ ದಲಿತ ಮುಖಂಡ ಎಂ.ಶ್ರೀನಿವಾಸನ್ ಕೊಲೆಯ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ಸಮತಾ ಸೈನಿಕ ದಳದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಧರಣಿ ನಡೆಸಿದರು – ಪ್ರಜಾವಾಣಿ ಚಿತ್ರ

ಸಚಿವ ಬೈರತಿ ವಿರುದ್ಧ ಆರೋಪ ಪಟ್ಟಿಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಗ ಸಚಿವರಾಗಿರುವ ಬೈರತಿ ಸುರೇಶ್ ಒಂಬತ್ತು ವರ್ಷಗಳ ಹಿಂದೆ ಖರೀದಿಸಿದ್ದ ವಾಣಿಜ್ಯ ಕಟ್ಟಡದಲ್ಲಿ ಕರ್ನಾಟಕ ಅಗ್ನಿಶಾಮಕ ದಳ ಕಾಯ್ದೆ-1964ರ ಕಲಂ 13ರಡಿ ಬರುವ ಸುರಕ್ಷತಾ ಕ್ರಮಗಳನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅವರ ವಿರುದ್ಧ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಹೈಕೋರ್ಟ್ ಸುದ್ದಿ

ಈ ಸಂಬಂಧ ನಗರದ 10ನೇ ಎಸಿಎಂಎಂ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆ ರದ್ದುಪಡಿಸಬೇಕು ಎಂದು ಕೋರಿ ಬಿ.ಎಸ್. ಸುರೇಶ್ (ಬೈರತಿ ಸುರೇಶ್) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲೆ ಲೀಲಾ ಪಿ.ದೇವಾಡಿಗ ಅವರ ವಾದ ಆಲಿಸಿದ ನ್ಯಾಯಪೀಠ, ಬೈರತಿ ಸುರೇಶ್ ಹಾಗೂ ಇತರರ ವಿರುದ್ಧ ಇಂದಿರಾನಗರ ಪೊಲೀಸರು 10ನೇ ಎಸಿಎಂಎಂ ಕೋರ್ಟ್‌ಗೆ ಸಲ್ಲಿಸಿರುವ ದೋಷಾರೋಪ ಪಟ್ಟಿಗೆ ಮಧ್ಯಂತರ ತಡೆ ನೀಡಿ ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.

‘ಅತಿ ಎತ್ತರದ ಕಟ್ಟಡಗಳಿಗೆ ಅಳವಡಿಸಬೇಕಾದ ಅಗ್ನಿ ಸುರಕ್ಷತಾ ಕ್ರಮಗಳನ್ನು ಅನುಸರಿಸಲಾಗಿಲ್ಲ’ ಎಂಬುದು ಅರ್ಜಿದಾರರ ವಿರುದ್ಧದ ಆರೋಪ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ
6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ,
ಜಯನಗರ 4ನೇ ಬ್ಲಾಕ್, ಬೆಂಗಳೂರು–560 011

ಸಂಖ್ಯೆ: ಮಅ:ಆಡಳಿತ:ಲವಾ:ಇ.ಪಿ.ಟಿ:2023–24 ದಿನಾಂಕ: 01–12–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560011 ಕಛೇರಿಯಲ್ಲಿ ಉಪಯೋಗಕ್ಕಾಗಿ 2019 ರ ನಂತರ ನೋಂದಣಿಯಾದ ಐದು ಆಸನವುಳ್ಳ ಸೆಡನ್ ಮಾದರಿಯ (ಮಾರುತಿ ಓಮಿನಿ, ಇಕೋ ಹೊರತು ಪಡಿಸಿ) ಮತ್ತು ಇತರೆ ಸಮಾನ ಮಾದರಿಯ ಕಾರುಗಳ ಪೈಕಿ ನಾಲ್ಕು ಕಾರನ್ನು ಬಾಹ್ಯ ಮೂಲದಿಂದ ಬಾಡಿಗೆಗೆ ಟೆಂಡರ್ ನಿಯಮನುಸಾರ ಒದಗಿಸುವ ಸಲುವಾಗಿ ಆಸಕ್ತರಿಂದ ಅಲ್ಪಾವಧಿ ಇ–ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್‌ನ್ನು **ದಿನಾಂಕ: 01–12–2023 ರಿಂದ 13–12–2023 ರ ಸಂಜೆ 5.00 ಗಂಟೆಯೊಳಗೆ (www.kppp.karnataka.gov.in)** ಮೂಲಕ ಸಲ್ಲಿಸಬಹುದಾಗಿದೆ. ಇ.ಎಂ.ಡಿ. ಮೊತ್ತ **ರೂ. 40,000/–.**

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 6ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು–560011. **ದೂರವಾಣಿ: 080–26682792, 26542307, 26632973.**

ಸಹಿ/– ಆಡಳಿತಾಧಿಕಾರಿ
ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ
ಬೆಂಗಳೂರು

DIPR/CP/2354/SPAN/2023-24

ಮತದಾರರ ವಿಶೇಷ ನೋಂದಣಿ ಅಭಿಯಾನ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಗೆ ಹೆಸರು ಸೇರಿಸುವ ವಿಶೇಷ ನೋಂದಣಿ ಅಭಿಯಾನವನ್ನು ಡಿ.2 ಮತ್ತು ಡಿ.3ರಂದು ಆಯೋಜಿಸಲಾಗಿದೆ.

2024ರ ಜ.1ಕ್ಕೆ 18 ವರ್ಷ ತುಂಬುವ ಎಲ್ಲ ಯುವ ಮತದಾರರು ಮತಗಟ್ಟೆಗಳಿಗೆ ತೆರಳಿ ಫಾರಂ-6ನ್ನು ಸಲ್ಲಿಸಬೇಕು. ವೆಬ್ ಪೋರ್ಟಲ್ voters.eci.gov.in ಅಥವಾ Voter Helpline ಮೊಬೈಲ್ ಆ್ಯಪ್ ಮೂಲಕ ಸ್ವಯಂ ಪ್ರೇರಿತವಾಗಿ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಬೆಂಗಳೂರು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ, ಜಿಲ್ಲಾ ಪಂಚಾಯತ್ ಮೈಸೂರು
ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ
ಸಮಗ್ರ ಶಿಕ್ಷಣ–ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು
Phone No.: 0821-2496686 E-mail ID : egovmysore@gmail.com

ಸಂಖ್ಯೆ : ಸಶಿಅ/ಸಿ3/ಹೊ.ಗು.ಆ.ನೇ/03 ರಿಂದ 05/2023–24 ದಿನಾಂಕ : 02–12–2023

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್ ಪ್ರಕಟಣೆ 2

2023–24ನೇ ಸಾಲಿನ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿ ಮೈಸೂರು ಜಿಲ್ಲೆಯಲ್ಲಿನ ತಾಲ್ಲೂಕುಗಳಲ್ಲಿ ಹೆಣ್ಣು ಮಕ್ಕಳಿಗಾಗಿ ನಡೆಸಲ್ಪಡುವ ವಸತಿ ಶಾಲೆಗಳಿಗೆ ತಲಾ 100 ಮಕ್ಕಳಿಗೆ ಊಟೋಪಹಾರ ಒದಗಿಸುವ ಸಂಬಂಧ ನೊಂದಾಯಿತ ಅರ್ಹ ಏಜೆನ್ಸಿ/ಸಂಸ್ಥೆಗಳಿಂದ ದ್ವಿ ಲಕೋಟೆ ಪದ್ಧತಿಯಡಿ ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪ್ರತಿ ವಿಷಯಕ್ಕೂ ಪ್ರತ್ಯೇಕವಾಗಿ ಅರ್ಜಿ ಆಹ್ವಾನಿಸಲಾಗಿದೆ.

1. Date of Publich & Commencement of Tender in E-Procurement Date : 02-12-2023
2. Last date & time for receipt of Tender Date : 11-12-2023, 4.00 PM
3. Time and Date of Opening of Technical Bid Date : 12-12-2023, 4.30 PM

ಕ್ರ. ಸ.	ಟೆಂಡರ್ ಮೂಲಕ ಕರೆಯಬೇಕಾಗಿರುವ ಸಂಸ್ಥೆಗಳ ವಿವರ	ಅಂದಾಜು ಟೆಂಡರ್ ಮೊಬಲಗು (ಲಕ್ಷಗಳಲ್ಲಿ)	ಇಎಂಡಿ ಮೊಬಲಗು (ರೂ.ಗಳಲ್ಲಿ)
1	ನೇತಾಜಿ ಸುಭಾಷ್ ಚಂದ್ರ ಬೋಸ್ ಆವಾಸೀಯ ವಿದ್ಯಾಲಯ ವಸತಿ ಶಾಲೆ, ನಜರ್‌ಬಾದ್ ಉತ್ತರ ವಲಯ ವಸತಿ ಶಾಲೆಗೆ ಆಹಾರ ಪೂರೈಕೆಗಾಗಿ	17.28	43,200.00
2	ಕೆ.ಜಿ.ಬಿ.ವಿ. ವಸತಿ ಶಾಲೆಗಳಾದ ಕೇರ್ಗಳ್ಳಿ ಮೈಸೂರು ಗ್ರಾ., ಬನ್ನೂರು, ತಿ. ನರಸೀಪುರ ತಾ, ನಂಜನಗೂಡು ಟೌನ್, ಹಾಗೂ ಕೆ.ಜಿ.ಬಿ.ವಿ. ಟೈಪ್–4 ಅರ್.ಎಂ.ಎಸ್.ಎ. ವರಕೂಡು ಮೈಸೂರು ಗ್ರಾ ಹಳೇ ಸೋಸಲೆ, ತಿ. ನರಸೀಪುರ, ಎ.ವಿ.ಎಸ್. ದೇಬೂರು, ನಂಜನಗೂಡು, ವಸತಿ ಶಾಲೆಗಳಿಗೆ ಆಹ್ವಾನ ಪೂರೈಕೆಗಾಗಿ	81.60	1,63,200.00
3	ಕೆ.ಜಿ.ಬಿ.ವಿ. ವಸತಿ ಶಾಲೆಗಳಾದ ರತ್ನಪುರಿ, ಹುಣಸೂರು, ಸಂತೇಮಾಳ, ಕೆ.ಆರ್. ನಗರ ಹಾಗೂ ಕೆ.ಜಿ.ಬಿ.ವಿ. ಟೈಪ್–4 ಅರ್.ಎಂ.ಎಸ್.ಎ ಹಳೇ ಹುಣಸೂರು, ಕಾಳೇನಹಳ್ಳಿ, ಕೆ.ಆರ್. ನಗರ ಹಾಗೂ ಕಾಲೇಜು ಆವರಣ, ಹೆಚ್.ಡಿ. ಕೋಟೆ, ವಸತಿ ಶಾಲೆಗಳಿಗೆ ಆಹಾರ ಪೂರೈಕೆಗಾಗಿ	68.00	1,36,000.00

ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತವುಳ್ಳ ಟೆಂಡರ್‌ದಾರರು www.kppp.karnataka.gov.in ರಲ್ಲಿನ Sarva Shiksha Abhiyan ನಲ್ಲಿ ಟೆಂಡರ್ ದಿನಾಂಕ : 02–12–2023 ರಲ್ಲಿನ ಟೆಂಡರ್ ಸಂಖ್ಯೆ: ಸಶಿಅ/ಸಿ3/ಹೊ.ಗು.ಅ.ನೇ/03ರಿಂದ05/2023–24, ರವರೆಗಿನ ಡಾಕ್ಯುಮೆಂಟ್‌ನ್ನು ಪ್ರತ್ಯೇಕವಾಗಿ ಡೌನ್‌ಲೋಡ್ ಮಾಡಿಕೊಂಡು ನಿಗದಿತ ಸಮಯದಲ್ಲಿನ ಅರ್ಜಿ ಸಲ್ಲಿಸಲು ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ : 0821–2496686 ನ್ನು ಸಂಪರ್ಕಿಸಲು ಸೂಚಿಸಿದೆ.

ಸಹಿ/– (ಹೆಚ್.ಕೆ. ಪಾಂಡು)
ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ
ಸಮಗ್ರ ಶಿಕ್ಷಣ ಕರ್ನಾಟಕ, ಶಾ.ಶಿ.ಇಲಾಖೆ, ಮೈಸೂರು ಜಿಲ್ಲೆ, ಮೈಸೂರು

ನಗರದಲ್ಲಿ ಇಂದು

ಅಗ್ನಿ ರಕ್ಷಣಾ– ‘ಸುರಕ್ಷ ನಿವಾಸ ಸುರಕ್ಷ ನಗರ’ ಪ್ರಾತ್ಯಕ್ಷಿಕೆ: ಅತಿಥಿಗಳು: ನಿರ್ಮಲಾ ಸೀತಾರಾಮನ್, ಡಿ.ಕೆ. ಶಿವಕುಮಾರ್, ಎಂ. ರಾಜೀವ್ ಚಂದ್ರಶೇಖರ್, ಡಾ.ಜಿ. ಪರಮೇಶ್ವರ್, ಅಧ್ಯಕ್ಷತೆ: ಸಿ.ಎನ್. ಅಶ್ವತ್ಥ್ ನಾರಾಯಣ, ಆಯೋಜನೆ: ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆ, ಸ್ಥಳ: ಬ್ರಿಗೇಡ್ ಗೇಟ್‌ವೇ, ಯಶವಂತಪುರ, ಬೆಳಿಗ್ಗೆ 11

ಡಾ. ಎಪಿಜೆ ಅಬ್ದುಲ್ ಕಲಾಂ ಸೇವಾ ಸಮಿತಿ ಉದ್ಘಾಟನೆ ಕಾರ್ಯಕ್ರಮ: ಅಧ್ಯಕ್ಷತೆ: ರೂಪಾ ಎಂ.ವಿ., ಉದ್ಘಾಟನೆ: ರಾಮಲಿಂಗಾರೆಡ್ಡಿ, ಸಂಚಿಕೆ ಬಿಡುಗಡೆ: ಸೌಮ್ಯಾರೆಡ್ಡಿ, ಅತಿಥಿಗಳು: ಡಾ. ಸಿ.ಎಸ್. ಮಂಜುನಾಥ್, ಮಹೇಶ್ ಜೋಶಿ, ಕೆ. ಷರೀಫಾ, ದಿವ್ಯಾ ರಾಘವೇಂದ್ರ, ಸ್ಥಳ: ಯುವಪಥ ವಿವೇಕ ಆಡಿಟೋರಿಯಂ, 31ನೇ ಅಡ್ಡರಸ್ತೆ, 11ನೇ ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಬೆಳಿಗ್ಗೆ 9

ಸುವರ್ಣ ಮಹೋತ್ಸವ ಸಮಾರಂಭ, ಗಾಣಿಗರ ಸಮಾವೇಶ: ಸಾನ್ನಿಧ್ಯ: ಪೂರ್ಣಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಂ.ಆರ್. ರಾಜಶೇಖರ್, ಅತಿಥಿ: ರಾಮಲಿಂಗಾರೆಡ್ಡಿ, ಕೃಷ್ಣಬೈರೇಗೌಡ, ತಂಗಡಗಿ ಶಿವರಾಜ ಸಂಗಪ್ಪ, ಡಿ.ಕೆ. ಸುರೇಶ್, ಎಂ. ಕೃಷ್ಣಪ್ಪ, ದಿನಕರ್ ಕೇಶವ ಶೆಟ್ಟಿ, ವಿ.ಆರ್. ಸುದರ್ಶನ್, ಶಾರದಾ ಮೋಹನ್ ಶೆಟ್ಟಿ, ವಾಸಂತಿ ಅಮರ್, ಅಭಿನಂದನೆ: ಎಂ.ಎಸ್. ಶ್ರೀನಿವಾಸಮೂರ್ತಿ, ಆಯೋಜನೆ: ಅಖಿಲ ಕರ್ನಾಟಕ ಗಾಣಿಗರ ಸಂಘ, ಸ್ಥಳ: ಗಾಣಿಗರ ಸಂಘದ ಆವರಣ, ಅವಲಹಳ್ಳಿ, ಅಂಜನಾಪುರ, ಬೆಳಿಗ್ಗೆ 10

ಅಖಿಲ ಭಾರತ ಶ್ವಾನ ಪ್ರದರ್ಶನ: ಉದ್ಘಾಟನೆ: ಕೆ. ವೆಂಕಟೇಶ್, ಆಯೋಜನೆ: ಸಿಲಿಕಾನ್ ಸಿಟಿ ಕೆನಲ್ ಕ್ಲಬ್, ಬೆಂಗಳೂರು ಕನ್ನೈನ್, ಸ್ಥಳ: ಪಶುವೈದ್ಯ ಕಾಲೇಜು ಕ್ಯಾಂಪಸ್, ಹೆಬ್ಬಾಳ, ಬೆಳಿಗ್ಗೆ 10.30

ಬಾಲಾಪರಾಧಿಗಳಿಗೆ ಮರುರೂಪಿಸಿದ ವಿಶೇಷ ಮನೆ ಉದ್ಘಾಟನೆ; ಅತಿಥಿಗಳು: ನ್ಯಾ.ಕೆ.ಎಸ್. ಮುದಗಲ್, ನ್ಯಾ. ಎಂ.ಜಿ. ಉಮಾ, ನ್ಯಾ. ಜೆ.ಎಂ. ಖಾಝಿ, ಕೆ. ನಾಗಣ್ಣಗೌಡ, ಜೈಶಂಕರ್, ಜಾಕೊಬ್ ಪೀಟರ್ ಕಿಡಂಗಥ್, ಜೋಸ್ ಮುರಿಕನ್ ಒ ಪ್ರೇಮ್, ಸೋನಿ ಕುಟ್ಟಿ ಜಾರ್ಜ್, ಜಾರ್ಜ್ ಕನ್ನಂತನಮ್, ಶಿಲ್ಪಾ ಡಿಯೋಧರ್, ಆ್ಯಂಟನಿ ಸೆಬಸ್ಟಿಯನ್ ಒ ಪ್ರೇಮ್, ಆಯೋಜನೆ: ಸೆಂಟರ್ ಫಾರ್ ಜುವೆನೈಲ್ ಜಸ್ಟೀಸ್, ಸ್ಥಳ: ಸುಮ್ಮನಹಳ್ಳಿ, ಕಾವೇರಿನಗರ, ಬೆಳಿಗ್ಗೆ 10.30

ನವ್ಯಾಶ್ರೀ ಕೆ.ಎನ್. ಅವರ ರಂಗಾಭಿವಂದನೆ: ಆಯೋಜನೆ: ಭರತದ್ಯುತಿ ಆರ್ಟ್ಸ್ ಸೆಂಟರ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಮಲ್ಲೇಶ್ವರ ಕಡಲೆಕಾಯಿ ಪರಿಷೆ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ರಾಮಲಿಂಗಾರೆಡ್ಡಿ, ಬಿ.ಕೆ. ಹರಿಪ್ರಸಾದ್, ಮಹೇಶ್ ಜೋಶಿ, ಆಯೋಜನೆ: ಭ್ರಮರಾಂಬ ಸಮೇತ ಕಾಡುಮಲ್ಲಿಕಾರ್ಜುನ ಸ್ವಾಮಿ ದೇವಾಲಯ, ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಬೆಳಿಗ್ಗೆ 11

ರಾಜ್ಯೋತ್ಸವ ಸುವರ್ಣ ಸಂಭ್ರಮ, ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಹೇಮಾ ಪ್ರಸಾದ್, ಅಧ್ಯಕ್ಷತೆ: ಮಹೇಶ್ ಜೋಶಿ, ಅತಿಥಿಗಳು: ಮುನಿರತ್ನ, ಟಿ.ಎ. ಸರವಣ, ಪ್ರಶಸ್ತಿ ಪಡೆಯುವವರು: ರಾಯಚೂರು ಶೇಷಗಿರಿದಾಸ್, ಮಹೇಂದ್ರ ಮುನ್ನೋತ್ ಜೈನ್, ಬಾಬು ಖತ್ಕರ್, ಆಯೋಜನೆ: ಕಲಾ ದರ್ಪಣ, ಆರ್ಟ್ ರಿಫ್ಲೆಕ್ಸ್, ಸ್ಥಳ: ಕಲಾಗ್ರಾಮ ಸಭಾಂಗಣ, ಬೆಳಿಗ್ಗೆ 11

ಹಾಡು ಹರಟೆ: ಕನ್ನಡ ಹಾಡು, ನುಡಿಗಳ ಸಂಭ್ರಮ, ಆಯೋಜನೆ: ಶ್ರೀ ಮ್ಯೂಸಿಕ್ ಆ್ಯಂಡ್ ಏಕ್ತಾ'ಸ್ ಗಾಥೆರಿಂಗ್ಸ್, ಸ್ಥಳ: ದಿ ಗ್ರೀನ್ ಪಾತ್, ರಾಜೀವ್ ಗಾಂಧಿ ಸರ್ಕಲ್, ಸಂಪಿಗೆ ರಸ್ತೆ, ಬೆಳಿಗ್ಗೆ 11

ಭಾರತ್ ಸ್ಕೌಟ್ಸ್, ಗೈಡ್ಸ್ 105ನೇ ರಾಜ್ಯ ಪರಿಷತ್ ಸಭೆ: ಉದ್ಘಾಟನೆ: ಮಧು ಬಂಗಾರಪ್ಪ, ನೇತೃತ್ವ: ಪಿ.ಜಿ.ಆರ್. ಸಿಂಧ್ಯ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11.30

ಮೆಕಥ್ಲಾನ್'23– ರಾಷ್ಟ್ರ ಮಟ್ಟದ ಟೆಕ್ ಹಬ್ಬ: ಆಯೋಜನೆ: ಆರ್ಕಿಡ್ ದಿ ಇಂಟರ್‌ನ್ಯಾಷನಲ್ ಸ್ಕೂಲ್, ಬೆಳಿಗ್ಗೆ 11.30

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ, ಸಂವಿಧಾನ ದಿನಾಚರಣೆ: ಬುದ್ಧವಂದನೆ: ಮಹಾಬೋಧಿ ಬಿಕ್ಕು, ಉದ್ಘಾಟನೆ: ಡಾ.ಎಚ್.ಸಿ. ಮಹದೇವಪ್ಪ, ಉಪಸ್ಥಿತಿ: ಎಲ್. ನಾರಾಯಣಸ್ವಾಮಿ, ರಿಜ್ವಾನ್ ಅರ್ಷಾದ್, ಇಂದೂಧರ ಹೊನ್ನಾಪುರ, ಅಧ್ಯಕ್ಷತೆ: ಉಜ್ವಲ್ ಕುಮಾರ್ ಘೋಷ್, ಆಯೋಜನೆ: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ ಭವನ, ಕ್ವಿನ್ಸ್ ರಸ್ತೆ, ಮಧ್ಯಾಹ್ನ 12

ಕ್ಯಾನ್ಸರ್ ಪೀಡಿತ ರೋಗಿಗಳ ಸಹಾಯಾರ್ಥ 'ಸುರಭಿ ಸಿರಿ' ಸುಮಧುರ ಗೀತೆಗಳ ಗಾಯನ: ಆಯೋಜನೆ: ವೈದೇಹಿ ಮಹಿಳಾ ಮತ್ತು ಮಕ್ಕಳ ಪ್ರತಿಷ್ಠಾನ, ಸ್ಥಳ: ಶುಕ್ರ ಆಡಿಟೋರಿಯಂ, 15ನೇ ಕ್ರಾಸ್ ಮಲ್ಲೇಶ್ವರ, ಮಧ್ಯಾಹ್ನ 3.30

ಆರ್. ಲಕ್ಷ್ಮೀನಾರಾಯಣ ಅವರ ಮೂರು ಕೃತಿಗಳ ಬಿಡುಗಡೆ, ಗುರುನಮನ: ಕೃತಿ ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಕೃತಿ ಕುರಿತು: ಎಚ್. ಶಶಿಕಲಾ, ಗೌರವ ನಮನ: ಸರಸ್ವತಿ, ಸಾವಿತ್ರಿ, ಸೀತಾಲಕ್ಷ್ಮೀ, ಅತಿಥಿಗಳು: ಟಿ.ಜಿ. ಪ್ರಭಾಶಂಕರ್, ಬಿ.ವೈ. ಲಲಿತಾಂಬ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಕಾಮಧೇನು ಪುಸ್ತಕ ಭವನ, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4.30

ಸಂಗೀತ ವಿದ್ವಾನ್ ಮಗೇರಿ ಎನ್. ರಾಮಚಂದ್ರ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ 'ಯುವ ಸಂಭ್ರಮ', ಪ್ರಶಸ್ತಿ ಪ್ರದಾನ: ಅತಿಥಿ: ಎಂ.ಆರ್. ಯೋಗಾನಂದ, ಪ್ರಶಸ್ತಿ ಪಡೆಯುವವರು: ಮಾಧುರಿ ಕೌಶಿಕ್, ಈಶ್ವರ್ ಐಯ್ಯರ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ಮತ್ತು 'ಅನನ್ಯ' ಸಾಂಸ್ಕೃತಿಕ ವೇದಿಕೆ, ಸ್ಥಳ: ಅನನ್ಯ ಸಭಾಭವನ, 4ನೇ ಮುಖ್ಯರಸ್ತೆ, ಮಲ್ಲೇಶ್ವರ, ಸಂಜೆ 5

'ಕಥಾ ಪಂಜರ' ಕಥಾ ಸಂಕಲನ ಬಿಡುಗಡೆ: ಅಧ್ಯಕ್ಷತೆ: ಎಂ.ಜಿ. ಮಂಜುನಾಥ್, ಕೃತಿ ಬಿಡುಗಡೆ: ಹರೀಶ್ ಟಿ.ಜಿ., ವಿಮರ್ಶೆ: ಅಜಿತ್ ಟಿ.ಜಿ., ಅತಿಥಿಗಳು: ಶುಭಾ ಶ್ರೀನಾಥ್, ಸುಧಾಕರ್ ಜೈನ್ ಹೊಸಬೆಟ್ಟು, ಸುಮನಾ ಸುರೇಶ್ ಕುಮಾರ್, ಸವಿತಾ ಗುರುಪ್ರಸಾದ್, ಆಶ್ರಿತಾ ಕಿರಣ್, ಧನುಪ್ ಕುಮಾರ್, ದಿವ್ಯಾ ಶ್ರೀಧರ್ ರಾವ್, ಆಯೋಜನೆ: ಉಡುಪಿ ಆರ್ಯ ಪ್ರಕಾಶನ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಪ್ರಸಾದ್ ಸ್ವಾಮಿ ಅವರ 'ನಿನ್ನ ಚರಿತ್ರೆ ನಿನಗೆ ಸಹಜ', 'ಸಾವು', 'ಕಥಾ ಸಾಹಿತ್ಯ' ಕೃತಿಗಳ ಬಿಡುಗಡೆ: ಅಧ್ಯಕ್ಷತೆ: ಅಮರೇಶ ನುಗಡೋಣಿ, ಕೃತಿಗಳ ಬಿಡುಗಡೆ: ರಾಮಲಿಂಗಪ್ಪ ಟಿ. ಬೇಗೂರು, ಕೃತಿಕುರಿತು: ರಮೇಶ್ಚಂದ್ರ ದತ್ತ, ಮಂಜುಳಾ ಬಿ.ಕೆ., ಪ್ರವೀಣ್‌ಕುಮಾರ್, ಉಪಸ್ಥಿತಿ: ಎಂ.ಆರ್. ಗಿರಿರಾಜು, ಎಚ್. ಬಿ. ಉಮೇಶ್, ಆಯೋಜನೆ: ಕಣ್ವ ಪ್ರಕಾಶನ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5.30

ಹೃದ್ರೋಗಿಗಳ ನೆರವಿಗಾಗಿ 'ಆರೋಹಣ' ಸಂಗೀತ: ನಡೆಸಿಕೊಡುವವರು: ಸಂಗೀತ ಕಟ್ಟಿ, ಆಯೋಜನೆ: ರೋಟರಿ ಬೆಂಗಳೂರು, ಸ್ಥಳ: ಆರ್‌ವಿ ಡೆಂಟಲ್ ಕಾಲೇಜು ಆಡಿಟೋರಿಯಂ, ಐಟಿಐ ಲೇಔಟ್, ಜೆ.ಪಿ. ನಗರ, ಸಂಜೆ 6

ಬೆಂಗಳೂರು ತಂತ್ರಜ್ಞಾನ ಶೃಂಗಸಭೆ: ನಿರೀಕ್ಷೆಗಿಂತಲೂ ಯಶಸ್ವಿ– ಪ್ರಿಯಾಂಕ್

50 ಸಾವಿರ ಜನರು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 45 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯಲ್ಲಿ 50 ಸಾವಿರಕ್ಕೂ ಹೆಚ್ಚು ಜನರು ಭೇಟಿ ನೀಡಿದ್ದಾರೆ. ಶೃಂಗಸಭೆ ನಿರೀಕ್ಷೆಗಿಂತಲೂ ಯಶಸ್ವಿಯಾಗಿದೆ ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಮೂರು ದಿನಗಳು ನಡೆದ ಶೃಂಗಸಭೆಯ ಸಮಾರೋಪದಲ್ಲಿ ಅವರು ಮಾತನಾಡಿದರು.

ಬೆಂಗಳೂರು ಹೊರವಲಯ-ದಲ್ಲಿ ಉದಯೋನ್ಮುಖ ತಂತ್ರಜ್ಞಾನ ಸಮುಚ್ಚಯಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಮೂಲಸೌಕರ್ಯ ಅಭಿವೃದ್ಧಿ, ಪ್ರತಿಭೆಯ ಲಭ್ಯತೆ ಮತ್ತು ಉತ್ತಮ ಮಾರುಕಟ್ಟೆಗೆ ಉತ್ತೇಜನ ನೀಡುವ ಜತೆಗೆ, ಕ್ರಿಯಾತ್ಮಕ ಪರಿಸರ ವ್ಯವಸ್ಥೆ ರೂಪಿಸಲಾಗುತ್ತಿದೆ. 5 ವರ್ಷಗಳಲ್ಲಿ 100 ನವೋದ್ಯಮಗ-ಳನ್ನು ಬೆಳೆಸಲು ಯೋಜಿಸಲಾಗಿದೆ ಎಂದರು.

ನವೋದ್ಯಮಗಳು ಅಭಿವೃದ್ಧಿಪಡಿ-ಸಿದ 37 ವಿನೂತನ ಚಿಂತನೆಗಳ ಉತ್ಪನ್ನ ಮತ್ತು ಪರಿಹಾರಗಳನ್ನು ಅನಾವರಣ-ಗೊಳಿಸಲಾಗಿದೆ. ಇವು ಐಟಿ–ಐಟಿಇಎಸ್, ಅಗ್ರಿ-ಟೆಕ್, ಮೆಡ್-ಟೆಕ್, ಆರೋಗ್ಯ ರಕ್ಷಣೆ, ಕ್ಲೀನ್-ಟೆಕ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸಿ ಸೇರಿದಂತೆ ಹಲವು ಕ್ಷೇತ್ರ-ಗಳನ್ನು ವ್ಯಾಪಿಸಿವೆ ಎಂದು ಹೇಳಿದರು.

ಯು ಎ ಸ್ - ಇ ೦ ಡಿ ಯಾ ಬಿಸಿನೆಸ್ ಕೌನ್ಸಿಲ್ ಜತೆ ಕರ್ನಾಟಕ ಸಹಯೋಗವನ್ನು ಹೆಚ್ಚಿಸಲು ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಿದೆ. ಪಾಲುದಾರಿಕೆಯು ಯುಎಸ್ಐಬಿಸಿ ಸದಸ್ಯ ಕಂಪನಿಗಳು ಹಾಗೂ ಸರ್ಕಾರದ ನಡುವಿನ ಸಂವಹನ ಮಾರ್ಗಗಳು ರಾಜ್ಯದ ಉದ್ಯಮಗಳಿಗೆ ಅನುಕೂಲಕರ ವಾತಾವರಣ ನಿರ್ಮಿಸಲಿವೆ ಎಂದು ಹೇಳಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಶುಕ್ರವಾರ ಬೆಂಗಳೂರು ಟೆಕ್ ಸಮ್ಮಿಟ್ ಮೂರನೇ ದಿನ ವಿದ್ಯಾರ್ಥಿಗಳೇ ಮಾಹಿತಿ ಹಂಚಿಕೊಂಡರು.

ಪ್ರವಾಸೋದ್ಯಮದ ಅಭಿವೃದ್ಧಿಗೆ ಸಹಭಾಗಿತ್ವ

ದೇಶದ ಜಿಡಿಪಿಗೆ ಶೇ 10ರಷ್ಟು ಕೊಡುಗೆ ನೀಡುವ ಪ್ರವಾಸೋದ್ಯಮ ಮಹತ್ವದ ವಲಯವಾಗಿದೆ. ಸಮಗ್ರ ಅಭಿವೃದ್ಧಿಗೆ ಸರ್ಕಾರ ಮತ್ತು ಖಾಸಗಿ ಉದ್ಯಮ ಸಹಭಾಗಿತ್ವ ಅಗತ್ಯ ಎಂದು ಕರ್ನಾಟಕ ಪ್ರವಾಸೋದ್ಯಮ ವಿಷನ್ ಗ್ರೂಪ್ ಮಾಜಿ ಸಹ ಅಧ್ಯಕ್ಷ ವಿ. ರವಿಚಂದರ್ ಹೇಳಿದರು.

ಇ-ಸಮುದಾಯ್ ಸಂಸ್ಥೆ ಸಹಸಂಸ್ಥಾಪಕ ರವಿ ಹಲ್ಲಿಪುರ್, ಡಿಜಿಟಲ್ ವೇದಿಕೆಗಳನ್ನು ಸಮರ್ಥವಾಗಿ ಬಳಸಿಕೊಂಡು ಪ್ರತಿ ಜಿಲ್ಲೆಯನ್ನೂ ಅತ್ಯುತ್ತಮ ಪ್ರವಾಸಿ ತಾಣವಾಗಿಸುವುದು ಹಾಗೂ ಭಾರತೀಯ ಪಾರಂಪರಿಕ ಸ್ಮಾರಕಗಳ-ನ್ನು ಜಾಗತಿಕವಾಗಿ ಆಕರ್ಷಣಾ ಕೇಂದ್ರವಾಗಿಸಲು ಶ್ರಮಿಸಲಾಗುತ್ತಿದೆ ಎಂದರು.

ಎವಿಜಿಸಿ ಉದ್ಯಮ: ಬೆಂಗಳೂರೇ ಜಾಗತಿಕ ಕೇಂದ್ರ

ಅನಿಮೇಷನ್ ಮತ್ತು ವಿಷುವಲ್ ಎಫೆಕ್ಟ್ ವಲಯದಲ್ಲಿ ಬೆಂಗಳೂರು ಜಾಗತಿಕ ಕೇಂದ್ರವಾಗಿ ಹೊರಹೊಮ್ಮಿದೆ ಎಂದು ಟೆಕ್ನಿಕಲರ್ ಕ್ರಿಯೇಟಿವ್ ಸರ್ವೀಸಸ್ ಸಂಸ್ಥೆಯ ಭಾರತೀಯ ವಿಭಾಗದ ಮುಖ್ಯಸ್ಥ ಬಿರೇನ್ ಘೋಷ್ ಹೇಳಿದರು.

ಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಲಿವುಡ್‌ನ ಬಹುತೇಕ ಸಿನಿಮಾ ಮತ್ತು ಟಿವಿ ಸರಣಿಗಳ ಆನಿಮೇಷನ್ ಮತ್ತು ವಿಷುವಲ್ ಎಫೆಕ್ಟ್ ಬೆಂಗಳೂರಿನಲ್ಲೇ ನಿರ್ಮಾ-ಣಗೊಳ್ಳುತ್ತವೆ ಎಂದರು.

ಸೃಜನಶೀಲತೆ ಮತ್ತು ತಂತ್ರಜ್ಞಾನದ ಸಂಗಮವಾದ ಎವಿಜಿಸಿ ಭವಿಷ್ಯದ ಮನರಂಜನಾ ಉದ್ಯಮವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಉದ್ಯಮ ಪ್ರಸಕ್ತ ವರ್ಷ ಶೇ 20ರಷ್ಟು ಅಭಿವೃದ್ಧಿ ಹೊಂದಿದೆ. ಗೇಮಿಂಗ್ ಉದ್ಯಮವೂ ಹೆಚ್ಚಿನ ಅಭಿವೃದ್ಧಿ ಕಾಣುತ್ತಿದೆ ಎಂದು ವಿವರ ನೀಡಿದರು.

ಈಶ್ವರಪ್ಪ ವಿರುದ್ಧದ ಪ್ರಕರಣಕ್ಕೆ ತಡೆ

ಬೆಂಗಳೂರು: 'ನಮಗೆ ಮುಸ್ಲಿಮರ ಮತ ಬೇಡ' ಎಂಬ ಹೇಳಿಕೆಯ ಕಾರಣಕ್ಕೆ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ವಿರುದ್ಧ ದಾಖಲಿಸಲಾಗಿದ್ದ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಪ್ರಕರಣ ರದ್ದು ಕೋರಿ ಕೆ.ಎಸ್.ಈಶ್ವರಪ್ಪ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರ ಪರ ವಕೀಲ ಎಂ. ವಿನೋದ್ ಕುಮಾರ್ ವಾದ ಆಲಿಸಿದ ನ್ಯಾಯಪೀಠ, ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿ, ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.

ಪ್ರಕರಣವೇನು?: ವಿಧಾನಸಭೆ ಚುನಾವಣೆ ವೇಳೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಶಿವಮೊಗ್ಗದ ನಿವಾಸದ ಆವರಣದಲ್ಲಿ 2023ರ ಏಪ್ರಿಲ್ 25ರಂದು ನಡೆದ ವೀರಶೈವ ಲಿಂಗಾಯತ-ಸಮುದಾಯದ ಸಭೆಯಲ್ಲಿ ಮಾತನಾಡಿದ್ದ ಈಶ್ವರಪ್ಪ, 'ಶಿವಮೊಗ್ಗದಲ್ಲಿ 50ರಿಂದ 55 ಸಾವಿರ ಮುಸ್ಲಿಂ ಮತದಾರರು ಇದ್ದಾರೆ. ಆದರೆ, ನಮಗೆ ಒಂದೇ ಒಂದು ಮುಸ್ಲಿಂ ಮತ ಬೇಡ ಎಂದು ಹೇಳಿದ್ದಾರೆ' ಎಂದು ಸಾಮಾಜಿಕ ಜಾಲತಾಣದ ಖಾತೆಯಲ್ಲಿ ವರದಿಯಾಗಿತ್ತು. ಇದನ್ನು ಆಧರಿಸಿ ಮೇ 8ರಂದು ಎಫ್ಐಆರ್ ದಾಖಲಿಸಲಾಗಿತ್ತು. ಇದೇ 2ಕ್ಕೆ ಪ್ರಕರಣದ ವಿಚಾರಣೆ ನಿಗದಿಯಾಗಿತ್ತು. ಇದೀಗ ಹೈಕೋರ್ಟ್ ಇದಕ್ಕೆ ತಡೆ ನೀಡಿದೆ.

'ಖಾಸಗಿ ಸುದ್ದಿ ಸಂಸ್ಥೆಯಾದ ಎಕ್ಸ್ (ಟ್ವಿಟರ್) ಖಾತೆಯ ಮಾಹಿತಿ ಆಧರಿಸಿ ದೂರು ದಾಖಲಿಸಲಾಗಿದೆ. ಪ್ರಕರಣದಲ್ಲಿ ಯಾವುದೇ ಸಾಕ್ಷಿ-ಪುರಾವೆಗಳಿಲ್ಲ. ಈ ತನಿಖೆಯು ಕಾನೂನಿನ ದುರ್ಬಳಕೆ. ಆದ್ದರಿಂದ, ಪ್ರಕರಣ ರದ್ದುಪಡಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಹೈಕೋರ್ಟ್ ಕಟ್ಟಡ ವಿಸ್ತರಣೆ: ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ಕಟ್ಟಡ ವಿಸ್ತರಣೆಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸುವ ವಿಚಾರದಲ್ಲಿ ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಸ್ತಾವನೆಗಳು ಪರಿಶೀಲ-ನೆಯಲ್ಲಿವೆ' ಎಂದು ಮುಖ್ಯ ನ್ಯಾ ಯ ಮೂ ರ್ತಿ ಅವರ ನೇತೃತ್ವದ ವಿ ಭಾ ಗೀ ಯ ನ್ಯಾಯಪೀಠಕ್ಕೆ ಹೈಕೋರ್ಟ್ ಆಡಳಿತ ವಿಭಾಗ ತಿಳಿಸಿದೆ.

'ಬೆಂಗಳೂರಿನ ಹೈಕೋರ್ಟ್ ಕಟ್ಟಡದ ನೆಲಮಹಡಿಯಲ್ಲಿ ಇರುವ ಕಚೇರಿಗಳನ್ನು ಸ್ಥಳಾಂತರಿಸಲು ಸೂಕ್ತ ಆದೇಶ ಹೊರಡಿಸಬೇಕು ಮತ್ತು ಹೈಕೋರ್ಟ್ ಕಟ್ಟಡ ಸಂಕೀರ್ಣಕ್ಕೆ ಬೆಂಗಳೂರಿನ ಕೇಂದ್ರ ಭಾಗದಲ್ಲಿ 30ಕ್ಕೂ ಅಧಿಕ ಎಕರೆ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂಬ ಎರಡು ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೈಕೋರ್ಟ್ ಆಡಳಿತ ವಿಭಾಗದ ಪರ ಹಾಜರಾದ ಹಿರಿಯ ವಕೀಲ ಎಸ್.ಎಸ್. ನಾಗಾನಂದ ಅವರು, 'ಸರ್ಕಾರದ ಪ್ರಸ್ತಾವನೆಗಳ ಮೇಲೆ ಸಮಿತಿಯ ಅಭಿಪ್ರಾಯ ತಿಳಿಸಲು ಸ್ವಲ್ಪ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ನಾಲ್ಕು ವಾರಗಳ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು. ವಕೀಲ ಎಲ್.ರಮೇಶ್ ನಾಯಕ್ ಮತ್ತು ಶರಣ ದೇಸಾಯಿ ಈ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಬಾಂಬ್ ಬೆದರಿಕೆ... ಆತಂಕದ ಕ್ಷಣಗಳು...

ಶಾಲೆಗಳಿಗೆ ಬಾಂಬ್ ಬೆದರಿಕೆ ಕರೆ ಬಂದಿದ್ದರಿಂದ ನೀವ್ ಅಕಾಡೆಮಿ ಆವರಣದಲ್ಲಿ ಶ್ವಾನದಳ ಸಿಬ್ಬಂದಿ ಪರಿಶೀಲನೆ ನಡೆಸಿದರು

ಬೆಂಗಳೂರಿನ ಪ್ರೆಸಿಡೆನ್ಸಿ ಶಾಲೆಯಿಂದ ಶುಕ್ರವಾರ ಬೆಳಿಗ್ಗೆ ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸಲಾಯಿತು

ಇ–ಮೇಲ್ ಬಂದ ಶಾಲೆಗಳ ವಲಯವಾರು ವಿವರ

ವಲಯ	ಒಟ್ಟು ಶಾಲೆಗಳು
ಬೆಂಗಳೂರು ಉತ್ತರ ವಲಯ–1	4
ಬೆಂಗಳೂರು ಉತ್ತರ ವಲಯ–2	2
ಬೆಂಗಳೂರು ಉತ್ತರ ವಲಯ–4	1
ಬೆಂಗಳೂರು ದಕ್ಷಿಣ ವಲಯ–1	15
ಬೆಂಗಳೂರು ದಕ್ಷಿಣ ವಲಯ–2	3
ಬೆಂಗಳೂರು ದಕ್ಷಿಣ ವಲಯ–3	10
ಬೆಂಗಳೂರು ದಕ್ಷಿಣ ವಲಯ–4	4
ಆನೇಕಲ್	5

ಪೂರ್ಣಪ್ರಜ್ಞಾ ಶಾಲೆಯ ವಿದ್ಯಾರ್ಥಿಗಳನ್ನು ಆಟದ ಮೈದಾನದಲ್ಲಿ ಕೂರಿಸಲಾಗಿತ್ತು

ಸದಾಶಿವನಗರದ ಪೂರ್ಣಪ್ರಜ್ಞಾ ಶಾಲೆಯಿಂದ ಪೋಷಕರೊಬ್ಬರು ಮಗುವನ್ನು ಸಂತೈಸುತ್ತಲೇ ಮನೆಗೆ ಕರೆದೊಯ್ದರು

ನೀವ್ ಅಕಾಡೆಮಿ ಆವರಣದಲ್ಲಿ ಪರಿಶೀಲನೆ ನಡೆಸಿದ ಪೊಲೀಸರು

'ಭವನ್ ಬೆಂಗಳೂರು ಪ್ರೆಸ್ ಸ್ಕೂಲ್'ನ ವಿದ್ಯಾರ್ಥಿನಿಯರನ್ನು ಪೋಷಕರು ಸಂತೈಸಿದರು

ಇಂದು ಯಥಾ ಪ್ರಕಾರ ಶಾಲೆ

ಬೆಂಗಳೂರು: ಇ–ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದ ಶಾಲೆಗಳು ಸೇರಿದಂತೆ ಹಲವು ಶಾಲೆಗಳಿಗೆ ಶುಕ್ರವಾರ ರಜೆ ನೀಡಿ ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸಲಾಗಿತ್ತು. ಬೆದರಿಕೆ ಬಾರದ ಬಹುತೇಕ ಶಾಲೆಗಳ ಆಡಳಿತ ಮಂಡಳಿಯವರೂ ರಜೆ ನೀಡಿದ್ದರು. ಶನಿವಾರ ನಗರದಲ್ಲಿ ಎಂದಿನಂತೆಯೇ ಶಾಲೆಗಳು ನಡೆಯಲಿವೆ ಎಂದು ಜಿಲ್ಲಾಧಿಕಾರಿ ಬಿ. ದಯಾನಂದ್ ತಿಳಿಸಿದ್ದಾರೆ.

'ಭವನ್ ಬೆಂಗಳೂರು ಪ್ರೆಸ್ ಸ್ಕೂಲ್'ನಿಂದ ವಿದ್ಯಾರ್ಥಿಗಳನ್ನು ಮನೆಗೆ ಕಳುಹಿಸಲಾಯಿತು –ಪ್ರಜಾವಾಣಿ ಚಿತ್ರಗಳು

ಇಂದಿನಿಂದ ಬೆಂಗಳೂರು ಸಾಹಿತ್ಯೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಲಿಟೇರಚರ್ ಫೆಸ್ಟ್(ಬಿಎಲ್‌ಎಫ್) ಸಮಿತಿ ಆಯೋಜಿಸುವ ಬೆಂಗಳೂರು ಸಾಹಿತ್ಯೋತ್ಸವದ 12ನೇ ಆವೃತ್ತಿ ಶನಿವಾರದಿಂದ ಆರಂಭವಾಗಲಿದೆ.

ನಗರದ ಹೋಟೆಲ್ ಲಲಿತ್ ಅಶೋಕ್‌ನಲ್ಲಿ ಎರಡು (ಡಿ.2 ಮತ್ತು 3) ದಿನ ನಡೆಯಲಿರುವ ಸಾಹಿತ್ಯ ಉತ್ಸವದಲ್ಲಿ ಇತಿಹಾಸ, ಪುರಾಣಗಳಿಂದ ಹಿಡಿದು ಕಲೆ, ಸಂಗೀತ, ಸ್ತ್ರೀವಾದ, ಸಿನಿಮಾ, ತಂತ್ರಜ್ಞಾನ, ಆಹಾರ ಮತ್ತು ಕ್ರೀಡಾ ವಿಷಯಗಳು, ಕಥೆ, ಕವಿತೆ, ಸಮಕಾಲೀನ ವಿಚಾರಗಳ ಕುರಿತು, ವಿಚಾರ ಮಂಡನೆ, ಚರ್ಚೆ, ಸಂವಾದಗಳು ನಡೆಯಲಿವೆ. ಹಿಂದಿನ ಆವೃತ್ತಿಗಳಲ್ಲಿದ್ದಂತೆ ಅನುವಾದ, ಭಾರತೀಯ ಭಾಷೆಗಳು ಮತ್ತು ಕವಿತೆಗಳಿಗೆ ಒತ್ತು ನೀಡಲಾಗಿದೆ. ಪ್ರಕಾಶನ ಉದ್ಯಮ, ಮಾಧ್ಯಮ ಮತ್ತು ಆರ್ಥಿಕತೆಯ ಬಗ್ಗೆಯೂ ಚರ್ಚೆಗಳು ನಡೆಯಲಿವೆ.

ಶನಿವಾರ ಬೆಳಿಗ್ಗೆ 9 ಗಂಟೆಗೆ ಐಶ್ವರ್ಯ ವಿದ್ಯಾ ರಘುನಾಥ್ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನದೊಂದಿಗೆ ಸಾಹಿತ್ಯೋತ್ಸವ ಆರಂಭವಾಗಲಿದೆ.

ಸಾಹಿತಿಗಳಾದ ಚಂದ್ರಶೇಖರ ಕಂಬಾರ, ಸಿ.ಎನ್.ರಾಮಚಂದ್ರನ್, ಕೃಷ್ಣಮೂರ್ತಿ ಹನೂರು, ಎಸ್. ದಿವಾಕರ್, ವಸುಧೇಂದ್ರ, ಪತ್ರಕರ್ತರಾದ ಸುಗತ ಶ್ರೀನಿವಾಸರಾಜು, ಕಾದಂಬರಿಕಾರ ಅಮಿತವ ಕುಮಾರ್, ಕವಯಿತ್ರಿ ಅರುಂಧತಿ ಸುಬ್ರಹ್ಮಣಿಯಂ, ರಂಜಿತ್ ಹೊಸಕೋಟೆ ಮತ್ತು ರುತ್ ಪಡೆಲ್, ಮಲಯಾಳಂ ಮತ್ತು ತಮಿಳು ಲೇಖಕ ಪೌಲ್ ಝಚಾರಿಯಾ ಮತ್ತು ಪೆರುಮಾಳ್ ಮುರುಗನ್ ಸೇರಿದಂತೆ ವಿವಿಧ ರಾಜ್ಯ ಹಾಗೂ ದೇಶಗಳ ಖ್ಯಾತ ಸಾಹಿತಿಗಳು, ನಾಟಕಾರರು, ಲೇಖಕರು, ಪತ್ರಕರ್ತರು ಈ ಬಾರಿಯ ಸಾಹಿತ್ಯೋತ್ಸವದ ವಿವಿಧ ಗೋಷ್ಠಿಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಂಗಳೂರು ಸಾಹಿತ್ಯೋತ್ಸವದ ಕಾರ್ಯಕ್ರಮಗಳ ಪೂರ್ಣವಿವರಕ್ಕಾಗಿ www.bangaloreliteraturefestival.orgಗೆ ಭೇಟಿ ಕೊಡಬಹುದು.

ಡಿಸೆಂಬರ್ 2–3ರ ಪ್ರಮುಖ ಕಾರ್ಯಕ್ರಮಗಳ ವಿವರ

ಡಿಸೆಂಬರ್ 2

- **ಮಧ್ಯಾಹ್ನ 1.30** • ಇಂಕ್ ಆ್ಯಂಡ್ ಇನ್‌ಫ್ಲೂಯೆನ್ಸ್: ದಿ ಕ್ರಾಫ್ಟ್ ಆಫ್ ಪೊಲಿಟಿಕಲ್ ಲೈಫ್ ನರೇಟಿವ್ಸ್ (ಭಾಗವಹಿಸುವವರು: ಆಕಾಶ್ ರಾಥೋಡ್, ಸಾಗರಿಕ ಘೋಷ್, ಸುಗತ ಶ್ರೀನಿವಾಸರಾಜು)
- **ಮಧ್ಯಾಹ್ನ 2.30** • ಚೇಂಜಸ್ ಇನ್ ಟ್ರಾನ್ಸ್‌ಲೇಷನ್ ಆ್ಯಂಡ್ ಟ್ರಾನ್ಸ್‌ಲೇಷನ್ ಫಾರ್ ಚೇಂಜ್ (ಭಾಗವಹಿಸುವವರು: ಮಾಧವ್ ಅಜ್ಜಂಪುರ, ಸುಸಾನ್ ಡೇನಿಯಲ್, ತಾರಿಖ್ ಖಾನ್)
- **ಸಂಜೆ 6ಕ್ಕೆ** • ಬೆಂಗಳೂರು ಥ್ರೂ ದಿ ಸೆಂಚುರಿಸ್ (ಭಾಗವಹಿಸುವವರು: ನರೇಶ್ ನರಸಿಂಹನ್ ಅಮೀನ ಶಹೀನ್)

ಡಿಸೆಂಬರ್ 3

- **ಬೆಳಿಗ್ಗೆ 11.30ಕ್ಕೆ** • ಐ ಹೇಟ್ ಲವ್ ಸ್ಟೋರೀಸ್ (ಭಾಗವಹಿಸುವವರು: ಪ್ರಜ್ವಲ್ ಹೆಗಡೆ, ರಹೀ ಮುಖರ್ಜಿ, ಸೌಮ್ಯ ವೊಹ್ರ)
- **ಮಧ್ಯಾಹ್ನ 1.15ಕ್ಕೆ** • ಮಿರ್ಚ್ ಮಸಾಲ: ಆನ್ ದಿ ಇಂಡಿಯನ್ ಫುಡ್ ಟ್ರಯಲ್ (ಭಾಗವಹಿಸುವವರು: ಸಡಫ್ ಹುಸೇನ್, ತರಣ್ ಹುಸೇನ್ ಖಾನ್, ಜಾಕ್ ಒಯೇಹ್)
- **ಮಧ್ಯಾಹ್ನ 2.45** • ಲಿಸನ್ ಐ ವಿಲ್ ಟೆಲ್ ಯು (ಭಾಗವಹಿಸುವವರು: ಚಂದ್ರಶೇಖರ ಕಂಬಾರ ಮತ್ತು ಬಸವರಾಜ್ ಕಲ್ಗುಡಿ)

ಇ.ಡಿ ಅಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಚೆನ್ನೈ: ನಾಟಕೀಯ ಬೆಳವಣಿಗೆಯಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಮಧುರೈ ಉಪ ವಿಭಾಗದ ಕಚೇರಿಯ ಮೇಲೆ ಶುಕ್ರವಾರ ತಮಿಳುನಾಡಿನ ಭ್ರಷ್ಟಾಚಾರ ನಿಗ್ರಹ ಮತ್ತು ಜಾಗೃತ ಪಡೆ (ಡಿವಿಎಸಿ) ಅಧಿಕಾರಿಗಳು ದಾಳಿ ನಡೆಸಿದ್ದು, ವೈದ್ಯರೊಬ್ಬರಿಂದ ₹ 20 ಲಕ್ಷ ಲಂಚ ಪಡೆದ ಆರೋಪದಡಿ ಇ.ಡಿಯ ಹಿರಿಯ ಅಧಿಕಾರಿಯೊಬ್ಬರನ್ನು ಬಂಧಿಸಿದರು.

ಬಂಧಿತ ಅಧಿಕಾರಿಯು ನಿಗದಿತ ಮೂಲ ಮೀರಿ ಆಸ್ತಿ ಸಂಪಾದನೆ ಪ್ರಕರಣದಲ್ಲಿ ಆರೋಪಿಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು. ಅಂಕಿತ್ ತಿವಾರಿ ಬಂಧಿತ ಇ.ಡಿ ಅಧಿಕಾರಿ. ಇವರು ಶುಕ್ರವಾರ ಬೆಳಿಗ್ಗೆ ಮಧುರೈ–ದಿಂಡಿಗುಲ್ ಹೆದ್ದಾರಿಯಲ್ಲಿನ ಟೋಲ್ ಪ್ಲಾಜಾ ಬಳಿ ವೈದ್ಯರೊಬ್ಬರಿಂದ ಹಣ ಪಡೆದಿದ್ದರು. ಅಧಿಕಾರಿ ಪ್ರಯಾಣಿಸುತ್ತಿದ್ದ ವಾಹನದಿಂದ ₹ 20 ಲಕ್ಷ ಜಪ್ತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಬಂಧಿತ ಅಧಿಕಾರಿಯನ್ನು ದಿಂಡಿಗಲ್‌ನ ಸ್ಥಳೀಯ ನ್ಯಾಯಾಲಯ 15 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಡಿವಿಎಸಿ ಅಧಿಕಾರಿಗಳು ದಾಳಿ ನಡೆದಿದ್ದ ಇ.ಡಿ ಕಚೇರಿಯಲ್ಲಿ ತಡರಾತ್ರಿಯವರೆಗೂ ಶೋಧ ಕಾರ್ಯ ನಡೆಯಿತು.

ಚೆನ್ನೈನಲ್ಲಿರುವ ಇ.ಡಿ ಕಚೇರಿಯ ಮೇಲೂ ಡಿವಿಎಸಿ ದಾಳಿ ನಡೆಸಬಹುದು ಎಂಬ ವದಂತಿಗಳಿವೆ. ಕಚೇರಿಯ ಬಳಿ ಅರೆ ಸೇನಾಪಡೆ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ರಾಜ್ಯ ಪೊಲೀಸರು ಇ.ಡಿ ಅಧಿಕಾರಿಯೊಬ್ಬರನ್ನು ಬಂಧಿಸುತ್ತಿರುವುದು ಇದು ಎರಡನೇ ಬಾರಿ. ಕಳೆದ ಅಕ್ಟೋಬರ್ ತಿಂಗಳಲ್ಲಿ ರಾಜಸ್ಥಾನ ಪೊಲೀಸರು ಅಧಿಕಾರಿಯೊಬ್ಬರನ್ನು ವಶಕ್ಕೆ ಪಡೆದಿದ್ದರು.

'ಸರ್ಕಾರಿ ನೌಕರರು ಆದ ವೈದ್ಯರನ್ನು ಅಧಿಕಾರಿ ಸಂಪರ್ಕಿಸಿದ್ದು, ವೈದ್ಯರ ವಿರುದ್ಧ ದಾಖಲಾಗಿರುವ ಪ್ರಕರಣ ಕುರಿತು ಚರ್ಚಿಸಿದ್ದರು. ಬಳಿಕ, ಪ್ರಕರಣದ ಬಗ್ಗೆ ದಾಳಿ ನಡೆಸಲು ಪ್ರಧಾನಮಂತ್ರಿಗಳ ಕಚೇರಿಯಿಂದ ಸೂಚನೆ ಇದೆ. ಹೀಗಾಗಿ, ವಿಚಾರಣೆಗೆ 30–10–2023ರಂದು ಇ.ಡಿ ಕಚೇರಿಗೆ ಬರಬೇಕು ಎಂದು ತಿವಾರಿ ಅವರು ಸೂಚಿಸಿದ್ದರು' ಎಂದು ಡಿವಿಎಸಿ ತಿಳಿಸಿದೆ.

ಅದರಂತೆ ವೈದ್ಯರು ಮಧುರೈಗೆ ಹೋದಾಗ ತಿವಾರಿ ಅವರು ಕುಳಿತು ಈ ಪ್ರಕರಣದಲ್ಲಿ ಕಾನೂನು ಕ್ರಮದಿಂದ ಪಾರಾಗಲು ₹ 3 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಬಳಿಕ, ಆ ಮೊತ್ತವನ್ನು ₹ 51 ಲಕ್ಷಕ್ಕೆ ಇಳಿಸಿದ್ದರು ಎಂದು ಡಿವಿಎಸಿ ಹೇಳಿಕೆಯಲ್ಲಿ ತಿಳಿಸಿದೆ.

ಬೆಂಗಳೂರು ರೇಸ್

ಜಮಾರಿ ಗೆಲ್ಲುವ ನಿರೀಕ್ಷೆ

ಪಿ.ಅರುಣ್ ಕುಮಾರ್ ಬೆಂಗಳೂರು 1000 ಗಿನ್ನೀಸ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜಮಾರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಎಲ್ ಅಸೆಸಿನೊ 2, ರೀಕೊ 5, ಟೆಸೊರಿನೊ 8
2ನೇ ರೇಸ್: ನೆವೆಡ ಗೋಲ್ಡ್ 9, ಬ್ರೇವ್ ಮೆಜೆಸ್ಟಿ 8, ಮ್ಯಾಗ್ನಸ್ 3
3ನೇ ರೇಸ್: ಸಿಂಕೊ ಡೆ ಮಾಯೊ 5, ಬಾಲ್ಟಿಮೋರ್ 3, ಎಂಬೋಸಮ್ 2
4ನೇ ರೇಸ್: ಸೀಝ್ ಕರೇಜಿಯಸ್ 1, ಗ್ಯಾಲಕ್ಟಿಕಲ್ 3, ಬ್ರೇವ್ ಟ್ರೂಪರ್ 5
5ನೇ ರೇಸ್: ಜಮಾರಿ 3, ಟೆಹಾನಿ 7, ಆಸ್ಪೀಸಿಯಸ್ ಕ್ವೀನ್ 2
6ನೇ ರೇಸ್: ಬುಲ್ ಬುಲ್ ರಾಣಿ 4, ಜೋಕ್ಸಾನ್ 1, ಸೂಪರ್ ಕೈಂಡ್ 2
7ನೇ ರೇಸ್: ಪರ್ಫೆಕ್ಟ್ ಹಲೊ 10, ಸ್ಟಾರ್ ಸಿಟಿಜನ್ 11, ಅಕಾಸಿ 6

ಉತ್ತಮ ಬೆಟ್: ಎಲ್ ಅಸೆಸಿನೊ

ಇಲಾಖಾ ಪ್ರಗತಿ ಪರಿಶೀಲನಾ ಸಭೆ • ಇದುವರೆಗೆ ₹1.10 ಲಕ್ಷ ಕೋಟಿ ಮಾತ್ರ ಸಂಗ್ರಹ

ತೆರಿಗೆ ಸಂಗ್ರಹ: ಗುರಿ ಮುಟ್ಟಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ ಮತ್ತು ಜಾಗತಿಕ ಮಾರುಕಟ್ಟೆಯ ಏರಿಳಿತದಿಂದ ತೆರಿಗೆ ಸಂಗ್ರಹದಲ್ಲಿ ತೀವ್ರ ಕುಸಿತವಾಗುವ ಆತಂಕ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಆರ್ಥಿಕ ವರ್ಷದಲ್ಲಿ ತೆರಿಗೆ ಸಂಗ್ರಹದ ಗುರಿಯನ್ನು ತಲುಪಲು ಕಠಿಣ ಪರಿಶ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ರಾಜ್ಯದ ತೆರಿಗೆ ಸಂಗ್ರಹದ ಪ್ರಗತಿ ಪರಿಶೀಲನೆಯನ್ನು ಸಿದ್ದರಾಮಯ್ಯ ಶುಕ್ರವಾರ ನಡೆಸಿದರು. 2023–24ರ ಸಾಲಿಗೆ ರಾಜ್ಯ ಸರ್ಕಾರ ₹1.82 ಲಕ್ಷ ಕೋಟಿ ತೆರಿಗೆ ಸಂಗ್ರಹದ ಗುರಿ ನಿಗದಿ ಮಾಡಿದೆ. ವಾಣಿಜ್ಯ ತೆರಿಗೆ ₹98,650 ಕೋಟಿ, ಅಬಕಾರಿ ₹36,000 ಕೋಟಿ, ನೋಂದಣಿ ಮತ್ತು ಮುದ್ರಾಂಕದಿಂದ ₹25,000 ಕೋಟಿ, ಸಾರಿಗೆ ₹11,500 ಕೋಟಿ ಮತ್ತು ಗಣಿ ಹಾಗೂ ಭೂವಿಜ್ಞಾನ ಇಲಾಖೆಯಿಂದ ₹9,000 ಕೋಟಿ ತೆರಿಗೆ ಸಂಗ್ರಹದ ನಿರೀಕ್ಷೆ ಹೊಂದಿದೆ.

'ಈ ವರೆಗೆ ₹1.10 ಲಕ್ಷ ಕೋಟಿ ಮಾತ್ರ ಸಂಗ್ರಹಿಸಲಾಗಿದೆ' ಎಂದು ಸಭೆಯಲ್ಲಿ ಸಿದ್ದರಾಮಯ್ಯ ಹೇಳಿದರು.

ತೆರಿಗೆ ಸಂಗ್ರಹದ ನಿಖರ ಸಂಖ್ಯೆಯನ್ನು ಸರ್ಕಾರ ಬಹಿರಂಗ ಮಾಡಿಲ್ಲ. ಸಾರಿಗೆ ಇಲಾಖೆ ಮಾತ್ರ ನಿಗದಿತ ಗುರಿಯನ್ನು ಸಾಧಿಸಿದೆ. ಉಳಿದ ಇಲಾಖೆಗಳು ಹಿನ್ನಡೆ ಸಾಧಿಸಿವೆ ಎಂಬ ಅಂಶ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಮೂಲಗಳು ತಿಳಿಸಿವೆ.

'ಆದಾಯ ವೃದ್ಧಿಯ ಕುರಿತ ನಮ್ಮ ನಿರೀಕ್ಷೆ ಆಶಾದಾಯಕವಾಗಿದೆ. ಆದರೆ, ಸ್ವಲ್ಪ ಮಟ್ಟಿಗೆ ಹಿಂದೆ ಬಿದ್ದಿದ್ದೇವೆ. 223 ತಾಲ್ಲೂಕುಗಳಲ್ಲಿ ಬರ ಇರುವುದರಿಂದ ತೆರಿಗೆ ಸಂಗ್ರಹದ ಮೇಲೆ ಹೊಡೆತ ಬಿದ್ದಿದೆ' ಎಂದು ಹಣಕಾಸು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಹೊಸ ಸರ್ಕಾರ ಕಾರ್ಯ ನಿರ್ವಹಿಸಲು ಆರಂಭಿಸಿದ್ದು ಆಗಸ್ಟ್‌ನಿಂದ. ಅಂದರೆ, ಹೊಸ ಬಜೆಟ್‌ಗೆ ಒಪ್ಪಿಗೆ ಸಿಕ್ಕಿದ ಬಳಿಕ. ಆದರೆ, ಹಿಂದಿನ ಸರ್ಕಾರದ ಕಾಮಗಾರಿಗಳನ್ನು ತಡೆ ಹಿಡಿದಿದ್ದು ಮತ್ತು ಗುತ್ತಿಗೆದಾರರಿಗೆ ಹಣ ಪಾವತಿ ಮಾಡದ ಕಾರಣ ಆದಾಯದ ಹರಿವಿನ ಮೇಲೆ ದೊಡ್ಡ ಪ್ರಮಾಣದ ಹೊಡೆತ ಬಿದ್ದಿತು' ಎಂದು ಅವರು ವಿವರಿಸಿದರು. ಅಲ್ಲದೇ, ಪೆಟ್ರೋಲಿಯಂ ಮತ್ತು ಉಕ್ಕು ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕುಸಿತ ಕಂಡಿದ್ದರಿಂದ ರಾಜ್ಯಕ್ಕೆ ಜಿಎಸ್‌ಟಿ ನಷ್ಟ ಉಂಟಾಗಿದೆ. ಉಕ್ಕು ಬೆಲೆ ಟನ್‌ಗೆ ₹91,000 ಇದ್ದದ್ದು ₹61,000 ಕ್ಕೆ ಕುಸಿತವಾಗಿದೆ ಎಂದು ಅವರು ಹೇಳಿದರು.

ಎಂಆರ್‌ಪಿಎಲ್ ರಾಜ್ಯದ ಅತಿ ದೊಡ್ಡ ತೆರಿಗೆ ಪಾವತಿ ಕಂಪನಿ. ಆದರೆ, ಕಚ್ಚಾ ತೈಲದ ಬೆಲೆ ಕುಸಿತವಾಗಿದ್ದರಿಂದ ತೆರಿಗೆ ಪಾವತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಕುಸಿತವಾಗಿದೆ ಎಂದರು.

ಹಿಂದಿನ ಸರ್ಕಾರ ಅವಾಸ್ತವಿಕವಾಗಿ ತೆರಿಗೆ ಗುರಿಯನ್ನು ನಿಗದಿ ಮಾಡಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಕೇವಲ ₹12,000 ಕೋಟಿ ಮಾತ್ರ ಹೆಚ್ಚು ಆದಾಯ ಬಂದಿದೆ ಎಂದು ಅವರು ತಿಳಿಸಿದರು.

₹7,605.92 ಕೋಟಿಗೆ ಮಹದೇವಪ್ಪ ಬೇಡಿಕೆ

ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅವರು ತಮ್ಮ ಇಲಾಖೆಗೆ ಹೆಚ್ಚುವರಿಯಾಗಿ ₹7,605.92 ಕೋಟಿ ನೀಡಬೇಕು ಎಂದು ಬೇಡಿಕೆ ಸಲ್ಲಿಸಿದ್ದಾರೆ.

'ಇದರಿಂದ ಬಾಕಿ ಉಳಿದಿರುವ ಬಿಲ್‌ಗಳನ್ನು ಚುಕ್ತಾ ಮಾಡುವುದರ ಜತೆಗೆ, ಹಾಸ್ಟೆಲ್‌ಗಳ ದುರಸ್ತಿ, ಹೊಸ ಉಪಕರಣಗಳ ಖರೀದಿ ಮತ್ತು ಇತರ ವೆಚ್ಚಗಳನ್ನು ಭರಿಸಬಹುದು' ಎಂದು ಅವರು ಮುಖ್ಯಮಂತ್ರಿಯವರಿಗೆ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಗೆ ಎಲ್ಲ ರೀತಿಯಲ್ಲೂ ಬೆಂಬಲ ನೀಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು. ಆದರೆ, ಕೇಳಿದಷ್ಟು ಹಣ ಬಿಡುಗಡೆ ಮಾಡುವ ಬಗ್ಗೆ ಅವರು ಯಾವುದೇ ಭರವಸೆ ನೀಡಲಿಲ್ಲ ಎಂದು ಮೂಲಗಳು ಹೇಳಿವೆ.

ಕನ್ಯಾಡಿ ಶ್ರೀಗೆ ನಾಳೆ ಗುರುವಂದನೆ

ಬೆಂಗಳೂರು: ಸಾಮಾಜಿಕ ಕ್ರಾಂತಿಯ ಹರಿಕಾರ ಬ್ರಹ್ಮಶ್ರೀ ನಾರಾಯಣ ಗುರುಗಳ 169ನೇ ಜಯಂತ್ಯುತ್ಸವ ಮತ್ತು ಧರ್ಮಸ್ಥಳ ಕನ್ಯಾಡಿ ರಾಮಕ್ಷೇತ್ರ ಮಹಾಸಂಸ್ಥಾನದ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಗೆ ಗುರುವಂದನ ಕಾರ್ಯಕ್ರಮ ಡಿ.3ಕ್ಕೆ ಹಮ್ಮಿಕೊಳ್ಳಲಾಗಿದೆ.

ನಗರದ ಡಾ. ರಾಜಕುಮಾರ್ ಆಡಿಟೋರಿಯಂನಲ್ಲಿ ಗೆಳೆಯರ ಬಳಗ ಹಮ್ಮಿಕೊಂಡಿರುವ ಈ ಕಾರ್ಯಕ್ರಮದಲ್ಲಿ ಸಮಾಜದ ಹಿರಿಯರು, ಗಣ್ಯರು ಗುರುವಂದನೆ ನೆರವೇರಿಸಲಿದ್ದಾರೆ ಎಂದು ಕಾರ್ಯಕ್ರಮದ ಸಂಚಾಲಕರಾದ ವಿ. ಗಂಗಾಧರಪ್ಪ, ಎಚ್‌.ಎಸ್. ಶ್ರೀವತ್ಸ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆತ್ಮಾನಂದ ಸ್ವಾಮೀಜಿಯವರ ಉತ್ತರಾಧಿಕಾರಿಯಾಗಿ ಪೀಠಾರೋಹಣ ಮಾಡಿದ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಿದ್ದಾರೆ. ಸಂಘಟನೆಯಿಂದ ಒಂದಾಗಿ ಶಿಕ್ಷಣದಿಂದ ಸಬಲರಾಗಿ ಎಂಬ ನಾರಾಯಣ ಗುರುಗಳ ತತ್ವಕ್ಕೆ ಬದ್ಧರಾಗಿ ಕೆಲಸ ಮಾಡುತ್ತಿದ್ದಾರೆ. ಉಡುಪಿಯ ಬಾರ್ಕೂರಿನಲ್ಲಿ 15 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ಮಾದರಿಯ ಐಟಿಐ ನಿರ್ಮಿಸಿ 100 ಮಕ್ಕಳಿಗೆ ವಸತಿ ಸಹಿತ ಉಚಿತ ಶಿಕ್ಷಣ ನೀಡುವ ಕಾರ್ಯ ನಡೆಯುತ್ತಿದೆ ಎಂದು ಸಮಾಜದ ಮುಖಂಡ ಎಚ್‌. ರಾಜು ಪೂಜಾರಿ ಮಾಹಿತಿ ನೀಡಿದರು.

ನಗರಕ್ಕೆ ಕಂಪನಿ ಸೆಕ್ರೆಟರೀಸ್ ಪ್ರಾದೇಶಿಕ ಕಚೇರಿ: ತೇಜಸ್ವಿ ಸೂರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರಕ್ಕೆ 'ಕಂಪನಿ ಸೆಕ್ರೆಟರೀಸ್'ನ ಪ್ರಾದೇಶಿಕ ಕಚೇರಿ ಮಂಜೂರು ಮಾಡುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಜತೆ ಚರ್ಚೆ ನಡೆಸುವುದಾಗಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ನಗರದಲ್ಲಿ ಶುಕ್ರವಾರದಿಂದ ಆರಂಭವಾದ ಎರಡು ದಿನಗಳ ಎಸ್‌ಐಆರ್‌ಸಿ ಪ್ರಾದೇಶಿಕ ಕಾರ್ಪೊರೇಟ್ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದರು.

ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಮಂದಿ ಕಂಪನಿ ಸೆಕ್ರೆಟರಿಗಳಿದ್ದು, ಕೇಂದ್ರ ಸಾಂಸ್ಥಿಕ ವ್ಯವಹಾರಗಳ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಕಂಪನಿ ಸೆಕ್ರೆಟರೀಸ್‌ನ ಪ್ರಾದೇಶಿಕ ಕಚೇರಿಯನ್ನು ಬೆಂಗಳೂರು ನಗರಕ್ಕೆ ಮಂಜೂರು ಮಾಡಲು ಎಲ್ಲಾ ರೀತಿಯಲ್ಲೂ ಪ್ರಯತ್ನಿಸಲಾಗುವುದು. ಮುಂಬರುವ ಲೋಕಸಭಾ ಚುನಾವಣೆಗೂ ಮುನ್ನ ಪ್ರಾದೇಶಿಕ ಕೇಂದ್ರ ಆರಂಭವಾಗಲಿದೆ ಎಂದು ಭರವಸೆ ನೀಡಿದರು.

ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಹಿನ್ನಡೆಯಾಗುತ್ತಿದೆ. ಮುಂದಿನ 25 ವರ್ಷಗಳಿಗೆ ಅನ್ವಯವಾಗುವಂತೆ ಬೆಂಗಳೂರು ನಗರದ ಬೆಳವಣಿಗೆಗೆ ಪೂರಕವಾಗಿರುವ ಯೋಜನೆಗಳನ್ನು ರೂಪಿಸುವ ಪ್ರತ್ಯೇಕ ಸಂಸ್ಥೆ ಇಲ್ಲವಾಗಿದೆ. ಬಿಡಿಎ, ಬಿಎಂಆರ್‌ಡಿಎ, ಬಿಬಿಎಂಪಿ ಸೇರಿದಂತೆ ಯಾವುದೇ ಸಂಸ್ಥೆಗಳು ಬೆಂಗಳೂರು ಅಭಿವೃದ್ಧಿಗೆ ನೀಲನಕ್ಷೆ ರೂಪಿಸುತ್ತಿಲ್ಲ ಎಂದರು.

ಬೆಂಗಳೂರು ನಗರದ ಸಂಚಾರ ವ್ಯವಸ್ಥೆ ಸುಧಾರಿಸಲು ಸೇತುವೆ, ಮೇಲ್ಸೇತುವೆ, ಸುರಂಗಗಳ ನಿರ್ಮಾಣ, ರಸ್ತೆಗಳ ಅಗಲೀಕರಣದಿಂದ ಸಾಧ್ಯವಿಲ್ಲ. ತ್ವರಿತ ಸಮೂಹ ಸಾರಿಗೆ ವ್ಯವಸ್ಥೆಯೇ ಇದಕ್ಕೆ ಮದ್ದು. ಮುಂದಿನ ಎರಡು ವರ್ಷಗಳೊಳಗೆ ಆಡುಗೋಡಿಯ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲಿನ ಮೂಲಕ 40 ನಿಮಿಷಗಳಲ್ಲಿ ತಲುಪಬಹುದಾಗಿದೆ ಎಂದು ತೇಜಸ್ವಿ ಸೂರ್ಯ ತಿಳಿಸಿದರು.

ಇನ್ಸಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾದ ಅಧ್ಯಕ್ಷ ಮನೀಶ್ ಗುಪ್ತಾ ಮಾತನಾಡಿ, ಭಾರತೀಯ ಸೇನೆಯಲ್ಲಿ ಕಾರ್ಯನಿರ್ವಹಿಸಿದ ಅಗ್ನಿವೀರರಿಗೆ ಉಚಿತವಾಗಿ ಕಂಪನಿ ಸೆಕ್ರೆಟರೀಸ್ ಶಿಕ್ಷಣ ಕೋರ್ಸ್ ಅನ್ನು ಶೀಘ್ರವೇ ಆರಂಭಿಸಲಾಗುವುದು ಎಂದು ಹೇಳಿದರು. ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾದ ಬೆಂಗಳೂರು ಚಾಪ್ಟರ್ ಅಧ್ಯಕ್ಷ ಪರಮೇಶ್ವರ್ ಭಟ್, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾದ ಬೆಂಗಳೂರು ಉಪಾಧ್ಯಕ್ಷ ಪ್ರದೀಪ್ ಬಿ. ಕುಲಕರ್ಣಿ ಮಾತನಾಡಿದರು.

ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾದ ಅಧ್ಯಕ್ಷ ಮನೀಶ್ ಗುಪ್ತಾ, ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾದ ಬೆಂಗಳೂರು ವಿಭಾಗದ ಅಧ್ಯಕ್ಷ ಪರಮೇಶ್ವರ್ ಭಟ್ ಮತ್ತು ಉಪಾಧ್ಯಕ್ಷ ಪ್ರದೀಪ್ ಬಿ. ಕುಲಕರ್ಣಿ, ಸಂಸದ ತೇಜಸ್ವಿ ಸೂರ್ಯ ಅವರನ್ನು ಗೌರವಿಸಿದರು

ರಾಮ್ ಪ್ರಸಾತ್ ಜಲಮಂಡಳಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ. ವಿ. ರಾಮ್ ಪ್ರಸಾತ್ ಮನೋಹರ್ ಅವರಿಗೆ ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಅಧ್ಯಕ್ಷ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದೆ. ಹೆಚ್ಚುವರಿಯಾಗಿ ಅಧ್ಯಕ್ಷ ಹುದ್ದೆ ಹೊಂದಿದ್ದ ಜಯರಾಮ್ ಅವರನ್ನು ಶುಕ್ರವಾರ ಬಿಡುಗಡೆಗೊಳಿಸಿ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ.

'ಮಂಡಲ್ ವರದಿ ಆಗಿದ್ದೇನು?' ವಿಚಾರ ಸಂಕಿರಣದಲ್ಲಿ ಕಾಂತರಾಜ

ಒಬಿಸಿ ಮೀಸಲಾತಿ ಸಮರ್ಪಕ ಅನುಷ್ಠಾನವಾಗಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿ.ಪಿ.ಸಿಂಗ್ ಅವರು ಮಂಡಲ್ ವರದಿ ಜಾರಿದ ಮಾಡಿದ ನಂತರ ಹಿಂದುಳಿದ ವರ್ಗಕ್ಕೆ ಲಭ್ಯವಾಗಿರುವ ಶೇ 27ರಷ್ಟು ಮೀಸಲಾತಿ ಪ್ರಮಾಣ, ಪೂರ್ಣವಾಗಿ ಸಿಗುತ್ತಿಲ್ಲ ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್‌. ಕಾಂತರಾಜ ಅಭಿಪ್ರಾಯಪಟ್ಟರು.

'ಗವಿಮಾರ್ಗ' ಕೃತಿ ಬಿಡುಗಡೆ, ವಿ.ಪಿ.ಸಿಂಗ್ ಪ್ರಶಸ್ತಿ ಪ್ರದಾನ ಹಾಗೂ 'ಮಂಡಲ್ ವರದಿ ಆಗಿದ್ದೇನು?' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಒಬಿಸಿಗೆ ನೀಡಿರುವ ಶೇ 27ರಷ್ಟು ಮೀಸಲಾತಿ ಪರಿಣಾಮಕಾರಿಯಾಗಿ ಸಿಗುವಂತೆ ನೋಡಿಕೊಳ್ಳಬೇಕು. ಆನಂತರ ಈ ಮೀಸಲಾತಿ ಜನಸಂಖ್ಯೆಗೆ ಅನುಗುಣವಾಗಿದೆಯೇ ಎಂಬುದನ್ನು ತಿಳಿಯಬೇಕು. ಇವೆಲ್ಲ ತಿಳಿಯಬೇಕಾದರೆ ಜನಗಣತಿ, ಆರ್ಥಿಕ, ಸಾಮಾಜಿಕ ಸಮೀಕ್ಷೆಗಳನ್ನು ಮಾಡಬೇಕು' ಎಂದು ವಿವರಿಸಿದರು.

'ಗವಿಮಾರ್ಗ' ಕೃತಿ ಕುರಿತು ಹಿರಿಯೂರು ಆದಿಜಾಂಬವ ಬೃಹನ್ಮಠದ ಷಡಕ್ಷರಿ ಮುನಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, '1931ರ ನಂತರ ಜಾತಿ ಗಣತಿಯಾಗಿಲ್ಲ. ಎಲ್ಲ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಿ ಕಾಂತರಾಜ ಆಯೋಗ ತಯಾರಿಸಿದ ವರದಿ ಬಿಡುಗಡೆಗೆ ಬಲಿಷ್ಠರು ಅವಕಾಶ ನೀಡುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ಎಚ್‌.ಎಂ. ರೇವಣ್ಣ ಪುಸ್ತಕ ಬಿಡುಗಡೆ ಮಾಡಿದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಮಾಜಿ ಅಧ್ಯಕ್ಷ ಸಿದ್ದರಾಜು, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಕಾಂತರಾಜ, ಪತ್ರಕರ್ತರಾದ ಲಕ್ಷ್ಮಣ ಕೊಡಸೆ, ಗಂಗಾಧರ ಮೊದಲಿಯಾರ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಹಿಂದುಳಿದ ಜಾತಿಗಳ ಒಕ್ಕೂಟದ ಮಾಜಿ ಗೌರವಾಧ್ಯಕ್ಷ ಬಿ.ಕೆ. ರವಿ ಅವರನ್ನು ವಿ.ಪಿ.ಸಿಂಗ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿಚಾರ ಸಂಕಿರಣದಲ್ಲಿ ಎಂ. ಸಿದ್ದರಾಜು, ಲಕ್ಷ್ಮಣ್ ಕೊಡಸೆ, ಗಂಗಾಧರ್ ಮೊದಲಿಯಾರ್, ಎಚ್‌. ಕಾಂತರಾಜ ಮತ್ತು ಬಿ.ಕೆ. ರವಿ ಅವರಿಗೆ ವಿ.ಪಿ.ಸಿಂಗ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕರ್ನಾಟಕ ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಸಂಪಾದಕರ ಮತ್ತು ವರದಿಗಾರರ ಸಂಘದ ಅಧ್ಯಕ್ಷ ಕೆ.ಆರ್‌.ನೀಲಕಂಠ, ಆದಿಜಾಂಭವ ಬೃಹನ್ಮಠ ಪೀಠಾಧ್ಯಕ್ಷ ಷಡಕ್ಷರಿ ಮುನಿ ದೇಶಿಕೇಂದ್ರ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಎಚ್‌. ಆಂಜನೇಯ, ಐ.ಎಚ್‌. ಸಂಗಮದೇವ, ಕಾಂಗ್ರೆಸ್ ಮುಖಂಡರಾದ ವಿ.ಆರ್‌. ಸುದರ್ಶನ್, ಎಚ್‌.ಎಂ. ರೇವಣ್ಣ, ಪ್ರಜಾ ಪ್ರಗತಿ ಪತ್ರಿಕೆಯ ಸಂಪಾದಕ ಎಸ್‌. ನಾಗಣ್ಣ ಮತ್ತು ಎಂ.ಎಸ್‌.ಮಣಿ ಇದ್ದರು –ಪ್ರಜಾವಾಣಿ ಚಿತ್ರ

ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಮುಗಿದಿಲ್ಲ, ಐಐಎಸ್ಸಿ ವರದಿ ನಂತರವಷ್ಟೇ ಕಾಮಗಾರಿ

ಈಜಿಪುರ ಮೇಲ್ಸೇತುವೆ: ಕಾಮಗಾರಿಗೆ ವಿಘ್ನ

● ಆರ್. ಮಂಜುನಾಥ್

ಬೆಂಗಳೂರು: ಒಂಬತ್ತು ವರ್ಷಗಳ ಹಿಂದೆ ರೂಪುಗೊಂಡಿದ್ದ ಈಜಿಪುರ ಎಲಿವೇಟೆಡ್ ಕಾರಿಡಾರ್ ಯೋಜನೆ ಕಾಮಗಾರಿಯ ಪುನರಾರಂಭಕ್ಕೆ ಹಲವು ವಿಘ್ನಗಳು ಎದುರಾಗಿವೆ.

ಮೇಲ್ಸೇತುವೆ ಪೂರ್ಣಗೊಳಿಸುವ ಕಾಮಗಾರಿಗೆ ಶುಕ್ರವಾರ ಚಾಲನೆ ದೊರೆತಿದೆ. ಆದರೆ, ಐಐಎಸ್‌ಸಿ ತಾಂತ್ರಿಕ ವರದಿ, ಭೂಸ್ವಾಧೀನ ಪ್ರಕ್ರಿಯೆ ವಿಳಂಬ, ಮರಗಳ ತೆರವಿಗೆ ತಡೆಯಂತಹ ಹಲವು ಅಡೆ–ತಡೆಗಳು ಮೊದಲ ದಿನದಿಂದಲೇ ಕಾಡಲಾರಂಭಿಸಿವೆ.

ಎರಡು ವರ್ಷಗಳಿಂದ ಕಾಮಗಾರಿ ಸ್ಥಗಿತಗೊಂಡಿದ್ದು, ಅದನ್ನು ಯಾವ ರೀತಿ ಮುಂದುವರಿಸಬೇಕು. ಯಾವ ಮುನ್ನೆಚ್ಚರಿಕೆ ಕ್ರಮ ಅಥವಾ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು ಎಂಬ ತಾಂತ್ರಿಕ ವರದಿಯನ್ನು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ನೀಡಬೇಕಿದೆ. ಈ ವರದಿ ಲಭ್ಯವಾಗಲು ಎರಡು ತಿಂಗಳಾಗಲಿದೆ. ವರದಿ ಬಂದ ನಂತರವಷ್ಟೇ ಮೂಲ ಕಾಮಗಾರಿ ಆರಂಭವಾಗಲಿದೆ.

ಇನ್ನು ಕೇಂದ್ರೀಯ ಸದನ, ಸೇಂಟ್ ಜಾನ್ಸ್ ಆಸ್ಪತ್ರೆ, ಜಲಮಂಡಳಿಯ ಕಟ್ಟಡಗಳು ಸೇರಿದಂತೆ ಖಾಸಗಿ ಕಟ್ಟಡಗಳ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಮುಗಿದಿಲ್ಲ. ಕಟ್ಟಡ ಹಾಗೂ ಕಾಂಪೌಂಡ್‌ಗಳ ಮೇಲೆ ಅಗತ್ಯವಿರುವ ಭೂಮಿಯ ಗುರುತು ಹಾಕಲಾಗಿದೆ. ಆದರೆ, ಅದನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಮತ್ತೆ ಶುರುವಾಗಬೇಕಿದೆ.

'ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಈ ಹಿಂದೆ ಮಾಲೀಕರೊಂದಿಗೆ ಮಾತುಕತೆ ನಡೆಸಲಾಗಿದೆ. ಎಲ್ಲರೂ ನಗದನ್ನು ಬಯಸಿದ್ದರು. ಈಗ ಮತ್ತೆ ಮಾತುಕತೆ ನಡೆಸಿ ಎಲ್ಲವನ್ನೂ ಅಂತಿಮಗೊಳಿಸಬೇಕಿದೆ. ಸರ್ವೆ ಕಾರ್ಯವನ್ನೂ ನಡೆಸಬೇಕಿದೆ. ಇದಕ್ಕೆಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಬಿಬಿಎಂಪಿ ಯೋಜನೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಯೋಗೇಶ್ ತಿಳಿಸಿದರು.

'ಸರ್ವೆ ಕೈಗೊಂಡು, ಸರ್ಕಾರಿ ಸಂಸ್ಥೆಗಳೊಂದಿಗೆ ಉನ್ನತಮಟ್ಟದ ಸಭೆ ನಡೆಸಿ ಪರಿಹಾರವನ್ನು ನಿರ್ಧರಿಸಲಾಗುತ್ತದೆ. ಖಾಸಗಿಯವರೊಂದಿಗೂ ಚರ್ಚಿಸಲಾಗುತ್ತದೆ. ಇದೆಲ್ಲವೂ ಮುಗಿಯಲು 2–3 ತಿಂಗಳು ಬೇಕು' ಎಂದರು.

'ಮರಗಳನ್ನು ತೆರವು ಮಾಡದೆ ಮೇಲ್ಸೇತುವೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಸಭೆ ನಡೆಸಿಯೇ ಅಂತಿಮ ನಿರ್ಧಾರ ಕೈಗೊಳ್ಳಲಾಗಿತ್ತು. ಅರಣ್ಯ ವಿಭಾಗದೊಂದಿಗೆ ಚರ್ಚಿಸಿ, ಕಾನೂನು ಕೋಶದ ಸಲಹೆ ಮೇರೆಗೆ ಮುಂದುವರಿಯಲಾಗುತ್ತದೆ' ಎಂದು ಹೇಳಿದರು.

'ಮೇಲ್ಸೇತುವೆಯ ಎಲ್ಲ ಕೆಲಸಗಳನ್ನೂ ಆರಂಭಿಸಲು ಇನ್ನೂ ಮೂರ್ನಾಲ್ಕು ತಿಂಗಳು ಬೇಕು. ಪ್ಲಾಂಟ್‌ನಲ್ಲಿ ಪ್ರಾಥಮಿಕ ಕೆಲಸ ಹಾಗೂ ದೊಮ್ಮಲೂರು ಭಾಗದಲ್ಲಿ ರ‍್ಯಾಂಪ್ ಕಾಮಗಾರಿಯನ್ನು ಆರಂಭಿಸಿದ್ದೇವೆ. ಇಲ್ಲೂ ಮರಗಳು ತೆರವಾದರೆ ಮಾತ್ರ ಕೆಲಸವಾಗುತ್ತದೆ' ಎಂದು ಗುತ್ತಿಗೆದಾರರ ಯೋಜನೆ ವ್ಯವಸ್ಥಾಪಕ ಸುರೇಶ್ ತಿಳಿಸಿದರು.

2014ರಲ್ಲಿ ರೂಪುಗೊಂಡ ಯೋಜನೆ

ಕೋರಮಂಗಲ ಹೊರ ವರ್ತುಲ ರಸ್ತೆಯಲ್ಲಿ (ಈಜಿಪುರ) ಎಲಿವೇಟೆಡ್ ಕಾರಿಡಾರ್ 2.5 ಕಿ.ಮೀ. ಉದ್ದದ ಮೇಲ್ಸೇತುವೆಯಾಗಿದೆ. ಈ ಯೋಜನೆಯನ್ನು 2014ರಲ್ಲಿ ರೂಪಿಸಲಾಗಿತ್ತು. 2017ರಲ್ಲಿ ₹157.66 ಕೋಟಿಗೆ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು. 2019ರೊಳಗೆ ಯೋಜನೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಗುತ್ತಿಗೆದಾರರು ವಿಳಂಬ ಮಾಡಿದರು. ನಾಲ್ಕು ವರ್ಷ ಏಳು ತಿಂಗಳಾದರೂ ಶೇ 42ರಷ್ಟು ಮಾತ್ರ ಕಾಮಗಾರಿ ಮುಗಿದಿತ್ತು. ₹75.11 ಕೋಟಿ ಹಣವನ್ನೂ ಅವರಿಗೆ ಪಾವತಿಸಲಾಗಿತ್ತು.

ಮೇಲ್ಸೇತುವೆ ಕಾಮಗಾರಿ ವಿಳಂಬವಾದ್ದರಿಂದ ಹೈಕೋರ್ಟ್‌ಗೆ ಆದಿನಾರಾಯಣ ಶೆಟ್ಟಿ ರಿಟ್ ಸಲ್ಲಿದ್ದರು. 2022ರ ಫೆ.17ರಂದು ತೀರ್ಪು ನೀಡಿದ್ದ ಹೈಕೋರ್ಟ್, ಟೆಂಡರ್ ರದ್ದು ಮಾಡಿ ಹೊಸದಾಗಿ ಟೆಂಡರ್ ಕರೆದು, ಕಾಮಗಾರಿಯನ್ನು ಬೇಗ ಪೂರ್ಣಗೊಳಿಸಲು ಸೂಚಿಸಿತ್ತು. ಆದರೆ ಬಿಬಿಎಂಪಿಯ ವಿಳಂಬ ನೀತಿಯಿಂದ, ನಾಲ್ಕನೇ ಬಾರಿಗೆ ಆಹ್ವಾನಿಸಲಾಗಿದ್ದ ಟೆಂಡರ್ ಅನ್ನು 2023ರ ಮಾರ್ಚ್‌ನಲ್ಲಿ ಒಪ್ಪಲಾಗಿತ್ತು. ಗುತ್ತಿಗೆದಾರರೊಂದಿಗೆ ಮಾತುಕತೆ ನಡೆಸಿ, ಅದನ್ನು ಆಗಸ್ಟ್‌ನಲ್ಲಿ ಸಚಿವ ಸಂಪುಟದ ಅನುಮೋದನೆಗೆ ಸಲ್ಲಿಸಲಾಗಿತ್ತು. ಸೆ.7ರಂದು ಅನುಮೋದನೆ ದೊರೆತರೂ, ₹176.11 ಕೋಟಿಗೆ ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಯೊಂದಿಗೆ 'ಟರ್ನ್ ಕೀ ಲಂಪ್‌ಸಮ್' ಗುತ್ತಿಗೆಯ ಒಪ್ಪಂದವನ್ನು ನ.17ರಂದು ಮಾಡಿಕೊಂಡು ಕಾರ್ಯಾದೇಶ ನೀಡಲಾಗಿದೆ.

ಮರಗಳ ತೆರವಿಗೆ ವಿರೋಧ

'ಈಜಿಪುರ ಮೇಲ್ಸೇತುವೆ ನಿರ್ಮಾಣ ಪೂರ್ಣಗೊಳಿಸಲು 67 ಮರಗಳನ್ನು ಕಡಿಯಲು ಸಮಿತಿಯಲ್ಲಿ ಅನುಮೋದನೆ ನೀಡಲಾಗಿದ್ದು, ಅದನ್ನು ಗುತ್ತಿಗೆದಾರರಿಗೆ ವಹಿಸಲಾಗಿದೆ. ಕೆಲವು ಪರಿಸರ ಕಾರ್ಯಕರ್ತರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರಿಂದ ಶುಕ್ರವಾರ ಆರಂಭವಾಗಿದ್ದ ಮರಗಳ ತೆರವು ಕಾರ್ಯವನ್ನು ನಿಲ್ಲಿಸಲಾಗಿದೆ' ಎಂದು ಬಿಬಿಎಂಪಿ ಅರಣ್ಯ ವಿಭಾಗದ ಡಿಸಿಎಫ್ ಸ್ವಾಮಿ ತಿಳಿಸಿದರು.

'ಕಾಮಗಾರಿಗೆ ತಡೆಯಾಗಿರುವ ರೆಂಬೆ–ಕೊಂಬೆಗಳನ್ನು ಕಡಿದು, 50–60 ವರ್ಷಗಳ ಮರಗಳನ್ನು ಉಳಿಸಿಕೊಳ್ಳಬೇಕು ಎಂಬುದು ನಮ್ಮ ಆಗ್ರಹ. ಅಲ್ಲದೆ, ಮರಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಯೋಜನೆ ನಕ್ಷೆಯನ್ನು ಬದಲಾಯಿಸಿಕೊಳ್ಳಲೂ ಬಿಬಿಎಂಪಿಗೆ ಮನವಿ ಮಾಡಿಕೊಳ್ಳಲಾಗಿದೆ' ಎಂದು ನಮ್ಮ ಬೆಂಗಳೂರು ಫೌಂಡೇಷನ್‌ನ ಪ್ರಧಾನ ವ್ಯವಸ್ಥಾಪಕ ವಿನೋದ್ ಜಾಕೋಬ್ ತಿಳಿಸಿದರು.

ರಾಜಕಾಲುವೆ ಒತ್ತುವರಿ ತೆರವು: ಬಿಬಿಎಂಪಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಕೂಡಲೇ ಆರಂಭಿಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ತಹಶೀಲ್ದಾರ್ ಅವರ ಆದೇಶದಂತೆ ಒತ್ತುವರಿ ತೆರವುಗೊಳಿಸಬೇಕು ಎಂದು ಶುಕ್ರವಾರ ನಡೆದ ಸಭೆಯಲ್ಲಿ ಬೃಹತ್ ನೀರುಗಾಲುವೆ ವಿಭಾಗದ ಪ್ರಧಾನ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಅವರಿಗೆ ಸೂಚಿಸಿದರು.

ರಾಜಕಾಲುವೆ ಒತ್ತುವರಿ ಪ್ರಕರಣಗಳಲ್ಲಿ ಪರಿಶೀಲಿಸಿ ಆದೇಶ ನೀಡಬೇಕು ಎಂದು ತಹಶೀಲ್ದಾರರಿಗೆ ಸೂಚಿಸಿದರು.

ನಗರದಲ್ಲಿ ಹೊಸ ಒತ್ತುವರಿಗಳು ಸೇರಿ 3,147 ಒತ್ತುವರಿಗಳನ್ನು ರಾಜಕಾಲುವೆಯಲ್ಲಿ ಗುರುತಿಸಿದ್ದು, 2247 ಸ್ಥಳ ತೆರವುಗೊಳಿಸಲಾಗಿದೆ. ಇನ್ನು 900 ಒತ್ತುವರಿ ತೆರವುಗೊಳಿಸಬೇಕಾಗಿದೆ. 130 ಒತ್ತುವರಿ ಪ್ರಕರಣಗಳು ಕೋರ್ಟ್‌ನಲ್ಲಿವೆ. 401 ಪ್ರಕರಣಗಳಲ್ಲಿ ಆದೇಶಗಳನ್ನು ಜಾರಿಗೊಳಿಸುವ ಹಂತದಲ್ಲಿದೆ. ಇನ್ನು 370 ಪ್ರಕರಣಗಳಲ್ಲಿ ತಹಶೀಲ್ದಾರ್ ಆದೇಶಗಳನ್ನು ಜಾರಿಗೊಳಿಸಿದ್ದು, ತೆರವು ಕಾರ್ಯ ನಡೆಸಬೇಕಿದೆ ಎಂದು ರಾಜಕಾಲುವೆ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹೇಳಿದರು.

ರಸ್ತೆ ಗುಂಡಿ ಮುಚ್ಚಿ: ಪ್ರಮುಖ, ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳನ್ನು ತ್ವರಿತವಾಗಿ ಮುಚ್ಚಬೇಕು ಎಂದು ಎಂಜಿನಿಯರ್‌ಗಳಿಗೆ ಆದೇಶಿಸಿದರು.

ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ್, ವಲಯ ಆಯುಕ್ತರು, ತಹಶೀಲ್ದಾರ್‌ಗಳು ಇದ್ದರು.

ಕೆರೆ ಒತ್ತುವರಿ ಸಮೀಕ್ಷೆ ನಡೆಸಿ

ಪಾಲಿಕೆ ವ್ಯಾಪ್ತಿಯಲ್ಲಿ 202 ಕೆರೆಗಳಿದ್ದು, 159 ಕೆರೆಗಳಲ್ಲಿ ಒತ್ತುವರಿಯಾಗಿದೆ ಎಂದು ಗುರುತಿಸಿ, ಹೈಕೋರ್ಟ್‌ಗೆ ಕ್ರಿಯಾಯೋಜನೆ ಸಲ್ಲಿಸಲಾಗಿದೆ. 130 ಕೆರೆಗಳ ಸರ್ವೆಗೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಕೇಳಲಾಗಿದೆ. ಅಂದಾಜು 20 ಕೆರೆಗಳಲ್ಲಿ ಸಮೀಕ್ಷೆ ನಡೆದಿದೆ. ಉಳಿದೆಡೆ ತ್ವರಿತ ಸಮೀಕ್ಷೆಗೆ ತುಷಾರ್ ಗಿರಿನಾಥ್ ಸೂಚಿಸಿದರು.

ಆಸ್ತಿ ಡಿಜಿಟಲೀಕರಣ: ಡಿಸಿಎಂ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕಂದಾಯ ಕಚೇರಿಯಲ್ಲಿ ಆಸ್ತಿ ದಾಖಲೆಗಳ ಡಿಜಿಟಲೀಕರಣವ್ಯವಸ್ಥೆ, ರಸ್ತೆಗಳಪರಿಸ್ಥಿತಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರಿಶೀಲಿಸಿದರು.

ಕೆಂಪೇಗೌಡ ನಗರದ ಸಹ ಕಂದಾಯ ಅಧಿಕಾರಿ ಕಚೇರಿಗೆ ಶುಕ್ರವಾರ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಆಸ್ತಿ ಪುಸ್ತಕಗಳ ಸ್ಕ್ಯಾನಿಂಗ್ ಅನ್ನು ವೀಕ್ಷಿಸಿದರು.

'ರಿಜಿಸ್ಟರ್ ಪುಸ್ತಕದಲ್ಲಿ ಬರೆದಿರುವುದನ್ನು ಸ್ಕ್ಯಾನಿಂಗ್ ಮಾಡಿ, ಗುಣಮಟ್ಟ ಪರಿಶೀಲಿಸಲಾಗುತ್ತದೆ. ನಂತರ ಮಾಹಿತಿ ಟೈಪ್ ಮಾಡಿ ವೆರಿಫಿಕೇಷನ್ ಮಾಡಿ ಸಾಫ್ಟ್‌ವೇರ್‌ನಲ್ಲಿ ಪ್ರತಿ ಆಸ್ತಿಯ ವಿವರ ಡಿಜಿಟಲೀಕರಣವಾಗಲಿದೆ. ಇದನ್ನು ನಕಲು ಮಾಡಲಾಗದು. ಒಮ್ಮೆ ಡಿಜಿಟಲೀಕರಣವಾದ ಮೇಲೆ ಆನ್ ಲೈನ್‌ನಲ್ಲಿ ಎಲ್ಲಿ ಬೇಕಾದರೂ ವಿವರ ನೋಡಬಹುದು' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ವೈಟ್ ಟಾಪಿಂಗ್: ಸಿಲ್ವರ್ ಜೂಬ್ಲಿ ಪಾರ್ಕ್ (ಎಸ್.ಜೆ.ಪಿ) ಜಂಕ್ಷನ್‌ನಿಂದ ಎಸ್.ಪಿ ರಸ್ತೆ ಮೂಲಕ ಹಡ್ಸನ್ ರಸ್ತೆ ವರಗೆ (ಪಾದಚಾರಿ ಮೇಲ್ಸೇತುವೆಯವರೆಗೆ) 500 ಮೀಟರ್ ರಸ್ತೆಯನ್ನು ವೈಟ್ ಟಾಪಿಂಗ್ ಕಾಮಗಾರಿ ನಡೆದಿದ್ದು, ಡಿಸಿಎಂ ಅವರು ಸ್ಥಳ ಪರಿಶೀಲಿಸಿದರು.

ಧರ್ಮರಾಯ ಸ್ವಾಮಿ ದೇವಸ್ಥಾನದ ಮುಂಭಾಗದ ರಸ್ತೆ ಹಾಳಾಗಿದ್ದು, ತಾತ್ಕಾಲಿಕವಾಗಿ ರಸ್ತೆ ದುರಸ್ತಿಪಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿ.ವಿ.ಕೆ. ಅಯ್ಯಂಗಾರ್ ರಸ್ತೆ ಹಾಗೂ ಒಟಿಸಿ ರಸ್ತೆಯ ನಡುವಿನ ಚಿಕ್ಕಪೇಟೆ ವೃತ್ತದ ಬಳಿಯ ಕಿಲಾರಿ ರಸ್ತೆ, ಆರ್.ಟಿ ಸ್ಟ್ರೀಟ್ ರಸ್ತೆ, ಎ.ಎಸ್. ಆಚಾರ್ ಸ್ಟ್ರೀಟ್ ರಸ್ತೆಯನ್ನು 'ಕಾಂಪ್ರೆನ್ಸಿವ್ ಡೆವಲಪ್‌ಮೆಂಟ್' ಅಡಿಯಲ್ಲಿ ವೈಟ್ ಟಾಪಿಂಗ್, ಪಾದಚಾರಿ ಮಾರ್ಗ ಅಭಿವೃದ್ಧಿಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳಲು ಹೇಳಿದರು.

ಚಿಕ್ಕಪೇಟೆ ವೃತ್ತದಲ್ಲಿ ಅಳವಡಿಸಲಾಗಿದ್ದ ಅನಧಿಕೃತ ಓಎಫ್‌ಸಿ ಕೇಬಲ್ ತೆರವುಗೊಳಿಸಲು ಸೂಚನೆ ನೀಡಿದರು.

ಮೆಜೆಸ್ಟಿಕ್ ಬಿಎಂಟಿಸಿ ಬಸ್ ನಿಲ್ದಾದ ಪ್ರಮುಖ ರಸ್ತೆಯನ್ನು ಬಿಎಂಟಿಸಿಯಿಂದ ಪಾಲಿಕೆಗೆ ಹಸ್ತಾಂತರ ಪಡೆದು, ವೈಟ್ ಟಾಪಿಂಗ್ ರಸ್ತೆಯನ್ನಾಗಿ ನಿರ್ಮಾಣ ಮಾಡಲು ಡಿಸಿಎಂ ಸೂಚಿಸಿದರು.

ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ವಲಯ ಆಯುಕ್ತೆ ವಿನೋತ್ ಪ್ರಿಯಾ ಅವರು ಇದ್ದರು.



ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಸ್ತಿಗಳ ಡಿಜಿಟಲೀಕರಣ ವ್ಯವಸ್ಥೆಯನ್ನು ಶುಕ್ರವಾರ ಪರಿಶೀಲಿಸಿದರು. ಡಿಸಿಎಂ ಕಾರ್ಯದರ್ಶಿ ರಾಜೇಂದ್ರ ಚೋಳನ್, ಆಪ್ತ ಕಾರ್ಯದರ್ಶಿ ಡಾ ರಾಜೇಂದ್ರ ಪ್ರಸಾದ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಶೇಷ ಆಯುಕ್ತ ಮುನೀಶ್ ಮೌದ್ಗೀಲ್ ಇದ್ದರು

ಮುಷ್ಕರ: ಅತಿಥಿ ಉಪನ್ಯಾಸಕರಿಗೆ ಸಚಿವರ ಮನವಿ

ಬೆಂಗಳೂರು: ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಆದ್ದರಿಂದ ಮುಷ್ಕರ ಕೈಬಿಟ್ಟು, ಕರ್ತವ್ಯಕ್ಕೆ ಹಾಜರಾಗಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮನವಿ ಮಾಡಿದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಅತಿಥಿ ಉಪನ್ಯಾಸಕರ ಸಂಘಟನೆಗಳ ಪ್ರಮುಖರ ಜತೆ ಸಚಿವರು ಶುಕ್ರವಾರ ಸಭೆ ನಡೆಸಿದರು. ಬೇಡಿಕೆ ಈಡೇರಿಸಲು ಆರಂಭಿಸಿರುವ ಪ್ರಯತ್ನದ ಬಗ್ಗೆ ಪ್ರಮುಖರಿಗೆ ವಿವರಿಸಿದರು.

'ಅತಿಥಿ ಉಪನ್ಯಾಸಕರ ಬೇಡಿಕೆಗೆ ಸ್ಪಂದಿಸಲು ಸರ್ಕಾರ ಮುಕ್ತವಾಗಿದೆ. ಈ ಕುರಿತು ಮುಖ್ಯಮಂತ್ರಿಯವರ ಜತೆ ಒಮ್ಮೆ ಚರ್ಚಿಸಿದ್ದೇನೆ. ರಾಜ್ಯದಲ್ಲಿ ಶೇಕಡ 70ರಷ್ಟು ಅತಿಥಿ ಉಪನ್ಯಾಸಕರೇ ಇದ್ದಾರೆ. ಅವರ ಮೇಲಿನ ಒತ್ತಡ ಕುರಿತು ನನಗೆ ಅರಿವಿದೆ' ಎಂದರು.

ಅತಿಥಿ ಉಪನ್ಯಾಸಕರ ವಿವಿಧ ಸಂಘಟನೆಗಳ ನೂರಕ್ಕೂ ಹೆಚ್ಚು ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕ ಅಪ್ಪಾಜಿಗೌಡ ಸಭೆಯಲ್ಲಿದ್ದರು.

ಚಿಕ್ಕಬಳ್ಳಾಪುರ 'ಕೈ' ಟಿಕೆಟ್‌ಗೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್‌ನ ಅಭ್ಯರ್ಥಿಗಳ ಕುರಿತು ಅಭಿಪ್ರಾಯ ಸಂಗ್ರಹಿಸಲು ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಅಧ್ಯಕ್ಷತೆಯಲ್ಲಿ ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಯುವ ಮುಖಂಡ ರಕ್ಷಾ ರಾಮಯ್ಯ ಮತ್ತು ಮಾಜಿ ಸಂಸದ ಎಂ. ವೀರಪ್ಪ ಮೊಯಿಲಿ ಬೆಂಬಲಿಗರ ಮಧ್ಯೆ ಜಟಾಪಟಿ ನಡೆಯಿತು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಕ್ಷೇತ್ರದ ವ್ಯಾಪ್ತಿಯ ಕಾಂಗ್ರೆಸ್ ಶಾಸಕರು, ವಿಧಾನಸಭೆ ಚುನಾವಣೆಯ ಪರಾಜಿತ ಅಭ್ಯರ್ಥಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿಗಳ ಪ್ರಮುಖ ಪದಾಧಿಕಾರಿಗಳು ಸಭೆಯಲ್ಲಿದ್ದರು.

ಅರ್ಧದಲ್ಲೇ ಸಭೆಯಿಂದ ನಿರ್ಗಮನ: ಸಭೆ ಮುಗಿಯುವ ಮುನ್ನವೇ ವೀರಪ್ಪ ಮೊಯಿಲಿ ಅವರು ನಿರ್ಗಮಿಸಿದರು. ತಮಗೆ ಅನ್ಯ ಕಾರ್ಯಕ್ರಮವಿದ್ದು, ಹೊರ ಹೋಗುತ್ತಿರುವುದಾಗಿ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ಚುನಾವಣೆಗೆ ಸ್ಪರ್ಧಿಸುತ್ತೇನೆ. ರಕ್ಷಾ ಅವರು ಟಿಕೆಟ್ ಕೇಳುವುದು ತಪ್ಪಲ್ಲ. ಪಕ್ಷದ ಹೈಕಮಾಂಡ್ ಅಭ್ಯರ್ಥಿಯನ್ನು ತೀರ್ಮಾನಿಸುತ್ತದೆ' ಎಂದರು.

ರಕ್ಷಾ ರಾಮಯ್ಯ ಅವರು,, 'ನಾನು ಕ್ಷೇತ್ರದ ಟಿಕೆಟ್ ಆಕಾಂಕ್ಷಿ. ಎರಡೂವರೆ ವರ್ಷಗಳಿಂದ ಪಕ್ಷ ಸಂಘಟನೆ ಮಾಡುತ್ತಿದ್ದೇನೆ' ಎಂದರು.

ಐವರ ಹೆಸರಿನೊಂದಿಗೆ ವರದಿ: 'ಕ್ಷೇತ್ರದ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯಲ್ಲಿ ವೀರಪ್ಪ ಮೊಯಿಲಿ, ರಕ್ಷಾ ರಾಮಯ್ಯ, ಎನ್.ಎಚ್. ಶಿವಶಂಕರ ರೆಡ್ಡಿ, ಮಾಜಿ ಶಾಸಕ ವೆಂಕಟರಮಣಯ್ಯ, ಕೆಂಚೇಗೌಡ ಅವರ ಹೆಸರುಗಳೊಂದಿಗೆ ವರಿಷ್ಠರಿಗೆ ವರದಿ ಸಲ್ಲಿಸಲಾಗುವುದು' ಎಂದು ಅಭ್ಯರ್ಥಿ ಆಯ್ಕೆಗೆ ಉಸ್ತುವಾರಿ ಜಮೀರ್ ಅಹಮದ್ ಖಾನ್ ತಿಳಿಸಿದರು.

ಹಾಸನ ಕ್ಷೇತ್ರದಿಂದಲೇ ಪ್ರಜ್ವಲ್ ಸ್ಪರ್ಧೆ

ಹೊಳೆನರಸೀಪುರ (ಹಾಸನ): 'ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಹಾಸನ ಕ್ಷೇತ್ರದಿಂದ ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಅವರೇ ಸ್ಪರ್ಧಿಸಲಿದ್ದಾರೆ' ಎಂದು ಘೋಷಿಸಿದ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು, ಅಭ್ಯರ್ಥಿ ಕುರಿತ ಊಹಾಪೋಹಗಳಿಗೆ ತೆರೆ ಎಳೆದರು.

ತಾಲ್ಲೂಕಿನ ಕಟ್ಟೆಬೆಳಗುಲಿ ಶ್ರೀರಾಮದೇವರ ಕಟ್ಟೆಯಲ್ಲಿ ಶುಕ್ರವಾರ ಜೆಡಿಎಸ್ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಜೆಡಿಎಸ್- ಬಿಜೆಪಿ ಒಟ್ಟಾಗಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ಹೋರಾಡಲು ತೀರ್ಮಾನಿಸಲಾಗಿದೆ' ಎಂದರು.

'ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಸೀಟು ಹಂಚಿಕೆಯ ಕುರಿತು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಬಿ.ವೈ. ವಿಜಯೇಂದ್ರ, ಆರ್.ಅಶೋಕ ತೀರ್ಮಾನಿಸಲಿದ್ದಾರೆ. ಹಾಸನ ಕ್ಷೇತ್ರದ ಬಗ್ಗೆ ಯಾವುದೇ ಗೊಂದಲವಿಲ್ಲ. ಹಾಲಿ ಜೆಡಿಎಸ್ ಸಂಸದರಿದ್ದು, ಅವರೇ ಸ್ಪರ್ಧಿಸಲಿದ್ದಾರೆ' ಎಂದರು.

'ದೇಶದ ದೊಡ್ಡ ವ್ಯಕ್ತಿಯಾಗಿ ಬೆಳೆದಿರುವ ಮೋದಿ ಅವರೊಂದಿಗೆ ಜೆಡಿಎಸ್ ಸೇರಿದ್ದು, ಅಸೂಯೆ, ಟೀಕೆ ಮಾಡದೇ ಬಿಜೆಪಿ ಜೊತೆ ಸೇರಿ ಒಟ್ಟಾಗಿ ಕೆಲಸ ಮಾಡೋಣ. ಹಾಸನದ ಹಾಲಿ ಸಂಸದರನ್ನು ಗೆಲ್ಲಿಸಲು ಶ್ರಮಿಸೋಣ' ಎಂದರು.

ಲೋಕಸಭೆ ಚುನಾವಣೆಯಲ್ಲಿ ತಮ್ಮ ಸ್ಪರ್ಧೆಯ ಕುರಿತು ಪ್ರತಿಕ್ರಿಯಿಸಿ, 'ಸದ್ಯಕ್ಕೆ ರಾಜ್ಯಸಭಾ ಸದಸ್ಯನಾಗಿದ್ದು, ಇನ್ನೂ ಎರಡು ವರ್ಷ ಅವಧಿ ಇದೆ' ಎಂದಷ್ಟೇ ಹೇಳಿದರು.

ಎತ್ತಿನಹೊಳೆ; 2 ನೇ ಬಾರಿ ಪ್ರಾಯೋಗಿಕವಾಗಿ ಹರಿದ ನೀರು: ಕಳಪೆ ಕಾಮಗಾರಿ ಆರೋಪಕ್ಕೆ ಪುಷ್ಟಿ

ರಸ್ತೆಯಲ್ಲಿ ಪ್ರವಾಹ, ಕಾಫಿ ತೋಟಕ್ಕೆ ಹಾನಿ

• ಜಾನೇಕೆರೆ ಆರ್. ಪರಮೇಶ್

ಸಕಲೇಶಪುರ ತಾಲ್ಲೂಕಿನ ಹಾರ್ಲೆ ಕೂಡಿಗೆ ಬಳಿ ಎತ್ತಿನಹೊಳೆ ಯೋಜನೆ ಪೈಪ್‌ಗಳಿಂದ ಪ್ರವಾಹದಂತೆ ನೀರು ಹರಿಯಿತು (ಎಡಚಿತ್ರ) ಕುಂಬರಡಿ ಗ್ರಾಮದಲ್ಲಿ ಅಳವಡಿಸಿರುವ ಕಬ್ಬಿಣದ ಪೈಪ್ ಸುತ್ತ ಹಾಕಿರುವ ಸಿಮೆಂಟ್ ಉದುರುತ್ತಿದೆ

ಸಕಲೇಶಪುರ: ಐದು ದಿನಗಳ ನಂತರ ಎತ್ತಿನಹೊಳೆ ಯೋಜನೆಯ ಪೈಪ್‌ಲೈನ್‌ನಲ್ಲಿ ಶುಕ್ರವಾರ ಎರಡನೇ ಬಾರಿ ಪ್ರಾಯೋಗಿಕವಾಗಿ ನೀರು ಹರಿಸಿದ್ದು, ಮತ್ತೆ ಪೈಪ್‌ಲೈನ್ ಒಡೆದು, ಅಪಾರ ಪ್ರಮಾಣದ ನೀರು ಪೋಲಾಗಿದೆ. ರಸ್ತೆ, ಆಸ್ತಿಗಳಿಗೆ ಹಾನಿಯಾಗಿದೆ.

‘ಕಾಮಗಾರಿಯ ಗುಣಮಟ್ಟ ಕಳಪೆಯಾಗಿದೆ’ ಎನ್ನುವ ಗ್ರಾಮಸ್ಥರ ಆರೋಪಕ್ಕೂ ಇದು ಪುಷ್ಟಿ ನೀಡಿದೆ. ಪೈಪ್‌ನಲ್ಲಿ ಸೋರಿಕೆ, ಪೈಪ್‌ಗಳಿಗೆ ಹಾಕಿರುವ ಕಾಂಕ್ರೀಟ್ ಕಿತ್ತು ಹೋಗಿರುವುದು ಕಾಣುತ್ತಿದೆ.

‘ಪ್ರಾರಂಭದಿಂದಲೂ ಈ ಯೋಜನೆ ಕಾಮಗಾರಿ ಕಳಪೆಯಾಗಿದೆ ಎಂದು ಹೇಳಿದರೂ ಗಮನ ಹರಿಸಿಲ್ಲ. ಪರೀಕ್ಷಾರ್ಥವಾಗಿ ನೀರು ಹರಿಸಿದ ನಂತರ ಕಾಮಗಾರಿಯ ಗುಣಮಟ್ಟ ಸ್ಪಷ್ಟವಾಗುತ್ತಿದೆ. ಪೈಪ್‌ಗಳು ತುಕ್ಕು ಹಿಡಿದಿವೆ. ಅಪಾರ ನೀರು ಪೋಲಾಗುತ್ತಿದೆ’ ಎಂದು ಗ್ರಾಮಸ್ಥರು ದೂರಿದ್ದಾರೆ.

ಕಾಡಮನೆ ಚೆಕ್‌ಡ್ಯಾಂ 4 ಮತ್ತು ಚೆಕ್‌ಡ್ಯಾಂ 5ರಿಂದ ಪರೀಕ್ಷಾರ್ಥವಾಗಿ ಎರಡನೇ ಬಾರಿ ನೀರು ಹರಿಸಿದ್ದು, ಪ್ರವಾಹದಂತೆ ನುಗ್ಗಿ, ರಸ್ತೆ ಹಾಗೂ ಕಾಫಿ ತೋಟಕ್ಕೆ ನಷ್ಟ ಉಂಟಾಗಿದೆ. ಗ್ರಾಮಸ್ಥರಲ್ಲಿ ಭಯ ಹುಟ್ಟಿಸಿದೆ.

ತಾಲ್ಲೂಕಿನ ಸಕಲೇಶಪುರ–ಮೂಡಿಗೆರೆ ರಾಜ್ಯ ಹೆದ್ದಾರಿ ಪಕ್ಕದ ಹಾರ್ಲೆ ಕೂಡಿಗೆ–ಕಾಡಮನೆ ಮುಖ್ಯ ರಸ್ತೆಯಲ್ಲಿ ಬೆಳಿಗ್ಗೆ, ಕಾಡಮನೆಯಿಂದ–ದೊಡ್ಡನಾಗರ ವರೆಗೆ 14 ಕಿ.ಮೀ. ಅಳವಡಿಸಿರುವ ಪೈಪ್‌ಲೈನ್ ಸೋರಿಕೆಯಾಗಿ ಅಪಾರ ನೀರು ರಸ್ತೆಯಲ್ಲಿ ಹರಿಯಿತು.

ಐದು ದಿನಗಳ ಹಿಂದೆ 6 ಕಿ.ಮೀ. ಹರಿಸಿದ ನೀರು, ಹಲವೆಡೆ ಸೋರಿಕೆಯಾಗಿ ರಸ್ತೆ, ಆಸ್ತಿಗೆ ಹಾನಿಯಾಗಿತ್ತು. ಜಲ ನಿಗಮದ ಅಧಿಕಾರಿಗಳು ತಕ್ಷಣ ನೀರು ನಿಲ್ಲಿಸಿ, ದುರಸ್ತಿ ಮಾಡಿದ್ದರು. ಶುಕ್ರವಾರ ಬೆಳಿಗ್ಗೆ ಅಲ್ಲಿಂದ ದೊಡ್ಡನಾಗರದವರೆಗೂ 2 ಸಾವಿರ ಎಚ್‌ಪಿ ಸಾಮರ್ಥ್ಯದ ಪಂಪ್‌ನಿಂದ ನೀರು ಹರಿಸಲಾಯಿತು.

ಹಾರ್ಲೆ ಕೂಡಿಗೆ ಬಳಿ ರಸ್ತೆ ಬದಿಯಲ್ಲಿಯೇ ಅಳವಡಿಸಿದ್ದ ಪೈಪ್‌ನಿಂದ ಕೆಲವೇ ನಿಮಿಷಗಳಲ್ಲಿ ಸುಮಾರು 40 ಅಡಿ ಎತ್ತರಕ್ಕೆ ನೀರು ಚಿಮ್ಮಲು ಶುರುವಾಯಿತು. ಅದನ್ನು ನೋಡಿ ರಸ್ತೆಯಲ್ಲಿ ಸಂಚರಿಸುತ್ತಿದ್ದವರು ಹಾಗೂ ಗ್ರಾಮಸ್ಥರು ಬೆಚ್ಚಿಬಿದ್ದರು. ವಿಷಯ ತಿಳಿಯುತ್ತಿದ್ದಂತೆ ಎಂಜಿನಿಯರ್‌ಗಳು ನೀರು ಹರಿಸುವುದನ್ನು ನಿಲ್ಲಿಸಿದರು. ಆದರೆ, ಪಂಪ್ ಸ್ಥಗಿತಗೊಳಿಸಿ 2 ಗಂಟೆಯಾದರೂ ನೀರು ಹರಿಯುತ್ತಲೇ ಇತ್ತು.

ತುಕ್ಕು ಹಿಡಿದ ಪೈಪ್‌ಗಳು: ‘ಭೂಮಿಯೊಳಗೆ ಅಳವಡಿಸಿರುವ 10 ಅಡಿ ಸುತ್ತಳತೆಯ ಪೈಪ್‌ಗಳು ನೀರು ಮತ್ತು ಮಣ್ಣಿನಿಂದ ತುಕ್ಕು ಹಿಡಿಯದಂತೆ ಸುತ್ತಲು ಹಾಕಿರುವ ಸಿಮೆಂಟ್, ಬಹುತೇಕ ಕಡೆ ಕಿತ್ತು ಹೋಗಿದೆ. 4–5 ವರ್ಷಗಳ ಹಿಂದೆಯೇ ಭೂಮಿಯೊಳಗೆ ಹಾಕಿರುವ ಪೈಪ್‌ಗಳು ಈಗಾಗಲೇ ತುಕ್ಕು ಹಿಡಿದಿವೆ. ಮಳೆಗಾಲದಲ್ಲಿ 8 ಚೆಕ್ ಡ್ಯಾಂಗಳಿಂದ, ಐದು ಪೈಪ್‌ಲೈನ್‌ನಲ್ಲಿ 2 ಸಾವಿರ ಎಚ್‌.ಪಿ. ಪಂಪ್‌ಗಳಿಂದ ನೀರು ಹರಿಸಿದರೆ, ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಊಹಿಸುವುದಕ್ಕೂ ಸಾಧ್ಯವಿಲ್ಲ’ ಎಂದು ಗ್ರಾಮಸ್ಥರು ಹೇಳಿದ್ದಾರೆ.

‘ನೀರು ಹರಿಸಿದಾಗಲೇ ಸೋರಿಕೆ ಪತ್ತೆ’

‘ಕಾಡಮನೆ ಚೆಕ್‌ಡ್ಯಾಂ 4 ಮತ್ತು 5ರಲ್ಲಿ ಮಾತ್ರ ಈಗ ನೀರಿನ ಲಭ್ಯತೆ ಇದೆ. ಅಲ್ಲಿಂದ ಪರೀಕ್ಷಾರ್ಥವಾಗಿ ನೀರು ಹರಿಸಲಾಗುತ್ತಿದೆ. ನೀರು ಹರಿಸುವುದರಿಂದ ಮಾತ್ರ ಎಲ್ಲೆಲ್ಲಿ ಸೋರಿಕೆ ಆಗುತ್ತಿದೆ ಎಂಬುದು ಗೊತ್ತಾಗುತ್ತದೆ’ ಎಂದು ವಿಶ್ವೇಶ್ವರಯ್ಯ ಜಲನಿಗಮದ ಎತ್ತಿನಹೊಳೆಯ ಯೋಜನೆ ಕಾರ್ಯಪಾಲಕ ಎಂಜಿನಿಯರ್ ವೆಂಕಟೇಶ್ ಹೇಳಿದ್ದಾರೆ.

‘ಐದು ದಿನಗಳ ಹಿಂದೆ 6 ಕಿ.ಮೀ. ನೀರು ಹರಿಸಿದಾಗ ನಾಲ್ಕೈದು ಕಡೆ ಸೋರಿಕೆ ಆಗಿತ್ತು. ತಕ್ಷಣವೇ ದುರಸ್ತಿ ಮಾಡಿದ್ದೇವೆ. ಅಲ್ಲಿಂದ ದೊಡ್ಡನಾಗರ ವರೆಗೆ 14 ಕಿ.ಮೀ. ಪರೀಕ್ಷೆ ನಡೆಸುತ್ತಿದ್ದು, ಹಾರ್ಲೆ ಕೂಡಿಗೆ ಬಳಿ ಸೋರಿಕೆ ಆಗಿದೆ. ಅದನ್ನೂ 24 ಗಂಟೆಯೊಳಗೆ ದುರಸ್ತಿ ಮಾಡುತ್ತೇವೆ. ಉಳಿದ 6 ಚೆಕ್‌ಡ್ಯಾಂಗಳಲ್ಲಿ ನೀರಿನ ಲಭ್ಯತೆ ಇಲ್ಲ. ಮುಂದಿನ ಮಳೆಗಾಲದಲ್ಲಿ ಪರೀಕ್ಷಾರ್ಥವಾಗಿ ನೀರು ಹರಿಸಲಾಗುವುದು’ ಎಂದು ಅವರು ಹೇಳಿದರು.

ನೀರು ಹರಿಸಿ ರಸ್ತೆ, ಆಸ್ತಿ ಹಾನಿ ಮಾಡುತ್ತಿರುವುದನ್ನು ನೋಡಿ ಸುಮ್ಮನಿರಲು ಸಾಧ್ಯವಿಲ್ಲ. ವರದಿ ನೀಡುವಂತೆ ಕೇಳಿದ್ದೇನೆ
ಸಿಮೆಂಟ್ ಮಂಜು, ಶಾಸಕ

ನೀರು ಭೂಮಿಯೊಳಗೆ ಹರಿಯುವಾಗ ಮನೆ ಬಿದ್ದು ಹೋಗುವುದೋ ಎಂಬ ಭಯ ಶುರುವಾಗಿದೆ. ಯಾರಿಗೋ ನೀರು ಕೊಡಲು ನಮ್ಮ ಬದುಕು ನಾಶ ಮಾಡುತ್ತಿದ್ದಾರೆ
ಶೇಖರ್, ರವಿ, ಬಾಲನ್
ಹಾರ್ಲೆ ಕೂಡಿಗೆ ಗ್ರಾಮಸ್ಥರು

ನೆಲದಲ್ಲಿ ಪೈಪ್‌ಲೈನ್, ಮೇಲೆ ಹೈಟೆನ್ಷನ್ ವಿದ್ಯುತ್ ಮಾರ್ಗವಿದೆ. ಕೋಲಾರ, ಬೆಂಗಳೂರಿಗೆ ನೀರಂತೂ ಹರಿಯಲ್ಲ. ನಾವೆಲ್ಲಾ ಆತಂಕದಲ್ಲಿ ಬದುಕಬೇಕಾಗಿದೆ
ವಿಜಿತ್ ಕುಂಬರಡಿ, ಗ್ರಾಮಸ್ಥ

ಸುದ್ದಿ 2 ನಿಮಿಷ

ಹಾಲು ಖರೀದಿ ದರ ಇಳಿಕೆಗೆ ಸಚಿವರ ಅಸಮಾಧಾನ

ಮೈಸೂರು: ಕೆಲವು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳು ರೈತರಿಂದ ಹಾಲು ಖರೀದಿ ದರ ಇಳಿಕೆ ಮಾಡಿರುವುದಕ್ಕೆ ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿ ಶುಕ್ರವಾರ ನಡೆದ ಮೈಸೂರು ವಿಭಾಗಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ‘ಮಂಡ್ಯ (₹1.50), ಮೈಸೂರು (₹1.45) ಹಾಗೂ ಚಾಮರಾಜನಗರ (₹1) ಜಿಲ್ಲೆಗಳಲ್ಲಿ ಖರೀದಿ ದರ ಕಡಿತಗೊಳಿಸಲಾಗಿದೆ. ಬೇರೆ ಕಡೆಯೂ ಹೀಗೆ ಆಗಿರುವ ಮಾಹಿತಿ ಇದೆ. ಇದು ಸರಿಯಲ್ಲ’ ಎಂದರು.

‘ದರ ಕಡಿತವನ್ನು ನನ್ನ ಗಮನಕ್ಕೆ ತಂದಿಲ್ಲ. ಮೈಸೂರಿನವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೂ ಭೇಟಿಯಾಗಿ ಮಾತುಕತೆ ನಡೆಸಿದ್ದರು. ಆದರೆ, ಕಡಿಮೆ ಮಾಡುವಂತೆ ಮುಖ್ಯಮಂತ್ರಿ ತಿಳಿಸಿಲ್ಲ. ಆದರೂ ಇಳಿಸಿದ್ದಾರೆ. ಹೀಗಾದರೆ ಹೇಗೆ’ ಎಂದು ಕೇಳಿದರು.

‘ದರ ಇಳಿಸದಂತೆ ಸಭೆಯಲ್ಲಿ ಸ್ಪಷ್ಟ ನಿರ್ದೇಶನ ನೀಡಿದ್ದರೂ ಉಲ್ಲಂಘಿಸಲಾಗಿದೆ. ಹೀಗಾಗಿ, ಅಂತಹ ಒಕ್ಕೂಟಗಳನ್ನು ಸೂಪರ್‌ಸೀಡ್ ಮಾಡಿ, ಇಲ್ಲದಿದ್ದರೆ ಅವರು ಬುದ್ಧಿ ಕಲಿಯುವುದಿಲ್ಲ’ ಎಂದು ಇಲಾಖೆಯ ಕಾರ್ಯದರ್ಶಿ ಸಲ್ಮಾ ಕೆ.ಫಾಹಿಂ ಅವರಿಗೆ ಸೂಚಿಸಿದರು. ‘ಒಕ್ಕೂಟಗಳನ್ನು ಸರಿದಾರಿಗೆ ತರಲು ಕಠಿಣ ಕ್ರಮ ಜರುಗಿಸಬೇಕು’ ಎಂದೂ ಹೇಳಿದರು.

‘ಒಕ್ಕೂಟದವರು ಏನು ಬೇಕಾದರೂ ಮಾಡಬಹುದು ಎಂಬಂತೆ ವರ್ತಿಸುತ್ತಿದ್ದಾರೆ. ದರ ಇಳಿಕೆಯನ್ನು ನಮ್ಮ ಗಮನಕ್ಕೆ ತಂದು ಹಾಗೂ ಅನುಮತಿ ಪಡೆದೇ ಮಾಡಬೇಕಾಗುತ್ತದೆ. ವಿಧಾನಮಂಡಲ ಅಧಿವೇಶನದಲ್ಲಿ ಉತ್ತರ ಕೊಡಬೇಕಾದವನು ನಾನು’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಚಿರತೆ ಮರಿ ಕೊಂದ ನಾಯಿಗಳು!

ಕೊರಟಗೆರೆ (ತುಮಕೂರು): ಮಾವುಕೆರೆ ಗ್ರಾಮದಲ್ಲಿ ಗುರುವಾರ ತಡ ರಾತ್ರಿ ನಾಯಿಗಳ ಹಿಂಡು, ಗ್ರಾಮಕ್ಕೆ ಬಂದಿದ್ದ ಎಂಟು ತಿಂಗಳ ಚಿರತೆ ಮರಿಯನ್ನು ಕೊಂದು ಹಾಕಿವೆ.

‘ನಾಯಿಗಳು ಕಚ್ಚಿ ಚಿರತೆ ಮರಿ ಮೃತಪಟ್ಟಿದೆ ಎಂದು ಶವ ಪರೀಕ್ಷೆ ವರದಿಯಲ್ಲಿ ದೃಢಪಟ್ಟಿದೆ’ ಎಂದು ತುಮಕೂರು ಆರ್‌ಎಫ್‌ಒ ಪವಿತ್ರ ತಿಳಿಸಿದ್ದಾರೆ.

ಚಿರತೆ ಮರಿ ಹಲವು ದಿನಗಳಿಂದ ಕೊರಟಗೆರೆ ಹೋಬಳಿ ಸುತ್ತಮುತ್ತ ಆಗಾಗ್ಗೆ ಕಾಣಿಸಿಕೊಳ್ಳುತ್ತಿತ್ತು. ಗುರುವಾರ ರಾತ್ರಿ ಚಿರತೆ ಮರಿಯನ್ನು ಗಮನಿಸಿದ್ದ ನಾಯಿಗಳು ಬೊಗಳುವ ಶಬ್ಧ ಕೇಳಿ ಬಂದಿತ್ತು.

ನಾಯಿಗಳ ಹಿಂಡು ದಾಳಿಯಿಂದ ಚಿರತೆ ಮರಿ ಸತ್ತಿರಬಹುದು ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ್ದರು.

ವಕೀಲರ ಮೇಲೆ ಹಲ್ಲೆ: 6 ಪೊಲೀಸರ ಅಮಾನತು

ಕಲಾಪದಿಂದ ದೂರ ಉಳಿದು ಪ್ರತಿಭಟನೆ ನಡೆಸಿದ ವಕೀಲರು: ಆರೋಪಿಗಳ ಬಂಧನಕ್ಕೆ ಪಟ್ಟು

ಪ್ರಜಾವಾಣಿ ವಾರ್ತೆ

ಪ್ರೀತಮ್

ಚಿಕ್ಕಮಗಳೂರು: ಹೆಲ್ಮೆಟ್ ಹಾಕದೆ ಬೈಕ್‌ನಲ್ಲಿ ಬಂದಿದ್ದ ವಕೀಲರೊಬ್ಬರನ್ನು ಠಾಣೆಯ ಒಳಗೆ ಕರೆದೊಯ್ದು ಪೊಲೀಸರು ಹಲ್ಲೆ ನಡೆಸಿದ್ದಾರೆ ಎನ್ನಲಾಗಿದ್ದು, ಅವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ವಕೀಲರು ನ್ಯಾಯಾಲಯದ ಕಲಾಪದಿಂದ ದೂರ ಉಳಿದು ಪ್ರತಿಭಟನೆ ನಡೆಸಿದರು.

ವಕೀಲ ಪ್ರೀತಮ್ ಅವರು ಗುರುವಾರ ರಾತ್ರಿ ಹೆಲ್ಮೆಟ್ ಇಲ್ಲದೆ ಮಾರ್ಕೆಟ್ ರಸ್ತೆಯಲ್ಲಿ ಬೈಕ್‌ನಲ್ಲಿ ತೆರಳುತ್ತಿದ್ದರು. ಠಾಣೆಯ ಎದುರು ಅವರನ್ನು ಅಡ್ಡಗಟ್ಟಿದ ಪೊಲೀಸರು, ಅವರ ಬೈಕ್‌ನಿಂದ ಕೀ ಕಸಿದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ವಕೀಲ ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆದಿದೆ. ಠಾಣೆಯ ಒಳಗೆ ಕರೆದೊಯ್ದಾಗಲೂ ಮಾತಿಗೆ ಮಾತು ಬೆಳೆದಿದ್ದು, ಪ್ರೀತಮ್ ಮೇಲೆ ಪೊಲೀಸರು ಹಲ್ಲೆ ನಡೆಸಿದ್ದಾರೆ ಎಂದು ದೂರಲಾಗಿದೆ. ಎದೆ, ಕೈ, ಬೆನ್ನಿನ ಭಾಗಕ್ಕೆ ತೀವ್ರವಾದ ಪೆಟ್ಟುಗಳು ಬಿದ್ದಿದ್ದು, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚಿಕ್ಕಮಗಳೂರು ನಗರದಲ್ಲಿ ವಕೀಲರು ಪ್ರತಿಭಟನೆ ನಡೆಸಿದರು

ಈ ಸಂಬಂಧ ವಿಡಿಯೊ ಮತ್ತು ಚಿತ್ರಗಳು ವಕೀಲರ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡಿದ ಕೂಡಲೇ ವಕೀಲರು ಶುಕ್ರವಾರ ಬೆಳಿಗ್ಗೆ ತುರ್ತು ಸಭೆ ನಡೆಸಿ ಪ್ರತಿಭಟನೆ ನಡೆಸಿದರು. ಹಾಸನ, ಮಂಗಳೂರು ಮತ್ತು ಬೆಂಗಳೂರಿನಿಂದಲೂ ವಕೀಲರು ಬಂದು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

‘ಆರೋಪಿಗಳ ಮೇಲೆ ಕೊಲೆ ಯತ್ನದ ಪ್ರಕರಣ ದಾಖಲಾಗಿದೆ. ಆದರೆ ಆರೋಪಿಗಳು ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳು ಎಂಬ ಕಾರಣಕ್ಕೆ ಅವರನ್ನು ಬಂಧಿಸುತ್ತಿಲ್ಲ. ಕೂಡಲೇ ಆರೋಪಿಗಳನ್ನು ಬಂಧಿಸಬೇಕು’ ಎಂದು ಪಟ್ಟು ಹಿಡಿದರು. ಶುಕ್ರವಾರ ಮಧ್ಯಾಹ್ನ ವಿಚಾರಣೆ ಕೈಗೆತ್ತಿಕೊಂಡಿದ್ದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಅವರು ಪ್ರತಿಭಟನೆನಿರತ ವಕೀಲರೊಂದಿಗೂ ಮಾತನಾಡಿದರು. ಬಳಿಕ ವಕೀಲರು ಧರಣಿ ಹಿಂದಕ್ಕೆ ಪಡೆದರು.

‘ತಾತ್ಕಾಲಿಕವಾಗಿ ಪ್ರತಿಭಟನೆ ಹಿಂದಕ್ಕೆ ಪಡೆದಿದ್ದು, ಆರೋಪಿಗಳನ್ನು ಬಂಧಿಸದಿದ್ದರೆ ಹೋರಾಟ ಮುಂದುವರಿಯಲಿದೆ’ ಎಂದು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ ರೆಡ್ಡಿ ತಿಳಿಸಿದರು.

‘ಶುಕ್ರವಾರ ಬೆಳಿಗ್ಗೆಯೇ ಪಿಎಸ್‌ಐ ಮಹೇಶ್ ಪೂಜಾರಿ ಸೇರಿ ಆರು ಪೊಲೀಸರನ್ನು ಕರ್ತವ್ಯದಿಂದ ಅಮಾನತುಗೊಳಿಸಲಾಗಿದೆ. ತನಿಖಾ ವರದಿ ಬಂದ ಬಳಿಕ ಕ್ರಮ ಕೈಗೊಳ್ಳಲಾಗುವುದು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ತಿಳಿಸಿದರು.

ಪ್ರಕರಣ ದಾಖಲಿಸಿಕೊಂಡ ಹೈಕೋರ್ಟ್

ಬೆಂಗಳೂರು: ‘ಚಿಕ್ಕಮಗಳೂರಿನ ವಕೀಲ ಪ್ರೀತಂ ಮೇಲೆ ಪೊಲೀಸರು ನಡೆಸಿರುವ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಆರು ಪೊಲೀಸರನ್ನು ಅಮಾನತು ಮಾಡಲಾಗಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ತಿಳಿಸಿದ್ದಾರೆ.

ವಕೀಲ ಪ್ರೀತಂ ಮೇಲಿನ ಹಲ್ಲೆಗೆ ಸಂಬಂಧಿಸಿದಂತೆ ಬೆಂಗಳೂರಿನ ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಸಲ್ಲಿಸಿದ ಮನವಿಯನ್ನು ಗಂಭೀರವಾಗಿ ಪರಿಗಣಿಸಿದ ಹೈಕೋರ್ಟ್ ಸ್ವಯಂಪ್ರೇರಿತ ಪ್ರಕರಣವನ್ನಾಗಿಸಿ ದಾಖಲಿಸಿಕೊಂಡಿತು.

ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ತಕ್ಷಣದ ವಿಚಾರಣೆಯನ್ನೂ ನಡೆಸಿತು. ಪ್ರಕರಣದ ವಿಚಾರಣೆಯನ್ನು ಇದೇ 5ಕ್ಕೆ ಮುಂದೂಡಿತು.

ಮಾ. 2ರಿಂದ ಪಿಯುಸಿ, 25ರಿಂದ 10ನೇ ತರಗತಿ ಪರೀಕ್ಷೆ

ಒಂದನೇ ಪುಟದಿಂದ...

ದ್ವಿತೀಯ ಪಿಯುಸಿ ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 2–ಕನ್ನಡ, ಅರೇಬಿಕ್, 4–ಇತಿಹಾಸ, ಭೌತಶಾಸ್ತ್ರ, 5–ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್, 6–ಸಮಾಜಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ, 7–ಹಿಂದಿ, 9–ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, 11–ಇಂಗ್ಲಿಷ್, 12– ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲೆಯಾಳಂ, 13–ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, 14–ಗಣಿತ, ಶಿಕ್ಷಣಶಾಸ್ತ್ರ, 16–ಭೂಗೋಳಶಾಸ್ತ್ರ, ಜೀವವಿಜ್ಞಾನ, 18–ಹಿಂದೂಸ್ತಾನಿ ಸಂಗೀತ, ಮನಃಶಾಸ್ತ್ರ, ರಸಾಯನವಿಜ್ಞಾನ, ಮೂಲಗಣಿತ, 20– ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹವಿಜ್ಞಾನ, 22–ಅರ್ಥಶಾಸ್ತ್ರ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 25–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, 27–ಸಮಾಜ ವಿಜ್ಞಾನ, 30–ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, ಏಪ್ರಿಲ್–2 ಗಣಿತ, 3–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 4–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, 6–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ.

ವೈದ್ಯ ಸತೀಶ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮಂಡ್ಯ/ ಕುಶಾಲನಗರ: ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಹರಳಹಳ್ಳಿಯ ವೈದ್ಯ ಸತೀಶ್ (40), ಕುಶಾಲನಗರ ಆನೆಕಾಡು ಸಮೀಪ ಕಾರಿನಲ್ಲಿ ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಇವರು ಮೈಸೂರು ಜಿಲ್ಲೆ, ಕೊಣಸೂರು ಸರ್ಕಾರಿ ಆಸ್ಪತ್ರೆಯ ಗುತ್ತಿಗೆ ವೈದ್ಯರಾಗಿ ಕೆಲಸ ಮಾಡುತ್ತಿದ್ದರು.

‘ಆಲೆಮನೆಯಲ್ಲಿ ಭ್ರೂಣಲಿಂಗ ಪತ್ತೆ ಪ್ರಕರಣದ ಪ್ರಮುಖ ಆರೋಪಿ ನವೀನ್ ಕುಮಾರ್ ಜೊತೆ ಅವರು ಸಂಪರ್ಕದಲ್ಲಿದ್ದರು ಎಂಬ ಆರೋಪವಿತ್ತು. ಪೊಲೀಸರು ಅವರನ್ನು ವಿಚಾರಣೆಗೆ ಒಳಪಡಿಸಲು ಪ್ರಯತ್ನಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಮಡಿಕೇರಿ ಕಡೆಗೆ ಹೊರಟಿದ್ದ ಅವರು ಮಧ್ಯಾಹ್ನದ ವೇಳೆ ಕುಶಾಲನಗರದ ಆನೆಕಾಡು ಸಮೀಪ ರಸ್ತೆಬದಿ ಕಾರು ನಿಲ್ಲಿಸಿ ವಿಷದ ಇಂಜೆಕ್ಷನ್ ಚುಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡರು’ ಎಂದು ಪೊಲೀಸರು ತಿಳಿಸಿದ್ದಾರೆ. ಪಾಂಡವಪುರ ತಾಲ್ಲೂಕಿನ ಸುಂಕಾತಣ್ಣೂರು ಗ್ರಾಮದಲ್ಲೂ ಕ್ಲಿನಿಕ್ ತೆರೆದು ಅವರು ವಾರದಲ್ಲಿ ಎರಡು ದಿನ ಕೆಲಸ ಮಾಡುತ್ತಿದ್ದರು.

‘ಪತಿ ದೀರ್ಘ ಕಾಲದ ಬೆನ್ನುನೋವಿನಿಂದ ಬಳಲುತ್ತಿದ್ದರು. ಹುದ್ದೆಯೂ ಕಾಯಂಗೊಂಡಿರಲಿಲ್ಲ. ಪುತ್ರನಿಗೆ ಅನಾರೋಗ್ಯವಿತ್ತು. ಸುಮಾರು 6 ತಿಂಗಳಿಂದ ಖಿನ್ನತೆಗೆ ಒಳಗಾಗಿದ್ದರು’ ಎಂದು ಅವರ ಪತ್ನಿ ಪೊಲೀಸರಿಗೆ ತಿಳಿಸಿದ್ದಾರೆ.

‘ಪ್ರಕರಣ ತನಿಖೆಯ ಹಂತದಲ್ಲಿದೆ. ಹೆಚ್ಚೇನೂ ಹೇಳಲಾಗದು’ ಎಂದು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಪ್ರತಿಕ್ರಿಯಿಸಿದರು. ಮಂಡ್ಯ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಮೋಹನ್ ಸಂಪರ್ಕಕ್ಕೆ ಸಿಗಲಿಲ್ಲ.

ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಲ್ಲಣ ತಂದ ಬಾಂಬ್ ಬೆದರಿಕೆ

ಒಂದನೇ ಪುಟದಿಂದ...

‘ಯಾವುದೇ ಅನುಮಾನಾಸ್ಪದ ವಸ್ತುಗಳು, ಸ್ಫೋಟಕಗಳು ಪತ್ತೆಯಾಗಿಲ್ಲ. ಬರಹ ಮಾತ್ರ ಏಕಸ್ವರೂಪದಲ್ಲಿದೆ. ಇ- ಮೇಲ್‌ನಲ್ಲಿ ಉಲ್ಲೇಖಿಸಿದಂತೆ ಎಲ್ಲಿಯೂ ಬಾಂಬ್ ಪತ್ತೆಯಾಗಿಲ್ಲ. ಆದರೆ, ಪತ್ರದಲ್ಲಿ ಉಗ್ರ ಚಟುವಟಿಕೆಗಳ ಕುರಿತು ಪ್ರಸ್ತಾಪಿಸಲಾಗಿದೆ. ಇ- ಮೇಲ್ ಅನ್ನು ಗಂಭೀರವಾಗಿ ಪರಿಗಣಿಸಿದ್ದೇವೆ’ ಎಂದು ಪೊಲೀಸರು ಹೇಳಿದರು.

ಬೆದರಿಕೆಯು ಕಾಡ್ಗಿಚ್ಚಿನಂತೆ ವ್ಯಾಪಿಸಿದ್ದರಿಂದ ನಗರದ ಶಾಲಾ ಆವರಣದಲ್ಲಿ ಇಡೀ ದಿನ ಆತಂಕದ ವಾತಾವರಣವಿತ್ತು. ಬೆಳಿಗ್ಗೆ 6 ರಿಂದ ಬೆಳಿಗ್ಗೆ 8 ಗಂಟೆ ಒಳಗೆ ಉತ್ತರ ವಲಯ, ದಕ್ಷಿಣ ವಲಯ, ಆನೇಕಲ್‌ನ ಶಾಲೆಗಳಿಗೆ ಇ– ಮೇಲ್‌ನಲ್ಲಿ ಬೆದರಿಕೆ ಬಂದಿದೆ. ಆಗಷ್ಟೇ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಿ ಮನೆ, ಕೆಲಸಕ್ಕೆ ತೆರಳಿದ್ದರು. ಮಾಹಿತಿ ತಿಳಿದ ಪೋಷಕರೂ ದಿಗ್ಭ್ರಾಂತಕ್ಕೆ ಒಳಗಾದರು.

ಸದಾಶಿವನಗರದ ನೀವ್ ಅಕಾಡೆಮಿ ಶಾಲೆಗೆ ಬೆಳಿಗ್ಗೆ 8ಕ್ಕೆ ಬಂದ ಸಿಬ್ಬಂದಿ ಕಂಪ್ಯೂಟರ್‌ನಲ್ಲಿ ಇ- ಮೇಲ್ ಪರಿಶೀಲನೆ ನಡೆಸಿದಾಗ ‘ಶಾಲಾ ಅಂಗಳದಲ್ಲಿ ಸ್ಫೋಟಕವಿದೆ’ ಎಂದು ಮಾಹಿತಿ ಓದಿ ಬೆಚ್ಚಿಬಿದ್ದರು. ಅದಾದ ನಂತರ ಬೆದರಿಕೆ ಬಂದಿರುವ ಶಾಲೆಗಳ ಪಟ್ಟಿ ಬೆಳೆಯುತ್ತಾ ಹೋಯಿತು. ಶಾಲಾ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು, ಸಿಬ್ಬಂದಿ ಆತಂಕಕ್ಕೀಡಾದರೆ, ಪುಟ್ಟ ಮಕ್ಕಳು ಕಂಗಾಲಾಗಿದ್ದರು.

‘ಇದೊಂದು ಹುಸಿ ಬಾಂಬ್ ಬೆದರಿಕೆಯಾಗಿದೆ. ನಿರ್ಲಕ್ಷ್ಯ ವಹಿಸದೇ ಗಂಭೀರವಾಗಿ ತನಿಖೆ ನಡೆಸಲಾಗುವುದು. ಶಾಲಾ ಆಡಳಿತ ಮಂಡಳಿಯರು ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು. ಬೆದರಿಕೆ ಕರೆ ಬಾರದ ಶಾಲೆಗಳಿಗೂ ತೆರಳಿದ ಪೊಲೀಸರು ಪರಿಶೀಲನೆ ನಡೆಸಿದರು.

ಮಾಹಿತಿ ತಿಳಿದ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಜತೆಗೆ ಸಮಾಲೋಚನೆ ನಡೆಸಿದರು. ಸ್ಥಳಕ್ಕೆ ಎಲ್ಲ ತಪಾಸಣಾ ಸಿಬ್ಬಂದಿ ರವಾನಿಸುವಂತೆ ಸೂಚನೆ ನೀಡಿದರು.

ನಗರ, ಗ್ರಾಮೀಣ ಭಾಗದ ಖಾಸಗಿ ಹಾಗೂ ಸರ್ಕಾರಿ ಶಾಲೆಗಳಿಗೆ ಬೆದರಿಕೆ ಪತ್ರ ಬಂದಿತ್ತು. ನಗರದ ಸಾಣೆಗುರುವನಹಳ್ಳಿ ಸರ್ಕಾರಿ ಶಾಲೆಗೆ ಇ- ಮೇಲ್ ಬಂದಿದ್ದರಿಂದ ಅಲ್ಲಿಯೂ ಆತಂಕದ ಸ್ಥಿತಿಯಿತ್ತು. ನ್ಯಾಷನಲ್ ಪಬ್ಲಿಕ್ ಅಕಾಡೆಮಿ, ಸೇಂಟ್ ಜಾನ್ಸ್ ಶಾಲೆ, ಬೆಂಗಳೂರು ಟ್ರಸ್ಟ್ ಸ್ಕೂಲ್, ನ್ಯೂ ಅಕಾಡೆಮಿ ಸ್ಕೂಲ್, ಅನುಪಮಾ ಶಾಲೆ ಸೇರಿದಂತೆ ಹಲವು ಶಾಲೆಗಳ ಆವರಣದಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿತ್ತು.

‘ಐಪಿ ಅಡ್ರೆಸ್ ಜರ್ಮನಿ ಯಲ್ಲಿದೆ ಎಂಬುದು ಗೊತ್ತಾಗಿದೆ. ಜರ್ಮನಿಯಿಂದ ಇ ಮೇಲ್ ಕಳುಹಿಸಿರುವ ಶಂಕೆ ವ್ಯಕ್ತವಾಗಿದೆ. ಇಲ್ಲವಾದರೆ ಬೇರೆ ದೇಶದಲ್ಲೇ ಕುಳಿತುಕೊಂಡು ಹ್ಯಾಕ್ ಮಾಡಿ ಇ ಮೇಲ್ ಸಂದೇಶ ಕಳಿಸಿರುವ ಸಾಧ್ಯತೆಯೂ ಇದೆ. ಮಲೇಷ್ಯಾ, ಜರ್ಮನಿ ಸೇರಿದಂತೆ ಹಲವು ದೇಶಗಳಿಗೆ ಬೀಬಲ್ ಡಾಟ್ ಕಾಂನಿಂದ ಈ ಹಿಂದೆ ಬೆದರಿಕೆ ಬಂದಿತ್ತು. ಈ ಬಾರಿ ಬೆಂಗಳೂರಿನ ಶಾಲೆಗಳಿಗೆ ಬೀಬಲ್. ಕಾಂ ಮೂಲಕ ಬಾಂಬ್ ಸಂದೇಶ ರವಾನೆಯಾಗಿದೆ’ ಎಂದು ಪೊಲೀಸರು ಹೇಳಿದರು.

ಎಲ್ಲ ಶಾಲೆಗಳಿಗೂ ಭದ್ರತೆ ಒದಗಿಸಿ ಎಚ್ಚರಿಕೆಯಿಂದಿರಲು ಪೊಲೀಸರಿಗೆ ಸೂಚಿಸಿದ್ದೇನೆ. ಬೆದರಿಕೆ ಪತ್ರ ಕಳುಹಿಸಿದವರ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಆರೋಪಿಗಳು ವಿದೇಶಿ ಇ-ಮೇಲ್ ವ್ಯವಸ್ಥೆ ಬಳಸಿರುವುದು ಪತ್ತೆಯಾಗಿದೆ. ಐ.ಪಿ ವಿಳಾಸದ ಮಾಹಿತಿ ಒದಗಿಸುವಂತೆ ಆ ಕಂಪನಿಗೆ ಪೊಲೀಸರು ಪತ್ರ ಬರೆದಿದ್ದಾರೆ
ಜಿ. ಪರಮೇಶ್ವರ, ಗೃಹ ಸಚಿವ

ಬೆದರಿಕೆ ಇ ಮೇಲ್‌ನ ಹಿಂದಿನ ಹುನ್ನಾರ ಏನಿದೆ ಎಂಬುದು ಕುರಿತು ತನಿಖೆ ನಡೆಯುತ್ತಿದೆ. ಬೀಬಲ್ ಡಾಟ್ ಕಾಮ್ ಡೊಮೈನ್ ಮೂಲಕ ಇ ಮೇಲ್ ಬಂದಿದೆ
ಬಿ.ದಯಾನಂದ್
ನಗರ ಪೊಲೀಸ್ ಕಮಿಷನರ್

ಓಡಿಬಂದ ಶಿಕ್ಷಕರು, ವಿದ್ಯಾರ್ಥಿಗಳು

ಬಾಂಬ್ ಬೆದರಿಕೆ ವಿಷಯ ಹಬ್ಬುತ್ತಿದಂತೆ ಬಹುತೇಕ ಶಾಲೆಗಳಲ್ಲಿ ಮಕ್ಕಳನ್ನು ಶಾಲಾ ಕಟ್ಟಡದಿಂದ ಹೊರ ಕರೆತಂದು, ಮೈದಾನದಲ್ಲಿ ಬಿಡಲಾಯಿತು. ಬಾಂಬ್ ಬೆದರಿಕೆ ಬಂದ ಕೆಲ ಶಾಲೆಗಳು ಅಕ್ಕಪಕ್ಕದ ಶಾಲೆಗಳ ಬಸ್‌ಗಳನ್ನು ಬಳಸಿಕೊಂಡು ಮಕ್ಕಳನ್ನು ಮನೆಗೆ ಕಳುಹಿಸಿದರು. ಅಷ್ಟರಲ್ಲಿ ಬಾಂಬ್ ಬೆದರಿಕೆ ಬಾರದ ಶಾಲೆಗಳಲ್ಲೂ ಗದ್ದಲ ಆರಂಭವಾಯಿತು. ಆಗಲೇ ಬಸ್‌ಗಳನ್ನು ಬೆದರಿಕೆ ಇದ್ದ ಶಾಲೆಗಳಿಗೆ ಕಳುಹಿಸಿಕೊಟ್ಟಿದ್ದರಿಂದ ಉಳಿದ ಶಾಲೆಗಳ ಆಡಳಿತ ಮಂಡಳಿಗಳು ಆತಂಕದ ಪರಿಸ್ಥಿತಿ ಎದುರಿಸಿದರು.

‘ಕೆಲಸಕ್ಕೆ ತೆರಳಿದ್ದೆ. ಮನೆಯಿಂದ ಕರೆ ಬಂದ ಕಾರಣ ಆತಂಕದಲ್ಲೇ ಶಾಲೆ ಬಳಿ ತೆರಳಿದೆ. ಅಲ್ಲಿ ಪೋಷಕರ ದಟ್ಟಣೆಯೇ ನೆರೆದಿತ್ತು. ನಂತರ ಪುತ್ರಿಯನ್ನು ಕರೆದುಕೊಂಡು ಮನೆಗೆ ತಲುಪಿಸಿ, ಮತ್ತೆ ಕಚೇರಿಗೆ ತೆರಳಿದೆ. ಎಲ್ಲ ಪೋಷಕರಲ್ಲೂ ಆತಂಕ ಮನೆ ಮಾಡಿತ್ತು’ ಎಂದು ಪೋಷಕರೊಬ್ಬರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಆರಂಭದಲ್ಲಿ ಬಂದ ಕೆಲ ಪೋಷಕರಿಗೆ ಪರಿಸ್ಥಿತಿ ಮನವರಿಕೆ ಮಾಡಲು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಒತ್ತಡಕ್ಕೆ ಮಣಿದು ಪೋಷಕರ ಜತೆ ಮಕ್ಕಳನ್ನು ಕಳಹಿಸಿಲು ಆರಂಭಿಸಿದ ನಂತರ ಆ ಪೋಷಕರಿಂದ ಇತರೆ ಪೋಷಕರಿಗೆ ಮಾಹಿತಿ ನೀಡಲು ಆರಂಭಿಸಿದರು. ಇದರಿಂದ ಕಡಿಮೆ ಸಮಯದಲ್ಲಿ ಎಲ್ಲ ಪೋಷಕರು ಶಾಲೆ ಬಳಿ ಜಮಾಯಿಸಲು ದಾರಿಯಾಯಿತು ಎಂದು ಖಾಸಗಿ ಶಾಲಾ ಶಿಕ್ಷಕಿಯೊಬ್ಬರು ಮಾಹಿತಿ ನೀಡಿದರು.

‘ಅಲ್ಲಾಹುವಿನ ಶತ್ರುಗಳನ್ನು ಬಿಡುವುದಿಲ್ಲ’

ಒಂದನೇ ಪುಟದಿಂದ...

‘ನೀವೆಲ್ಲರೂ ನಮ್ಮ ಗುಲಾಮರಾಗದೆ ಬೇರೆ ಆಯ್ಕೆಗಳೇ ಇಲ್ಲ. ಅಲ್ಲಾಹುವಿನ ನೈಜ ಧರ್ಮವನ್ನು ಸ್ವೀಕರಿಸಿ. ನಿಮ್ಮ ದೇವಸ್ಥಾನಗಳು, ನಿಮ್ಮ ಮೂರ್ತಿಗಳು, ಬುದ್ಧನಿಂದ ಅನಂತತ್ವದವರೆಗಿನ ನಿಮ್ಮ ನಂಬಿಕೆಗಳೆಲ್ಲವನ್ನೂ ಸ್ಫೋಟಿಸಲಿದ್ದೇವೆ. ಇಸ್ಲಾಂಗೆ ಎಲ್ಲರೂ ಮತಾಂತರಗೊಳ್ಳಬೇಕು. ಇಲ್ಲವೇ ಇಸ್ಲಾಂನ ಹರಿತವಾದ ಖಡ್ಗಕ್ಕೆ ಸಿಲುಕಿ ಸಾಯಿರಿ’ ಎಂಬುದು ಸೇರಿದಂತೆ ಹಲವು ವಿಚಾರಗಳನ್ನು ಉಲ್ಲೇಖಿಸಿ ಇ- ಮೇಲ್ ಮಾಡಲಾಗಿದೆ.

ಪಾಂಡವಪುರ ಪಾಂಡವ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ‘ಸುವರ್ಣ ಕರ್ನಾಟಕ–50 ಮತ್ತು ‘ಸಿ.ಎಸ್‌.ಪುಟ್ಟರಾಜು–60’ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ್ದ ಜನರು. ಮಾಜಿ ಸಚಿವ ಸಿ.ಎಸ್‌.ಪುಟ್ಟರಾಜು, ಪತ್ನಿ ನಾಗಮ್ಮ ಪುಟ್ಟರಾಜು ಕೂಡ ಇದ್ದರು

ಮಾಜಿ ಸಚಿವ ಸಿ.ಎಸ್‌. ಪುಟ್ಟರಾಜು ಜನ್ಮ ದಿನ: ಟೀಕೆ

‘₹60 ಲಕ್ಷ ವೆಚ್ಚ’ದಲ್ಲಿ ಹುಟ್ಟುಹಬ್ಬ

ಪ್ರಜಾವಾಣಿ ವಾರ್ತೆ

ಪಾಂಡವಪುರ: ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಈ ಬಾರಿ ತೀವ್ರ ಬರಗಾಲವಿದ್ದರೂ, ಮಾಜಿ ಸಚಿವ ಸಿ.ಎಸ್‌.ಪುಟ್ಟರಾಜು ಅವರು ತಮ್ಮ 60ನೇ ವರ್ಷದ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸುವ ಮೂಲಕ ಟೀಕೆಗೆ ಗುರಿಯಾಗಿದ್ದಾರೆ.

ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ಜೆಡಿಎಸ್ ಕಾರ್ಯಕರ್ತರು ಆಯೋಜಿಸಿದ್ದ ‘ಸುವರ್ಣ ಕರ್ನಾಟಕ–50’ ಕಾರ್ಯಕ್ರಮದಲ್ಲೇ ‘ಸಿ.ಎಸ್‌.ಪುಟ್ಟರಾಜು–60’ ಸಂಭ್ರಮಾಚರಣೆಯೂ ನಡೆಯಿತು.

ಕಿರುನಾಟಕ– ರಸಸಂಜೆ: ಸಿ.ಎಸ್‌. ಪುಟ್ಟರಾಜು ಅವರ ಜೀವನ ಆಧಾರಿತ ನಾಟಕವನ್ನು ಡ್ರಾಮಾ ಜೂನಿಯರ್ ಮಕ್ಕಳು ಪ್ರದರ್ಶಿಸಿದರು. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ತಂಡದಿಂದ ಸಂಗೀತ ರಸ ಸಂಜೆ ಕಾರ್ಯಕ್ರಮ ನಡೆಯಿತು. ಕಿರುತೆರೆ ನಟಿ ಚೈತ್ರಾ ಕಾರ್ಯಕ್ರಮ ನಿರೂಪಿಸಿದರು. ಪಟ್ಟಣದ ಪ್ರಮುಖ ರಸ್ತೆಗಳು ಹಾಗೂ ಪಾಂಡವ ಕ್ರೀಡಾಂಗಣವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ವಿವಿಧ ರೀತಿಯ ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸಲಾಯಿತು. ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದ್ದರು.

₹60 ಲಕ್ಷಕ್ಕೂ ಅಧಿಕ ಹಣ ವೆಚ್ಚ: ‘ಸಂಭ್ರಮಾಚರಣೆಗೆ ಸುಮಾರು ₹60 ಲಕ್ಷಕ್ಕೂ ಅಧಿಕ ಹಣ ಖರ್ಚು ಮಾಡಲಾಗಿತ್ತು’ ಎಂದು ಜೆಡಿಎಸ್ ಕಾರ್ಯಕರ್ತರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಕಾರ್ಯಕರ್ತರ ಒತ್ತಾಯಕ್ಕೆ ಮಣಿದೆ: ‘ಸಮರ್ಪಕ ಮಳೆ ಬೀಳದೆ, ಕೆಆರ್‌ಎಸ್ ಜಲಾಶಯ ಭರ್ತಿಯಾಗದೆ ರೈತರು ಸಂಕಷ್ಟದಲ್ಲಿದ್ದಾರೆ. ಇಂತಹ ಸನ್ನಿವೇಶದಲ್ಲಿ ಸಂಭ್ರಮಾಚರಣೆ ಮಾಡಿಕೊಳ್ಳುವುದು ಸರಿಯಲ್ಲ. ಆದರೂ ಕಾರ್ಯಕರ್ತರ ಒತ್ತಾಯಕ್ಕೆ ಮಣಿದು ಸಂಭ್ರಮಾಚರಣೆಗೆ ಒಪ್ಪಿಗೆ ನೀಡಿ, ಭಾಗವಹಿಸಿದ್ದೇನೆ’ ಎಂದು ಸಿ.ಎಸ್‌.ಪುಟ್ಟರಾಜು ಹೇಳಿದರು.

‘ಪಕ್ಷದ ಮುಖಂಡರು, ಕಾರ್ಯಕರ್ತರು ಸ್ವಯಂಪ್ರೇರಿತರಾಗಿ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ಕಾರ್ಯಕ್ರಮಕ್ಕೆ ನನ್ನ ಒಪ್ಪಿಗೆ ಇದ್ದಿದ್ದರೆ ಜೆಡಿಎಸ್‌ನ ವರಿಷ್ಠ ಎಚ್‌.ಡಿ.ದೇವೇಗೌಡ, ಎಚ್‌.ಡಿ.ಕುಮಾರಸ್ವಾಮಿ ಭಾಗವಹಿಸುತ್ತಿದ್ದರು. ಕಾರ್ಯಕ್ರಮದ ಯಶಸ್ವಿಗೆ ಕಾರಣಕರ್ತರಾಗಿರುವ ಕಾರ್ಯಕರ್ತರಿಗೆ ಅಭಾರಿಯಾಗಿದ್ದೇನೆ’ ಎಂದರು.

ಕೆ.ಆರ್‌.ಪೇಟೆ ಶಾಸಕ ಎಚ್‌.ಟಿ.ಮಂಜು, ಮುಖಂಡರಾದ ಬಿ.ಆರ್‌. ರಾಮಚಂದ್ರು, ರಘುನಂದನ, ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಎಸ್‌.ಎ.ಮಲ್ಲೇಶ್, ನಾಗಮ್ಮ ಪುಟ್ಟರಾಜು ಇದ್ದರು.

‘ತಪ್ಪಿತಸ್ಥರ ಬಂಧನ ಶೀಘ್ರ’

ಪ್ರಜಾವಾಣಿ ವಾರ್ತೆ

ಮಧು ಬಂಗಾರಪ್ಪ

ಶಿವಮೊಗ್ಗ: ಬೆಂಗಳೂರಿನ ಹಲವು ಶಾಲೆಗಳಲ್ಲಿ ಬಾಂಬ್ ಇರಿಸಿರುವುದಾಗಿ ಬೆದರಿಕೆ ಇ–ಮೇಲ್ ಸಂದೇಶ ಕಳುಹಿಸಿರುವ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸರ್ಕಾರಕ್ಕೆ ವಿದ್ಯಾರ್ಥಿಗಳ ಸುರಕ್ಷತೆ ಮುಖ್ಯ. ಬೆದರಿಕೆ ಸಂದೇಶವನ್ನು ನಿರ್ಲಕ್ಷಿಸದೇ ತಕ್ಷಣ ತನಿಖೆಗೆ ಆಗ್ರಹಿಸಲಾಗಿದೆ’ ಎಂದರು.

‘ಹಿಂದೆ ಯಾವುದಾದರೂ ಒಂದು ಶಾಲೆಗೆ ಬೆದರಿಕೆ ಕರೆ ಬಂದಿದ್ದ ಉದಾಹರಣೆಗಳಿವೆ. ಈ ಬಾರಿ ಅನೇಕ ಶಾಲೆಗಳಿಗೆ ಸಂದೇಶ ಕಳುಹಿಸಲಾಗಿದೆ. ತನಿಖೆ ಪ್ರಗತಿಯಲ್ಲಿದೆ. ಶೀಘ್ರವೇ ತಪ್ಪಿತಸ್ಥರ ಬಂಧನವಾಗಲಿದೆ’ ಎಂದು ಅವರು ಹೇಳಿದರು.

ಪದೇ ಪದೇ ಶಾಲೆಗಳಿಗೆ ಬೆದರಿಕೆ

ಬೆಂಗಳೂರಿನಲ್ಲಿ ಪದೇ ಪದೇ ಶಾಲೆಗಳನ್ನೇ ಗುರಿಯಾಗಿಸಿ ಬಾಂಬ್ ಬೆದರಿಕೆ ಸಂದೇಶ ಕಳುಹಿಸುತ್ತಿರುವುದು ಪೋಷಕರಲ್ಲಿ ಆತಂಕ ಹೆಚ್ಚಿಸಿದೆ.

2022 ಜುಲೈ 29ರಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಡೆತನದ ರಾಜರಾಜೇಶ್ವರಿ ನಗರದಲ್ಲಿರುವ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್‌ಗೆ ಬಾಂಬ್ ಬೆದರಿಕೆ ಬಂದಿತ್ತು. ನಂತರ ತನಿಖೆ ನಡೆಸಿದ ಪೊಲೀಸರಿಗೆ ಅದೇ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಬೆದರಿಕೆ ಹಾಕಿದ್ದ ಎಂಬುದಾಗಿತ್ತು. ಆತನನ್ನು ವಶಕ್ಕೆ ಪಡೆಯಲಾಗಿತ್ತು.

2023 ಜನವರಿ 6ರಂದು ರಾಜಾಜಿನಗರದ ಎನ್‌ಪಿಎಸ್ ಶಾಲೆಗೆ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಈ ಮೇಲ್ ಮೂಲಕವೇ ಬೆದರಿಕೆ ಹಾಕಲಾಗಿತ್ತು. ‘ಶಾಲೆ ಆವರಣದಲ್ಲಿ ಜಿಲೆಟಿನ್ ಕಡ್ಡಿ ಇಟ್ಟು ಸ್ಫೋಟಿಸಲಾಗುವುದು’ ಎಂದು ಬೆದರಿಕೆ ಹಾಕಲಾಗಿತ್ತು.

ತನಿಖೆಗೆ ವಿಜಯೇಂದ್ರ ಆಗ್ರಹ

ಬೆಂಗಳೂರು: ಬೆಂಗಳೂರಿನ ಕೆಲವು ಶಾಲೆಗಳಿಗೆ ಬಾಂಬ್ ಬೆದರಿಕೆಯನ್ನು ಹುಸಿ ಎಂದು ಹಗುರವಾಗಿ ಪರಿಗಣಿಸದೇ ಸಮಗ್ರ ತನಿಖೆ ನಡೆಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ರಾಜ್ಯದಲ್ಲಿ ಸಮಾಜ ಕಂಟಕ ಶಕ್ತಿಗಳಿಗೆ ಪೊಲೀಸ್ ಭಯವೇ ಇಲ್ಲದಂತಾಗಿದೆ. ಇದರ ಪರಿಣಾಮವಾಗಿಯೇ ಕಿಡಿಗೇಡಿಗಳು ಬೆಂಗಳೂರಿನ ಕೆಲವು ಶಾಲೆಗಳಿಗೆ ಬಾಂಬ್ ಇಡಲಾಗಿದೆ ಎಂದು ಭಯದ ವಾತಾವರಣ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ಸಮಾಜಪೀಡಕ ಶಕ್ತಿಗಳು ಶಾಲೆಗಳನ್ನೇ ಗುರಿಯಾಗಿಸಿಕೊಂಡು ಬೆದರಿಕೆ ಒಡ್ಡಿದ್ದಾರೆ ಎಂದರೆ ಈ ಕುರಿತು ಗಂಭೀರ ತನಿಖೆ ನಡೆಸಬೇಕು ಮತ್ತು ಮುಂಜಾಗ್ರತೆ ವಹಿಸಬೇಕಾಗಿರುವುದು ಸರ್ಕಾರದ ಆದ್ಯತೆ ಆಗಬೇಕು. ರಾಜ್ಯದ ಪ್ರತಿಯೊಂದು ಶಾಲೆಗಳಿಗೂ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು, ಶಿಕ್ಷಕಕರು ಹಾಗೂ ಪೋಷಕರಿಗೆ ಆತಂಕ ರಹಿತ ವಾತಾವರಣ ಮೂಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

ಕೇಂದ್ರ ಸರ್ಕಾರಕ್ಕೆ ಪತ್ರ ಬರೆದ ಮುಖ್ಯಮಂತ್ರಿ

ಹಿಂಬಾಕಿ ಮತ್ತು ಅದನ್ನು ರಾಜ್ಯಗಳ ಮಧ್ಯೆ ಹಂಚಿಕೆ ಮಾಡುವಲ್ಲಿ ಅನುಸರಿಸುತ್ತಿರುವ ಸೂತ್ರದ ಕುರಿತು ಪಾರದರ್ಶಕವಾಗಿ ಮಾಹಿತಿ ಹಂಚಿಕೊಳ್ಳಲು ಆಗ್ರಹ

ಐಜಿಎಸ್‌ಟಿ ಹಿಂಬಾಕಿ ಕಡಿತ ಸಿದ್ದರಾಮಯ್ಯ ಆಕ್ಷೇಪ

ಬೆಂಗಳೂರು: ಎರಡು ರಾಜ್ಯಗಳ ಮಧ್ಯೆ ನಡೆಯುವ ಸರಕು ಮತ್ತು ಸೇವೆಗಳ ವಹಿವಾಟಿಗೆ ವಿಧಿಸುವ ಸಮಗ್ರ ಸರಕು ಮತ್ತು ಸೇವಾ ತೆರಿಗೆ (ಐಜಿಎಸ್‌ಟಿ) ಹಿಂಬಾಕಿ ಕಡಿತಕ್ಕೆ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ವಿಧಾನ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಶುಕ್ರವಾರ ಪತ್ರ ಬರೆದಿರುವ ಮುಖ್ಯಮಂತ್ರಿ, 'ರಾಜ್ಯಕ್ಕೆ ಮುಂಗಡವಾಗಿ ಪಾವತಿಸಿದ್ದ ಐಜಿಎಸ್‌ಟಿಯಲ್ಲಿ ಹಿಂಬಾಕಿ ಇದೆ ಎಂಬ ಕಾರಣ ನೀಡಿ 2022ರ ಡಿಸೆಂಬರ್ 26ರಂದು ₹ 798.03 ಕೋಟಿಯನ್ನು ಮರುಹೊಂದಾಣಿಕೆ ಮಾಡಿಕೊಳ್ಳಲಾಗಿತ್ತು. ಈ ರೀತಿ ರಾಜ್ಯಕ್ಕೆ ಸಂದಾಯವಾಗಬೇಕಾದ ತೆರಿಗೆ ಪಾಲನ್ನು ಬಾಕಿ ಹೆಸರಿನಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದರಿಂದ ರಾಜ್ಯಗಳು ಆರ್ಥಿಕವಾಗಿ ಸಮಸ್ಯೆಗೆ ಸಿಲುಕುತ್ತವೆ' ಎಂದಿದ್ದಾರೆ.

₹34,000 ಕೋಟಿಗಳಷ್ಟು ಮೊತ್ತದ ಐಜಿಎಸ್‌ಟಿ ಹಿಂಬಾಕಿ ಇದೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. 'ಇಷ್ಟೊಂದು ದೊಡ್ಡ ಮೊತ್ತದ ಹಿಂಬಾಕಿ ಉಳಿಯಲು ಕಾರಣಗಳೇನು? ಈ ರೀತಿ ಬೃಹತ್ ಮೊತ್ತದ ಹಿಂಬಾಕಿಯು ರಾಜ್ಯ ಸರ್ಕಾರಗಳ ಹಣಕಾಸು ನಿರ್ವಹಣೆಯ ಮೇಲೆ ಬೀರಬಹುದಾದ ಪರಿಣಾಮಗಳ ಕುರಿತು ಕಳವಳ ಮೂಡಿಸಿದೆ' ಎಂದು ಹೇಳಿದ್ದಾರೆ.

'ಹಿಂಬಾಕಿಯನ್ನು ಒಂದೇ ಕಂತಿನಲ್ಲಿ ಕಡಿತ ಮಾಡಿಕೊಳ್ಳುವುದರಿಂದ ಆರ್ಥಿಕ ಸಮಸ್ಯೆಗಳು ಉದ್ಭವವಾಗುತ್ತವೆ. ಆದ್ದರಿಂದ ಹಿಂಬಾಕಿಯನ್ನು ಕಂತುಗಳಲ್ಲಿ ಮರುಭರಿಸಲು ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿದ್ದಾರೆ.

371(ಜೆ) ಅನುಷ್ಠಾನಕ್ಕೆ 10 ವರ್ಷ: ಸಾಕಾರಗೊಳ್ಳದ ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಮಹಾಕನಸು

'ಕಲ್ಯಾಣ'ದ ಕೈತಪ್ಪಿದ ₹3,544 ಕೋಟಿ

● ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಪ್ರಾದೇಶಿಕ ಅಸಮಾನತೆ ನಿವಾರಣೆಗಾಗಿ ಎರಡೂವರೆ ದಶಕ ಹೋರಾಟ ಮಾಡಿ ಗಳಿಸಿದ 371(ಜೆ) ವಿಶೇಷ ಸ್ಥಾನಕ್ಕೆ 10 ವರ್ಷಗಳು ತುಂಬಿವೆ. ಈ ಅವಧಿಯಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವು 'ಕಲ್ಯಾಣ'ದ ಆಶಯಗಳನ್ನು ನಿರೀಕ್ಷಿತ ಮಟ್ಟದಲ್ಲಿ ಸಾಕಾರಗೊಳಿಸಿಲ್ಲ.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ನೀಡಿದ ಅಂಕಿ-ಅಂಶಗಳ ಪ್ರಕಾರ, ರಾಜ್ಯ ಸರ್ಕಾರವು 371(ಜೆ) ಅಡಿ ಕಳೆದ 10 ವರ್ಷಗಳಲ್ಲಿ ಮಂಡಳಿಗೆ ₹11,878 ಕೋಟಿ ನಿಗದಿಪಡಿಸಿತ್ತು. ಇದರಲ್ಲಿ ₹10,228 ಕೋಟಿ ಬಿಡುಗಡೆಯಾಗಿದ್ದು, ₹8,333 ಕೋಟಿ ಮಾತ್ರ ಖರ್ಚಾಗಿದೆ. ₹1,649.53 ಕೋಟಿ ಅನುದಾನವು ಬಿಡುಗಡೆ ಆಗಲಿಲ್ಲ. ನಿಗದಿ ಪಡಿಸಿದ ಒಟ್ಟು ಅನುದಾನ ಹಾಗೂ ಕಾಮಗಾರಿಗಳಿಗೆ ಮಾಡಿದ ವೆಚ್ಚವನ್ನು ಪರಿಗಣಿಸಿ ತೆಗೆದುಕೊಂಡಾಗ ₹3,544.96 ಕೋಟಿ 'ಕಲ್ಯಾಣ'ದಿಂದ ಕೈತಪ್ಪಿದೆ.

ಪ್ರಸಕ್ತ 2023-2024ನೇ ಸಾಲಿಗೆ ₹5,000 ಕೋಟಿ ಅನುದಾನ ಘೋಷಣೆಯಾಗಿದೆ. ಆದರೆ, ಕೇವಲ ₹3,000 ಕೋಟಿಗೆ ಕ್ರಿಯಾಯೋಜನೆ ರೂಪಿಸಲಾಗಿದೆ.

'ಕಲ್ಯಾಣ'ದ ಜಿಲ್ಲೆಗಳ ಮಹಾಕನಸು ನನಸಾಗಿಲ್ಲ. ಕಲ್ಯಾಣ ಕರ್ನಾಟಕವೆಂದು ಹೊಸ ಹೆಸರು ಇರಿಸಿ ನಾಲ್ಕು ವರ್ಷಗಳು ಉರುಳಿದರೂ ಕಲ್ಯಾಣವೇನೂ ಆಗಿಲ್ಲ. ಎರಡೂವರೆ ದಶಕ ಮನೆ-ಮಠ ಬಿಟ್ಟು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಬದಿಗೆ ಇರಿಸಿ, ಪಕ್ಷಾತೀತವಾಗಿ ಹೋರಾಟ ಮಾಡಿದ್ದೇವೆ. ನಮ್ಮ ಉದ್ದೇಶಗಳು ಈಡೇರಲಿಲ್ಲ ಎಂಬ ಬೇಸರ ಹೋರಾಟಗಾರರದ್ದು.

ರಾಷ್ಟ್ರ ಮಟ್ಟದಲ್ಲಿ ಅಭಿವೃದ್ಧಿಯ ಮಾನದಂಡದಲ್ಲಿ ಗುರುತಿಸಿಕೊಳ್ಳಲು ಬಡತನ ನಿವಾರಣೆ, ಗ್ರಾಮೀಣ ಭಾಗದಲ್ಲಿನ ಆರೋಗ್ಯ, ಸ್ವಚ್ಛ ಕುಡಿಯುವ ನೀರು ಮತ್ತು ನೈರ್ಮಲ್ಯ ಬಹುಮುಖ್ಯವಾದ ಅಂಶಗಳಾಗುತ್ತವೆ. ಸಾವಿರಾರು ಕೋಟಿ ರೂಪಾಯಿ ನೀರಿನಂತೆ ಹರಿಸುತ್ತಿದ್ದರೂ 'ಕಲ್ಯಾಣ'ದ ಜಿಲ್ಲೆಗಳು ಬಡತನ, ಸಾಮಾಜಿಕ ಅಭಿವೃದ್ಧಿಯ ರಾಷ್ಟ್ರೀಯ ಸೂಚ್ಯಂಕಗಳಲ್ಲಿ ಕಳಪೆ ಅಂಕ ಪಡೆಯುತ್ತಿರುವುದು ಬೇಸರದ ಸಂಗತಿ. 371(ಜೆ) ಅನುದಾನ ಎಲ್ಲಿಗೆ ಹೋಗುತ್ತಿದೆ? ನಿಗದಿಪಡಿಸಿದಷ್ಟು ಅನುದಾನ ಏಕೆ ಬರುತ್ತಿಲ್ಲ ಎಂಬುದು ಆರ್ಥಿಕ ತಜ್ಞರ ಪ್ರಶ್ನೆ.

ಆರ್ಥಿಕ ಇಲಾಖೆಯು ಬಜೆಟ್ ಘೋಷಣೆಗೆ ಒಂದು ತಿಂಗಳು ಇರುವಾಗ ಕ್ರಿಯಾ ಯೋಜನೆ ಕೇಳುತ್ತದೆ. ಅನಿವಾರ್ಯವಾಗಿ ಆತುರದಲ್ಲಿ ಕ್ರಿಯಾ ಯೋಜನೆಗಳನ್ನು ತಯಾರಿಸಲಾಗುತ್ತದೆ. ಸರ್ಕಾರ ಸಹ ಡಿಸೆಂಬರ್ ತಿಂಗಳಲ್ಲಿ ಅನುದಾನ ಬಿಡುಗಡೆ ಮಾಡುತ್ತದೆ. ಹೀಗಾಗಿ, ಅನುದಾನ ಖರ್ಚಿಗೆ ಹಿನ್ನಡೆ ಆಗುತ್ತಿದೆ ಎಂಬುದು ಅಧಿಕಾರಿಗಳ ವಾದ.

'ಪರಿಣತರ ಮೂರು ಸಮಿತಿ ರಚಿಸಿ'

'ಅನುದಾನದ ಪಾರದರ್ಶಕ ಬಳಕೆ ಮತ್ತು ಯೋಜನೆಗಳ ಗುಣಮಟ್ಟ ಕಾಯ್ದುಕೊಳ್ಳಲು ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದಂತಹ ಮೂರು ಸಮಿತಿಗಳನ್ನು ರಚಿಸಬೇಕು. ನಿಯಮಿತವಾಗಿ ಬಜೆಟ್ ಬರುವಂತೆ ನೋಡಿಕೊಂಡು ಯಾವುದಕ್ಕೆ ಎಷ್ಟು ಅನುದಾನ ಬಳಸಬೇಕು ಎಂಬುದನ್ನು ಕ್ಷೇತ್ರವಾರು ಪರಿಣತರು ನಿರ್ಧರಿಸಬೇಕು' ಎಂದು ಅರ್ಥಿಕ ತಜ್ಞೆ ಸಂಗೀತಾ ಕಟ್ಟಿಮನಿ 'ಪ್ರಜಾವಾಣಿ'ಗೆ ಹೇಳಿದರು.

'ಪ್ರೌಢಶಾಲಾ ಕೊರತೆ, ರಕ್ತಹೀನತೆ, ಶೌಚಾಲಯ, ಶುದ್ಧ ಕುಡಿಯುವ ನೀರಿನ ಕೊರತೆ ಇರುವ ಗ್ರಾಮಗಳನ್ನು ಪತ್ತೆಹಚ್ಚಿ ಅನುದಾನ ನೀಡಬೇಕು. ಕಾಮಗಾರಿ ನಿಗದಿತ ಸಮಯದ ಚೌಕಟ್ಟು ಹಾಗೂ ಯೋಜನ ಬದ್ಧವಾಗಿ ಹಣ ಬಳಸಬೇಕು' ಎಂದು ಸಲಹೆ ನೀಡಿದರು.

'ಕ್ರಿಯಾಯೋಜನೆ ತಯಾರಿಸಿ'

'ಮಂಡಳಿಯು ದೀರ್ಘಾವಧಿಯ ಮುಂದಾಲೋಚನೆ ಇರಿಸಿಕೊಂಡು 5 ವರ್ಷಗಳ ಗುರಿ ಹಾಕಿಕೊಂಡು ₹30 ಸಾವಿರ ಕೋಟಿ ವೆಚ್ಚದ ಕ್ರಿಯಾ ಯೋಜನೆಗಳನ್ನು ರೂಪಿಸಬೇಕು' ಎಂದು ಕಲ್ಯಾಣ ಕರ್ನಾಟಕ ಜನಪರ ಸಂಘರ್ಷ ಸಮಿತಿ ಸಂಸ್ಥಾಪಕ ಅಧ್ಯಕ್ಷ ಲಕ್ಷ್ಮಣ ದಸ್ತಿ ಒತ್ತಾಯಿಸಿದರು.

'ಅತ್ಯಂತ ಹಿಂದುಳಿದ ತಾಲ್ಲೂಕು, ಮೂಲಸೌಕರ್ಯ ವಂಚಿತ ಗ್ರಾಮಗಳ ಪಟ್ಟಿ ತಯಾರಿಸಬೇಕು. ಕೃಷಿ ಮತ್ತು ಕೃಷಿಯೇತರ, ಪ್ರೋತ್ಸಾಹದ ಸಹಿತ ಕೌಶಲ ತರಬೇತಿ ಕೊಡಬೇಕು. ಕೇಂದ್ರ ಸರ್ಕಾರ ಒಂದು ಬಾರಿ ಅನುದಾನ ಕೊಡಬೇಕು. ಕಂದಾಯ ಇಲಾಖೆಯ ಒಂದು ವಿಭಾಗ ತೆರೆದು ಅಲ್ಲಿಯೇ 371(ಜೆ)ಗೆ ಸಂಬಂಧಿಸಿದ ಎಲ್ಲ ಮಾಹಿತಿ ಸಿಗುವಂತೆ ಮಾಡಬೇಕು' ಎಂದರು.

ಕೆಕೆಆರ್‌ಡಿಬಿಗೆ ಬಿಡುಗಡೆಯಾದ ಅನುದಾನ

ವರ್ಷ	ನಿಗದಿ	ಬಿಡುಗಡೆ	ಖರ್ಚು
	(₹ ಕೋಟಿಗಳಲ್ಲಿ)		
2013-14	153.50	78.97	26.66
2014-15	600	300	322.59
2015-16	1,000	750	493.66
2016-17	1,000	750	960
2017-18	1,000	800	450.32
2018-19	1,000	1,000	1,193.54
2019-20	1,500	1,125	1,246.81
2020-21	1,131.86	1,031.86	925.81
2021-22	1,492.97	1,492.97	1,129.66
2022-23	3,000	2,900	1,584.30
ಒಟ್ಟು	11,878.33	10,228	8,333.35

'ಪಿಯು ಶಿಕ್ಷಣದ ಅಸ್ಮಿತೆ ಉಳಿಸಿ'

ಇಲಾಖೆಗಳ ವಿಲೀನ: ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆಯ ಉಳಿವಿಗೆ ಒತ್ತಾಯಿಸಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಸಮರ್ಪಕ ಕಾಯ್ದೆಗಳು ಇರುವಾಗ ಸುತ್ತೋಲೆಗಳ ಮುಖಾಂತರ ಇಲಾಖೆಗಳನ್ನು ವಿಲೀನಗೊಳಿಸುವುದು ಕಾನೂನು ಬಾಹಿರ. ಪ್ರಜಾಸತ್ತಾತ್ಮಕ ಹೋರಾಟಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಹಂತದ ಉಪನಿರ್ದೇಶಕರ ಕಚೇರಿಯ ದೈನಂದಿನ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಯನ್ನು ಜಿಲ್ಲಾ ಪಂಚಾಯತಿ ಸಿಇಒಗೆ ನೀಡಿರುವ ಸುತ್ತೋಲೆ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಇಲಾಖೆಯ ಘನತೆ ಹಾಗೂ ಪರೀಕ್ಷೆಯ ಪಾವಿತ್ರ್ಯತೆಯ ಕಾರಣಕ್ಕಾಗಿ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯನ್ನೇ ಪದವಿಪೂರ್ವ ಶಿಕ್ಷಣ ಇಲಾಖೆಗೆ ಮರು ಸೇರ್ಪಡೆ ಮಾಡಬೇಕು. ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆ ಬದಲು ಹಿಂದೆ ಇದ್ದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ಎಂದು ಬದಲಿಸಬೇಕು ಎಂದು ಒತ್ತಾಯಿಸಿದರು.

ಮೂರು ಪರೀಕ್ಷೆ ನಡೆಸುವುದರಿಂದ ಉಪನ್ಯಾಸಕರಿಗೆ ರಜೆಗಳೇ ಸಿಗುವುದಿಲ್ಲ. ನಿರಂತರ ಕೆಲಸದಿಂದ ಮಾನಸಿಕ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಇದೆ. ಇದರಿಂದ ಪಾಠಗಳ ಗುಣಮಟ್ಟ ಕುಸಿಯುವ ಆತಂಕ ತಲೆದೋರಲಿದೆ. ಮೂರು ಪರೀಕ್ಷೆಗಳ ಬದಲು ಹಿಂದೆ ಇದ್ದಂತೆ ಮುಖ್ಯ ಪರೀಕ್ಷೆ ಹಾಗೂ ಪೂರಕ ಪರೀಕ್ಷೆ ನಡೆಸಬೇಕು. ಇಲ್ಲವೇ, ಪದವಿಪೂರ್ವ ಶಿಕ್ಷಣವನ್ನು ರಜೆ ರಹಿತ ಇಲಾಖೆ ಎಂದು ಘೋಷಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರವು ಶೈಕ್ಷಣಿಕ ನೀತಿ-ನಿರ್ಣಯ ಕೈಗೊಳ್ಳುವುದಕ್ಕಾಗಿ ಶಿಕ್ಷಕರ ಸಂಘಟನೆಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಬುದ್ಧಿಜೀವಿಗಳು, ಪೋಷಕರ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡ 'ಶೈಕ್ಷಣಿಕ ಸಮಿತಿ' ರಚಿಸಬೇಕು. ಶೈಕ್ಷಣಿಕ ಎಲ್ಲಾ ವಿಚಾರಗಳ ಸಾಧಕ-ಬಾಧಕಗಳನ್ನು ಕುರಿತು ಚರ್ಚೆ, ಸಮಾಲೋಚನೆ ನಡೆಸಿದ ನಂತರವೇ ತೀರ್ಮಾನ ಕೈಗೊಳ್ಳುವಂತೆ ನಿಯಮ ರೂಪಿಸಬೇಕು ಎಂದು ಒತ್ತಾಯಿಸಿದರು.

ಪ್ರಾಂಶುಪಾಲರ ಸಂಘ, ಉಪನ್ಯಾಸಕರ ಸಂಘ, ಬೋಧಕೇತರ ನೌಕರರ ಸಂಘದ ಒಕ್ಕೂಟಗಳ ಸಹಯೋಗದಲ್ಲಿ ನಡೆದ ಪ್ರತಿಭಟನೆಯಲ್ಲಿ, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, ಸಾಹಿತಿ ಬಂಜಗೆರೆ ಜಯಪ್ರಕಾಶ್, ಪ್ರಾಂಶುಪಾಲರ ಸಂಘದ ಅಧ್ಯಕ್ಷ ಕೆ.ಟಿ. ಶ್ರೀಕಂಠೇಗೌಡ, ವಿಧಾನ ಪರಿಷತ್ ಸದಸ್ಯರಾದ ಎಸ್.ಎಲ್.ಬೋಜೇಗೌಡ, ಮರಿತಿಬ್ಬೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಶರಣಪ್ಪ ಮಟ್ಟೂರ್, ಅರುಣ್ ಶಹಾಪೂರ, ಉಪನ್ಯಾಸಕರ ಸಂಘದ ಗೌರವಾಧ್ಯಕ್ಷರಾದ ತಿಮ್ಮಯ್ಯಪುರ್ಲೆ, ಉಪನ್ಯಾಸಕರ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್, ಬೋಧಕೇತರ ಸಂಘದ ಅಧ್ಯಕ್ಷ ನಂದೀಶ್ ಕುಮಾರ್ ಭಾಗವಹಿಸಿದ್ದರು.

ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

'ಸಿದ್ದರಾಮಯ್ಯಗೆ ಮೊದಲಿದ್ದ ಸ್ವಾತಂತ್ರ್ಯ ಈಗ ಇದ್ದಂತಿಲ್ಲ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಸಿದ್ದರಾಮಯ್ಯ ಅವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಅವಧಿ ಸುವರ್ಣಯುಗವಾಗಿತ್ತು. ಆಗಿನ ಸ್ವಾತಂತ್ರ್ಯ ಈಗ ಇದ್ದಂತಿಲ್ಲ' ಎಂದು ಮಾಜಿ ಸಚಿವ ಎಚ್. ಆಂಜನೇಯ ಹೇಳಿದರು.

ನಗರದಲ್ಲಿ ಶುಕ್ರವಾರ ನಡೆದ ಗವಿಮಾರ್ಗ ಪುಸ್ತಕ ಬಿಡುಗಡೆ, ವಿ.ಪಿ. ಸಿಂಗ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ, 'ಮಂಡಲ್ ವರದಿ ಆಗಿದ್ದೇನು?' ವಿಚಾರ ಸಂಕಿರಣದಲ್ಲಿ ಮಾತನಾಡಿದರು.

'ಆ ಅವಧಿಯಲ್ಲಿ ಕ್ರಾಂತಿಕಾರಕ ಕೆಲಸಗಳು ಆಗಿದ್ದವು. ಈ ಬಾರಿ ಅಂಥ ಸ್ವಾತಂತ್ರ್ಯ ಅವರಿಗೆ ಇಲ್ಲ ಎಂದನ್ನಿಸುತ್ತಿದೆ. ಶಾಸಕರ ಒತ್ತಡವೂ ಸೇರಿ ಬೇರೆ ವಿಚಾರಗಳು ಇದಕ್ಕೆ ಕಾರಣ ಇರಬೇಕು' ಎಂದರು.

ಆಂಜನೇಯ 'ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಿ ಕಾಂತರಾಜ ವರದಿ ಸಿದ್ಧಪಡಿಸಲಾಗಿದೆ. ಆ ಜಾತಿಯವರನ್ನು ಹೆಚ್ಚು ಸೇರಿಸಿದ್ದಾರೆ, ಈ ಜಾತಿಯವರನ್ನು ಕಡಿಮೆ ಮಾಡಿದ್ದಾರೆ ಎಂದೆಲ್ಲ ಸುಳ್ಳು ಸುದ್ದಿಯನ್ನೇ ಹರಡಿ ವರದಿ ಸ್ವೀಕರಿಸಲೂ ಬಿಟ್ಟಿಲ್ಲ. ಕಾಂತರಾಜ ವರದಿಯಂತೆ ಸದಾಶಿವ ಆಯೋಗದ ವರದಿಯೂ ನನೆಗುದಿಗೆ ಬಿದ್ದಿದೆ' ಎಂದು ಅವರು ಹೇಳಿದರು.

ಸಂಕ್ಷಿಪ್ತ ಸುದ್ದಿ

ಭ್ರೂಣ ಹತ್ಯೆ: ಇಬ್ಬರು ಅಧಿಕಾರಿಗಳ ಅಮಾನತು

ಬೆಂಗಳೂರು: ಮೈಸೂರಿನ ಮಾತಾ ನರ್ಸಿಂಗ್ ಹೋಂನಲ್ಲಿ ಹೆಣ್ಣು ಭ್ರೂಣ ಹತ್ಯೆಗಳನ್ನು ತಡೆಯುವಲ್ಲಿ ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ಮೈಸೂರಿನ ಹಿಂದಿನ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪಿ. ರವಿ ಮತ್ತು ಮೈಸೂರು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ರಾಜೇಶ್ವರಿ ಅವರನ್ನು ಆರೋಗ್ಯ ಇಲಾಖೆ ಅಮಾನತುಗೊಳಿಸಿದೆ.

ಈ ಅಧಿಕಾರಿಗಳು ಸರಿಯಾಗಿ ಮೇಲ್ವಿಚಾರಣೆ ನಡೆಸದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಆರೋಗ್ಯ ಇಲಾಖೆ ಯೋಜನಾ ನಿರ್ದೇಶಕರು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ವರದಿ ನೀಡಿದ್ದಾರೆ ಎಂದು ಅಮಾನತು ಆದೇಶ ತಿಳಿಸಿದೆ.

ಡಾ. ರವಿ ಅವರು 2020 ರ ಸೆಪ್ಟೆಂಬರ್ 1 ರಿಂದ 2023 ರ ಆಗಸ್ಟ್ 11 ರವರೆಗೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ಈ ಆಸ್ಪತ್ರೆಯಲ್ಲಿ ಮೇಲ್ವಿಚಾರಣೆ ನಡೆಸಿ ಪರಿಶೀಲನಾ ಅಂಶಗಳನ್ನು ಅಂತರ್‌ಜಾಲ ಪುಟದಲ್ಲಿ ಮಾಹಿತಿಯನ್ನು ದಾಖಲಿಸದೇ ಲೋಪ ಎಸಗಿದ್ದಾರೆ.

ಡಾ. ರಾಜೇಶ್ವರಿ ಅವರು ಈ ಆಸ್ಪತ್ರೆಯು ಕೆಪಿಎಂಇಎ ಕಾಯ್ದೆಯಡಿ ನೋಂದಣಿಯಾದ ಬಗ್ಗೆ ಪರಿಶೀಲಿಸದೇ, ಮೇಲ್ವಿಚಾರಣೆ ನಡೆಸದೇ ಇಂತಹ ಪ್ರಕರಣಗಳು ನಡೆಯಲು ಅವಕಾಶ ನೀಡಿರುವುದು ಮತ್ತು ಹಳೇ ದಿನಾಂಕವನ್ನು ನಮೂದಿಸಿ ಇತ್ತೀಚೆಗೆ ನೋಟಿಸ್ ಅಂಟಿಸಿರುವುದು ಇಲಾಖೆಗೆ ಮುಜುಗರ ಉಂಟು ಮಾಡಿದೆ ಎಂದು ಆದೇಶ ಹೇಳಿದೆ.

ಜಾರಕಿಹೊಳಿ ಸಿ.ಡಿ ಪ್ರಕರಣ: ವಾದಾಂಶ ಸಲ್ಲಿಕೆಗೆ ಕೊನೆ ಅವಕಾಶ

ಬೆಂಗಳೂರು: ಶಾಸಕ ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಲಿಖಿತ ವಾದಾಂಶ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಕೊನೆಯದಾಗಿ ಎರಡು ವಾರಗಳ ಕಾಲಾವಕಾಶ ನೀಡಿದೆ.

ಎಸ್‌ಐಟಿ ರಚನೆಯ ಸಿಂಧುತ್ವ ಪ್ರಶ್ನಿಸಿ ಸಂತ್ರಸ್ತೆ ಹಾಗೂ ಇತರರು ಸಲ್ಲಿಸಿರುವ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಸದನದಲ್ಲಿ ಜಂಟಿ ಹೋರಾಟ ಅಶೋಕ–ಎಚ್‌ಡಿಕೆ ನಿರ್ಧಾರ

ಬೆಂಗಳೂರು: ಬೆಳಗಾವಿಯಲ್ಲಿ ನಡೆಯುವ ವಿಧಾನಮಂಡಲದ ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಎಲ್ಲ ವಿಷಯಗಳಲ್ಲೂ ಜಂಟಿಯಾಗಿ ಹೋರಾಟ ನಡೆಸಲು ಬಿಜೆಪಿ ಮತ್ತು ಜೆಡಿಎಸ್ ತೀರ್ಮಾನಿಸಿವೆ.

ಈ ಸಂಬಂಧ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಶುಕ್ರವಾರ ಅನೌಪಚಾರಿಕವಾಗಿ ಸಭೆ ನಡೆಸಿ, ಈ ಕುರಿತು ಚರ್ಚೆ ನಡೆಸಿದರು.

ಬರ ಮತ್ತು ರೈತರಿಗೆ ಪರಿಹಾರ ನೀಡದೇ ಕಾಲ ಹರಣ ಮಾಡುತ್ತಿರುವ ಸರ್ಕಾರದ ವಿರುದ್ಧ ನಿಲುವಳಿ ಸೂಚನೆ ಮಂಡಿಸಲಾಗುವುದು. ಅಲ್ಲದೇ, ಈ ಸರ್ಕಾರದ ಹಲವು ಹಗರಣಗಳ ಬಗ್ಗೆಯೂ ವಿಧಾನ-ಮಂಡಲದಲ್ಲಿ ಪ್ರಸ್ತಾಪಿಸಲಾಗುವುದು ಎಂದು ಬಿಜೆಪಿ ಮೂಲಗಳು ತಿಳಿಸಿವೆ. ಕೆಲವು ವಿಷಯಗಳನ್ನು ಜೆಡಿಎಸ್ ಹಾಗೂ ಮತ್ತೆ ಕೆಲವು ವಿಷಯಗಳನ್ನು ಬಿಜೆಪಿ ಪ್ರಸ್ತಾಪಿಸುತ್ತದೆ. ಪರಸ್ಪರ ಸಹಕಾರದ ಮೂಲಕ ಸರ್ಕಾರವನ್ನು ಕಟ್ಟಿ ಹಾಕುವ ಕೆಲಸ ಮಾಡಲಾಗುವುದು. ಅಧಿವೇಶನ ಆರಂಭವಾದ ಮೇಲೆ ಎರಡೂ ಪಕ್ಷಗಳ ಶಾಸಕರ ಜಂಟಿ ಸಭೆ ಕರೆಯುವ ಆಲೋಚನೆಯೂ ಇದೆ ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದರು.

ಬಿಜೆಪಿಯಿಂದ ಅನ್ಯಪಕ್ಷಕ್ಕೆ ಸೇರಿದವರ ಘರ್‌ವಾಪ್ಸಿಗೆ ಯತ್ನ

'ಪಕ್ಷ ತೊರೆದವರೇ ವಾಪಸ್ ಬನ್ನಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆ ವೇಳೆಯಲ್ಲಿ ಪಕ್ಷ ತೊರೆದು ಹೋದವರನ್ನು ಮರಳಿ ಪಕ್ಷಕ್ಕೆ ಕರೆತರುವ ಬಗ್ಗೆ ಬಿಜೆಪಿಯಲ್ಲಿ ಮೊದಲ ಹಂತದ ಚರ್ಚೆ ಶುರುವಾಗಿದೆ.

ಚುನಾವಣೆಯಲ್ಲಿ ಟಿಕೆಟ್ ಸಿಗದ ಕಾರಣ ಬೇಸರಗೊಂಡು, ಪಕ್ಷ ತೊರೆದು ಹಲವರು ಕಾಂಗ್ರೆಸ್ ಮತ್ತು ಜೆಡಿಎಸ್ ಸೇರಿದರು. ಆ ಪೈಕಿ ವಿಧಾನಪರಿಷತ್ ಸದಸ್ಯ ಜಗದೀಶ ಶೆಟ್ಟರ್ ಮತ್ತು ಶಾಸಕ ಲಕ್ಷ್ಮಣ ಸವದಿ ಪ್ರಮುಖರು. ಗಾಲಿ ಜನಾರ್ದನ ರೆಡ್ಡಿ ಚುನಾವಣೆಗೂ ಮೊದಲೇ ಪ್ರತ್ಯೇಕ ಪಕ್ಷ ಹುಟ್ಟು ಹಾಕಿ ಚುನಾವಣೆಯಲ್ಲಿ ಗೆದ್ದು ಶಾಸಕರಾದರು.

ಇನ್ನೂ ಕೆಲವರಿಗೆ ಟಿಕೆಟ್ ಸಿಗದೇ ಅಸಮಾಧಾನಗೊಂಡಿದ್ದರೂ ಪಕ್ಷ ಬಿಡಲಿಲ್ಲ. ವರಿಷ್ಠರ ಹೊಸ ಪ್ರಯೋಗ ವಿಫಲವಾದ ಬೆನ್ನಲ್ಲೇ ಬಿಜೆಪಿಯನ್ನು ಇನ್ನಷ್ಟು ದುರ್ಬಲಗೊಳಿಸಲು ಬಿಜೆಪಿಯ ಕೆಲ ನಾಯಕರನ್ನು ಕಾಂಗ್ರೆಸ್ ತೆಕ್ಕೆಗೆ ತರಲು ಡಿ.ಕೆ.ಶಿವಕುಮಾರ್ ಕಾರ್ಯಾಚರಣೆಗೆ ಇಳಿದರು. ಜಗದೀಶ ಶೆಟ್ಟರ್ ಅವರ ಮೂಲಕವೇ ಆ ಕಾರ್ಯತಂತ್ರವನ್ನು ಕಾರ್ಯಗತಗೊಳಿಸುತ್ತಿದ್ದಾರೆ. ಈ ಮಧ್ಯೆ ಬಿಜೆಪಿ ನಾಯಕ ಕೆ.ಎಸ್.ಈಶ್ವರಪ್ಪ ಅವರು, 'ಸ್ವಲ್ಪ ದಿನದಲ್ಲೇ ಜಗದೀಶ ಶೆಟ್ಟರ್ ಬಿಜೆಪಿಗೆ ಬರಲಿದ್ದಾರೆ' ಎಂದು ಹೇಳಿಕೆ ನೀಡಿರುವುದು ಬಿಜೆಪಿ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

> **ಪಕ್ಷ ಬಿಟ್ಟು ಹೋದವರನ್ನು ಮತ್ತೆ ಪಕ್ಷಕ್ಕೆ ಕರೆ ತರಬೇಕು ಎಂಬ ಚರ್ಚೆ ನಡೆದಿದೆ. ಲೋಕಸಭೆ ಚುನಾವಣೆ ಹತ್ತಿರ ಬಂದಾಗ ಆ ಬೆಳವಣಿಗೆಗಳು ಆಗುವ ಸಾಧ್ಯತೆ ಇದೆ**
> **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಬಿ.ವೈ.ವಿಜಯೇಂದ್ರ ಸಾರಥ್ಯ ವಹಿಸಿಕೊಂಡ ಬಳಿಕ ಪಕ್ಷವನ್ನು ಬಲಪಡಿಸಲು ಮೂರು ಪ್ರಮುಖ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದಾರೆ. ಬೂತ್ ಮಟ್ಟದ ಕಾರ್ಯಕರ್ತರ ಮನೆಗಳಿಗೆ ಭೇಟಿ, ಅಸಮಾಧಾನಗೊಂಡಿರುವ ನಾಯಕರ ಮನವೊಲಿಕೆ ಹಾಗೂ ಪಕ್ಷ ಬಿಟ್ಟು ಹೋದವರನ್ನು ಮರಳಿ ಪಕ್ಷಕ್ಕೆ ಕರೆತರುವುದು.

ಅಸಮಾಧಾನಗೊಂಡಿರುವ ನಾಯಕರನ್ನು ವಿಜಯೇಂದ್ರ ಅವರೇ ಭೇಟಿ ಮಾಡಿ ಮಾತುಕತೆ ನಡೆಸುತ್ತಿದ್ದಾರೆ. ಇವರಲ್ಲಿ ಕೆಲವರು ಮೃದುವಾಗಿದ್ದಾರೆ. ಆದರೆ, ವಿ.ಸೋಮಣ್ಣ, ಅರವಿಂದ ಲಿಂಬಾವಳಿ ಮತ್ತು ಬಸನಗೌಡ ಪಾಟೀಲ ಯತ್ನಾಳ ಅವರು ಕಠೋರ ನಿಲುವು ತಾಳಿರುವುದರಿಂದ, ಅವರನ್ನು ಒಪ್ಪಿಸಬಹುದಾದ ವ್ಯಕ್ತಿಗಳಿಗೆ ಆ ಕೆಲಸ ವಹಿಸಲಾಗಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿರುವ ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಅವರಿಗೆ ಅನ್ಯಾಯ ಆಗಿದ್ದರಿಂದಲೇ ನೊಂದು ಬಿಟ್ಟು ಹೋಗಿದ್ದಾರೆ. ಹೀಗಾಗಿ ಅವರನ್ನು ಮತ್ತೆ ಕರೆ ತಂದರೆ ಪಕ್ಷಕ್ಕೆ ಒಳಿತು ಎಂದು ಬಿಜೆಪಿಯ ಒಂದು ಬಣ ವಾದಿಸುತ್ತಿದೆ. ಇನ್ನೊಂದು ಬಣ ಪಕ್ಷ ಬಿಟ್ಟವರನ್ನು ಮತ್ತೆ ಕರೆತರುವುದು ಬೇಡ ಎಂಬ ನಿಲುವು ಹೊಂದಿದೆ ಎಂದು ಬಿಜೆಪಿಯ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಶೆಟ್ಟರ್ ಅವರನ್ನು ಪಕ್ಷ ಕರೆ ತರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅವರಿಗೆ ಕಾಂಗ್ರೆಸ್ ಪಕ್ಷದ ವಾತಾವರಣ ಒಗ್ಗುತ್ತಿಲ್ಲ ಎಂಬುದು ಸತ್ಯ. ಅದನ್ನು ಅವರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ. ಹಿಂದುತ್ವದ ವಾತಾವರಣದಲ್ಲಿ ಬೆಳೆದ ಶೆಟ್ಟರ್ ಅವರು ಜಮೀರ್ ಅಹಮದ್ ಖಾನ್ ಅವರ ಹೇಳಿಕೆಗಳನ್ನು ಸಹಿಸಿಕೊಳ್ಳಲು ಸಾಧ್ಯವೇ? ಬಿಜೆಪಿಯಲ್ಲಿ ಸಿಕ್ಕ ಮನ್ನಣೆ ಅಲ್ಲಿ ಸಿಗುತ್ತಿಲ್ಲ ಎಂಬುದು ಸವದಿ ಅವರಿಗೆ ಮನವರಿಕೆ ಆಗುತ್ತಿದೆ' ಎಂದೂ ಹೇಳಿದರು.

ಬಿಜೆಪಿಗೆ ಹೋಗಲ್ಲ: ಶೆಟ್ಟರ್

ಹುಬ್ಬಳ್ಳಿ: 'ಬಿಜೆಪಿಯಲ್ಲಿನ ಉಸಿರುಗಟ್ಟಿಸುವ ವಾತಾವರಣದಿಂದ ರೋಸಿಹೋದ ಹಲವು ನಾಯಕರು ನನ್ನ ಜೊತೆ ನಿರಂತರ ಸಂಪರ್ಕದಲ್ಲಿದ್ದಾರೆ. ಅವರಲ್ಲಿ ಕೆಲವರು ಕಾಂಗ್ರೆಸ್ ಸೇರಲು ಬಯಸಿದ್ದಾರೆ. ಅವರನ್ನು ತಡೆಯಲು ಮನಸೋಇಚ್ಛೆ ಸುಳ್ಳು ಸುದ್ದಿ ಹರಡಲಾಗುತ್ತಿದೆ' ಎಂದು ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಾನು ಯಾವುದೇ ಕಾರಣಕ್ಕೂ ಬಿಜೆಪಿಗೆ ವಾಪಸ್ ಹೋಗಲ್ಲ. ಕಾಂಗ್ರೆಸ್‌ನಲ್ಲೇ ಮುಂದುವರಿಯುವೆ' ಎಂದು ಅವರು ಸ್ಪಷ್ಟಪಡಿಸಿದರು.

'ನನ್ನನ್ನು ಪಕ್ಷದಿಂದ ಹೊರಹಾಕಿದ್ದು ತಪ್ಪೆಂದು ಬಿಜೆಪಿಯಲ್ಲಿ ಚರ್ಚೆ ನಡೆದಿದೆ. ನನ್ನನ್ನು ಹೊರಹಾಕಿದ್ದರಿಂದ ಪಕ್ಷಕ್ಕೆ ಭಾರಿ ಹೊಡೆತ ಬಿದ್ದಿದೆ ಎಂಬ ಅಭಿಪ್ರಾಯವನ್ನು ಕೆಲ ನಾಯಕರು ಹೈಕಮಾಂಡ್ ಮುಂದೆ ವ್ಯಕ್ತಪಡಿಸಿದ್ದಾರೆ. ಭವಿಷ್ಯದಲ್ಲಿ ಪಕ್ಷಕ್ಕೆ ಹಾನಿಯಾಗದಿರಲಿ ಎಂಬ ಕಾರಣಕ್ಕೆ ನಾನು ಬಿಜೆಪಿಗೆ ಮರಳುತ್ತೇನೆಂಬ ವದಂತಿ ಹಬ್ಬಿಸಲಾಗುತ್ತಿದೆ' ಎಂದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/12/2023–24 ದಿನಾಂಕ: 29–11–2023
ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ
2022–23 ನೇ ಸಾಲಿನ JJM & ವಿವಿಧ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **06–12–2023 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/2351/ಅಡ್ವರ್ಟೋರ್/2023–24

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ (MESCOM)
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾ ಮತ್ತು ಪಾ ವೃತ್ತ, ಕುಂಜಿಬೆಟ್ಟು, ಉಡುಪಿ–576102
ದೂರವಾಣಿ: 0820-2525040, 2535040, CIN: U40109 KA 2002 SGC 030425
ಕ್ರಮಾಂಕ : ಅಇಂ(ವಿ.)/ಉವ್ಯ/ಕಾನಿಇಂ(ಕ)/ಸ.ಕಾ.ನಿ(ಸಿ)/2023-2024/3377-81 ದಿನಾಂಕ: 06.11.2023
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮಾದರಿಯಲ್ಲಿ ಮಾತ್ರ)
ಮಂ.ವಿ.ಸ.ಕಂ.ನಿ, ಉಡುಪಿ ವೃತ್ತ ವ್ಯಾಪ್ತಿಯಲ್ಲಿ ಬರುವ ಸಿವಿಲ್ ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 20, 22, 23, 9, 24, 79, 80, 82, 81 ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖಾ ನೋಂದಾಯಿತ ಹಾಗೂ ಕಾರ್ಮಿಕ ಭವಿಷ್ಯ ನಿಧಿಯ, ಕಾರ್ಮಿಕರ ವಿಮಾ ರಾಜ್ಯ ನಿಗಮಗಳ ನೋಂದಣಿ, ಜಿ.ಎಸ್.ಟಿ ಮತ್ತು ಕಾರ್ಮಿಕ ಇಲಾಖೆ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗಳ ಹೆಚ್ಚಿನ ವಿವರಗಳನ್ನು ತಿಳಿಯಲು ಹಾಗೂ ಟೆಂಡರ್‌ನಲ್ಲಿ ಭಾಗವಹಿಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ದಿನಾಂಕ: 04.12.2023 ಬೆಳಗ್ಗೆ: 11.00 ಗಂಟೆಯ ನಂತರ ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in**ನ್ನು ಸಂಪರ್ಕಿಸಬಹುದಾಗಿದೆ ಈ ಕೆಳ ಸಹಿದಾರರ ಕಛೇರಿಯಲ್ಲಿಯೂ ಸಹ ವಿವರಗಳನ್ನು ಪಡೆಯಬಹುದಾಗಿದೆ.
ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ. ವೃತ್ತ, ಉಡುಪಿ.
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ಆಯುಷ್ ಇಲಾಖೆ
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ, ಬೆಂಗಳೂರು–560009.
ಅಧಿಸೂಚನೆ ಸಂಖ್ಯೆ: ಆವೈಮ/20/ಸರಬ/2023–24 ದಿನಾಂಕ: 27–11–2023
ಇ–ಟೆಂಡರ್ ಅಧಿಸೂಚನೆ
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ & ಆಸ್ಪತ್ರೆ, ಬೆಂಗಳೂರು ಇಲ್ಲಿನ ಕಟ್ಟಡಗಳು ಮತ್ತು ಆವರಣಗಳನ್ನು ಶುಚಿಗೊಳಿಸಲು ಹಾಗೂ ಕಾವಲು ಕಾಯಲು ಅವಶ್ಯಕವಿರುವ ಭದ್ರತಾ/ಸ್ವಚ್ಛತಾ ಮತ್ತು ಇತರೆ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆಯಲ್ಲಿ ಪಡೆಯುವ ಸಲುವಾಗಿ ದರಗುತ್ತಿಗೆ ನಿಗದಿಪಡಿಸುವ ಇ–ಟೆಂಡರ್
ಇ–ಟೆಂಡರ್ ಅನುಸೂಚಿಗಳು

ಇ–ಟೆಂಡರ್ ಅಧಿಸೂಚನೆ ದಿನಾಂಕ	: 27–11–2023
ಟೆಂಡರ್ ದಾಖಲೆಗಳು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	: 28–11–2023 ರಿಂದ 16–12–2023 ರವರೆಗೆ ಸಂಜೆ 4.00 ಘಂಟೆಯವರೆಗೆ
ಅಪ್‌ಲೋಡ್ ಆದ ಇ–ಟೆಂಡರ್‌ಗಳನ್ನು ತೆರೆಯುವ ದಿನಾಂಕ	: 18–12–2023 ಸಂಜೆ 4.00 ಘಂಟೆಗೆ
ಟೆಂಡರ್ ದಾಖಲೆ ತೆರೆಯುವ ಸ್ಥಳ	: ಪ್ರಾಚಾರ್ಯರ ಕೊಠಡಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರು

ಇ–ಟೆಂಡರ್–ನಿಯಮಗಳು/ನಿಬಂಧನೆಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ದಿನಾಂಕ: 28–11–2023 ರ ಸಂಜೆ 4.00 ಘಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಸದಸ್ಯ ಕಾರ್ಯದರ್ಶಿಗಳು/ಸಹಾಯಕ ಆಡಳಿತಾಧಿಕಾರಿಗಳು
ಟೆಂಡರ್ ಸಮಿತಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2356/ಆಕಾರ್/2023–24

ಮಹಾನಗರ ಪಾಲಿಕೆ ಬೆಳಗಾವಿ
ಸಂಖ್ಯೆ:ಮನಪಾ/ಲೋ.ಶಾ/ಕಾಅ/ಡಿಎಂ/ಟಿಎನ್‌ಡಿ/ಇಪ್ರೋ–10/2023–24 ದಿನಾಂಕ:29–11–2023
ಇ–ಟೆಂಡರ ಪ್ರಕಟಣೆ
ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ಪ್ರಕಾರ ಆ್ಯಕ್ಟ 2000 ನಿಯಮದಂತೆ ಸ್ವಚ್ಛ ಭಾರತ ಮಿಶನ 1.0 ಯೋಜನೆಯಡಿಯಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಮುದಾಯ ಶೌಚಾಲಯಗಳು ನಿರ್ಮಿಸುವ ಕಾಮಗಾರಿಗೆ ಟೆಂಡರನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಹ್ವಾನಿಸಲಾಗಿದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ ವೆಬ್‌ಸೈಟ್ (https://www.kppp.karnataka.gov.in) ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.
1:ಟೆಂಡರ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ:07–12–2023 ಸಾಯಂಕಾಲ 5.00 ಘಂಟೆವರೆಗೆ, 2:ಟೆಂಡರಿನ ಮೊದಲನೆ ಸಭೆಯ (Pre-bid meeting) ದಿನಾಂಕ:08–12–2023 ಮುಂಜಾನೆ 11.00 ಘಂಟೆ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 3:ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:11–12–2023 ಅಪರಾಹ್ನ 4.00 ಘಂಟೆವರೆಗೆ. 4:ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:13–12–2023 ಮುಂಜಾನೆ 11.00 ಘಂಟೆ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ. 5:ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:15–12–2023 ಮುಂಜಾನೆ 11.00 ಘಂಟೆ ಆಯುಕ್ತರು ಮಹಾನಗರ ಪಾಲಿಕೆ ಬೆಳಗಾವಿ, ಕಚೇರಿಯಲ್ಲಿ.
ಸಹಿ/–ಆಯುಕ್ತರು
ಮಹಾನಗರ ಪಾಲಿಕೆ, ಬೆಳಗಾವಿ
DIPR/BGM/RO-NO-679/KSMCA/2023-24

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಅಪರ ನಿರ್ದೇಶಕರು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತ ನಗರ, ಬೆಂಗಳೂರು–01, ದೂರವಾಣಿ ಸಂಖ್ಯೆ: 080–22207784
ಸಂಖ್ಯೆ:ಸಕಇ/ಪಪೂತಕೇ/ಎಸ್–4/ಸಿಆರ್–4/2023–24 ದಿನಾಂಕ: 01.12.2023
ಪ್ರಕಟಣೆ
2023–24ನೇ ಸಾಲಿಗೆ ಭಾರತೀಯ ಸೇನೆ / ಭದ್ರತಾ ಪಡೆ / ರಾಜ್ಯ ಪೊಲೀಸ್ ಸೇವೆ ಹಾಗೂ ಇತರೆ ಸರ್ಕಾರಿ ಸಮವಸ್ತ್ರ (Uniformed Services) ಸೇವೆಗಳಿಗೆ ಹಾಗೂ ಖಾಸಗಿ ಕಾರ್ಪೋರೇಟ್ ಸಂಸ್ಥೆಗಳಲ್ಲಿ ಲಭ್ಯವಿರುವ Flipkart, Urban Company, Ola, Uber, Swiggy, Zomato, Amazon, Gig Worker ಉದ್ಯೋಗಗಳ ತರಬೇತಿಗೆ ಹಾಗೂ Free-lancer (ಖಾಸಗಿ ಕ್ಷೇತ್ರ) ತರಬೇತಿಗೆ ಸೇರ ಬಯಸುವ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಆನ್–ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಇಲಾಖಾ ವೆಬ್ ಸೈಟ್ **www.sw.kar.nic.in** ನ್ನು ಸಂಪರ್ಕಿಸುವುದು.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:– **Uniformed Services – 10.12.2023**
Gig Worker – 15.12.2023.
ಸಹಿ/– ಅಪರ ನಿರ್ದೇಶಕರು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2363/ಎಸ್‌ಎಸ್‌ಸಿ/2023–24

ಮಂಡ್ಯ ವಿಶ್ವವಿದ್ಯಾಲಯ, ಎಂ.ಸಿ.ರೋಡ್, ಮಂಡ್ಯ–571401
ಕುಲಸಚಿವರ(ಆಡಳಿತ) ಕಛೇರಿ, ವಿಶ್ವವಿದ್ಯಾಲಯ ಆಡಳಿತ ಭವನ, ಮಂಡ್ಯ–571401. Ph No:08232-358788,
Email:registrar@mandyauniversity.ac.in
Website:www.mandyauniversity.ac.in
ಸಂಖ್ಯೆ:ಮಂ.ವಿ.ಮಂ/351/ಇ–ಟೆಂಡರ್/ಆನ್‌ಸರ್‌ಬುಕ್‌ಲೆಟ್/2023–24
ದಿನಾಂಕ:28.11.2023
ಟೆಂಡರ್ ಪ್ರಕಟಣೆ
E-Procurement portal Website:https://eproc.karnataka.govt.in
ಮಂಡ್ಯ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಅವಶ್ಯಕವಾಗಿರುವ ಉತ್ತರ ಪತ್ರಿಕೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ : **13.12.2023 ಸಂಜೆ 5.00 ಗಂಟೆಯವರೆಗೆ** ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ : **14.12.2023 ರಂದು ಬೆಳಿಗ್ಗೆ 11.30 ಗಂಟೆಗೆ** (ರಜಾ ದಿನಗಳನ್ನು ಹೊರತುಪಡಿಸಿ) ಕುಲಸಚಿವರು, ಮಂಡ್ಯ ವಿಶ್ವವಿದ್ಯಾಲಯ ಇವರ ಸಮಕ್ಷಮದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು. **Tender Indent Number is : MUM/351/e-tender/Answer Booklet/2023-24 Dated:28.11.2023.**
ಹೆಚ್ಚಿನ ವಿವರಗಳಿಗೆ website : **https://eproc.karnataka.gov.in** ನ್ನು ವೀಕ್ಷಿಸುವುದು ಅಥವಾ ದೂರವಾಣಿ ಸಂಖ್ಯೆ : **08232–358788** ಅನ್ನು ಸಂಪರ್ಕಿಸುವುದು.
ಸಹಿ/–ಕುಲಸಚಿವರು, ಮಂಡ್ಯ ವಿಶ್ವವಿದ್ಯಾಲಯ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/340/2023–24

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in
ಸಂಖ್ಯೆ: ಅಸಂನಿ/ಕೌಶಲ್ಯ/ಇ.ಓ.ಐ/ಸಿಆರ್–05/2023–24 ದಿನಾಂಕ : 29–11–2023
(Expression of Interest (EOI) ಪ್ರಕಟಣೆ:
2023–24ನೇ ಸಾಲಿನ ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಬೆಳಗಾವಿ, ದಕ್ಷಿಣ ಕನ್ನಡ, ದಾವಣಗೆರೆ, ಕಲಬುರಗಿ ಮತ್ತು ರಾಮನಗರ ಜಿಲ್ಲೆಗಳಲ್ಲಿನ ವಿದ್ಯಾವಂತ ನಿರುದ್ಯೋಗಿ ಯುವಕ–ಯುವತಿಯರಿಗೆ **Basic & Advanced Courses** ಕುರಿತು ಕೌಶಲ್ಯ ತರಬೇತಿಗಳನ್ನು ನೀಡಲು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ **(NSDC)** ಅಥವಾ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ **(KSDC)** ದಲ್ಲಿ ನೋಂದಾಯಿತ ಆಸಕ್ತಿವುಳ್ಳ ಅರ್ಹ ಸಂಸ್ಥೆಗಳಿಂದ **(Expression of Interest (EOI)** ಆಫ್‌ಲೈನ್ ಮೂಲಕ ನೇರವಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ **EOI Document** ನಲ್ಲಿ ಸೂಚಿಸಿರುವ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು. ವಿವರ ಕೆಳಕಂಡಂತಿದೆ.
(1) ಟೆಂಡರ್ ಪ್ರಕಟಣೆಯ ದಿನಾಂಕ : 29.11.2023, (2) ಟೆಂಡರ್ ಮೊತ್ತ: ರೂ. 200.00 ಲಕ್ಷಗಳು, (3) ಇ.ಎಂ.ಡಿ ಮೊತ್ತ: 4.00 ಲಕ್ಷಗಳು (ಡಿಡಿ ಮೂಲಕ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ರವರ ಹೆಸರಿನಲ್ಲಿ) (4) **EOI** ಪ್ರಕಟಣೆ ಕುರಿತು ವಿಚಾರಣೆಗೆ ಅಂತಿಮ ದಿನಾಂಕ ಮತ್ತು ಮಾರ್ಗ : ದಿನಾಂಕ : 07.12.2023 **(constructiongokdom@gmail.com & directorgokdom@gmail.com** ಗಳ ಮೂಲಕ) (5) **EOI** ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ : 14.12.2023, ಸಂಜೆ 4.00 ಗಂಟೆಯೊಳಗೆ, (6) **EOI** ಪ್ರಸ್ತಾವನೆ ಸಲ್ಲಿಸಬೇಕಾದ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ : ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಮೌಲನಾ ಅಜಾದ್ ಭವನ, ನಂ.16 ಸಿ, ಮಿಲ್ಲರ್‌ಟ್ಯಾಂಕ್ ಬೆಡ್‌ರಸ್ತೆ, ವಸಂತನಗರ, ಬೆಂಗಳೂರು–52. (7) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 080–22535902 080–22535912 **EOI Document Download** ನ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ **https://dom.karnataka.gov.in** ನಲ್ಲಿ ಪಡೆಯಬಹುದಾಗಿದೆ.
ಸಹಿ/–
ಜಂಟಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.
DIPR/CP/2358/Zen/2023-24

ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ

ನಜ್ಮಾ ಬಾಂಗಿ, ವಿಜಯಪುರ
ಚಿತ್ರ: ಸಂಜೀವ ಅಕ್ಕಿ

ಪರದೆಯಾಚೆ... ನಜ್ಮಾ ಬಾಂಗಿ

ರಶ್ಮಿ ಎಸ್

ಅಭಿ ಸಂಘರ್ಷ್ ಜಾರಿ ಹೈ.. ಮಸ್ಜಿದ್ ಮೆ ಹಮೆ ಜಗಾ ಮಿಲ್ನಿ ಚಾಹಿಯೆ..
(ಸಂಘರ್ಷವಿನ್ನೂ ಜಾರಿ ಇದೆ. ಮಸೀದಿಗಳಲ್ಲಿ ನಮಗೆ ಜಾಗ ಸಿಗಬೇಕು) ಹೀಗೆ ಖಡಾಖಂಡಿತವಾಗಿ ಹೇಳಿದವರು ವಿಜಯಪುರದ ನಜ್ಮಾ ಬಾಂಗಿ.

1982ರಲ್ಲಿ ಸಿನಿಮಾ ನೋಡಿದರು ಎಂಬ ಕಾರಣಕ್ಕೆ ಧಾರ್ಮಿಕ ಬಹಿಷ್ಕಾರಕ್ಕೆ ಒಳಗಾದವರು. ಮತ್ತೆ ಅದರ ವಿರುದ್ಧ ಹೋರಾಡಿದವರು. ಗೋಷಾ ಪದ್ಧತಿ ಒಪ್ಪದೆ ಸಿನಿಮಾ ನೋಡಿದ ನಜ್ಮಾಗೆ ಅದು ಹೋರಾಟ ಅಂತನಿಸಲೇ ಇಲ್ಲ. ‘ಸರಿ ಅಥವಾ ತಪ್ಪು ಎರಡೇ ಇರುವುದು. ಸರಿಯಾಗಿರುವುದಕ್ಕೆ ಪ್ರತಿಭಟಿಸುವುದು ಅನಿವಾರ್ಯವಾದರೆ ಅದಕ್ಕೆ ಹೋರಾಟ ಅನ್ನಿ’ ಎನ್ನುತ್ತ ನಕ್ಕರು.

’ಗಡಿದಾಟಿದ ಹೆಣ್ಣುಗಳ ಕಥನ’ ಎಚ್.ಎಸ್. ಅನುಪಮಾ ಅವರ ಹೊಸ ಪುಸ್ತಕದಲ್ಲಿ ನಜ್ಮಾಬಾಂಗಿ ಅವರ ಕುರಿತು ಓದಿದ್ದೇ ಆ ಹೆಣ್ಣುಮಗಳನ್ನು ಒಮ್ಮೆ ಭೇಟಿಯಾಗಬೇಕು ಅನಿಸಿತು.

ಹಾಗೆನಿಸಿದ ಮೂರನೆಯ ದಿನದ ಬೆಳಗು ನಜ್ಮಾ ಅವರನ್ನು ಭೇಟಿಯಾಗುವುದರೊಂದಿಗೆ ಆಗಿತ್ತು. ಅನಿಸಿದ ಆ ಕ್ಷಣದಲ್ಲಿ ದೇವರು ಅಸ್ತು ಅಂದಿರಬೇಕು. ವಿಜಯಪುರದ ಅವರ ಮನೆಯಂಗಳದಲ್ಲಿದ್ದೆ.

ಮಸೀದಿಗೆ ಹೋಗಿ.. ನನಗೇನು ಮಾಡಬೇಕಾಗಿಲ್ಲ ಆದರೆ ಔರತ್‌ನ ಹಕ್ಕದು. ದೇವರ ಪ್ರಾರ್ಥನೆಯಲ್ಲಿ ಹೆಣ್ಣು ಪ್ರಾರ್ಥನೆ, ಗಂಡು ಪ್ರಾರ್ಥನೆ ಅಂತಿರೂದಿಲ್ಲ. ಇಬಾದತ್ (ಆರಾಧನೆಗೆ)ಗೆ ಯಾವ ಲಿಂಗದ ಹಂಗೂ ಇಲ್ಲ. ನಿಮ್ಮ ದುವಾದಲ್ಲಿಯೂ ಹೆಣ್ಣುಮಗಳ ದುವಾ, ಗಂಡುಮಗನ ದುವಾ ಅಂತಿರೂದಿಲ್ಲ. ಸೃಷ್ಟಿಕರ್ತನ ಮುಂದೆ ಎಲ್ಲರೂ ಸಮಾನರು. ಹಂಗಿರುವಾಗ ಇವರೆಲ್ಲ ಕೀಲಿ ಜಡಿದು ಕೂರುವುದು ಯಾವ ಪುರುಷಾರ್ಥಕ್ಕೆ?

ಮಹಿಳಾ ಅರ್ಚಕರಿಗೆ ಅವಕಾಶ ಕೊಡ್ತಿದಾರಂತಲ್ಲ.. ನಮ್ಮಲ್ಲಿಯೂ ದೇವರನ್ನು ಮುಕ್ತಗೊಳಿಸಬೇಕು. ಮಸೀದಿಯಲ್ಲಿ ಮಹಿಳೆಯರಿಗೆ ಪ್ರವೇಶ ನೀಡಬೇಕು. ವಕ್ಫ್ ಮತ್ತು ಮಸೀದಿ ನಿರ್ವಹಿಸುವ ಸಮಿತಿ, ಮಂಡಳಿ ಇರ್ತಾವಲ್ಲ, ಅದರಲ್ಲಿಯೂ ಮಹಿಳೆಗೆ ಪ್ರಾತಿನಿಧ್ಯ ನೀಡಬೇಕು’ ಎಂದು ಖಡಾಖಂಡಿತವಾಗಿ ಹೇಳುತ್ತಲೇ ತಮ್ಮ ಸಿನಿಮಾ ಪ್ರಕರಣದತ್ತ ಹೊರಳಿದರು.

ಹೌದು. ನನಗಾಗ ಸಿನಿಮಾ ನೋಡಬೇಕು ಅನಿಸಿತು. ನೋಡಿ ಬಂದೆ. ಉಳಿದವರಿಗೆಲ್ಲ ಅದು ತಪ್ಪೆನಿಸಿತು. ಪರದೆಯಲ್ಲಿಲ್ಲ, ಗೋಷಾ ಮಾಡಲಿಲ್ಲ ಅಂತೆಲ್ಲ ಹೇಳಿದರು. ನಾನು ಈಗಲೂ ಬುರಖಾ ಧರಿಸುವುದಿಲ್ಲ. ಪರಪುರುಷನಿಗೆ ಅತ್ಯಾಕರ್ಷಕವಾಗಿ ಕಾಣಬಾರದು ಎಂದು ಇಸ್ಲಾಂ ಧರ್ಮ ಹೇಳುತ್ತದೆ. ನನ್ನ ಈ ದೊಗಳೆ ಬಟ್ಟೆಗಳಲ್ಲಿ ಇನ್ನಿಬ್ಬರು ಸೇರಬಹುದು. ಇದೀಗ ಬುರಖಾಗಳೂ ದೇಹದ ಉಬ್ಬುತಗ್ಗುಗಳನ್ನು ಪ್ರದರ್ಶಿಸುವಂತಿವೆಯಲ್ಲ.. ಅವೆಲ್ಲ ಕಣ್ಣಿಗೆ ಬೀಳುವುದಿಲ್ಲವೇ.. ಇವರು ಧರ್ಮದ ಅಂಧಾನುಕರಣೆಯನ್ನು ಮಾಡ್ತಾರೆ ಅಷ್ಟೆ.

ಇವರಷ್ಟೇ ಅಲ್ಲ, ಎಲ್ಲರೂ ಧರ್ಮವನ್ನು ಅಂಧಾನುಕರಣೆಗೆ ಮಾತ್ರ ಬಳಸಿಕೊಳ್ಳುತ್ತಾರೆ. ನಿಮ್ಮ ಧರ್ಮ ಏನು ಹೇಳ್ತದೆ..? ಶಾಂತಿ, ಸಂಯಮ, ಸಹೋದರತ್ವ, ಕೆಡುಕಿನ ವಿರುದ್ಧ ಹೋರಾಟ. ನನ್ನ ಧರ್ಮವೂ ಅದನ್ನೇ ಹೇಳುತ್ತದೆ. ನಿಮ್ಮ ಧರ್ಮ ಏನೆನ್ನುತ್ತದೆ? ಅನ್ಯರ ಸಂಪತ್ತಿಗೆ ಆಸೆ ಪಡಬೇಡಿ, ದಾಸೋಹ ಮಾಡಿ, ಕೆಡುಕು ಬಯಸಬೇಡಿ.. ನಮ್ಮ ಧರ್ಮವೂ ಅದನ್ನೇ ಹೇಳುತ್ತದೆ. ಶಾಲೆಯಲ್ಲಿ ಧರ್ಮವೆಂದರೆ ಜಾತಿಗಳ ಬಗ್ಗೆ ಮಾತಾಡುವುದಲ್ಲ, ಬದುಕುವುದು ಕಲಿಸಬೇಕು.

ನಾನೂ ಶಾಲೆಯಲ್ಲಿ ಕಲಿಸ್ತಿದ್ದೆ. ನನ್ನ ಸಿನಿಮಾ ಸಹಾಸದಿಂದಾಗಿ ಕೆಲಸ ಬಿಡುವಂತಾಯಿತು. ನೆಮ್ಮದಿಗಿಂತ ಮುಖ್ಯ ಮತ್ತೊಂದಲ್ಲ ಅನಿಸಿತು. ರಾಜೀನಾಮೆ ನೀಡಿದೆ.. ತಮ್ಮ ಪಾದಗಳನ್ನು ನಿಟ್ಟಿಸುತ್ತ ಸುಮ್ಮನಾದರು.

ಮತ್ತೊಂದು ಅವಕಾಶ ಸಿಕ್ಕರೆ ಏನು ಕಲಿಸುವಿರಿ?

ನನಗೆ ಮತ್ತೊಂದು ಅವಕಾಶ ಸಿಕ್ಕರೆ, ತಪ್ಪುಗಳ ವಿರುದ್ಧ ಹೋರಾಡುವುದನ್ನು ಕಲಿಸುವೆ. ಸತ್ಯ ಮಾತಾಡುವುದನ್ನು ಹೇಳಿಕೊಡುವೆ. ಅಧಿಕಾರ, ಹಣಕ್ಕಿಂತಲೂ ಮುಖ್ಯವಾಗಿ ಪರಸ್ಪರ ಗೌರವ ಮತ್ತು ಪ್ರೀತಿಯನ್ನು ಹೇಳಿಕೊಡುವೆ. ಇದು ಕೇವಲ ಪ್ರಭುತ್ವ ಮತ್ತು ಪ್ರಜೆಗಳ ಮಾತಲ್ಲ, ಗುಡಿಯಾ..

ಗುಡಿಯಾ.. ಮೈ ತೊ ಬುಢಿಯಾ ಹೂಂ (ಗುಡಿಯಾ.. ಅಂದ್ರೆ ಗೊಂಬೆ.. ನನಗಂತೀರಿ.. ನಾ ಅಂತೂ ಮುದುಕಿ ಅದೀನಿ)

ಅರೆರೆ.. ನೀವೊಮ್ಮೆ ನನ್ನ ವಯಸ್ಸು ಕೇಳ್ರಿ... ನಾನಂತೂ ಸದಾ ಸೋಲಾ ಸತ್ರಾ (ಹದಿನಾರು, ಹದಿನೇಳು) ಅಂತೀನಿ, ವಯಸ್ಸು ದೇಹಕ್ಕೆ. ಚೇತನಕ್ಕಲ್ಲ.. ಅಷ್ಟು ಅರಿವಿದ್ದರೆ ಕನಸು ಕಾಣುವ ಮನಸು, ನನಸಾಗಿಸುವ ಕಸುವು ಎರಡೂ ಸಿಗುತ್ತವೆ. ಇದೇ ನನ್ನ ಸಂಘರ್ಷದ ಹಾದಿಯ ಮಂತ್ರವಾಗಿದೆ.

ಶಿಕ್ಷಣ ಅಂದ್ರೆ ಕೆಲಸ ಕೊಡಿಸೋದಲ್ಲ. ಶಿಕ್ಷಣ ನಮ್ಮ ನಡಾವಳಿಯನ್ನು ಬದಲಿಸಬೇಕು. ಪ್ರಮಾಣಪತ್ರಗಳು ದೊರೆತು, ಉಣ್ಣಲು ಮಾರ್ಗ ನೀಡುವುದು ಶಿಕ್ಷಣ ಆಗಿ ಬದಲಾಗಿದೆ. ಶಿಕ್ಷಣವೆಂದರೆ... ಪಾಠಗಳೊಟ್ಟಿಗೆ ಬದುಕುವುದು ಕಲಿಸಬೇಕು. ಬದುಕುವುದು ಎಂದರೆ ಸತ್ಯಕ್ಕಾಗಿ ಹೋರಾಡುವುದು, ಸರಿಯಾಗಿರುವುದಕ್ಕೆ, ಬೆಂಬಲಿಸುವುದು, ತಪ್ಪೆನಿಸಿದ ತಕ್ಷಣ ಪ್ರತಿರೋಧಿಸುವುದು, ರುಚಿಯಾಗಿರುವುದನ್ನು ಆಸ್ವಾದಿಸಲು ಕಲಿಸಬೇಕು. ಜೀವನ ಎದುರಿಸುವುದಲ್ಲ, ಸೋಲುಗೆಲುವುಗಳ ಆಟವಲ್ಲ. ಆದರಿಸುವುದು, ಆನಂದಿಸುವುದು ಕಲಿಸಬೇಕು.

ಮಕ್ಕಳು ಇವನ್ನೆಲ್ಲ ಕಲೀಬೇಕು. ನಮಗೆ ಇಕ್ಬಾಲ್ ಸಾಹೇಬರ ಕವಿತೆಯಿತ್ತು.. ‘ಜುಗನು’ ಅಂತ. ಆ ಮಿಂಚು ಹುಳ, ಮಿನುಗುವಂತೆ ಆಗಬೇಕು ನಮ್ಮ ಬದುಕು. ಸಣ್ಣ ಜೀವವಾದರೂ ಕಾಡಕರಿಗತ್ತಲೆಯನ್ನು ಬೆಳಕು ಮಾಡುವ ಛಲ ಇರುವ ಹುಳುವದು.

ಅಷ್ಟೇ ಆದರೂ ಸರಿ, ಬೆಳಕಾಗಿಸಬೇಕು. ಬೆಳಕಿನ ಕುಡಿಯಾಗಬೇಕು.. ಅನ್ನುತ್ತಲೇ ಖುದಾಫೀಸ್ ಎಂದರು.

ಯಾರು ನಜ್ಮಾ ಬಾಂಗಿ

ವಿಜಯಪುರದಲ್ಲಿ ಗೋಷಾ ಪದ್ಧತಿಯನ್ನು ವಿರೋಧಿಸಿ ಸಿನಿಮಾ ನೋಡಿದ ತಪ್ಪಿಗೆ ಹಲವಾರು ವರ್ಷ ಹೋರಾಡಿದವರು. ಹೋರಾಟದ ಧ್ವನಿಯಾಗಿ, ಮಹಿಳೆಯರ ಹಕ್ಕುಗಳಿಗಾಗಿ, ಸಮಾನತೆಗಾಗಿ ಈಗಲೂ ಶ್ರಮಿಸುತ್ತಿರುವ 70ರ ಹರೆಯದ ಯುವತಿ!

1982ರಲ್ಲಿ ಪರದಾ ಇಲ್ಲದೆ, ಪುರುಷರ ನಡುವೆ ಕುಳಿತು ಸಿನಿಮಾ ನೋಡುವ ಸುದ್ದಿ ಹರಡಿದ ಕೂಡಲೆ, ಚಲನಚಿತ್ರ ಮಂದಿರದ ಮುಂದೆ ಗಲಾಟೆ ಆರಂಭವಾಗಿತ್ತು. ಸಿನಿಮಾಗ್ರಹದಿಂದ ಆಚೆ ಹೋಗಲು ಆಗಿನ ಎಸ್‌ಪಿ ಬಂದು ವಿನಂತಿಸಿಕೊಳ್ಳುತ್ತಾರೆ. ’ಟಿಕೆಟ್ ಪಡೆದು ನೋಡುತ್ತಿರುವೆ‘ ಗಲಾಟೆ ಆದರೆ ಅದು ನಿಮ್ಮ ಜವಾಬ್ದಾರಿ. ನನ್ನದಲ್ಲ‘ ಎಂದು ಸಿನಿಮಾ ಪೂರ್ಣಗೊಳಿಸಿ ಆಚೆ ಬರುತ್ತಾರೆ. ಆಗಿನ ಗಲಭೆ ನಿಯಂತ್ರಿಸಲು, ನಜ್ಮಾ ಅವರಿಗೆ ಎಸ್‌ಪಿಯವರೇ ಭದ್ರತೆಯ ನಡುವೆ ಮನೆಗೆ ತಂದುಬಿಡುತ್ತಾರೆ.

ಆಗಿನಿಂದಲೂ ಸಂವಿಧಾನದ ಹಕ್ಕು, ಸಮಾನತೆ, ಮಹಿಳಾಪರ ಹೋರಾಟಗಳಲ್ಲಿ ನಜ್ಮಾ ಧ್ವನಿ ಭಿನ್ನವಾಗಿದೆ.

ಪ್ರಜಾಪ್ರಭುತ್ವದ ಪ್ರತಿಪಾದಕಿ. ಸಮಾನತೆಗಾಗಿ ಸದಾ ಶ್ರಮಿಸುವ, ಮಿಡಿಯುವ ಜೀವ. ಉರ್ದು ಭಾಷೆಯಲ್ಲಿ ತಮ್ಮ ವಿಚಾರಗಳನ್ನು ಬರೆಯುವ ನಜ್ಮಾ ಅವರಿಗೆ ತಾವು ಹಕೀಮ್‌ರ ಮೊಮ್ಮಗಳು ಎಂಬ ಹೆಮ್ಮೆಯಿದೆ. ರೋಗಗುಣಮಾಡಿಸುವ ಶಕ್ತಿ ಇದೆ ಎಂಬ ನಂಬಿಕೆಯೂ.

ಬಿಎಸ್ಸಿ ಬಿಎಡ್ ಮಾಡಿಕೊಂಡು, ಇಂಗ್ಲಿಷ್ ಸಹ ಪಾಠ ಮಾಡುತ್ತಿದ್ದ ನಜ್ಮಾ ಬಾಂಗಿ ಇನ್ನೂ ಹದಿನೈದು ವರ್ಷ ಶಿಕ್ಷಕಿ ಸೇವೆ ಇರುವಾಗಲೇ ಕೆಲಸ ಬಿಡುವಂತಾಯಿತು. ಒಂತುಸು ಪಿಂಚಣಿಯಲ್ಲಿ ತಮ್ಮ ಸಹೋದರಿಯೊಂದಿಗೆ ವಾಸವಾಗಿರುವ ನಜ್ಮಾರಲ್ಲಿ ಈಗಲೂ ಕ್ರಾಂತಿಯ ಕಿಡಿ ಇದೆ. ಬೆಳಕಿನ ಕುಡಿ ಇದೆ.

ಸ್ವಾವಲಂಬನೆ ಎಂದರೆ:
ಗಳಿಸುವುದರಿಂದ ಸ್ವಾವಲಂಬಿಗಳಾಗುವುದಿಲ್ಲ. ನಮ್ಮ ನಿರೀಕ್ಷೆಗಳಿಂದ, ನಿರಾಸೆಗಳಿಂದ ಮುಕ್ತರಾದಾಗ ಸ್ವಾವಲಂಬಿಗಳಾಗುತ್ತೇವೆ. ಔರತ್‌ನ ಅರ್ಥ ಅದೇನೆ, ಕಿಸಿ ಔರ್‌ಸೆ ಔರ್ ಮತ್ ಪೂಛ್. (ಯಾರಿಂದಲೂ ಮತ್ತೇನೂ ಕೇಳಬೇಡ) ನಾನು ಮತ್ತು ನನ್ನಕ್ಕ ಇಬ್ಬರೂ ಆರಾಮಾಗಿದ್ದೇವೆ. ಯಾವತ್ತೂ ಪುರುಷನ ಸಖ್ಯ ಸಾಂಗತ್ಯ ಬೇಕೆನಿಸಲಿಲ್ಲ.

ಪ್ರಜಾಪ್ರಭುತ್ವ ಎಂದರೆ ಪರಸ್ಪರ ಗೌರವ

ಪ್ರಜಾಪ್ರಭುತ್ವ ಅಂದ್ರೆ... ನಗುತ್ತ ಕತೆ ಹೇಳುವೆ ಎಂದರು. ಠಕ್ಕನರಿ, ಜಾಣ ಕಾಗೆಯ ಕತೆ ಹೇಳಿ, ಕರ್ನಾಟಕದ ಜನತೆ ಜಾಣ ಕಾಗೆಗಳಾದರು. ನಿಮ್ಮ ರಾಜ್ಯ ಚಂದ, ಬಸವಣ್ಣ ಅಂದ ಎಂದು ತೊದಲಿ ಹೋದ ಠಕ್ಕನರಿ ಸೋತು ಸುಣ್ಣವಾದ.

ಆದ್ರೆ ಬಂದವರು ಈ ಭಾಗ್ಯಗಳನ್ನೆಲ್ಲ ಯಾಕೆ ಕೊಟ್ರು? ಇವು ನಮ್ಮನ್ನು ಆಲಸಿಗಳಾಗಿಸುತ್ತವೆ. ಕುದುರೆಗೆ ಬಾವಿ ತೋರಿಸಬೇಕೆ ಹೊರತು, ನೀರುಣಿಸಬಾರದು. ದುಡಿಮೆಗೆ ಕೆಲಸ ಕೊಡಬೇಕೆ ಹೊರತು, ಭತ್ಯ ಕೊಡಬಾರದು. ರಟ್ಟೆ ಗಟ್ಟಿ ಇರುವ ಪ್ರಜೆಗಳಿಗೆ ಕುಳಿತು ಉಣ್ಣಲು ಅಕ್ಕಿ ಹಂಚಬಾರದು. ಕೆಲಸ ಕೊಡಲಿ. ಹಗಲು ರಾತ್ರಿ ದುಡಿಸಿಕೊಳ್ಳಲಿ. ಇಷ್ಟಕ್ಕೂ ಪ್ರಜಾಪ್ರಭುತ್ವ ಅಂದರೆ ಪರಸ್ಪರ ಗೌರವ ಇರಬೇಕು. ಪ್ರಜೆಗಳನ್ನು ಭಿಕ್ಷುಕರಂತೆ ನೋಡಬಾರದು. ನಾಯಕರನ್ನು ದೇವರಂತೆ ಆರಾಧಿಸಬಾರದು. ಸಮಯ ಬಂದರೆ ಏನು ಮಾಡಿದ್ರಿ ನೀವು ಎಂದು ಪ್ರಶ್ನಿಸುವಂತಿರಬೇಕು. ನನ್ನ ಜನರು ಇವರು ಎಂದು ರಕ್ಷಿಸುವಂಥ ನಾಯಕರು ಇರಬೇಕು.

ಮನೋವಿಕಾರಕ್ಕೆ ಪರಿಹಾರವೇನು?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

● ನನ್ನ ಹೆಂಡತಿಗೆ 44 ವರ್ಷ. ಹುಣ್ಣಿಮೆ ಮತ್ತು ಅಮಾವಾಸ್ಯೆಯ ಸಮಯದಲ್ಲಿ ಅವಳಲ್ಲಿ ಹಿಂಸೆ ಕೆರಳುತ್ತದೆ. ಅವಳು ತುಂಬಾ ದಂಗೆಕೋರಳಾಗಿದ್ದಾಳೆ. ತನ್ನ ಸುತ್ತಲಿನ ಯಾರ ಮಾತನ್ನೂ ಕೇಳುವುದಿಲ್ಲ, ವಾಸ್ತವವಾಗಿ ಸಲಹೆಗೆ ವಿರುದ್ಧವಾಗಿ ವರ್ತಿಸುತ್ತಾಳೆ. ಅವಳು ಎಲ್ಲರನ್ನು ತೀವ್ರವಾಗಿ ನಿಯಂತ್ರಿಸುತ್ತಾಳೆ. ಮನೋವೈದ್ಯಕೀಯ ಚಿಕಿತ್ಸೆ ಮತ್ತು ಸಮಾಲೋಚನೆ ಯಾವುದೇ ಸಹಾಯವಾಗಲಿಲ್ಲ. ಮನೆಯಲ್ಲಿ ಯಾವಾಗಲೂ ಎಲ್ಲರನ್ನೂ ನಿಂದಿಸುತ್ತಿರುತ್ತಾಳೆ. ನನ್ನ ಹದಿಹರೆಯದ ಮಗಳು ಮಾನಸಿಕ ಆಘಾತದಿಂದ ಹೊರಬರಲು ಸಾಧ್ಯವಾಗದೆ ಆತ್ಮಹತ್ಯೆಗೆ ಯತ್ನಿಸಿದಳು. ಮಕ್ಕಳ ಭವಿಷ್ಯ ಮತ್ತು ಸಾಮಾಜಿಕ ಕಳಂಕಕ್ಕೆ ಹೆದರಿ ವಿಚ್ಛೇದನ ಪಡೆಯಲು ಹಿಂಜರಿಯುತ್ತಿದ್ದೇನೆ. ಹಿಂಸಿಸುವ ಹೆಂಡತಿಯನ್ನು ಹೇಗೆ ಸಹಿಸಿಕೊಳ್ಳಬೇಕು?.

ಹೆಸರು ಊರು ತಿಳಿಸಿಲ್ಲ.

ಪತ್ನಿಯ ಮಾನಸಿಕ ಸಮಸ್ಯೆಯಿಂದಾಗಿ ನಿಮ್ಮ ಇಡೀ ಕುಟುಂಬ ಅಸಹನೀಯ ಪರಿಸ್ಥಿತಿಗಳನ್ನು ಎದುರಿಸುತ್ತದೆ. ನಿಮ್ಮೆಲ್ಲಾ ಪ್ರಾಮಾಣಿಕ ಪ್ರಯತ್ನಗಳಿಂದ ಯಾವುದೇ ಬದಲಾವಣೆ ಸಾಧ್ಯವಾಗುತ್ತಿಲ್ಲ. ನಿಮ್ಮ ಬೇಸರ ಹತಾಶೆ ಹೆಚ್ಚಾಗುತ್ತಿದೆ. ಈ ಎಲ್ಲದರ ದುಷ್ಪರಿಣಾಮಗಳನ್ನು ಮಕ್ಕಳೂ ಎದುರಿಸುತ್ತಿದ್ದಾರೆ.

ನಿಮ್ಮ ಸಮಸ್ಯೆಗೆ ಎರಡು ಮುಖಗಳಿವೆ. ಮೊದಲನೆಯದು ಹೆಂಡತಿಯ ಮಾನಸಿಕ ಸಮಸ್ಯೆ. ಇದರ ಹಿನ್ನೆಲೆ ಅವರ ಬಾಲ್ಯದ ಅನುಭವಗಳಲ್ಲಿದೆ. ಬಾಲ್ಯದಲ್ಲಿ ಅವರು ಕಠಿಣ ಪರಿಸ್ಥಿತಿಗಳನ್ನು ಎದುರಿಸಿದ್ದಾರೆ. ತೀವ್ರವಾಗಿ ಟೀಕಿಸುವ ಹಿಂಸಿಸುವ ಪೋಷಕರು ಅಥವಾ ಯಾವುದೇ ಭಾವನಾತ್ಮಕ ಬೆಂಬಲ ದೊರೆಯದ ಕೌಟುಂಬಿಕ ವಾತಾವರಣ ಅಥವಾ ಅಸ್ಥಿರ ಕೌಟುಂಬಿಕ ಸಂಬಂಧಗಳು ಮುಂತಾದವುಗಳನ್ನು ಅವರು ಎದುರಿಸಿರುವ ಸಾಧ್ಯತೆಗಳಿವೆ. ಇಂತವರಿಗೆ ಯಾವ ಸಂಬಂಧದಲ್ಲೂ ನಂಬಿಕೆ ಉಳಿದಿರುವುದಿಲ್ಲ. ಬಹಳ ಅಭದ್ರತೆಯಿಂದ ನರಳುತ್ತಿರುವ ಇವರು ಎಲ್ಲರ ಮೇಲೂ ದಬ್ಬಾಳಿಕೆ ಮಾಡಿ ಅವರನ್ನು ನಿಯಂತ್ರಿಸುವುದಕ್ಕೆ ಮಾತ್ರ ಪ್ರಯತ್ನಿಸುತ್ತಾರೆ. ಸಹಜವಾದ ಕೌಟುಂಬಿಕ ಸಂಬಂಧಗಳ ಮಾದರಿ ಅವರಿಗೆ ಬಾಲ್ಯದಲ್ಲಿ ಸಿಕ್ಕಿರುವುದಿಲ್ಲ. ಇದರ ಪರಿಣಾಮಗಳು ಜೀವಮಾನವಿಡೀ ಉಳಿಯುವ ಸಾಧ್ಯತೆಗಳಿರುತ್ತವೆ. ಕೇವಲ ಮಾತ್ರೆಗಳಿಂದ ಎಲ್ಲಾ ಬದಲಾವಣೆಗಳೂ ಸಾಧ್ಯವಾಗಲಾರದು. ದೀರ್ಘಕಾಲದ (ಕಡಿಮೆಯೆಂದರೆ ಒಂದು ವರ್ಷ) ಮನೋಚಿಕಿತ್ಸೆಯ (Psychotherapy) ಅಗತ್ಯವಿದೆ. ಇಂತಹ ತಜ್ಞರ ಸೇವೆ ಲಭ್ಯವಿದ್ದರೆ ಬಳಸಿಕೊಳ್ಳಿ.

ಎರಡನೆಯದು ಕುಟುಂಬದ ಉಳಿದ ಸದಸ್ಯರ ಮಾನಸಿಕ ಸ್ಥಿತಿ. ಇದರ ಬಗೆಗೆ ನಿಮ್ಮ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ಕುಟುಂಬದ ಸಂಪೂರ್ಣ ವಾತಾವರಣದಲ್ಲಿ ಆತಂಕ ತುಂಬಿರುವಾಗ ನಿಮ್ಮ ಮನಸ್ಸಿನ ಸಮಾಧಾನ ಉಳಿಸಿಕೊಳ್ಳುವುದು ಸುಲಭವಲ್ಲ. ಹಾಗಾಗಿ ಮೊದಲು ನೀವು ಮನೋಚಿಕಿತ್ಸಕರನ್ನು ಭೇಟಿಯಾಗಿ. ನಿಮಗೆ ಮಾತ್ರೆಗಳ ಅಗತ್ಯವಿಲ್ಲ. ಆದರೆ ಹಿಡಿತದಲ್ಲಿ ಇಲ್ಲದ ವಿಷಮ ಕೌಟುಂಬಿಕ ವಾತಾವರಣದಲ್ಲಿ ನೀವು ಮನಸ್ಸಿನ ಸಮಾಧಾನ ಸಮತೋಲನ ಕಳೆದುಕೊಂಡರೆ ಮಕ್ಕಳಿಗೆ ಉಳಿದಿರುವ ಏಕೈಕ ಮಾನಸಿಕ ಬೆಂಬಲ ತಪ್ಪಿಹೋಗುತ್ತದೆ. ಹಾಗಾಗಿ ನಿಮ್ಮ ಬೇಸರ ಅಸಹಾಯಕತೆ ದುಃಖ ಕೋಪ ಮುಂತಾದವುಗಳನ್ನು ನಿಭಾಯಿಸುವನ್ನು ಕಲಿಯಬೇಕಾಗಿದೆ. ಮನೋಚಕಿತ್ಸೆಯ ಅಗತ್ಯ ಮಕ್ಕಳಿಗೂ ಇದೆ. ಸಾಧ್ಯವಿದ್ದರೆ ನೀವು ಮತ್ತು ಮಕ್ಕಳು ತಜ್ಞರ ಸಹಾಯ ಪಡೆಯಿರಿ.

ನಿಮ್ಮ ಮತ್ತು ಮಕ್ಕಳ ಮಾನಸಿಕ ದೈಹಿಕ ಆರೋಗ್ಯ ನಿಮ್ಮ ಪ್ರಮುಖ ಕಾಳಜಿಯಾಗಿರಲಿ. ವಿಚ್ಛೇದನವನ್ನು ಸಾಮಾಜಿಕ ಕಳಂಕವಾಗಿ ನೋಡುವ ಅಗತ್ಯವೇನಿಲ್ಲ. ಪರಿಸ್ಥಿತಿಗಳು ಮಕ್ಕಳ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎನ್ನಿಸಿದರೆ ವಿಚ್ಛೇದನದ ಕುರಿತು ಯೋಚಿಸಬಹುದು. ಇದಕ್ಕೆ ಸಾಕಷ್ಟು ಕಾನೂನಿನ ತೊಡಕುಗಳಿರುತ್ತವೆ. ಸಂಗಾತಿಯ ಮಾನಸಿಕ ಅಸ್ವಾಸ್ಥ್ಯ ವಿಚ್ಛೇದನಕ್ಕೆ ಕಾರಣವಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ತಾತ್ಕಾಲಿಕವಾಗಿ ಪತ್ನಿಯನ್ನು ಪ್ರತ್ಯೇಕವಾಗಿ ಇರಿಸಿ ಚಿಕಿತ್ಸೆ ನೀಡುವ ಸಾಧ್ಯತೆಗಳ ಕುರಿತು ಯೋಚಿಸಿ. ಇಂತಹ ವ್ಯವಸ್ಥೆಯಿರುವ ಪುನರ್ವಸತಿ ಕೇಂದ್ರಗಳಿವೆ. ಅವುಗಳನ್ನು ಸಂಪರ್ಕಿಸಿ.

ಹದಿಹರೆಯ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಿ.

ಕೊಡುಗೆಯಾಸೆಗೆ ಮೋಸ ಹೋದೆ

ಸಂತೋಷ ಜಿಗಳಿಕೊಪ್ಪ

'ಅಮೆಜಾನ್ ವತಿಯಿಂದ ಭರ್ಜರಿ 10 ಲಕ್ಷ ರೂಪಾಯಿ ಗಿಫ್ಟ್ ವೋಚರ್ ನಿಮಗಾಗಿ. ನಿಮ್ಮ ಮೊಬೈಲ್ ನಂಬರ್ ಲಕ್ಕಿ ನಂಬರ್ ಬಂದಿದೆ. ಈ ಲಿಂಕ್ ಕ್ಲಿಕ್ ಮಾಡಿ ವೋಚರ್ ಪಡೆಯಿರಿ' ಎಂಬ ಸಂದೇಶ ಬಂದಿತ್ತು. ಅಮೆಜಾನ್‌ನಿಂದ ಹಲವು ವಸ್ತುಗಳನ್ನು ತರಿಸಿದ್ದೆ. ಅಮೆಜಾನ್ ಸಂದೇಶ ನಿಜ ಇರಬಹುದು ಎಂದು ಲಿಂಕ್ ಕ್ಲಿಕ್ ಮಾಡಿದೆ.

ಲಿಂಕ್ ತೆರೆದಾಗ, ಹೆಸರು, ವಿಳಾಸ, ಮೊಬೈಲ್ ನಂಬರ್, ವೈಯಕ್ತಿಕ ಮಾಹಿತಿ, ಬ್ಯಾಂಕ್ ಖಾತೆ ಸಂಖ್ಯೆ ಕೇಳಿತ್ತು. ಎಲ್ಲವನ್ನೂ ಭರ್ತಿ ಮಾಡಿದೆ. ಕೆಲವೇ ನಿಮಿಷಗಳಲ್ಲಿ ಕರೆಯೊಂದು ಬಂದಿತ್ತು. ಅಮೆಜಾನ್ ಕಂಪನಿ ಪ್ರತಿನಿಧಿ ಹಿಂದಿಯಲ್ಲಿ ಮಾತನಾಡಿ, 'ಅಭಿನಂದನೆಗಳು. ನಿಮ್ಮ ಮೊಬೈಲ್ ನಂಬರ್ ಲಕ್ಕಿ ಡ್ರಾನಲ್ಲಿ ಆಯ್ಕೆಯಾಗಿದೆ. ಹೀಗಾಗಿ, 10 ಲಕ್ಷ ಮೌಲ್ಯದ ವಸ್ತುಗಳನ್ನು ಉಚಿತವಾಗಿ ಖರೀದಿಸಬಹುದು. ಸದ್ಯದಲ್ಲೇ ಗಿಫ್ಟ್ ವೋಚರ್ ಕಳುಹಿಸಲಾಗುವುದು' ಎಂದು ಕರೆ ಕಡಿತಗೊಳಿಸಿದ. ನನಗೂ ಖುಷಿಯಾಗಿತ್ತು.

ಇದಾದ ಮರುದಿನವೇ ಯುವತಿಯೊಬ್ಬರು ಕರೆ ಮಾಡಿದ್ದರು. ಅಮೆಜಾನ್ ಗಿಫ್ಟ್ ವೋಚರ್ ವಿಭಾಗದ ಮುಖ್ಯಸ್ಥೆ ಎಂದಿದ್ದ ಯುವತಿ, 'ನಿಮ್ಮ ವಿಳಾಸಕ್ಕೆ ಗಿಫ್ಟ್ ವೋಚರ್ ಕಳುಹಿಸುತ್ತೇವೆ. ಅದರಲ್ಲಿರುವ ಗೌಪ್ಯ ಸಂಖ್ಯೆಗಳನ್ನು ಬಳಸಿಕೊಂಡು ಅಮೆಜಾನ್ ಜಾಲತಾಣದಲ್ಲಿ ವಸ್ತುಗಳನ್ನು ಖರೀದಿಸಬಹುದು. ನಿಮ್ಮ ಹೆಸರು ಹಾಗೂ ವಿಳಾಸ ಪರಿಶೀಲಿಸಬೇಕು. ಆಧಾರ್ ಕಳುಹಿಸಿ' ಎಂದರು. ಕಳುಹಿಸಿದೆ. ನಂತರ, ಬ್ಯಾಂಕ್ ಖಾತೆ ಮಾಹಿತಿ ಕೇಳಿದರು. ಅದನ್ನೂ ತಿಳಿಸಿದೆ.

10 ಲಕ್ಷ ಗಿಫ್ಟ್ ವೋಚರ್ ಪಡೆಯಲು ಕೆಲವು ಷರತ್ತು ಇರುವುದಾಗಿ ಹೇಳಿದ್ದರು. 1,500 ಶುಲ್ಕ ಸಮೇತ ನೋಂದಣಿ ಮಾಡಿಕೊಳ್ಳಬೇಕು ಎಂದಿದ್ದರು. ಅದನ್ನು ನಂಬಿ ಅವರು ಹೇಳಿದ್ದ ಖಾತೆಗೆ ₹1,500 ಪಾವತಿ ಮಾಡಿದ್ದೆ. ಮರುದಿನ ಪುನಃ ಕರೆ ಮಾಡಿದ್ದ ಯುವತಿ, 'ನಿಮ್ಮ ಗಿಫ್ಟ್ ವೋಚರ್ ಸಿದ್ಧವಾಗಿದೆ. ಸದ್ಯದಲ್ಲೇ ಕಳುಹಿಸಲಾಗುವುದು' ಎಂದಿದ್ದರು. ಆದರೆ, ಎರಡು ದಿನವಾದರೂ ಗಿಫ್ಟ್ ವೋಚರ್ ಬರಲಿಲ್ಲ.

ಯುವತಿಯಿಂದ ಮತ್ತೊಮ್ಮೆ ಕರೆ ಬಂತು. 'ನಿಮ್ಮ ಗಿಫ್ಟ್ ವೋಚರ್ ಕಳುಹಿಸಲು ಮತ್ತಷ್ಟು ಶುಲ್ಕ ಹಾಗೂ ಭಾರತ ಸರ್ಕಾರದ ತೆರಿಗೆ ಪಾವತಿಸಬೇಕು' ಎಂದರು. ಆಗಲೂ ₹10 ಸಾವಿರ ಕಳುಹಿಸಿದೆ. ಪುನಃ ಕರೆ ಮಾಡಿದ್ದ ಯುವತಿ, 'ನಿಮ್ಮ ಗಿಫ್ಟ್ ವೋಚರ್ ಮೊತ್ತ 10 ಲಕ್ಷ ಇದೆ. ಹೀಗಾಗಿ ಆದಾಯ ತೆರಿಗೆ ಅಧಿಕಾರಿಗಳಿಗೆ ಅಮೆಜಾನ್ ಕಂಪನಿಯಿಂದ ದಾಖಲೆ ನೀಡಬೇಕು. ಪರಿಶೀಲನೆ ಮಾಡಿಸಬೇಕು. ಇದಕ್ಕೂ ಶುಲ್ಕವಿದೆ' ಎಂದಿದ್ದರು.

ಅದನ್ನೂ ನಂಬಿ ₹ 10 ಲಕ್ಷ ಗಿಫ್ಟ್ ವೋಚರ್ ಸಿಗಬಹುದೆಂದು ₹25 ಸಾವಿರ ಪಾವತಿಸಿದ್ದೆ. ಇದಾದ ನಂತರ ಯುವತಿ, ಗಿಫ್ಟ್ ವೋಚರ್ ಹೆಸರಿನಲ್ಲಿ ಹಂತ ಹಂತವಾಗಿ 3.50 ಲಕ್ಷ ಪಡೆದಿದ್ದರು. ಕೊನೆಯಲ್ಲಿ ಯುವತಿ ಪದೇ ಪದೇ ನೋಂದಣಿ ಹಾಗೂ ಅಂಚೆ ಹೆಸರಿನಲ್ಲಿ ಹಣ ಕೇಳುತ್ತಿದ್ದಳು. ಆಗ ಅನುಮಾನ ಬಂದು, ಪತಿಗೆ ವಿಷಯ ತಿಳಿಸಿದೆ. ಅವರು ಇದೊಂದು ಸೈಬರ್ ವಂಚನೆ ಜಾಲವೆಂದು ಹೇಳಿದರು. ನಂತರವೇ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದೇನೆ. ಗಿಫ್ಟ್ ವೋಚರ್ ಆಸೆಗೆ ಹಣ ಕಳೆದುಕೊಂಡಿದ್ದೇನೆ. ನೀವು ಎಚ್ಚರಿಕೆ ವಹಿಸಿ. ಯಾವುದೇ ಗಿಫ್ಟ್ ಹಾಗೂ ಆಮಿಶಗಳಿಗೆ ಒಳಗಾಗಬೇಡಿ.

- ನೊಂದ ಮಹಿಳೆ

ಅಮೆಜಾನ್, ಫ್ಲಿಪ್‌ಕಾರ್ಟ್, ಮಿಶೊ ಹೆಸರು ಬಳಕೆ ಸೈಬರ್ ವಂಚಕರು, ಪ್ರತಿಷ್ಠಿತ ಅಮೆಜಾನ್ - ಫ್ಲಿಪ್‌ಕಾರ್ಟ್, ಮಿಷೊ ಹಾಗೂ ಇತರೆ ಆನ್‌ಲೈನ್ ಶಾಪಿಂಗ್ ಜಾಲತಾಣಗಳ ಗಿಫ್ಟ್ ವೋಚರ್ ಹೆಸರಿನಲ್ಲಿ ವಂಚನೆ ಮಾಡುತ್ತಿದ್ದಾರೆ. ಇಂಥ ಜಾಲದ ಬಗ್ಗೆ ಜನರು ಎಚ್ಚರಿಗೆ ವಹಿಸಬೇಕು.

ಸೈಬರ್ ಅಪರಾಧವಾದರೆ ದೂರು ನೀಡಿ:
112 ಅಥವಾ **1930** ಜಾಲತಾಣ: https://cybercrime.gov.in/

ಚಳಿಗಾಲದಲ್ಲಿ ಚರ್ಮ ರಕ್ಷಣೆ

ಮೂಗಿನ ತುದಿ ಉರಿಯತೊಡಗಿದರೆ, ಮೀನಖಂಡಗಳ ಬಳಿ ಕೆರೆತ ಶುರುವಾದರೆ, ಎಮ್ಮೆಯಾಗಿರಬೇಕಿತ್ತು ದೇವರೆ, ಈ ಬೆನ್ನಿನ ಕೆರತಕ್ಕೆ ಗೋಡೆಗಳಿಗೆ ಉಜ್ಜಿಕೊಳ್ಳಬಹುದಿತ್ತು ಅಂತನಿಸುತ್ತಿದ್ದರೆ.. ಚಳಿಗಾಲದ ಕೆರೆತ ಆರಂಭವಾಗಿದೆ ಎಂತಲೇ ಅರ್ಥ.

ಚಳಿಗಾಲದಲ್ಲಿ ನೀರು ಕುಡಿಯುವುದು ಕಡಿಮೆಯಾಗುತ್ತದೆ. ಚರ್ಮ ಶುಷ್ಕವಾಗುತ್ತ ಹೋಗುತ್ತದೆ. ಚರ್ಮದಲ್ಲಿ ತೇವಾಂಶ ಕಡಿಮೆ ಆದಷ್ಟೂ ಚರ್ಮ ಬಿರುಕುಬಿಡುವುದು, ಕೆರೆಯುವುದು ಶುರುವಾಗುತ್ತದೆ. ಇದನ್ನು ನಿಯಂತ್ರಣದಲ್ಲಿಡಲು ಎರಡು ಸರಳವಾದ ಮನೆ ಮದ್ದುಗಳಿವೆ.

ಒಂದು, ಸೋಪುಗಳನ್ನು ಬಳಸುವುದು ನಿಲ್ಲಿಸಬೇಕು. ಇಲ್ಲವೇ ಗ್ಲಿಸರಿನ್ ಯುಕ್ತ ಸೋಪುಗಳನ್ನು ಬಳಸಬೇಕು. ಸ್ನಾನಕ್ಕೆ ಮುನ್ನ ಮೈಗೆ ಕೊಬ್ಬರಿ ಎಣ್ಣೆ ಲೇಪಿಸಿಕೊಳ್ಳಬೇಕು. ಒಂದೆರಡು ನಿಮಿಷಗಳ ನಂತರ ಉಗುರುಬೆಚ್ಚಗಿನ ನೀರಿನಿಂದ ಸ್ನಾನ ಮಾಡಬೇಕು. ಚಳಿಗೆ ಹೆದರಿ ಸುಡುಸುಡುವ ನೀರಿನಿಂದ ಸ್ನಾನ ಮಾಡಿದರೆ ಶುಷ್ಕತನ ಹೆಚ್ಚುವುದು. ಸೋಪಿನ ಬದಲು ಕಡಲೆ ಹಿಟ್ಟು ಬಳಸಿದರೂ ಚರ್ಮದ ತೇವಾಂಶ ಕಾಪಾಡಿಕೊಳ್ಳಬಹುದು. ಕಡಲೆ ಹಿಟ್ಟಿಗೆ, ಮೊಸರು ಅಥವಾ ಹಾಲು ಏನೂ ಇಲ್ಲದಿದ್ದಲ್ಲಿ ನೀರು ಬೆರೆಸಿಯೂ ಲೇಪನ ಮಾಡಿಕೊಳ್ಳಬಹುದು.

ಚರ್ಮದ ತೇವಾಂಶ ಕಾಪಿಟ್ಟು ಮೃದುಗೊಳಿಸುವ ಈ ಎರಡು ಸೂತ್ರಗಳು, ಚಳಿಗಾಲವನ್ನು ಸುಸೂತ್ರವಾಗಿ ಕಳೆಯುವಂತೆ ಮಾಡುತ್ತವೆ.

ಶಂಕರ ವೀಣೆಯಲ್ಲಿ ತಾನ–ತರಾನ

ಉಮಾ ಅನಂತ್

ಸರಸ್ವತಿ ವೀಣೆ, ಚಿತ್ರವೀಣೆ, ಮೋಹನ ವೀಣೆ, ವಿಪಂಚಿ ವೀಣೆ... ಒಂದೇ ಎರಡೇ. ಇದೇ ಸಾಲಿಗೆ ಸೇರಿದ ಶಂಕರ ವೀಣೆ ವಿಶಿಷ್ಟ ನಾದ ಕೊಡುವ ತಂತಿವಾದ್ಯ. ಈ ವೀಣೆಯ ಪ್ರತಿಪಾದಕಿ ಹಿಂದೂಸ್ತಾನಿ ಸಂಗೀತ ವಿದುಷಿ ಕಮಲಾ ಶಂಕರ್. ಉತ್ತರ ಪ್ರದೇಶದ ವಾರಾಣಸಿಯವರಾದ ಕಮಲಾ, ಸ್ಲೈಡ್ ಗಿಟಾರ್ ಅಥವಾ ಹವಾಯಿಯನ್ ಗಿಟಾರ್ ಎಂಬ ತಂತಿವಾದ್ಯವನ್ನು ಮಾರ್ಪಡಿಸಿ ಹೊಸ ಶಂಕರ ವೀಣೆಯನ್ನು ಅನ್ವೇಷಿಸಿದ್ದು, ದೇಶದಲ್ಲೇ ಈ ವೀಣಾ ಪ್ರಕಾರವನ್ನು ನುಡಿಸುವ ವಿರಳ ಕಲಾವಿದೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಶಂಕರ ವೀಣೆಯಲ್ಲಿ ನುಡಿಸಾಣಿಕೆ ಕ್ರಮ ವಿಭಿನ್ನ. ಮಧುರಾತಿಮಧುರ ನಾದ ಕೊಡುವ ಈ ವೀಣೆಯ ‘ಗಾಯಕಿ ಅಂಗ್’ನಲ್ಲಿ ವಿಶೇಷ ನೈಪುಣ್ಯ ಪಡೆದಿರುವ ಕಮಲಾ ಕಳೆದ 42 ವರ್ಷಗಳಿಂದ ಈ ವಾದ್ಯ ನುಡಿಸುತ್ತಿದ್ದಾರೆ. ಸ್ಲೈಡ್ ಗಿಟಾರ್ ವಾದ್ಯಕ್ಕೆ ಇನ್ನಷ್ಟು ಸುಧಾರಿತ ರೂಪ ನೀಡಿ ‘ಶಂಕರ ವೀಣೆ’ ಎಂದು ಹೆಸರಿಟ್ಟದ್ದು 2001ರಲ್ಲಿ.

ಆಕಾಶವಾಣಿಯ ಟಾಪ್ ಗ್ರೇಡ್ ಕಲಾವಿದೆಯಾಗಿರುವ ಕಮಲಾ, ತಾನ್‌ಸೇನ್ ಸಮಾರೋಹ್, ಸಂಕಟ್ ಮೋಚನ್, ಸವಾಯ್ ಗಂಧರ್ವ ಉತ್ಸವ, ಉಸ್ತಾದ್ ಅಲ್ಲಾವುದ್ದೀನ್ ಖಾನ್ ಸಂಗೀತ ಸಮಾರೋಹಗಳಲ್ಲಿ ಕಛೇರಿ ನೀಡಿದ್ದಲ್ಲದೆ. ಯುರೋಪ್‌ನ ಬುಡಾಪೆಸ್ಟ್ ಉತ್ಸವ, ಆಸ್ಟ್ರೇಲಿಯಾ, ಅಬುಧಾಬಿ, ದುಬೈ, ಕುವೈತ್, ಅಮೆರಿಕ, ಲಂಡನ್‌ಗಳಲ್ಲಿ ಈ ತಂತಿವಾದ್ಯದ ಸವಿಯನ್ನು ಉಣಬಡಿಸಿದ್ದಾರೆ.

‘ನಮ್ಮದು ಸಂಗೀತ ಪರಂಪರೆಯ ಕುಟುಂಬವೇನಲ್ಲ. ನನ್ನ ತಾಯಿ ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಡುತ್ತಿದ್ದರು. ಆದರೆ ಸಂಗೀತವನ್ನು ವೃತ್ತಿಯಾಗಿ ತೆಗೆದುಕೊಂಡದ್ದು ನಾನೇ ಮೊದಲು. ಗಿಟಾರ್ ವಾದ್ಯದತ್ತ ಚಿಕ್ಕವಳಿದ್ದಾಗಲೇ ಆಕರ್ಷಿತಳಾದೆ. ಗಿಟಾರ್‌ನಲ್ಲಿ ಗಾಯಕಿ ಅಂಗ (ಗಾಯನದಂತೇ ನುಡಿಸಾಣಿಕೆ) ಹಾಗೂ ತಂತ್ರಕಾರಿ ಅಂಶಗಳನ್ನು ಚೆನ್ನಾಗಿ ಒಡಮೂಡಿಸಬಹುದು ಎಂದು ಕಂಡುಕೊಂಡೆ. ಈ ತಂತಿವಾದ್ಯದಲ್ಲೇ ಹೆಚ್ಚಿನ ಅಧ್ಯಯನ ಮಾಡಿದ ಫಲವೇ ‘ಶಂಕರ ವೀಣೆ’ಯ ಉಗಮ’ ಎಂದು ಹೇಳುತ್ತಾರೆ ವಿದುಷಿ ಕಮಲಾ.

‘ಶಂಕರ ವೀಣೆಯನ್ನು ವಿಶೇಷವಾಗಿ ರೂಪಿಸಿದ್ದೇನೆ. ಮರದಿಂದ ತಯಾರಿಸಿದ್ದು 22 ತಂತಿ ಅಳವಡಿಸಲಾಗಿದೆ. ಇದರ ‘ಟೋನಲ್ ಕ್ವಾಲಿಟಿ’ ವಿಭಿನ್ನ. ‘ಗಾಯಕಿ ಅಂಗ್’ ಸೂಕ್ತವಾಗುವಂತೆ ರಚಿಸಲಾಗಿದೆ. ಇದರಲ್ಲಿ ಹಿಂದೂಸ್ತಾನಿ ಸಂಗೀತವಲ್ಲದೆ ಭಜನ್, ಠುಮ್ರಿ, ಬಾಲಿವುಡ್ ಹಾಡುಗಳನ್ನು ಮಧುರಾತಿಮಧುರವಾಗಿ ನುಡಿಸಬಹುದು’ ಎಂದು ವಾದ್ಯದ ರಚನೆಯನ್ನು ವಿವರಿಸುತ್ತಾರೆ ಅವರು.

‘ನನಗೆ ರವೀಂದ್ರ ಸಂಗೀತ (ಮ್ಯೂಸಿಕ್ ಆಫ್ ಬೆಂಗಾಲ್) ಬಹಳ ಇಷ್ಟ. ಇದನ್ನು ಶಂಕರ ವೀಣೆಯಲ್ಲಿ ಚೆನ್ನಾಗಿ ನುಡಿಸಬಹುದು’ ಎಂದೂ ಹೇಳುತ್ತಾರೆ ಈ ವಿದುಷಿ. www.drkamalashankar.com ವೆಬ್‌ಸೈಟ್‌ನಲ್ಲಿ ಇವರ ಶಂಕರ ವೀಣೆ ಕಛೇರಿಗಳನ್ನು ಆಸ್ವಾದಿಸಬಹುದು.

ಭಾನುವಾರ ಬೆಂಗಳೂರಿನಲ್ಲಿ...

ಭಾನುವಾರ (ಡಿ. 3) ಬೆಂಗಳೂರಿನ ಬಿಜಾಪುರೆ ಹಾರ್ಮೋನಿಯಂ ಫೌಂಡೇಶನ್ ಬೆಂಗಳೂರಿನ ಎನ್.ಆರ್. ಕಾಲೊನಿಯಲ್ಲಿರುವ ಸಿ. ಅಶ್ವಥ್ ಸಭಾಭವನದಲ್ಲಿ ಆಯೋಜಿಸಿರುವ ‘ಸ್ವರ ಸಂಭ್ರಮ’ ಕಾರ್ಯಕ್ರಮದಲ್ಲಿ ಶಂಕರ ವೀಣೆ ಹಾಗೂ ಹಾರ್ಮೋನಿಯಂ ವಾದಕ ರವೀಂದ್ರ ಕಾಟೋಟಿ ಅವರ ಜುಗಲ್‌ಬಂದಿ ಕಛೇರಿಯಲ್ಲಿ ಭಾಗವಹಿಸಲಿದ್ದಾರೆ.

ವಿದುಷಿ ಕಮಲಾ ಶಂಕರ್

ಸಂಕ್ಷಿಪ್ತ ಸುದ್ದಿ

ಎನ್‌ಕೌಂಟರ್ ಎಲ್‌ಇಟಿ ಉಗ್ರನ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಲಷ್ಕರ್–ಎ–ತಯಬಾದ ಭಯೋತ್ಪಾದಕನನ್ನು ಹೊಡೆದುರುಳಿಸಿದ್ದಾರೆ. ಹತ್ಯೆಗೀಡಾದ ಉಗ್ರನನ್ನು ಪಿಂಜೂರ ಶೋಪಿಯಾನ್ ನಿವಾಸಿ ಕಿಫಾಯತ್ ಅಯೂಬ್ ಅಲಿ ಎಂದು ಗುರುತಿಸಲಾಗಿದೆ.

ಈತ ಹಲವು ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಪೊಲೀಸ್ ದಾಖಲೆಗಳಿಂದ ಗೊತ್ತಾಗಿದೆ. ಎನ್‌ಕೌಂಟರ್ ನಡೆದ ಸ್ಥಳದಲ್ಲಿ ಪತ್ತೆಯಾದ ಒಂದು ಪಿಸ್ತೂಲ್, ಐದು ಸುತ್ತಿನ ಗುಂಡುಗಳು, ಎರಡು ಗ್ರೆನೇಡ್‌ಗಳು ಸೇರಿದಂತೆ ಇನ್ನಿತರ ವಸ್ತುಗಳನ್ನು ಜಪ್ತಿ ಮಾಡಲಾಗಿದೆಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

‘ರಾಜಸ್ಥಾನದ ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ’

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಅತಂತ್ರ ಫಲಿತಾಂಶ ಬಂದರೆ ಕಾಂಗ್ರೆಸ್ ಶಾಸಕರನ್ನು ಬೆಂಗಳೂರಿಗೆ ಕರೆದೊಯ್ಯಲು ಸಿದ್ಧತೆ ನಡೆಸಲಾಗಿದೆ ಎಂದು ಬಿಜೆಪಿಯ ರಾಜ್ಯಸಭಾ ಸದಸ್ಯ ಹಾಗೂ ಸವಾಯ್ ಮಾಧೋಪುರ್ ಕ್ಷೇತ್ರದ ಅಭ್ಯರ್ಥಿ ಕಿರೋಡೀ ಲಾಲ್ ಮೀನಾ ಆರೋಪಿಸಿದ್ದಾರೆ.

ಕಾಂಗ್ರೆಸ್ ಪಕ್ಷವು ‘ಶಾಸಕರ ಖರೀದಿ’ಯನ್ನು ಹಿಂದಿನಿಂದಲೂ ಮಾಡಿಕೊಂಡು ಬರುತ್ತಿದ್ದು, ಈ ಬಾರಿಯೂ ಅಂತಹ ಪ್ರಯತ್ನಕ್ಕೆ ಮುಂದಾಗಲಿದೆ ಎಂದು ಟೀಕಿಸಿದರು. ‘ಕಾಂಗ್ರೆಸ್ ಪಕ್ಷ ತನ್ನ ಶಾಸಕರನ್ನು ಒಟ್ಟಾಗಿ ಇಡಲು ಬೆಂಗಳೂರಿನಲ್ಲಿ ಎರಡು ರೆಸಾರ್ಟ್‌ಗಳನ್ನು ಈಗಾಗಲೇ ಬುಕ್ ಮಾಡಿದೆ ಎಂಬ ಖಚಿತ ಮಾಹಿತಿ ನನಗೆ ಲಭಿಸಿದೆ’ ಎಂದಿದ್ದಾರೆ.

ಮಹುವಾ ಉಚ್ಚಾಟನೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್‌ನ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಉಚ್ಚಾಟಿಸಬೇಕು ಎಂದು ಶಿಫಾರಸು ಮಾಡಿರುವ ಲೋಕಸಭೆ ನೀತಿ ಸಮಿತಿಯ ವರದಿಯನ್ನು ಲೋಕಸಭೆಯಲ್ಲಿ ಸೋಮವಾರ ಮಂಡಿಸಲಾಗುತ್ತದೆ.

ವಿರೋಧ ಪಕ್ಷಗಳು ಇಂತಹ ಕ್ರಮಕ್ಕೆ ವಿರೋಧ ವ್ಯಕ್ತಪಡಿಸುವ ಸಾಧ್ಯತೆ ದಟ್ಟವಾಗಿರುವ ಕಾರಣ, ಗದ್ದಲದಿಂದ ಕೂಡಿದ ಕಲಾಪಕ್ಕೆ ಲೋಕಸಭೆ ಅಧಿವೇಶನದ ಮೊದಲ ದಿನ ಸಾಕ್ಷಿಯಾಗುವ ನಿರೀಕ್ಷೆ ಇದೆ.

ಈ ಕುರಿತು ಲೋಕಸಭೆ ಸಚಿವಾಲಯವು ಮಾಹಿತಿ ಪ್ರಕಟಿಸಿದೆ. ನೀತಿ ಸಮಿತಿ ಅಧ್ಯಕ್ಷ ವಿನೋದ್‌ಕುಮಾರ್ ಸೋನಕರ್ ಇಲ್ಲವೇ ಸದಸ್ಯ ಅಪರಾಜಿತ ಸಾರಂಗಿ ಅವರು ಈ ವರದಿಯನ್ನು ಸದನದಲ್ಲಿ ಮಂಡಿಸಲಿದ್ದಾರೆ ಎಂದು ಸಚಿವಾಲಯದ ಮಾಹಿತಿ ತಿಳಿಸಿದೆ.

ಸದನದಲ್ಲಿ ವರದಿ ಮಂಡನೆ ಮೂಲಕ ಮಹುವಾ ಅವರನ್ನು ಉಚ್ಚಾಟನೆ ಮಾಡಲಾಗದು. ಈ ಬಗ್ಗೆ ಸರ್ಕಾರ ನಿಲುವಳಿ ಮಂಡಿಸಿ, ಸದನದ ಅಂಗೀಕಾರ ಪಡೆಯಬೇಕು.

ಮೊದಲ ಮಹಿಳಾ ಕಮಾಂಡಿಂಗ್ ಆಫೀಸರ್ ನೇಮಕ

ನವದೆಹಲಿ(ಪಿಟಿಐ): ಎಲ್ಲ ಶ್ರೇಣಿಯ ಹುದ್ದೆಗಳಿಗೆ ಮಹಿಳೆಯರನ್ನು ನೇಮಕ ಮಾಡಬೇಕು ಎಂಬ ತನ್ನ ತತ್ವದಡಿ ಭಾರತೀಯ ನೌಕಾಪಡೆಯು ಮೊದಲ ಮಹಿಳಾ ಕಮಾಂಡಿಂಗ್ ಆಫೀಸರ್ ನೇಮಕ ಮಾಡಿದೆ ಎಂದು ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್.ಹರಿ ಕುಮಾರ್ ಶುಕ್ರವಾರ ಹೇಳಿದ್ದಾರೆ.

ನೌಕಾಪಡೆ ದಿನಕ್ಕೂ ಮುನ್ನ ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ನೌಕಾಪಡೆಯಲ್ಲಿನ ಒಟ್ಟು ಮಹಿಳಾ ಅಗ್ನಿವೀರರ ಸಂಖ್ಯೆ ಸಾವಿರ ಗಡಿ ದಾಟಿದೆ ಎಂದರು.

ಸನ್ನದ್ಧತೆ: ಕಳೆದ ಒಂದು ವರ್ಷದ ಅವಧಿಯಲ್ಲಿ ನೌಕಾಪಡೆಯು ಕಡಲ ಗಡಿಯ ರಕ್ಷಣೆಗೆ ಸಂಬಂಧಿಸಿ ಕಾರ್ಯಾಚರಣೆ ಸನ್ನದ್ಧತೆಯನ್ನು ಮೇಲ್ದರ್ಜೆಗೇರಿಸಿದೆ. ಈ ಸಂಬಂಧ ಯುದ್ಧನೌಕೆಗಳೂ, ಜಲಾಂತರ್ಗಾಮಿಗಳು ಹಾಗೂ ಯುದ್ಧವಿಮಾನಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ ಎಂದು ತಿಳಿಸಿದರು.

‘ಕತಾರ್‌ನಿಂದ ಮಾಜಿ ಸಿಬ್ಬಂದಿ ವಾಪಸು ತರಲು ಸರ್ವಪ್ರಯತ್ನ’: ಕತಾರ್‌ನ ನ್ಯಾಯಾಲಯವೊಂದರಿಂದ ಮರಣ ದಂಡನೆಗೆ ಗುರಿಯಾಗಿರುವ ನೌಕಾಪಡೆಯ 8 ಮಂದಿ ಮಾಜಿ ಸಿಬ್ಬಂದಿಯನ್ನು ವಾಪಸು ಕರೆತರುವ ವಿಚಾರದಲ್ಲಿ ಸರ್ಕಾರ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್ ಹೇಳಿದ್ದಾರೆ.

ತಮಿಳುನಾಡು: ಮುಖ್ಯಮಂತ್ರಿ ಜೊತೆ ಚರ್ಚಿಸಿ ಪರಿಹರಿಸಿಕೊಳ್ಳಲು ರಾಜ್ಯಪಾಲರಿಗೆ ಸುಪ್ರೀಂಕೋರ್ಟ್ ಸೂಚನೆ

‘ತಡೆಹಿಡಿದ ಮಸೂದೆ ರಾಷ್ಟ್ರಪತಿಗೆ ಕಳಿಸುವಂತಿಲ್ಲ’

ನವದೆಹಲಿ (ಪಿಟಿಐ): ರಾಜ್ಯಪಾಲರ ಕಚೇರಿಯಿಂದ ವಾಪಸ್ ಕಳುಹಿಸಿದ ಮಸೂದೆಗಳನ್ನು ವಿಧಾನಸಭೆಯು ಮರು ಅಂಗೀಕರಿಸಿ ಕಳುಹಿಸಿದ ಬಳಿಕ ರಾಜ್ಯಪಾಲರು ಅದನ್ನು ರಾಷ್ಟ್ರಪತಿಗಳಿಗೆ ಕಳುಹಿಸಲು ಬರುವುದಿಲ್ಲ ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

ಮಸೂದೆಗಳಿಗೆ ಅಂಕಿತ ನೀಡಲು ರಾಜ್ಯಪಾಲ ರವಿ ಅವರು ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ ತಮಿಳುನಾಡು ಸರ್ಕಾರವು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಅವರಿದ್ದ ನ್ಯಾಯಪೀಠ ನಡೆಸಿತು.

ರಾಜ್ಯ ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು, ಸರ್ಕಾರ ಮತ್ತೊಮ್ಮೆ ಅಂಗೀಕರಿಸಿ ರಾಜ್ಯಪಾಲರ ಅಂಕಿತಕ್ಕಾಗಿ ಕಳುಹಿಸಿದ ಮಸೂದೆಗಳನ್ನು ರಾಷ್ಟ್ರಪತಿ ಪರಿಗಣನೆಗಾಗಿ ರಾಜ್ಯಪಾಲರು ಕಳುಹಿಸಿ ದ್ದಾರೆ ಎಂದು ಮಾಹಿತಿ ನೀಡಿದರು.

ಆಗ ಸಂವಿಧಾನದ 200ನೇ ವಿಧಿಯನ್ನು ಪ್ರಸ್ತಾಪಿಸಿದ ಪೀಠವು, ರಾಜ್ಯಪಾಲರ ಕಚೇರಿಯಿಂದ ವಾಪಸ್ ಕಳುಹಿಸಿದ ಮಸೂದೆಗಳನ್ನು ವಿಧಾನಸಭೆಯು ಮರು ಅಂಗೀಕರಿಸಿ ಕಳುಹಿಸಿದ ನಂತರ ರಾಜ್ಯಪಾಲರು ಅದನ್ನು ರಾಷ್ಟ್ರಪತಿಗಳಿಗೆ ಕಳುಹಿಸಲು ಬರುವುದಿಲ್ಲ ಎಂದು ಹೇಳಿತು.

ತಮಿಳುನಾಡು ವಿಧಾನಸಭೆಯು ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕದೇ ಇರುವುದರಿಂದ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ರಾಜ್ಯಪಾಲ ಆರ್.ಎನ್. ರವಿ ಅವರು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಬೇಕು ಎಂದು ಪೀಠ ಸೂಚಿಸಿತು.

‘ಬಿಕ್ಕಟ್ಟನ್ನು ರಾಜ್ಯಪಾಲರು ಬಗೆಹರಿಸಬೇಕು ಎಂದು ನಾವು ಬಯಸುತ್ತೇವೆ. ರಾಜ್ಯಪಾಲರು ಮುಖ್ಯಮಂತ್ರಿ ಜತೆ ಮಾತನಾಡಿ, ಬಿಕ್ಕಟ್ಟನ್ನು ಪರಿಹರಿಸಿಕೊಂಡರೆ ನಾವು ಅದನ್ನು ಶ್ಲಾಘಿಸುತ್ತೇವೆ. ರಾಜ್ಯಪಾಲರು ಮುಖ್ಯಮಂತ್ರಿಯನ್ನು ಮಾತುಕತೆಗೆ ಆಹ್ವಾನಿಸಿ ಚರ್ಚೆ ನಡೆಸಲಿ’ ಎಂದು ಹೇಳಿತು. ಅರ್ಜಿ ವಿಚಾರಣೆಯನ್ನು ಇದೇ ತಿಂಗಳ 11ಕ್ಕೆ ನಿಗದಿಪಡಿಸಿತು.

ಇದಕ್ಕೂ ಮುನ್ನ ಪೀಠವು, ವಿಧಾನಸಭೆ ಅಂಗೀಕರಿಸಿದ ಹಲವು ಮಸೂದೆಗಳಿಗೆ ಅಂಕಿತ ಹಾಕಲು ವಿಳಂಬ ಮಾಡುತ್ತಿರುವ ರಾಜ್ಯಪಾಲರ ನಡೆಯನ್ನು ಪ್ರಶ್ನಿಸಿತು. ಅಹವಾಲುಗಳೊಂದಿಗೆ ಕಕ್ಷಿದಾರರು ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗುವವರೆಗೆ ರಾಜ್ಯಪಾಲರು ಏಕೆ ಕಾಯಬೇಕು ಎಂದು ಕೂಡ ಪ್ರಶ್ನಿಸಿತು.

ಮಸೂದೆಗಳು 2020ರ ಜನವರಿಯಿಂದ ಅಂಕಿತಕ್ಕೆ ಬಾಕಿ ಇವೆ ಎಂದರೆ, ರಾಜ್ಯಪಾಲರು ಮೂರು ವರ್ಷಗಳವರೆಗೆ ಏನು ಮಾಡುತ್ತಿದ್ದರು ಎಂದು ಪ್ರಶ್ನಿಸಿತು.

ಅಟಾರ್ನಿ ಜನರಲ್‌ಗೆ ಸೂಚನೆ: ಪಶ್ಚಿಮಬಂಗಾಳದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ಸೌಹಾರ್ದಯುತ ನೇಮಕಕ್ಕೆ ತಮ್ಮ ಅಧಿಕಾರ ಬಳಸಿ ನೆರವು ನೀಡುವಂತೆ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸುಪ್ರೀಂಕೋರ್ಟ್ ಸೂಚಿಸಿದೆ. ರಾಜ್ಯದ ವಿಶ್ವವಿದ್ಯಾಲಯಗಳು ಹೇಗೆ ನಡೆಯಬೇಕೆಂಬ ಬಗ್ಗೆ ಮಮತಾಬ್ಯಾನರ್ಜಿ ಸರ್ಕಾರ ಮತ್ತು ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರ ನಡುವೆ ತೀವ್ರ ಸಂಘರ್ಷ ನಡೆಯುತ್ತಿದೆ.

ರಾಜ್ಯಪಾಲರಿಗೆ ಹಿನ್ನಡೆ, ಸರ್ಕಾರಕ್ಕಲ್ಲ: ಕೇರಳ ಸಿ.ಎಂ

ತಿರುವನಂತಪುರ: ಕಣ್ಣೂರು ವಿಶ್ವವಿದ್ಯಾಲಯದ ಕುಲಪತಿಯ ಮರು ನೇಮಕ ವಿಷಯದಲ್ಲಿ ರಾಜ್ಯ ಸರ್ಕಾರ ಹಸ್ತಕ್ಷೇಪ ಮಾಡಿದೆ ಎಂದಿರುವ ರಾಜ್ಯಪಾಲ ಆರಿಫ್ ಮೊಹಮದ್ ಖಾನ್ ಅವರ ಹೇಳಿಕೆಯನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿರಸ್ಕರಿಸಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕುಲಪತಿ ಮರುನೇಮಕವನ್ನು ರದ್ದುಗೊಳಿಸಿ ಸುಪ್ರೀಂಕೋರ್ಟ್ ಗುರುವಾರ ನೀಡಿರುವ ಆದೇಶವು ರಾಜ್ಯಪಾಲರಿಗೆ ಹಿನ್ನಡೆಯಾದಂತೆ ಹೊರತು ಸರ್ಕಾರಕ್ಕೆ ಅಲ್ಲ ಎಂದೂ ಹೇಳಿದರು.

ಕುಲಪತಿಯಾಗಿ ಗೋಪಿನಾಥ್ ರವೀಂದ್ರನ್ ಅವರ ಮರುನೇಮಕವು ಯುಜಿಸಿ ನಿಯಮಾವಳಿಗೆ ವಿರುದ್ಧವಾಗಿ-ರಲಿಲ್ಲ ಎಂದು ಕೋರ್ಟ್ ಆದೇಶವು ಸ್ಪಷ್ಟಪಡಿಸಿದೆ. ಆದರೆ ರಾಜ್ಯಪಾಲರು ತಮ್ಮ ಮೇಲೆ ತೀವ್ರ ಒತ್ತಡ ಇತ್ತು ಎಂದು ಹೇಳಿದ ಆಧಾರದ ಮೇಲೆ ಮರುನೇಮಕವನ್ನು ರದ್ದುಪಡಿಸಲಾಗಿದೆ ಎಂದು ತಿಳಿಸಿದರು.

ಕುಲಪತಿ ಮರುನೇಮಕಕ್ಕೆ ಮುಖ್ಯಮಂತ್ರಿ ಒತ್ತಡ ಹೇರಿದ್ದರು ಎಂದು ರಾಜ್ಯಪಾಲರು ಮಾಡಿರುವ ಆರೋಪವನ್ನು ತಳ್ಳಿಹಾಕಿದ ಪಿಣರಾಯಿ ವಿಜಯನ್, ರಾಜ್ಯಪಾಲರ ಕೋರಿಕೆ ಮೇರೆಗೆ ತಮ್ಮ ಕಚೇರಿಯ ಅಧಿಕಾರಿಗಳು ಅವರನ್ನು ಭೇಟಿಯಾಗಿ ನಿಯಮಾವಳಿಗಳ ಬಗ್ಗೆ ವಿವರಣೆ ನೀಡಿದ್ದರು ಎಂದರು.

ಸಹ ಕುಲಾಧಿಪತಿಯಾಗಿರುವ ಉನ್ನತ ಶಿಕ್ಷಣ ಸಚಿವರು ಕುಲಾಧಿಪತಿ ರಾಜ್ಯಪಾಲರಿಗೆ ಪತ್ರ ಬರೆದು ಮರುನೇಮಕದ ಬಗ್ಗೆ ಸಲಹೆಗಳನ್ನು ನೀಡಿದ್ದರು. ಇದನ್ನು ಒತ್ತಡ ಹೇರಲಾಯಿತು ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ವಿವರಣೆ ನೀಡಿದರು.

ಇತರ ಕೆಲವು ಹೊರಗಿನವರು ಹೇರಿರುವ ಒತ್ತಡದಿಂದ ರಾಜ್ಯಪಾಲರು ಸರ್ಕಾರದ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡಿರಬಹುದು ಎಂದು ಖಾನ್ ಅವರಿಗೆ ಬಿಜೆಪಿಯೊಂದಿಗಿರುವ ನಂಟಿನ ಕುರಿತು ಪರೋಕ್ಷವಾಗಿ ಆರೋಪಿಸಿದರು.

ಬಿಜೊಯ್ ನಂದನ್ ಕಣ್ಣೂರು ವಿ.ವಿ ಕುಲಪತಿ

ಕಣ್ಣೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಕೊಚ್ಚಿನ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ಸಾಗರ ಜೀವವಿಜ್ಞಾನ ವಿಭಾಗದ ಪ್ರೊಫೆಸರ್ ಬಿಜೊಯ್ ನಂದನ್ ಅವರನ್ನು ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ನೇಮಕ ಮಾಡಿದ್ದಾರೆ.

ಕುಲಪತಿಯಾಗಿ ಗೋಪಿನಾಥ್ ರವೀಂದ್ರನ್ ಅವರನ್ನು ಮರುನೇಮಕ ಮಾಡಿದ ಕ್ರಮವನ್ನು ಸುಪ್ರೀಂಕೋರ್ಟ್ ಗುರುವಾರ ರದ್ದುಪಡಿಸಿದ ಹಿನ್ನೆಲೆಯಲ್ಲಿ ಈ ನೇಮಕ ಮಾಡಲಾಗಿದೆ.

ಸರ್ಕಾರದ ಜತೆ ಮಾತುಕತೆ ನಡೆಸದೆ ರಾಜ್ಯಪಾಲರು ತ್ವರಿತವಾಗಿ ಈ ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗಿದೆ.

ಮಹಿಳೆ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಬಹುದೇ?

ನವದೆಹಲಿ: ಅತ್ಯಾಚಾರ ಪ್ರಕರಣವೊಂದರಲ್ಲಿ, ಐಪಿಸಿ ಸೆಕ್ಷನ್ 375ರಡಿ ಮಹಿಳೆಯನ್ನು ಆರೋಪಿಯನ್ನಾಗಿಸಬಹುದೇ ಎಂಬ ಬಗ್ಗೆ ಪರಿಶೀಲನೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ಧರಿಸಿದೆ.

ಅತ್ಯಾಚಾರ ಪ್ರಕರಣದಲ್ಲಿ ಮಹಿಳೆ ವಿರುದ್ಧ ಪ್ರಕರಣ ದಾಖಲಿಸಬಹುದೇ ಎಂಬ ಬಗ್ಗೆ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಸಂಜಯ್ ಕರೋಲ್ ಅವರಿದ್ದ ಪೀಠವು ಅನುಮಾನ ವ್ಯಕ್ತಪಡಿಸಿತು.

ಅಲ್ಲದೆ, ಈ ಸೆಕ್ಷನ್ ಪ್ರಕಾರ ಪುರುಷನ ವಿರುದ್ಧ ಮಾತ್ರ ಈ ಆರೋಪ ಹೊರಿಸಬಹುದು ಎಂದು ನ್ಯಾಯಪೀಠವು ಮೌಖಿಕವಾಗಿ ಹೇಳಿತು.

ಮಗನ ವಿರುದ್ಧ ದಾಖಲಾಗಿರುವ ಅತ್ಯಾಚಾರ ಪ್ರಕರಣದಲ್ಲಿ ತಮ್ಮನ್ನು ತಪ್ಪಾಗಿ ಸಿಲುಕಿಸಲಾಗಿದೆ ಎಂದು 61 ವರ್ಷದ ವಿಧವೆಯೊಬ್ಬರು ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿತು.

ಅರ್ಜಿದಾರರ ಪರ ವಕೀಲ ರಿಷಿ ಮಲ್ಹೋತ್ರ ಅವರು, ಅತ್ಯಾಚಾರ ಪ್ರಕರಣದಲ್ಲಿ ಮಹಿಳೆ ವಿರುದ್ಧ ದೂರು ದಾಖಲಿಸಲು ಎಂದಿಗೂ ಸಾಧ್ಯವಿಲ್ಲ ಎಂದು ಹೇಳಿದರು. ಸಾಮೂಹಿಕ ಅತ್ಯಾಚಾರ ಪ್ರಕರಣಗಳಲ್ಲಿ ಮಹಿಳೆಯರು ಅತ್ಯಾಚಾರ ಎಸಗುವ ಉದ್ದೇಶ ಹೊಂದಿರುತ್ತಾರೆ ಎನ್ನಲಾಗುವುದಿಲ್ಲ ಎಂದು ಪ್ರಿಯಾ ಪಟೇಲ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಹೇಳಿದೆ ಎಂದು ಅವರು ಪೀಠಕ್ಕೆ ತಿಳಿಸಿದರು.

ಮಹಿಳೆಯ ಅರ್ಜಿ ಕುರಿತು ನೋಟಿಸ್ ನೀಡಿದ ಕೋರ್ಟು ಆಕೆಯ ಬಂಧನಕ್ಕೆ ತಡೆಯಾಜ್ಞೆಯನ್ನೂ ನೀಡಿತು.

ಪಂಜಾಬ್‌ನಲ್ಲಿನ ವಿಚಾರಣಾ ನ್ಯಾಯಾಲಯವು ಅರ್ಜಿದಾರರ ನಿರೀಕ್ಷಣಾ ಜಾಮೀನನ್ನು ತಿರಸ್ಕರಿಸಿತ್ತು. ಹೈಕೋರ್ಟ್ ಕೂಡ ಇದನ್ನು ನಿರಾಕರಿಸಿತ್ತು.

ಮಹಿಳೆಯ ಹಿರಿಯ ಮಗ ಅಮೆರಿಕದಲ್ಲಿ ನೆಲೆಸಿದ್ದಾನೆ. ಈತ ಮತ್ತು ದೂರುದಾರ ಯುವತಿ ಫೇಸ್‌ಬುಕ್ ಮೂಲಕ ಪರಿಚಯವಾಗಿದ್ದು ವಿವಾಹವಾಗಲು ತೀರ್ಮಾನಿಸಿದರು. ದೂರುದಾರರ ಪ್ರಕಾರ ಯುವತಿಯು ಅರ್ಜಿದಾರರ ಮಗನನ್ನು ವಿಡಿಯೊ ಕಾಲ್ ಮೂಲಕ ಮದುವೆಯಾಗಿದ್ದರು. ಆದರೂ ಆಕೆ ವಿವಾಹದ ಬಳಿಕ ಅಮೆರಿಕಕ್ಕೆ ಹೋಗದೆ ಮಹಿಳೆ ಜತೆ ವಾಸವಿದ್ದರು.

ಅನೌಪಚಾರಿಕವಾಗಿ ಆಗಿರುವ ವಿವಾಹವನ್ನು ಕೊನೆಗೊಳಿಸಿಕೊಳ್ಳುವಂತೆ ಯುವತಿ ಕಡೆಯ ಕುಟುಂಬದವರು ಒತ್ತಡ ಹೇರಿದ್ದರು. ಇದರಿಂದ ತಮ್ಮ ವಿರುದ್ಧ ಮತ್ತು ತಮ್ಮ ಕಿರಿಯ ಮಗನ ವಿರುದ್ಧ ಅತ್ಯಾಚಾರದ ಸುಳ್ಳು ಪ್ರಕರಣ ದಾಖಲಿಸಲಾಯಿತು ಎಂದು ಅರ್ಜಿದಾರ ಮಹಿಳೆ ಹೇಳಿದ್ದಾರೆ. ರಾಜಿ ಕಾರಣಕ್ಕೆ ದೂರುದಾರ ಯುವತಿಗೆ ₹ 11 ಲಕ್ಷ ನೀಡಿದ್ದಾಗಿಯೂ ಅವರು ಹೇಳಿಕೊಂಡಿದ್ದಾರೆ.

ಮುಂದಿನ ಹತ್ತು ವರ್ಷಗಳಲ್ಲಿ ಶೇ 50ರಷ್ಟು ಮಹಿಳಾ ಮುಖ್ಯಮಂತ್ರಿಗಳು ಇರಬೇಕು

ಮಹಿಳಾ ನಾಯಕತ್ವಕ್ಕೆ ರಾಹುಲ್ ಒತ್ತು

ಕೊಚ್ಚಿ (ಪಿಟಿಐ): ಕಾಂಗ್ರೆಸ್ ಪಕ್ಷವು ಮಹಿಳಾ ನಾಯಕತ್ವಕ್ಕೆ ಹೆಚ್ಚು ಒತ್ತು-ಕೊಟ್ಟಿದ್ದು, ಮುಂದಿನ 10 ವರ್ಷಗಳಲ್ಲಿ ಶೇ 50 ರಷ್ಟು ಮಹಿಳಾ ಮುಖ್ಯಮಂತ್ರಿಗಳು ಇರಬೇಕು ಎಂಬ ಗುರಿಯನ್ನು ಇಟ್ಟುಕೊಂಡಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಕೇರಳ ಮಹಿಳಾ ಕಾಂಗ್ರೆಸ್‌ನ ಸಮಾವೇಶವನ್ನು ಉದ್ದೇಶಿಸಿ ಶುಕ್ರವಾರ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸ್ಥಾನದ ಜವಾಬ್ದಾರಿ ನಿಭಾಯಿಸಬಲ್ಲ ಹಲವು ಸಮರ್ಥ ಮಹಿಳಾ ಮುಖಂಡರು ಪಕ್ಷದಲ್ಲಿದ್ದಾರೆ’ ಎಂದರು.

‘ಕಾಂಗ್ರೆಸ್ ಆಡಳಿತದಲ್ಲಿರುವ ಯಾವ ರಾಜ್ಯದಲ್ಲೂ ಈಗ ಮಹಿಳಾ ಸಿಎಂ ಇಲ್ಲ. ಆದರೆ ಉತ್ತಮ ಮುಖ್ಯಮಂತ್ರಿ ಆಗಲು ಸಮರ್ಥರಾದ ಮಹಿಳೆಯರು ಪಕ್ಷದಲ್ಲಿದ್ದಾರೆ. ಮುಂದಿನ ಒಂದು ದಶಕದಲ್ಲಿ ಕಾಂಗ್ರೆಸ್ ಆಡಳಿತದಲ್ಲಿರುವ ಕಡೆ ಶೇ 50 ರಷ್ಟು ಮಹಿಳಾ ಮುಖ್ಯಮಂತ್ರಿಗಳು ಇರಬೇಕು ಎಂಬ ಗುರಿ ನಮ್ಮದು’ ಎಂದು ನುಡಿದರು.

ಆರ್‌ಎಸ್‌ಎಸ್‌ನಿಂದ ಮಹಿಳೆಯರ ಕಡೆಗಣನೆ: ಆರ್‌ಎಸ್‌ಎಸ್‌ನ ಸಿದ್ಧಾಂತದಲ್ಲಿ ಮಹಿಳೆಯರಿಗೆ ಸ್ಥಾನವಿಲ್ಲ ಎಂದು ದೂರಿದ ಅವರು, ‘ಅದು (ಆರ್‌ಎಸ್‌ಎಸ್) ಸಂಪೂರ್ಣ ಪುರುಷರ ಸಂಸ್ಥೆ’ ಎಂದು ಟೀಕಿಸಿದರು.

‘ಆರ್‌ಎಸ್‌ಎಸ್ ತನ್ನ ಇತಿಹಾಸದಲ್ಲಿ ಮಹಿಳೆಯರಿಗೆ ಯಾವುದೇ ಅಧಿಕಾರ ನೀಡಿಲ್ಲ. ಆರ್‌ಎಸ್‌ಎಸ್ ಮತ್ತು ಕಾಂಗ್ರೆಸ್ ನಡುವಣ ಮೂಲಭೂತ ಹೋರಾಟವು ಭಾರತದ ರಾಜಕೀಯದಲ್ಲಿ ಮಹಿಳೆಯರು ವಹಿಸಬೇಕಾದ ಪಾತ್ರದ ಕುರಿತದ್ದಾಗಿದೆ’ ಎಂದು ಹೇಳಿದರು.

‘ಅನೇಕ ವಿಚಾರಗಳಲ್ಲಿ ಮಹಿಳೆಯರು ಪುರುಷರಿಗಿಂತ ಶ್ರೇಷ್ಠರು ಎಂದು ನಾನು ಭಾವಿಸುತ್ತೇನೆ. ಪುರುಷರಿಗಿಂತ ಹೆಚ್ಚು ತಾಳ್ಮೆಯನ್ನು ಅವರು ಹೊಂದಿದ್ದಾರೆ. ಪುರುಷರಿಗಿಂತ ಹೆಚ್ಚು ದೂರದೃಷ್ಟಿ ಹೊಂದಿರುವ ಅವರು ಸೂಕ್ಷ್ಮತೆ ಮತ್ತು ಸಹಾನುಭೂತಿ ವಿಚಾರದಲ್ಲೂ ಮುಂದಿದ್ದಾರೆ. ಆದ್ದರಿಂದ ಮಹಿಳೆಯರು ಅಧಿಕಾರದ ಭಾಗವಾಗಬೇಕು ಎಂಬುದು ಕಾಂಗ್ರೆಸ್ ಪಕ್ಷದ ಬಲವಾದ ನಂಬಿಕೆ’ ಎಂದು ತಿಳಿಸಿದರು.

ಜನರ ಮಾತು ಆಲಿಸುವೆ (ಕಣ್ಣೂರು ವರದಿ): ಬಿಜೆಪಿ ನಾಯಕರ ಧೋರಣೆಯನ್ನು ತರಾಟೆಗೆ ತೆಗೆದುಕೊಂಡ ಅವರು, ‘ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವವರು ಎಲ್ಲ ಕ್ಯಾಮೆರಾ ಮತ್ತು ಮೈಕ್ರೋಫೋನ್‌ಗಳು ತಮ್ಮತ್ತ ತಿರುಗಬೇಕು ಎಂಬ ಬಯಸುವವರು. ಆದರೆ ನಾನು ಮೈಕ್ರೋಫೋನ್‌ಅನ್ನು ಜನರತ್ತ ತಿರುಗಿಸುತ್ತೇನೆ. ಅವರ ಮಾತು ಆಲಿಸುವುದನ್ನು ಹೆಚ್ಚು ಇಷ್ಟಪಡುವೆ’ ಎಂದು ತಿಳಿಸಿದರು.

ಕೇರಳ ಮಹಿಳಾ ಕಾಂಗ್ರೆಸ್ ಸಮಾವೇಶದ ಉದ್ಘಾಟನೆಗೆ ಬಂದ ರಾಹುಲ್ ಗಾಂಧಿ ಅವರು ಕಲಾವಿದರೊಂದಿಗೆ ಮಾತನಾಡಿದರು —ಪಿಟಿಐ ಚಿತ್ರ

‘ವಿಮಾನ ಇಳಿಸಲು ಅವಕಾಶ ನಿರಾಕರಣೆ’

ಕೊಚ್ಚಿ (ಪಿಟಿಐ): ರಾಹುಲ್ ಗಾಂಧಿ ಅವರಿದ್ದ ವಿಮಾನವನ್ನು ಇಲ್ಲಿನ ನೌಕಾಪಡೆಯ ವಿಮಾನ ನಿಲ್ದಾಣದಲ್ಲಿ ಇಳಿಸಲು ಅನುಮತಿ ನಿರಾಕರಿಸಲಾಯಿತು ಎಂದು ಕಾಂಗ್ರೆಸ್ ಆರೋಪಿಸಿದೆ.

‘ವಿಮಾನದ ಲ್ಯಾಡಿಂಗ್‌ಗೆ ಆರಂಭದಲ್ಲಿ ಅನುಮತಿ ನೀಡಿದ್ದ ರಕ್ಷಣಾ ಸಚಿವಾಲಯವು ಆ ಬಳಿಕ ನಿರಾಕರಿಸಿದೆ’ ಎಂದು ಎರ್ನಾಕುಳಂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಶಿಯಾಸ್ ದೂರಿದರು. ಕಣ್ಣೂರಿನಿಂದ ಬಂದ ವಿಮಾನವನ್ನು ಆ ಬಳಿಕ ನೆಡುಂಬಶ್ಶೇರಿಯ ಕೊಚ್ಚಿ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಸಲಾಯಿತು ಎಂದರು.

ಆದರೆ ರಕ್ಷಣಾ ಸಚಿವಾಲಯದ ವಕ್ತಾರರು ಈ ಆರೋಪವನ್ನು ತಳ್ಳಿಹಾಕಿದ್ದು, ‘ಖಾಸಗಿ ವಿಮಾನದ ಲ್ಯಾಂಡಿಂಗ್‌ಗೆ ಅನುಮತಿ ನೀಡಲೂ ಇಲ್ಲ, ನಿರಾಕರಿಸಲೂ ಇಲ್ಲ’ ಎಂದಿದ್ದಾರೆ.

ವರ್ಗ, ಶ್ರೇಣಿ ಪದ್ಧತಿ ಕೈಬಿಟ್ಟ ಸಿಬಿಎಸ್‌ಇ

ನವದೆಹಲಿ: 10 ಮತ್ತು 12ನೇ ತರಗತಿಗಳ ಬೋರ್ಡ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಧನೆ ಆಧರಿಸಿ ವರ್ಗ ಅಥವಾ ಅತ್ಯುನ್ನತ ಶ್ರೇಣಿ ನೀಡುವ ಕ್ರಮವನ್ನು ಕೈಬಿಡಲು ಕೇಂದ್ರ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು (ಸಿಬಿಎಸ್‌ಇ) ತೀರ್ಮಾನಿಸಿದೆ.

ಸಿಬಿಎಸ್‌ಇ ಪರೀಕ್ಷಾ ನಿಯಂತ್ರಣಾಧಿಕಾರಿ ಸನ್ಯಾಮ್ ಭಾರಧ್ವಾಜ್ ಅವರು ಶುಕ್ರವಾರ ನೀಡಿದ ಹೇಳಿಕೆಯಲ್ಲಿ ಇದನ್ನು ದೃಢಪಡಿಸಿದ್ದಾರೆ.

‘ಮಂಡಳಿಯು ಇನ್ನು ಮುಂದೆ ಅಂಕಗಳ ಶೇಕಡವಾರು ಲೆಕ್ಕ ಹಾಕುವುದಿಲ್ಲ, ಪ್ರಕಟಿಸುವುದಿಲ್ಲ, ತಿಳಿಸುವುದಿಲ್ಲ. ಉನ್ನತ ಶಿಕ್ಷಣ ಅಥವಾ ಉದ್ಯೋಗ ನೇಮಕಾತಿಗೆ ಇದರ ಅಗತ್ಯವಿದ್ದಲ್ಲಿ ಪ್ರವೇಶ ನೀಡುವ ಶಿಕ್ಷಣ ಸಂಸ್ಥೆ ಅಥವಾ ಉದ್ಯೋಗದಾತರೇ ಮಾಡಿಕೊಳ್ಳಬಹುದು’ ಎಂದು ತಿಳಿಸಿದ್ದಾರೆ.

‘ಅಂಕಗಳ ಕ್ರೋಡೀಕರಣ, ಪ್ರಮಾಣವನ್ನು ನಿಗದಿಪಡಿಸಲು ಮಂಡಳಿಯು ಅನುಸರಿಸುವ ಅಳತೆಗೋಲು ಕುರಿತಂತೆ ಹಲವು ವಿದ್ಯಾರ್ಥಿಗಳು ಮಂಡಳಿಗೆ ವಿವರ ಕೇಳಿದ್ದರು’ ಎಂದೂ ಅವರು ಈ ಕುರಿತ ಹೇಳಿಕೆಯಲ್ಲಿ ಉಲ್ಲೇಖಿಸಿದ್ದಾರೆ.

‘ಮಂಡಳಿಯ ಪರೀಕ್ಷಾ ಬೈ-ಲಾದ ಅಧ್ಯಾಯ 7ರ ಉಪವರ್ಗ 40.1ರ ಅನುಸಾರ ಇನ್ನು ಮುಂದೆ ಒಟ್ಟಾರೆ ಅಂಕಗಳ ಆಧಾರದಲ್ಲಿ ವರ್ಗ, ಅತ್ಯುನ್ನತ ಶ್ರೇಣಿ ಅಥವಾ ಸರಾಸರಿ ಅಂಕಗಳ ವಿವರಗಳನ್ನು ನೀಡಲಾಗದು’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ವಿದ್ಯಾರ್ಥಿಯು ಐದಕ್ಕೂ ಹೆಚ್ಚು ವಿಷಯಗಳ ಪರೀಕ್ಷೆಗೆ ಹಾಜರಾಗಿದ್ದಲ್ಲಿ ಅತ್ಯುತ್ತಮ ಐದು ವಿಷಯಗಳ ಆಯ್ಕೆಯನ್ನೂ ಉನ್ನತ ಶಿಕ್ಷಣಕ್ಕೆ ಪ್ರವೇಶ ನೀಡುವ ಸಂಸ್ಥೆ ಅಥವಾ ನೇಮಕಾತಿಗೆ ಪರಿಗಣಿಸುವ ಉದ್ಯೋಗದಾತರೇ ತೀರ್ಮಾನಿಸಬಹುದು ಎಂದು ತಿಳಿಸಿದ್ದಾರೆ.

ಪರೀಕ್ಷಾ ಮಂಡಳಿಯು ಕಳೆದ ಶೈಕ್ಷಣಿಕ ವರ್ಷದಲ್ಲಿ 10 ಮತ್ತು 12ನೇ ತರಗತಿಗಳಲ್ಲಿನ ಅಂಕಗಳಿಕೆ ಆಧರಿಸಿ ಅತ್ಯುನ್ನತ ಸ್ಥಾನ ಗಳಿಸಿದ ವಿದ್ಯಾರ್ಥಿಗಳ ವಿವರಗಳನ್ನು ಪ್ರಕಟಿಸಿರಲಿಲ್ಲ. ವಿದ್ಯಾರ್ಥಿಗಳಲ್ಲಿ ಅನಾರೋಗ್ಯಕರ ಸ್ಪರ್ಧೆಯನ್ನು ತಡೆಯುವುದು ಇದರ ಉದ್ದೇಶವಾಗಿತ್ತು.

ಫೆ. 15ರಿಂದ ಪರೀಕ್ಷೆ ಆರಂಭ

ನವದೆಹಲಿ: 2023–24ನೇ ಶೈಕ್ಷಣಿಕ ವರ್ಷದ 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷಾ ವೇಳಾಪಟ್ಟಿಯನ್ನು ಸಿಬಿಎಸ್‌ಇ ಶುಕ್ರವಾರ ಪ್ರಕಟಿಸಿದೆ. ಆ ಪ್ರಕಾರ, 10 ಮತ್ತು 12ನೇ ತರಗತಿ ಪರೀಕ್ಷೆಗಳು 2024ರ ಫೆಬ್ರುವರಿ 15ರಿಂದ ಆರಂಭವಾಗಲಿವೆ. ಏ.10ರಂದು ಪೂರ್ಣಗೊಳ್ಳುವ ನಿರೀಕ್ಷೆಗಳಿವೆ ಎಂದು ತಿಳಿಸಿದೆ.

4ರಂದು ಸಂಪುಟ ಸಭೆ ಕರೆದ ಕೆಸಿಆರ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರರಾವ್ (ಕೆಸಿಆರ್) ಅವರು ಬಿಆರ್‌ಎಸ್ ಈ ಬಾರಿ ಹ್ಯಾಟ್ರಿಕ್ ಗೆಲುವು ಸಾಧಿಸುವ ವಿಶ್ವಾಸ ಹೊಂದಿದ್ದಾರೆ.

ಕೆಸಿಆರ್ ಅವರು ಗುರುವಾರ ರಾತ್ರಿ ಪಕ್ಷದ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಮತ್ತು ನೀರಾವರಿ ಸಚಿವ ಟಿ. ಹರೀಶ್ ರಾವ್ ಅವರೊಂದಿಗೆ ಹಲವು ಸುತ್ತಿನ ಸಭೆ ನಡೆಸಿದರು ಎಂದು ಪಕ್ಷದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಇದೇ 3ರಂದು ಮತ ಎಣಿಕೆಯಾದ ಬಳಿಕ ಮರುದಿನ ಅಂದರೆ ಡಿ. 4ರಂದು ಅವರು ಸಂಪುಟ ಸಭೆಯನ್ನೂ ಕರೆದಿದ್ದಾರೆ.

ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರೇವಂತ್ ರೆಡ್ಡಿ ಅವರ ನಿವಾಸಕ್ಕೆ ಶುಕ್ರವಾರ ಬೆಳಿಗ್ಗೆಯಿಂದ ನಾಯಕರು ಭೇಟಿ ನೀಡುತ್ತಿದ್ದಾರೆ.

ತೆಲಂಗಾಣದಲ್ಲಿ ‘ಕೈ’ಗೆ ಅಧಿಕಾರ: ಮತಗಟ್ಟೆ ಸಮೀಕ್ಷೆ

ನವದೆಹಲಿ: ತೆಲಂಗಾಣದಲ್ಲಿ ಕಾಂಗ್ರೆಸ್ ಪಕ್ಷ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೇರಲಿದೆ ಎಂದು ಇಂಡಿಯಾ ಟುಡೆ- ಆಕ್ಸಿಸ್ ಮೈ ಇಂಡಿಯಾ ಸಂಸ್ಥೆಯ ಮತಗಟ್ಟೆ ಸಮೀಕ್ಷೆ ತಿಳಿಸಿದೆ.

119 ಸ್ಥಾನಗಳಲ್ಲಿ 63 ರಿಂದ 73 ಸ್ಥಾನಗಳನ್ನು ಕಾಂಗ್ರೆಸ್ ಗೆಲ್ಲಲಿದೆ ಎಂದು ಶುಕ್ರವಾರ ಪ್ರಕಟಗೊಂಡ ಸಮೀಕ್ಷೆಯು ‘ಭವಿಷ್ಯ’ ನುಡಿದಿದೆ. ಮೂರನೇ ಬಾರಿಗೆ ಅಧಿಕಾರಕ್ಕೇರುವ ಪ್ರಯತ್ನದಲ್ಲಿರುವ ಕೆ.ಚಂದ್ರಶೇಖರ ರಾವ್ ನೇತೃತ್ವದ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) 34 ರಿಂದ 44 ಸ್ಥಾನಗಳನ್ನು ಗೆಲ್ಲಲಿದೆ. ಬಿಜೆಪಿಯು 4 ರಿಂದ 8 ಸ್ಥಾನಗಳಲ್ಲಿ ಜಯ ಗಳಿಸಲಿದೆ ಎಂದು ಹೇಳಿದೆ.

ಇಂಡಿಯಾ ಟುಡೆ- ಆಕ್ಸಿಸ್ ಮೈ ಇಂಡಿಯಾ ಸಂಸ್ಥೆಯು ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ ಮತ್ತು ಮಿಜೋರಾಂ ರಾಜ್ಯಗಳಲ್ಲಿ ನಡೆಸಿದ್ದ ಮತಗಟ್ಟೆ ಸಮೀಕ್ಷೆಯ ವರದಿ ಗುರುವಾರ ಸಂಜೆ ಪ್ರಕಟಗೊಂಡಿತ್ತು.

ತೆಲಂಗಾಣ: ಶೇ 71.14 ಮತದಾನ

ಪ್ರಜಾ ಮತ
ಜನತಂತ್ರದ ಹಬ್ಬ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ 119 ಸದಸ್ಯ ಬಲದ ವಿಧಾನಸಭೆಗೆ ಗುರುವಾರ ನಡೆದ ಚುನಾವಣೆಯಲ್ಲಿ ಶೇ 71.14ರಷ್ಟು ಮತದಾನ ಆಗಿದೆ. 2018ರಲ್ಲಿ ನಡೆದ ಮತದಾನಕ್ಕಿಂತ ಶೇ 2.56ರಷ್ಟು ಕಡಿಮೆ ಆಗಿದೆ.

2018ರಲ್ಲಿ ಶೇ 73.7 ಮತದಾನ ಆಗಿತ್ತು. ಬೆಳಿಗ್ಗೆ 7ರಿಂದ ಆರಂಭವಾದ ಮತದಾನವು ನಕ್ಸಲ್ ಪೀಡಿತ 13 ಜಿಲ್ಲೆಗಳಲ್ಲಿ ಸಂಜೆ 4ಕ್ಕೆ ಕೊನೆಗೊಂಡರೆ ಇತರ 106 ಕ್ಷೇತ್ರಗಳಲ್ಲಿ ಸಂಜೆ 5ರವರೆಗೆ ಮತದಾನ ನಡೆಯಿತು. ಡಿಸೆಂಬರ್ 3ರಂದು ಮತ ಎಣಿಕೆ ನಡೆಯಲಿದೆ.

ಮಿಜೋರಾಂ: ಮತ ಎಣಿಕೆ 4ಕ್ಕೆ

ಗುವಾಹಟಿ: ಮಿಜೋರಾಂ ವಿಧಾನಸಭೆಯ 40 ಸ್ಥಾನಗಳಿಗೆ ನಡೆದ ಚುನಾವಣೆಯ ಮತ ಎಣಿಕೆಯನ್ನು ಡಿಸೆಂಬರ್ 3ರ ಬದಲು ಡಿ.4 ರಂದು ನಡೆಸಲು ಚುನಾವಣಾ ಆಯೋಗ ನಿರ್ಧರಿಸಿದೆ.

3ರಂದು ನಿಗದಿಯಾಗಿರುವ ಮತ ಎಣಿಕೆಯನ್ನು ಬೇರೆ ದಿನಕ್ಕೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿ ಮಿಜೋರಾಂನ ಎನ್‌ಜಿಒ ಕೋ ಆರ್ಡಿನೇಷನ್ ಕಮಿಟಿ ಶುಕ್ರವಾರ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿತ್ತು.

ಕದನ ವಿರಾಮ ಅಂತ್ಯಗೊಂಡ ಬೆನ್ನಲ್ಲೇ ಗಾಜಾ ಮೇಲೆ ಇಸ್ರೇಲ್ ವಾಯುದಾಳಿ

ಇಸ್ರೇಲ್–ಹಮಾಸ್ ಮಧ್ಯೆ ಮತ್ತೆ ಯುದ್ಧ

ಡೀರ್ ಅಲ್-ಬಾಲಾಹ್ (ಗಾಜಾ ಪಟ್ಟಿ) (ಎಪಿ): ಕದನ ವಿರಾಮ ಅಂತ್ಯಗೊಂಡ ಬೆನ್ನಲ್ಲೇ ಇಸ್ರೇಲ್ ಯುದ್ಧ ವಿಮಾನಗಳು ಹಮಾಸ್ ಬಂಡುಕೋರರನ್ನು ಗುರಿಯಾಗಿಸಿಕೊಂಡು ಗಾಜಾ ಮೇಲೆ ಶುಕ್ರವಾರ ದಾಳಿ ಆರಂಭಿಸಿದ್ದು, ಮತ್ತೆ ಪೂರ್ಣ ಪ್ರಮಾಣದಲ್ಲಿ ಯುದ್ಧ ಆರಂಭವಾಗಿದೆ.

ಕದನ ವಿರಾಮ ಅಂತ್ಯಗೊಂಡ ಅರ್ಧ ಗಂಟೆಯಲ್ಲೇ ಯುದ್ಧ ಆರಂಭಿಸುವುದಾಗಿ ಘೋಷಿಸಿದ ಇಸ್ರೇಲ್, ದಕ್ಷಿಣ ಗಾಜಾ ಮೇಲೆ ವಾಯುದಾಳಿ ನಡೆಸಿದೆ. ಇಲ್ಲಿನ ವಿವಿಧ ಪ್ರದೇಶಗಳಲ್ಲಿ ಕರಪತ್ರಗಳನ್ನು ಎಸೆಯುವ ಮೂಲಕ ಮನೆಗಳನ್ನು ಬಿಟ್ಟು ತೆರಳಲು ನಾಗರಿಕರಿಗೆ ಸೂಚನೆ ನೀಡಿದೆ. ‘ಖಾನ್ ಯೂನಿಸ್ ನಗರವು ಯುದ್ಧದ ಕೇಂದ್ರ’ವಾಗಲಿದೆ ಎಂದೂ ಅದರಲ್ಲಿ ತಿಳಿಸಿದೆ. ಈ ಮೂಲಕ ದಾಳಿಯನ್ನು ಮತ್ತಷ್ಟು ತೀವ್ರಗೊಳಿಸುವ ಸುಳಿವು ನೀಡಿದೆ.

‘ಕದನ ವಿರಾಮ ಅಂತ್ಯಗೊಂಡ ಒಂದು ಗಂಟೆ ಒಳಗಾಗಿ ವಿವಿಧೆಡೆ ನಡೆಸಿದ ದಾಳಿಯಲ್ಲಿ 14 ಮಂದಿ ಮೃತಪಟ್ಟಿದ್ದಾರೆ, ಹತ್ತಾರು ಜನರು ಗಾಯಗೊಂಡಿದ್ದಾರೆ’ ಎಂದು ಗಾಜಾ ಆರೋಗ್ಯ ಸಚಿವಾಲಯದ ವಕ್ತಾರ ಅಶ್ರಫ್ ಅಲ್-ಕಿದ್ರಾ ತಿಳಿಸಿದ್ದಾರೆ.

ಇತ್ತ ಇಸ್ರೇಲ್ ಮೇಲೂ ಹಮಾಸ್ ರಾಕೆಟ್ ದಾಳಿ ಆರಂಭಿಸಿದೆ, ಆದರೆ ಯಾವುದೇ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ.

ಇಸ್ರೇಲ್-ಹಮಾಸ್ ಬಂಡುಕೋರರ ಮಧ್ಯೆ ನ.24ರಿಂದ ಆರಂಭವಾಗಿದ್ದ ಕದನ ವಿರಾಮ ನಾಲ್ಕು ದಿನಗಳ ಬಳಿಕ ಮುಕ್ತಾಯಗೊಂಡಿತ್ತು. ನಂತರ ಕತಾರ್ ಮತ್ತು ಈಜಿಪ್ಟ್ ಮಧ್ಯಸ್ಥಿಕೆಯಲ್ಲಿ ಮಾನವೀಯ ದೃಷ್ಟಿಯಿಂದ ಮತ್ತಷ್ಟು ದಿನಗಳ ಕಾಲ ವಿಸ್ತರಣೆಯಾಗಿತ್ತು.

ವಾರಕ್ಕೂ ಹೆಚ್ಚು ದಿನ ಅಸ್ತಿತ್ವದಲ್ಲಿದ್ದ ಕದನ ವಿರಾಮದ ಸಂದರ್ಭದಲ್ಲಿ ಹಮಾಸ್ ಮತ್ತು ಇತರ ಭಯೋತ್ಪಾದಕರು 100ಕ್ಕೂ ಹೆಚ್ಚು ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದರೆ, ಇಸ್ರೇಲ್ 240 ಪ್ಯಾಲೆಸ್ಟೀನಿಯನ್ನರನ್ನು ಬಿಡುಗಡೆ ಮಾಡಿದೆ.

ಹಮಾಸ್ ಬಳಿ ಇನ್ನೂ ಎಷ್ಟು ಮಂದಿ ಒತ್ತೆಯಾಳುಗಳಿದ್ದಾರೆ ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ. ಸುಮಾರು 125ಕ್ಕೂ ಹೆಚ್ಚು ಮಂದಿ ಒತ್ತೆಯಾಳುಗಳಿದ್ದಾರೆ ಎಂದು ಇಸ್ರೇಲ್ ಹೇಳಿದೆ.

ಖಾನ್ ಯೂನಿಸ್ ನಗರದ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದ ಪರಿಣಾಮ ಕಟ್ಟಡಗಳು ಧ್ವಂಸಗೊಂಡಿವೆ —ಎಎಫ್‌ಪಿ ಚಿತ್ರ

ಮತ್ತೆ ಕದನ ವಿರಾಮಕ್ಕೆ ಯತ್ನ: ಕತಾರ್

ಇಸ್ರೇಲ್–ಹಮಾಸ್ ಮಧ್ಯೆ ಕದನ ವಿರಾಮ ಮರು ಆರಂಭಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಉಭಯ ದೇಶಗಳ ನಡುವೆ ಮತ್ತೆ ದಾಳಿ-ಪ್ರತಿದಾಳಿ ನಡೆಯುತ್ತಿರುವುದು ವಿಷಾದನೀಯ ಎಂದು ಮಧ್ಯಸ್ಥಿಕೆ ವಹಿಸಿರುವ ಕತಾರ್ ಶುಕ್ರವಾರ ಹೇಳಿದೆ.

‘ಬಾಂಬ್ ದಾಳಿ ಮುಂದುವರಿಸಿರುವುದು ಮಧ್ಯಸ್ಥಿಕೆ ಪ್ರಯತ್ನವನ್ನು ಮತ್ತಷ್ಟು ಸಂಕೀರ್ಣಗೊಳಿಸಿದೆ. ಅಂತರರಾಷ್ಟ್ರೀಯ ಸಮುದಾಯಗಳು ಹಿಂಸಾಚಾರ ತಡೆಗೆ ತಕ್ಷಣ ಕ್ರಮ ವಹಿಸಬೇಕಿದೆ’ ಎಂದು ಕತಾರ್ ವಿದೇಶಾಂಗ ಇಲಾಖೆ ಹೇಳಿದೆ.

ಕದನವಿರಾಮ ನಿಯಮವನ್ನು ಹಮಾಸ್ ಪಾಲಿಸದಿರುವುದರಿಂದ ಮತ್ತೆ ಯುದ್ಧ ಆರಂಭಿಸಲಾಗಿದೆ.

ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

ಗಾಜಾದಲ್ಲಿ ಶಾಶ್ವತ ಕದನ ವಿರಾಮ ಅನುಷ್ಠಾನಗೊಳ್ಳಬೇಕು. ಇಸ್ರೇಲ್–ಹಮಾಸ್ ಮಧ್ಯೆ ಯುದ್ಧ ನಿಲುಗಡೆಗೆ ಕ್ರಮ ಕೈಗೊಳ್ಳದೇ ಇದ್ದರೆ ಮಕ್ಕಳ ಕೊಲೆಯನ್ನು ಅನುಮೋದಿಸಿದಂತಾಗುತ್ತದೆ.

ಜೇಮ್ಸ್ ಎಲ್ಡರ್, ಯುನಿಸೆಫ್ ವಕ್ತಾರ

ತನಿಖೆಗೆ ಸಮಿತಿ: ಭಾರತದ ಕ್ರಮ ಸ್ವಾಗತಿಸಿದ ಅಮೆರಿಕ

ವಾಷಿಂಗ್ಟನ್(ಪಿಟಿಐ): ಖಾಲಿಸ್ತಾನ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆ ಸಂಚು ರೂಪಿಸಲಾಗಿತ್ತು ಎಂಬ ಪ್ರಕರಣದಲ್ಲಿ ಭಾರತೀಯ ಅಧಿಕಾರಿ ವಿರುದ್ಧದ ಆರೋಪಗಳ ಕುರಿತ ತನಿಖೆಗೆ ಉನ್ನತ ಮಟ್ಟದ ಸಮಿತಿ ರಚಿಸಿರುವ ಭಾರತದ ಕ್ರಮವನ್ನು ಅಮೆರಿಕ ಸ್ವಾಗತಿಸಿದೆ.

‘ತನ್ನ ಅಧಿಕಾರಿ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸುವುದಾಗಿ ಭಾರತ ಹೇಳಿರುವುದು ಉತ್ತಮ ಹಾಗೂ ಸೂಕ್ತ ನಿರ್ಧಾರ. ತನಿಖೆಯ ಫಲಿತಾಂಶಕ್ಕಾಗಿ ನಾವು ಎದುರು ನೋಡುತ್ತಿದ್ದೇವೆ’ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಪ್ರತಿಕ್ರಿಯಿಸಿದ್ದಾರೆ.

ಇಸ್ರೇಲ್‌ನ ಟೆಲ್ ಅವೀವ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಪ್ರಕರಣಕ್ಕೆ ಸಂಬಂಧಿಸಿ ಕಾನೂನು ಪ್ರಕ್ರಿಯೆ ನಡೆಯುತ್ತಿರುವ ಕಾರಣ ಹೆಚ್ಚಿನ ವಿವರಗಳನ್ನು ನೀಡಲು ನಿರಾಕರಿಸಿದರು.

‘ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ ಎಂದಷ್ಟೆ ನಾನು ಹೇಳಬಲ್ಲೆ. ಕಳೆದ ಕೆಲ ವಾರಗಳಿಂದ ಈ ವಿಷಯವನ್ನು ನಾವು ನೇರವಾಗಿ ಭಾರತ ಸರ್ಕಾರದ ಮುಂದೆ ಪ್ರಸ್ತಾಪಿಸಿದ್ದೇವೆ’ ಎಂದೂ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಜೂನ್‌ನಲ್ಲಿ ಅಮೆರಿಕಕ್ಕೆ ಭೇಟಿ ನೀಡಿದ್ದರು. ಈ ಭೇಟಿ ನಂತರ, ಪನ್ನೂ ಹತ್ಯೆಗೆ ರೂಪಿಸಿದ್ದ ಸಂಚನ್ನು ಭೇದಿಸಲಾಯಿತು. ಆದರೆ, ಈ ಬೆಳವಣಿಗೆಯು ಉಭಯ ದೇಶಗಳ ನಡುವಿನ ಬಾಂಧವ್ಯದ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ಶ್ವೇತಭವನದಲ್ಲಿ ರಾಷ್ಟ್ರೀಯ ಭದ್ರತಾ ಮಂಡಳಿಯ ಸಮನ್ವಯಾಧಿಕಾರಿ (ಕಾರ್ಯತಂತ್ರ ಸಂವಹನ) ಆಗಿರುವ ಜಾನ್ ಕಿರ್ಬಿ ಹೇಳಿದ್ದಾರೆ.

‘ನ್ಯಾಯಾಂಗ ಇಲಾಖೆಯು ತನಿಖೆ ನಡೆಸುತ್ತಿರುವ ಕಾರಣ, ಈ ಬಗ್ಗೆ ಹೆಚ್ಚು ಮಾತನಾಡವುದಿಲ್ಲ. ಆದರೆ, ಎರಡು ವಿಷಯಗಳನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ಮೊದಲನೆದಾಗಿ ಭಾರತ ನಮ್ಮ ಮುಖ್ಯ ಪಾಲುದಾರ ದೇಶವಾಗಿ ಇರಲಿದೆ. ಎರಡನೆದಾಗಿ, ಈ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತ್ತರಾಗುತ್ತೇವೆ’ ಎಂದು ಕಿರ್ಬಿ ಹೇಳಿದ್ದಾರೆ.

ಸುಭಾಷಿತ

ಒಬ್ಬ ವ್ಯಕ್ತಿಯಲ್ಲಿ ಎಲ್ಲ ಗುಣಗಳನ್ನೂ ನಿರೀಕ್ಷೆ ಮಾಡಬಾರದು.
–ಕನ್‌ಫ್ಯೂಷಿಯಸ್

ನಿರೀಕ್ಷೆ ಮೀರಿದ ಜಿಡಿಪಿ ಬೆಳವಣಿಗೆ ಗ್ರಾಮೀಣ ಆರ್ಥಿಕತೆಯೇ ಸವಾಲು

ಪ್ರಸಕ್ತ ಹಣಕಾಸು ವರ್ಷದ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದ ಅವಧಿಯಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇಕಡ 7.6ರಷ್ಟು ಆಗಿದೆ. ಇದು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾತ್ರವಲ್ಲದೆ ಆರ್ಥಿಕ ವಿಶ್ಲೇಷಕರ ಅಂದಾಜಿಗಿಂತಲೂ ತುಂಬಾ ಹೆಚ್ಚಾಗಿದೆ. ಪ್ರತಿಕೂಲ ಸನ್ನಿವೇಶದಲ್ಲಿ ಆಗಿರುವ ಈ ಆರೋಗ್ಯಕರ ಬೆಳವಣಿಗೆ ಸೋಜಿಗವನ್ನೂ ಉಂಟುಮಾಡಿದೆ. ವಿಶ್ವದ ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಸಾಧಿಸುತ್ತಿರುವ ದೇಶ ಎಂಬ ಹೆಗ್ಗಳಿಕೆಯನ್ನು ಭಾರತ ಮತ್ತೆ ಉಳಿಸಿಕೊಂಡಿದೆ. ಇದೊಂದು ಸಂತಸದಾಯಕ ವಿದ್ಯಮಾನ. ದೇಶದ ಈ ಆರ್ಥಿಕ ಬೆಳವಣಿಗೆಯಲ್ಲಿ ತಯಾರಿಕೆ ಮತ್ತು ನಿರ್ಮಾಣ ವಲಯದ ಚಟುವಟಿಕೆಗಳೇ ಬೆನ್ನೆಲುಬಾಗಿವೆ. ಜಿಡಿಪಿಗೆ ತಯಾರಿಕಾ ವಲಯದ ಕೊಡುಗೆಯು ಶೇ 13.9ಕ್ಕೆ ಏರಿದೆ. ಇದು, ಹಿಂದಿನ ಒಂಬತ್ತು ತ್ರೈಮಾಸಿಕಗಳಲ್ಲಿಯೇ ಅತ್ಯಂತ ಗರಿಷ್ಠ ಪ್ರಮಾಣವಾಗಿದೆ. ಆರ್ಥಿಕ ಬೆಳವಣಿಗೆಗೆ ನಿರ್ಮಾಣ ವಲಯದ ಕೊಡುಗೆ ಕೂಡ ಶೇ 13.3ಕ್ಕೆ ಹೆಚ್ಚಿದೆ. ಮೂಲಸೌಕರ್ಯ ವಲಯದಲ್ಲಿ ಖಾಸಗಿ ಹೂಡಿಕೆಯ ಪ್ರಮಾಣ ಏರಿಕೆಯಾಗಿದ್ದರೆ, ನಿರ್ಮಾಣ ವಲಯದಲ್ಲಿ ಸರ್ಕಾರ ಮಾಡುತ್ತಿರುವ ಬಂಡವಾಳ ವೆಚ್ಚದ ಪ್ರಮಾಣ ಕೂಡ ಹೆಚ್ಚಳವಾಗಿದೆ. ಸರ್ಕಾರ ಮಾಡಿದ ವೆಚ್ಚದ ನೆರವಿನಿಂದ ಆರ್ಥಿಕ ಬೆಳವಣಿಗೆಯ ವೇಗ ನಿರೀಕ್ಷೆ ಮೀರಿದೆ. ಗಣಿಗಾರಿಕೆ, ವಿದ್ಯುತ್ ಮತ್ತು ಮೂಲ ಸೌಕರ್ಯ ವಲಯಗಳ ಬೆಳವಣಿಗೆ ದರ ಎರಡಂಕಿಯನ್ನು ತಲುಪಿದ ವಿದ್ಯಮಾನಕ್ಕೂ ಈ ತ್ರೈಮಾಸಿಕ ಸಾಕ್ಷಿಯಾಗಿದೆ. ರಿಯಲ್ ಎಸ್ಟೇಟ್, ಹಣಕಾಸು, ಆತಿಥ್ಯ ಮತ್ತು ವ್ಯಾಪಾರ ವಲಯಗಳ ಪ್ರಗತಿ ಮಾತ್ರ ವರ್ಷದಿಂದ ವರ್ಷಕ್ಕೆ ತುಸು ಮಂದವಾಗುತ್ತಿದೆ. ಆರೋಗ್ಯಕರವಾದ ಈ ಜಿಡಿಪಿ ಬೆಳವಣಿಗೆಯನ್ನು ಗಮನಿಸಿರುವ ಬ್ಯಾಂಕ್‌ಗಳು, ವಿವಿಧ ಏಜೆನ್ಸಿಗಳು ಮತ್ತು ಸಂಸ್ಥೆಗಳು ದೇಶದ ಪ್ರಸಕ್ತ ಹಣಕಾಸು ವರ್ಷದ ಜಿಡಿಪಿ ಬೆಳವಣಿಗೆ ಕುರಿತ ಅಂದಾಜಿನ ಪ್ರಮಾಣವನ್ನು ಹೆಚ್ಚಿಸಬಹುದು. ಹಲವು ತೃಪ್ತಿಕರ ಅಂಶಗಳ ನಡುವೆಯೂ ಕಳವಳಕ್ಕೆ ಕಾರಣವಾಗುವ ಸಂಗತಿಗಳನ್ನೂ ಅಂಕಿಅಂಶಗಳು ಹೊರಹಾಕಿವೆ. ಕಳೆದ ತ್ರೈಮಾಸಿಕಕ್ಕೆ ಹೋಲಿಸಿದರೆ ಪ್ರಸಕ್ತ ಅವಧಿಯಲ್ಲಿ ಕೃಷಿ ವಲಯದ ಬೆಳವಣಿಗೆ ದರವು ಶೇ 1.3ರಷ್ಟು ಕುಸಿತ ಕಂಡಿದೆ. ಕುಟುಂಬಗಳು ಖರೀದಿ ಮೇಲೆ ಮಾಡುವ ವೆಚ್ಚದ (ಪಿಎಫ್‌ಸಿಇ) ಪ್ರಮಾಣ ಮೊದಲ ತ್ರೈಮಾಸಿಕದಲ್ಲಿ ಶೇ 6ರಷ್ಟು ಇತ್ತು. ಈಗ ಅದು ಶೇ 3.1ಕ್ಕೆ ಕುಸಿದಿದೆ. ಈ ಬಾರಿ ಮುಂಗಾರು ಮಳೆ ವಾಡಿಕೆಯಷ್ಟು ಆಗಿಲ್ಲ. ಮಳೆಯ ಕೊರತೆ ಪರಿಣಾಮವು ಗ್ರಾಮೀಣ ಆರ್ಥಿಕತೆಯನ್ನು ಬಾಧಿಸಿದೆ.

ಗ್ರಾಮೀಣ ಆರ್ಥಿಕತೆಯ ಸುಧಾರಣೆಗೆ ದೀರ್ಘಾವಧಿ ಯೋಜನೆಗಳು ಅಗತ್ಯ

ಆರ್ಥಿಕತೆ ಬೆಳವಣಿಗೆಯಲ್ಲಿ ಹಲವು ವೈರುಧ್ಯಗಳೂ ಗೋಚರಿಸಿವೆ. ಗ್ರಾಮೀಣ ಭಾಗದಲ್ಲಿ ಬೇಡಿಕೆ ಕುಸಿತ ಆಗಿರುವುದನ್ನು ಮತ್ತು ನಗರ ಪ್ರದೇಶದ ಕೆಲವು ವಲಯಗಳ ನೌಕರ ವರ್ಗದ ಖರ್ಚು ಮಾಡುವ ಪ್ರವೃತ್ತಿಯೂ ಕಡಿಮೆ ಆಗಿರುವುದನ್ನು ಕಾರ್ಪೊರೇಟ್ ವಲಯದ ತಜ್ಞರು ಗುರುತಿಸಿದ್ದಾರೆ. ಪ್ರೀಮಿಯಂ ಕಾರುಗಳ ಮಾರಾಟ ಹೆಚ್ಚಾಗಿದ್ದರೂ ಸಾಮಾನ್ಯ ಕಾರುಗಳ ಮಾರಾಟ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಶೇ 40ರಷ್ಟು ಕುಸಿತ ಕಂಡಿದೆ. ದ್ವಿಚಕ್ರ ವಾಹನಗಳ ಮಾರುಕಟ್ಟೆ ಕೂಡ ಮಂದವಾಗಿರುವುದು ಗ್ರಾಮೀಣ ಆರ್ಥಿಕತೆಯಲ್ಲಾದ ಪಲ್ಲಟದ ಕಥೆಯನ್ನು ಹೇಳುತ್ತಿದೆ. ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳ (ಎಫ್‌ಎಂಸಿಜಿ) ಕಂಪನಿಗಳು ಹೆಚ್ಚಾಗಿ ನಗರಪ್ರದೇಶವನ್ನೇ ಅವಲಂಬಿಸುವಂತಾಗಿದೆ. ಗ್ರಾಮೀಣ ಭಾಗದಲ್ಲಿ ಬೇಡಿಕೆ ಕುಸಿದಿರುವುದೇ ಎರಡನೆಯ ತ್ರೈಮಾಸಿಕದಲ್ಲಿ ತನ್ನ ನೀರಸ ಪ್ರದರ್ಶನಕ್ಕೆ ಕಾರಣ ಎಂದು ಹಿಂದುಸ್ತಾನ್ ಯೂನಿಲಿವರ್ ಕಂಪನಿ ಈಗಾಗಲೇ ಹೇಳಿಕೊಂಡಿದೆ. ವಸತಿ ಕ್ಷೇತ್ರದಲ್ಲೂ ಐಷಾರಾಮಿ ಮನೆಗಳು ಮಾರಾಟವಾದಷ್ಟು ವೇಗದಲ್ಲಿ ಕೈಗೆಟಕುವ ಸಾಮಾನ್ಯ ಮನೆಗಳು ಮಾರಾಟವಾಗಿಲ್ಲ. ಅಲ್ಲದೆ, ಈ ವರ್ಷದ ಹಬ್ಬದ ಋತು ಅಧಿಕ ಮಾಸದ ಕಾರಣದಿಂದಾಗಿ ಮುಂದಕ್ಕೆ ಹೋಗಿ ಅಕ್ಟೋಬರ್ ಮಧ್ಯದಲ್ಲಿ ಬಂದಿದೆ. ಹಬ್ಬದ ಋತುವಿನಲ್ಲಿ ಒಂದುವೇಳೆ ಬೇಡಿಕೆ ಪ್ರಮಾಣ ಹೆಚ್ಚಾಗಿದ್ದರೆ ಅದು ಮೂರನೇ ತ್ರೈಮಾಸಿಕದ ಬೆಳವಣಿಗೆ ದರದಲ್ಲಿ ವ್ಯಕ್ತವಾಗಲಿದೆ. ಈ ಹಣಕಾಸು ವರ್ಷದ ಅಂತ್ಯದ ವೇಳೆಗೆ ಸಾರ್ವತ್ರಿಕ ಚುನಾವಣೆ ಸಮೀಪಿಸುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಲ್ಯಾಣ ಯೋಜನೆಗಳ ಮೇಲೆ ಅಧಿಕ ಮೊತ್ತವನ್ನು ವಿನಿಯೋಗಿಸಲಿವೆ. ಗ್ರಾಮೀಣ ಭಾಗದಲ್ಲಿ ಇದರಿಂದ ಬೇಡಿಕೆ ಹೆಚ್ಚಿ, ಅಲ್ಲಿನ ಆರ್ಥಿಕ ಬೆಳವಣಿಗೆ ವೇಗ ಪಡೆಯಬಹುದು ಎಂದೂ ಅಂದಾಜಿಸಲಾಗಿದೆ. ಗ್ರಾಮೀಣ ಆರ್ಥಿಕತೆಯ ಸುಧಾರಣೆಗೆ ದೀರ್ಘಾವಧಿ ಯೋಜನೆಗಳು ಅಗತ್ಯ.

ದಿನದ ಟ್ವೀಟ್

ನೆರವಾಗಿ, ಆದರೆ...

ಜಾಮೀನಿಗೆ ಸಹಿ ಹಾಕುವ ಮೂಲಕ, ತಲೆತಲಾಂತರದಿಂದ ಬಂದಿದ್ದ ಆಸ್ತಿಪಾಸ್ತಿಯನ್ನೆಲ್ಲ ಕಳೆದುಕೊಂಡ ಕುಟುಂಬಗಳನ್ನು ನಾನು ನೋಡಿದ್ದೇನೆ. ಬದುಕು ಮತ್ತೆ ಹಿಂದಿನಂತೆ ಇರುವುದಿಲ್ಲ. ಆ ಕುಟುಂಬಗಳು ಪುನಃ ಚೇತರಿಸಿಕೊಳ್ಳಲೇ ಇಲ್ಲ. ನಿಮಗೆ ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಜನರಿಗೆ ಹಣಕಾಸು ನೆರವು ನೀಡಿ. ಆದರೆ ಅದಕ್ಕಿಂತ ಹೆಚ್ಚಾಗಿ ಸಾಲ ನೀಡುವುದು ಮತ್ತು ಜಾಮೀನಿಗೆ ಸಹಿ ಹಾಕುವುದರಿಂದ ದೂರ ಇರಿ.

ಡಿ.ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ

ತಳ್ಳುಗಾಡಿಯ ವ್ಯಾಪಾರಿಯಿಂದ ನಾನು ಕೆ.ಜಿ.ಗೆ 10 ರೂಪಾಯಿಯಂತೆ ಹೂಕೋಸನ್ನು ಇಂದು ಖರೀದಿಸಿದೆ. ಅದನ್ನು ಆತ ಎಷ್ಟಕ್ಕೆ ಖರೀದಿಸಿದ್ದ ಎಂದು ಕೇಳಿದ್ದಕ್ಕೆ, ಕೆ.ಜಿ.ಗೆ 5 ರೂಪಾಯಿಯಂತೆ ಎಂದ. ಹಾಗಿದ್ದರೆ, ಹೂಕೋಸನ್ನು ಬೆಳೆದ ರೈತರಿಗೆ ಎಷ್ಟು ಹಣ ಸಿಕ್ಕಿರಬಹುದು ಎಂದು ಯೋಚಿಸಿದಾಗ ನನಗೆ ಅಚ್ಚರಿಯಾಯಿತು. ಕೃಷಿಯನ್ನು ನಾವು ದುರ್ಬಲಗೊಳಿಸುತ್ತಿರುವುದು ಹೀಗೇ.

ದೇವಿಂದರ್ ಶರ್ಮಾ, ಲೇಖಕ

25 ವರ್ಷಗಳ ಹಿಂದೆ

ಬುಧವಾರ, 2-12-1998

- **ದತ್ತಪೀಠ: ರಾಜ್ಯಸಭೆಯಲ್ಲಿ ಗದ್ದಲ ಸರ್ಕಾರದ ಹೇಳಿಕೆಗೆ ಆದೇಶ**

ನವದೆಹಲಿ, ಡಿ. 1– ಚಿಕ್ಕಮಗಳೂರು ಜಿಲ್ಲೆಯ ಗುರು ದತ್ತಾತ್ರೇಯ ಬಾಬಾಬುಡನ್‌ಗಿರಿ ಸ್ವಾಮಿ ದರ್ಗಾದ 'ವಿಮೋಚನೆ'ಗೆಂದು ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ನಡೆಸಬೇಕೆಂದಿರುವ ರಥಯಾತ್ರೆಯ ವಿವಾದ ಇಂದು ರಾಜ್ಯಸಭೆಯಲ್ಲಿ ಪ್ರತಿಧ್ವನಿಸಿ, ಪದೇ ಪದೇ ಗದ್ದಲ ಉಂಟಾಯಿತು.

ಈ ವಿವಾದ ಸದನದಲ್ಲಿ, ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿಗೆ ಎಡೆಮಾಡಿಕೊಟ್ಟಿತು. ಈ ಪ್ರಕರಣದ ಬಗೆಗೆ ಸರ್ಕಾರ 3ರಂದು ಸ್ಪಷ್ಟ ಹೇಳಿಕೆ ನೀಡಬೇಕೆಂದು, ಸಭಾಧ್ಯಕ್ಷ ಪೀಠದಲ್ಲಿದ್ದ ಸರೋಜ್ ಖಾಪರ್ಡೆ ಸರ್ಕಾರಕ್ಕೆ ಆದೇಶಿಸಿದರು.

- **ಮರುಮೊಳಕೆ ಒಡೆಯದ ತಳಿಗೆ ಪ್ರವೇಶವಿಲ್ಲ: ಕೇಂದ್ರ ಭರವಸೆ**

ನವದೆಹಲಿ, ಡಿ. 1– ಬಹುರಾಷ್ಟ್ರೀಯ ಸಂಸ್ಥೆ ಮಾನ್ಸಂಟೋದ ಟರ್ಮಿನೇಟರ್ ವಂಶವಾಹಿ ತಾಂತ್ರಿಕತೆಯು ಭಾರತವನ್ನು ಪ್ರವೇಶಿಸದಂತೆ ನೋಡಿಕೊಳ್ಳುವುದಾಗಿ ಹಾಗೂ ರೈತರ ಬೀಜ ಮರುಬಳಕೆಯ ಹಕ್ಕನ್ನು ಸಂರಕ್ಷಿಸುವುದಾಗಿ ಕೃಷಿ ಸಚಿವ ಸೋಂಪಾಲ್ ಇಂದು ರಾಜ್ಯಸಭೆಯಲ್ಲಿ ಆಶ್ವಾಸನೆ ನೀಡಿದರು.

ಕರ್ನಾಟಕವೂ ಸೇರಿದಂತೆ ದೇಶದ ಹಲವೆಡೆ ವಿವಾದಿತ ಬಹುರಾಷ್ಟ್ರೀಯ ಸಂಸ್ಥೆಯ ಟರ್ಮಿನೇಟರ್ ಜೀನ್ ಹೊಂದಿದ ಬೀಜದ (ಮರುಮೊಳಕೆಯೊಡೆಯದ ತಳಿ) ಪ್ರಯೋಗ ನಡೆಸಲಾಗುತ್ತಿದೆ ಎಂಬ ಪ್ರಕರಣ ರಾಜ್ಯಸಭೆಯಲ್ಲಿ ಪ್ರಸ್ತಾಪವಾಗಿ, ಸದಸ್ಯರು ತೀವ್ರ ಕಳವಳ ವ್ಯಕ್ತಪಡಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 2-12-1973

- **ಸಚಿವರ ಹತೋಟಿ ಅಸಾಧ್ಯವಾದರೆ ಅರಸು ರಾಜೀನಾಮೆಗೆ ಒತ್ತಾಯ**

ಬೆಂಗಳೂರು, ಡಿ. 1– ಪೌರಾಡಳಿತ ಸಚಿವ ಬಿ. ಬಸವಲಿಂಗಪ್ಪ ಅವರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಆಗದಿದ್ದರೆ ಮುಖ್ಯಮಂತ್ರಿಯವರು ರಾಜೀನಾಮೆ ನೀಡಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಎಚ್.ಡಿ. ದೇವೇಗೌಡ ಒತ್ತಾಯಿಸಿದ್ದಾರೆ.

ವಿದ್ಯಾರ್ಥಿಗಳ ಚಳವಳಿಯ ಸಂಬಂಧದಲ್ಲಿ ಮುಖ್ಯಮಂತ್ರಿಯವರು, ರಾಮನಗರದಲ್ಲಿ ವ್ಯಕ್ತಪಡಿಸಿದ ಪ್ರತಿಕ್ರಿಯೆಯ ನಂತರ, ರಾಜ್ಯದಲ್ಲಿ ಬೇಕಾದಷ್ಟು ಪ್ರಮಾಣದಲ್ಲಿ ಚಳವಳಿ ಬೆಳೆದಿದೆ ಎಂದೂ, ಆ ಬಗ್ಗೆ ಏನೂ ಹೇಳದೆ ಅಸಡ್ಡೆ ಮನೋಭಾವ ತೋರಿದರೆ ಇಂದಿನ ಅನಾಹುತಕ್ಕೆ ಮುಖ್ಯಮಂತ್ರಿ ಅರಸು ಅವರೇ ಕಾರಣರಾಗಲಿದ್ದಾರೆ ಎಂದೂ ಅವರು ಹೇಳಿದರು.

- **ನಗರದಲ್ಲಿ ಉದ್ರಿಕ್ತ ಗುಂಪಿನಿಂದ ಎರಡು ಬಸ್ಸುಗಳಿಗೆ ಬೆಂಕಿ: ಕಲ್ಲು ತೂರಾಟ**

ಬೆಂಗಳೂರು, ಡಿ. 1– ವಿದ್ಯಾರ್ಥಿಗಳ ಒಂದು ಗುಂಪಿನವರು ಇಂದು ವಿಜಯ ಕಾಲೇಜಿನ ಬಳಿ ಸಾರಿಗೆ ಬಸ್ಸೊಂದಕ್ಕೆ ಬೆಂಕಿ ಹಚ್ಚಿದ ಹಾಗೂ ನಗರದ ಅನೇಕ ಕಡೆಗಳಲ್ಲಿ ಬಸ್ಸುಗಳಿಗೆ ಕಲ್ಲು ಹೊಡೆದ ಪ್ರಕರಣಗಳು ವರದಿಯಾಗಿವೆ.

ಮತ್ತೊಂದು ಗುಂಪು ಒಂದು ಚಿತ್ರ ಮಂದಿರಕ್ಕೆ ಕಲ್ಲು ಹೊಡೆದ ಪರಿಣಾಮವಾಗಿ ಮಂದಿರದ ಗಾಜುಗಳು ಪುಡಿಪುಡಿಯಾಗಿವೆ.

ಐದು ರಾಜ್ಯಗಳ ಚುನಾವಣಾ ಫಲಿತಾಂಶ: ಸ್ಥೂಲ ನೋಟ ಕೊಟ್ಟ ಮತಗಟ್ಟೆ ಸಮೀಕ್ಷೆಗಳು

ಮತ ಎಣಿಕೆಯ ಮುನ್ನಾ ದಿನ...

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶ ಏನಾಗಬಹುದು ಎಂಬ ತೀರ್ಪನ್ನು ವಿವಿಧ ಮತಗಟ್ಟೆ ಸಮೀಕ್ಷೆಗಳು ಕೊಟ್ಟುಬಿಟ್ಟಿವೆ. ಜನರ ತೀರ್ಪು ಭಾನುವಾರ ಪ್ರಕಟವಾಗಲಿದೆ. ಈಗ ಪ್ರಕಟವಾಗಿರುವ ಅಂದಾಜು ಮತ್ತು ನಿಜವಾದ ಫಲಿತಾಂಶವನ್ನು ಹೋಲಿಸಿ ನೋಡುವ ಅವಕಾಶ ಭಾನುವಾರ ಸಿಗಲಿದೆ.

ಫಲಿತಾಂಶ ಯಾವ ರೀತಿ ಇರಬಹುದು ಎಂಬ ಸ್ಥೂಲ ನೋಟವೊಂದನ್ನು ಮತಗಟ್ಟೆ ಸಮೀಕ್ಷೆಗಳು ಕೊಟ್ಟಿವೆ. ಆದರೆ, ವಿವಿಧ ಸಮೀಕ್ಷೆಗಳ ಅಂದಾಜಿನ ನಡುವೆ ದೊಡ್ಡ ಮಟ್ಟದ ವ್ಯತ್ಯಾಸವೂ ಕಂಡುಬಂದಿದೆ. ಅಂದಾಜುಗಳ ನಡುವಣ ವ್ಯತ್ಯಾಸ ಯಾವ ರೀತಿಯಲ್ಲಿದೆ ಎಂದರೆ, ಸಮೀಕ್ಷೆಗಳ ಅಂದಾಜುಗಳ ಸರಾಸರಿ ತೆಗೆದುಕೊಳ್ಳುವುದು ಕೂಡ ಅವಾಸ್ತವಿಕ ಅನ್ನುವ ರೀತಿಯಲ್ಲಿದೆ. ಸಂಖ್ಯೆಗಳನ್ನು ಆಚೆಗಿಟ್ಟು, ವಿವಿಧ ರಾಜ್ಯಗಳಲ್ಲಿ ಯಾವ ಪ್ರವೃತ್ತಿ ಇದೆ ಎಂಬುದನ್ನು ನೋಡೋಣ. ಛತ್ತೀಸಗಢ ಮತ್ತು ತೆಲಂಗಾಣವು ಕಾಂಗ್ರೆಸ್ ಪಕ್ಷದ ಪರವಾಗಿದ್ದರೆ, ಮಿಜೋರಾಂನಲ್ಲಿ ಜಡ್‌ಪಿಎಂ ನೇತೃತ್ವದ ಮೈತ್ರಿಕೂಟವು ಮುನ್ನಡೆ ಸಾಧಿಸಬಹುದು. ರಾಜಸ್ಥಾನ ಮತ್ತು ಮಧ್ಯ ಪ್ರದೇಶದಲ್ಲಿ ಅತ್ಯಂತ ನಿಕಟ ಸ್ಪರ್ಧೆ ಉಂಟಾಗಬಹುದು. ಎರಡು ಪ್ರಮುಖ ಪಕ್ಷಗಳ ಮತ ಪ್ರಮಾಣದ ಅಂತರವು ಬಹಳ ಕಡಿಮೆ ಇರಬಹುದು.

ಮತಗಟ್ಟೆ ಸಮೀಕ್ಷೆಗಳು ತೋರಿಸಿಕೊಟ್ಟ ಪ್ರವೃತ್ತಿ ಮತ್ತು ಸ್ವತಂತ್ರ ತಳಮಟ್ಟದ ವರದಿಗಳನ್ನು ನಂಬುವುದಾದರೆ, ಭಾನುವಾರದ ಮತ ಎಣಿಕೆಯಲ್ಲಿ ಅತ್ಯಂತ ಕುತೂಹಲ ಕೆರಳಿಸಿರುವುದು ತೆಲಂಗಾಣ. ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಮುನ್ನಡೆ ಇದೆ ಎಂದು ಹೆಚ್ಚಿನ ಸಮೀಕ್ಷೆಗಳು ಹೇಳಿವೆ. ಒಂದು ಸಮೀಕ್ಷೆ ಮಾತ್ರ, ಬಿಆರ್‌ಎಸ್‌ಗಿಂತ ಕಾಂಗ್ರೆಸ್‌ಗೆ ಅಲ್ಪ ಮುನ್ನಡೆ ಸಿಗಲಿದೆ ಎಂದಿದೆ. ಭಾನುವಾರದ ಫಲಿತಾಂಶದಲ್ಲಿ ತೆಲಂಗಾಣದಲ್ಲಿ ಕಾಂಗ್ರೆಸ್ ಗೆದ್ದರೆ ಅದು ಆ ಪಕ್ಷದ ಗತಿಯನ್ನೇ ಬದಲಿಸಬಹುದು. ಮೊದಲನೆಯದಾಗಿ, ಕರ್ನಾಟಕದಲ್ಲಿ ಸಿಕ್ಕ ಗೆಲುವನ್ನು ಕಾಂಗ್ರೆಸ್ ಪಕ್ಷವು ವಿಸ್ತರಿಸಿಕೊಂಡಿದೆ ಮತ್ತು ದಕ್ಷಿಣದಲ್ಲಿ ತನ್ನ ಅಸ್ತಿತ್ವವನ್ನು ಮರುಸ್ಥಾಪಿಸಿದೆ ಎಂಬುದನ್ನು ಇದು ಸೂಚಿಸಲಿದೆ. ತೆಲಂಗಾಣ ರಾಜ್ಯವು ರಚನೆಗೊಂಡು ಒಂಬತ್ತು ವರ್ಷಗಳ ನಂತರ ರಾಜ್ಯ ರಚನೆಯ ಭಾವನಾತ್ಮಕತೆಯಿಂದ ಮತದಾರ ಹೊರಬಂದಿದ್ದಾನೆ ಎಂಬುದನ್ನೂ ಇದು ದೃಢಪಡಿಸುತ್ತದೆ.

ನಗರ–ಗ್ರಾಮೀಣ ಪ್ರದೇಶದ ನಡುವಣ ವ್ಯತ್ಯಾಸ ಏನಿದೆ ಮತ್ತು ಕಾಂಗ್ರೆಸ್ ಯಾವ ರೀತಿಯ ಸಾಮಾಜಿಕ ಸಮೀಕರಣ ರೂಪಿಸಿದೆ ಎಂಬುದು ಕೂಡ ಆಸಕ್ತಿಕರ ಅಂಶವಾಗಿದೆ. ಕಾಂಗ್ರೆಸ್ ಗೆಲುವು ಎಂದರೆ, ಅದು ಆ ಪಕ್ಷದ ಪರವಾಗಿ ಇರುವ ಸ್ಪಷ್ಟ ಅಲೆಯ ಉಪ ಉತ್ಪನ್ನ ಎನ್ನಬಹುದು. ತೆಲಂಗಾಣದ ಗ್ರಾಮೀಣ ಪ್ರದೇಶಗಳಲ್ಲಿ ಓಡಾಡಿ ವರದಿ ತಯಾರಿಸಿದವರ ಪ್ರಕಾರ, ಅಲ್ಲಿ ಇಂತಹ ಭಾವ ಇದೆ.

ಛತ್ತೀಸಗಢದಲ್ಲಿ ಕಾಂಗ್ರೆಸ್ ಪಕ್ಷವು ಪುನರಾಯ್ಕೆ ಆಗಬಹುದು ಎಂದು ಎಲ್ಲ ಮತಗಟ್ಟೆ ಸಮೀಕ್ಷೆಗಳು ಹೇಳಿವೆ. ಕಾಂಗ್ರೆಸ್ ಪಕ್ಷಕ್ಕೆ ಎಷ್ಟು ಅಂತರದ ಗೆಲುವು ಸಿಕ್ಕಬಹುದು ಎಂಬ ವಿಚಾರದಲ್ಲಿ ವಿವಿಧ ಸಮೀಕ್ಷೆಗಳ ನಡುವೆ ಸಹಮತ ಇಲ್ಲ. ಕಾಂಗ್ರೆಸ್ ಪಕ್ಷದ ಪಾಲಿಗೆ ಛತ್ತೀಸಗಢವು ಸರಳವಾದ ಒಂದು ಕಾರಣಕ್ಕಾಗಿ ಭಿನ್ನ. ಬಹಳ ಕಾಲದ ನಂತರ, ಕಾಂಗ್ರೆಸ್ ಪಕ್ಷವು ಸತತವಾಗಿ ಎರಡನೇ ಅವಧಿಗೆ ಪುನರಾಯ್ಕೆಗೊಂಡಂತಾಗುತ್ತದೆ. ಮತಗಟ್ಟೆ ಸಮೀಕ್ಷೆಯ ರೀತಿಯಲ್ಲಿಯೇ ಫಲಿತಾಂಶವು ಬಂದರೆ, ಸ್ಥಳೀಯ ವಿಚಾರಗಳು ಮತ್ತು ನಾಯಕತ್ವವೇ ವಿಧಾನಸಭೆ ಚುನಾವಣೆಯಲ್ಲಿ ಪ್ರಭಾವ ಬೀರುತ್ತವೆ ಎಂಬುದು ದೃಢಪಡುತ್ತದೆ. ಕಾಂಗ್ರೆಸ್ ಪಕ್ಷವು (ಕರ್ನಾಟಕ ವಿಧಾನಸಭೆ ಚುನಾವಣೆಯ ಪ್ರಚಾರದ ಮಾದರಿಯನ್ನು ಅನುಸರಿಸಿತು) ಪ್ರಚಾರವನ್ನು ಸಾಧ್ಯವಾದಷ್ಟು ಸ್ಥಳೀಯವಾಗಿಸಿದೆ. ಮತದಾನಕ್ಕೆ ಸಾಕಷ್ಟು ಮುನ್ನವೇ, ನಾಯಕತ್ವದ ವಿಚಾರವನ್ನು ಪಕ್ಷವು ಬಗೆಹರಿಸಿಕೊಂಡಿತು (ಕರ್ನಾಟಕದಲ್ಲಿ ಮಾಡಿದ ಹಾಗೆಯೇ). ಕಾಂಗ್ರೆಸ್ ಪಕ್ಷವು ಗೆದ್ದರೆ ಈ ನಾಯಕತ್ವ ವಿಚಾರವು ಏನಾಗಬಹುದು ಎಂಬುದು ಬೇರೆಯೇ ವಿಚಾರ. ಆಡಳಿತ ಪಕ್ಷಕ್ಕೆ ಸವಾಲು ಒಡ್ಡುವಲ್ಲಿ ಬಿಜೆಪಿ ವಿಳಂಬ ಮಾಡಿತು ಎಂಬುದೂ ಕಾಂಗ್ರೆಸ್ ಗೆದ್ದರೆ ದೃಢಪಡುತ್ತದೆ. ಸ್ಥಳೀಯ ನಾಯಕತ್ವವನ್ನು ಮುನ್ನೆಲೆಗೆ ತಾರದೆಯೇ ಬಿಜೆಪಿ ಚುನಾವಣೆ ಎದುರಿಸಿತು (ಕರ್ನಾಟಕದಲ್ಲಿಯೂ ಹೀಗೆಯೇ ಮಾಡಲಾಗಿತ್ತು). ಇದು ಬಿಜೆಪಿಗೆ ಪ್ರತಿಕೂಲ ಆಗಬಹುದು. ಛತ್ತೀಸಗಢದಲ್ಲಿ, ಪ್ರಚಾರದ ಆರಂಭದಲ್ಲಿ ಭಾವಿಸಿದ್ದಕ್ಕಿಂತ ಸ್ಪರ್ಧೆಯು ಹೆಚ್ಚು ನಿಕಟವಾಗಿದೆ. ಪಕ್ಷದಲ್ಲಿನ ಒಗ್ಗಟ್ಟಿಗೆ ಸವಾಲೊಡ್ಡುವ ಅಂಶಗಳು ಇವೆ ಎಂದು ಉಪಮುಖ್ಯಮಂತ್ರಿಯು ಸುದ್ದಿವಾಹಿನಿ ಸಂವಾದದಲ್ಲಿ ಒಪ್ಪಿಕೊಂಡಿದ್ದರು.

ಮಿಜೋರಾಂನಲ್ಲಿ ಜಡ್‌ಪಿಎಂ ಮೈತ್ರಿಕೂಟವು ಮುನ್ನಡೆ ಸಾಧಿಸಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಈ ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ಈ ಕೂಟವು ಪ್ರಮುಖ ವಿರೋಧ ಪಕ್ಷವಾಗಿ ಮೂಡಿ ಬಂದಿತ್ತು. ಮೈತ್ರಿಕೂಟವು ಜಯ ಗಳಿಸಿದರೆ ರಾಜ್ಯದಲ್ಲಿ ಈ ಕೂಟದ ಅಸ್ತಿತ್ವವು ದೃಢಪಟ್ಟಂತಾಗುತ್ತದೆ. ಜೊತೆಗೆ, ಮತಗಟ್ಟೆ ಸಮೀಕ್ಷೆಗಳ ಭವಿಷ್ಯವೂ ನಿಜವಾದಂತಾಗುತ್ತದೆ. ಜಡ್‌ಪಿಎಂ ನಾಯಕ ಈ ಹಿಂದೆ ಕಾಂಗ್ರೆಸ್‌ನಲ್ಲಿ ಇದ್ದವರು. ದೊಡ್ಡ ಗುಂಪಿನೊಂದಿಗೆ ಅವರು ಪಕ್ಷ ಬಿಟ್ಟಿದ್ದರಿಂದಾಗಿ ಕಾಂಗ್ರೆಸ್ ಪಕ್ಷವು ದುರ್ಬಲವಾಗಿ, ಮೂರನೇ ಸ್ಥಾನಕ್ಕೆ ಹೋಗುವಂತಾಯಿತು. ಕಾಂಗ್ರೆಸ್ ಪಕ್ಷವು ಏನಾದರೂ ಪುನಶ್ಚೇತನ ಕಂಡಿದೆಯೇ ಎಂಬುದನ್ನೂ ಈ ಚುನಾವಣೆಯು ತೋರಿಸಿಕೊಡಲಿದೆ. ಆಡಳಿತಾರೂಢ ಎಂಎನ್‌ಎಫ್, ಎನ್‌ಡಿಎಯ ಭಾಗ. ಆದರೆ, ಚುನಾವಣೆಯ ಸಂದರ್ಭದಲ್ಲಿ ತಂತ್ರದ ಭಾಗವಾಗಿ ಎನ್‌ಡಿಎ ಜೊತೆಗೆ ಅಂತರ ಕಾಯ್ದುಕೊಂಡಿದೆ. ಅದರ ಪರಿಣಾಮ ಏನು ಎಂಬುದನ್ನು ಫಲಿತಾಂಶವು ತೋರಿಸಿಕೊಡಲಿದೆ.



ನಿಕಟ ಸ್ಪರ್ಧೆಯು ಚುನಾವಣಾ ವಿಶ್ಲೇಷಕರಿಗೆ ಸದಾ 'ದುಃಸ್ವಪ್ನವೇ' ಆಗಿರುತ್ತದೆ. ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಅದೇ ಸ್ಥಿತಿ ಇದೆ. ಮತ ಎಣಿಕೆಯ ಕೊನೆಯ ಕ್ಷಣದವರೆಗೂ ಈ ಜಿದ್ದಾಜಿದ್ದಿ ಮುಂದುವರಿಯಬಹುದು. ಎರಡೂ ರಾಜ್ಯಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವಣ ಮತ ಗಳಿಕೆಯ ನಡುವೆ ಅಲ್ಪ ಅಂತರವಷ್ಟೇ ಇರಬಹುದು. ಮಧ್ಯಪ್ರದೇಶದ ಮತಗಟ್ಟೆ ಸಮೀಕ್ಷೆಗಳ ಫಲಿತಾಂಶವು ಭಿನ್ನವಾಗಿದೆ. ಎರಡು ಸಮೀಕ್ಷೆಗಳು ಬಿಜೆಪಿಗೆ ಸ್ಪಷ್ಟ ಮುನ್ನಡೆ ಕೊಟ್ಟಿವೆ. ಇತರ ಸಮೀಕ್ಷೆಗಳು ನಿಕಟ ಸ್ಪರ್ಧೆ ಎಂದು ಹೇಳಿವೆ. ಚುನಾವಣೆಯನ್ನು ಕೇಂದ್ರದ ನಾಯಕತ್ವ ಮತ್ತು ಸಾಮೂಹಿಕ ನಾಯಕತ್ವದ ಮೂಲಕ ಎದುರಿಸುವ ಕಾರ್ಯತಂತ್ರವನ್ನು ಬಿಜೆಪಿ ಅನುಸರಿಸಿದೆ. ದೀರ್ಘಕಾಲ ಅಧಿಕಾರದಲ್ಲಿ ಇರುವ ಕಾರಣ ಜನರಲ್ಲಿ ಉಂಟಾಗಿರುವ ಅಸಡ್ಡೆಯನ್ನು ಹೋಗಲಾಡಿಸಲು ಈ ತಂತ್ರ ಅನುಸರಿಸಲಾಗಿದೆ. ಚುನಾವಣಾ ಪ್ರಚಾರ ಆರಂಭಗೊಂಡ ಬಳಿಕ, ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಅವಲಂಬಿಸಬೇಕು ಎಂಬುದನ್ನು ಬಿಜೆಪಿ ಅರ್ಥ ಮಾಡಿಕೊಂಡಿತು. ಜೊತೆಗೆ, ಸರ್ಕಾರವು ಜಾರಿಗೊಳಿಸಿದ ಅಭಿವೃದ್ಧಿ ಯೋಜನೆಗಳ ಅನುಕೂಲವನ್ನೂ ಪಡೆಯಲು ನಿರ್ಧರಿಸಿತು. ಕಾಂಗ್ರೆಸ್ ಪಕ್ಷವು ಕಮಲನಾಥ್ ಅವರ ನಾಯಕತ್ವದಲ್ಲಿ ಚುನಾವಣೆ ಎದುರಿಸಿತು. ಕಾಂಗ್ರೆಸ್‌ನ ಪ್ರಚಾರವು ಬೇಗನೆ ಆರಂಭಗೊಂಡು ಬೇಗನೆ ಮುಕ್ತಾಯವಾದಂತೆ ತೋರಿತು.

ರಾಜಸ್ಥಾನವು ಸಾಂಪ್ರದಾಯಿಕವಾದ ಪರ್ಯಾಯ ಆಳ್ವಿಕೆ ಮಾದರಿಗೇ ಅಂಟಿಕೊಳ್ಳಬಹುದೇ? ಬಿಜೆಪಿಗೆ ಮುನ್ನಡೆ ಎಂಬುದನ್ನು, ಒಂದನ್ನು ಬಿಟ್ಟು ಇತರ ಎಲ್ಲ ಸಮೀಕ್ಷೆಗಳೂ ಹೇಳಿವೆ. ರಾಜಸ್ಥಾನದಲ್ಲಿ ಬಿಜೆಪಿಯ ಚುನಾವಣಾ ಪ್ರಚಾರದ ನೇತೃತ್ವವನ್ನು ಕೇಂದ್ರ ನಾಯಕರೇ ವಹಿಸಿಕೊಂಡಿದ್ದರು. ರಾಜ್ಯ ಮಟ್ಟದ ನಾಯಕರಲ್ಲಿ ಇದ್ದ ಮುಸುಕಿನ ಗುದ್ದಾಟ ಸ್ಪಷ್ಟವಾಗಿ ಗೋಚರಿಸುವಂತಿತ್ತು. ರಾಜ್ಯಮಟ್ಟದ ಇಬ್ಬರು ಉನ್ನತ ಮಟ್ಟದ ನಾಯಕರ ನಡುವೆ ಇದ್ದ ಭಿನ್ನಮತಕ್ಕೆ ತೇಪೆ ಹಚ್ಚಿ ಕಾಂಗ್ರೆಸ್ ಚುನಾವಣೆ ಎದುರಿಸಿದೆ. ತೇಪೆ ಎಂಬ ಪದವನ್ನು ಇಲ್ಲಿ ಉದ್ದೇಶಪೂರ್ವಕವಾಗಿಯೇ ಬಳಸಲಾಗಿದೆ. ಏಕೆಂದರೆ, ಉನ್ನತಮಟ್ಟದಲ್ಲಿ ಆಗಿರುವ ಭಿನ್ನಮತ ಶಮನವು ತಳಮಟ್ಟಕ್ಕೆ ಇಳಿದಿದೆಯೇ ಎಂಬುದರ ಕುರಿತು ಅನುಮಾನ ಇದೆ. ಮುಖ್ಯಮಂತ್ರಿ ಅಶೋಕ ಗೆಹಲೋತ್ ಅವರು ಪ್ರಚಾರದ ನೇತೃತ್ವ ವಹಿಸಿದ್ದರು. ಪಕ್ಷವು ಗೆದ್ದರೆ ಅದರ ಶ್ರೇಯವು ಅವರ ನಾಯಕತ್ವಕ್ಕೆ ಸಲ್ಲಬೇಕು. ರಾಜ್ಯ ಮಟ್ಟದ ನಾಯಕರ ಬೆಂಬಲದಲ್ಲಿ ಕಣಕ್ಕೆ ಇಳಿದಿರುವ ಬಂಡಾಯಗಾರರು ಎರಡೂ ಪಕ್ಷಗಳಿಗೆ ತಲೆನೋವಾಗಬಹುದು. ಜಿದ್ದಾಜಿದ್ದಿ ಸ್ಪರ್ಧೆಯಲ್ಲಿ ಈ 'ಪಕ್ಷೇತರರು' ಈ ಹಿಂದಿನಂತೆ ಮುಖ್ಯ ಪಾತ್ರ ವಹಿಸಬಹುದು.

ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಮೂರು ರೀತಿಯ ಸ್ಪರ್ಧೆಗಳನ್ನು ಗಮನಿಸಬಹುದು. ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ ಇದೆ. ತೆಲಂಗಾಣದಲ್ಲಿ, ಅಲ್ಲಿಗೆ ಸೀಮಿತವಾದ ಆಡಳಿತಾರೂಢ ಪಕ್ಷಕ್ಕೆ ಹಲವು ರಾಜ್ಯಗಳಲ್ಲಿ ಅಸ್ತಿತ್ವ ಇರುವ ಪಕ್ಷಗಳು (ಬಿಜೆಪಿ ಮತ್ತು ಕಾಂಗ್ರೆಸ್) ಸವಾಲು ಒಡ್ಡಿವೆ. ಮಿಜೋರಾಂನಲ್ಲಿ ಆ ರಾಜ್ಯಕ್ಕಷ್ಟೇ ಸೀಮಿತವಾದ ಎರಡು ಪಕ್ಷಗಳ ನಡುವೆ ಸ್ಪರ್ಧೆ ಇದೆ. ಚುನಾವಣಾ ಸ್ಪರ್ಧೆಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಕಂಡುಬರುವ ಮಾದರಿಗಳನ್ನೇ ಈ ಮಾದರಿಗಳೂ ಹೋಲುತ್ತವೆ.

ಚುರುಮುರಿ

ಗಾಳಿಮಾತು

• ಮಣ್ಣೆರಾಜು

'ಚಾಮುಂಡಿ ದೇವಿಗೆ ಸರ್ಕಾರ 'ಗೃಹಲಕ್ಷ್ಮಿ'ಯ ಐದೂ ವರ್ಷದ ದುಡ್ಡನ್ನು ಒಂದೇ ಕಂತಿನಲ್ಲಿ ಕೊಟ್ಟಿದೆ. ಆಧಾರ್, ಪ್ಯಾನ್ ಕಾರ್ಡನ್ನು ಬ್ಯಾಂಕ್ ಅಕೌಂಟಿಗೆ ಲಿಂಕ್ ಮಾಡಿಸಿ ನೋಂದಣಿಗೆ ಪರದಾಡಿದ ನಿನಗೆ ಆ ಭಾಗ್ಯ ಇಲ್ಲ' ಶಂಕ್ರಿ ರೇಗಿಸಿದ.

'ಚಾಮುಂಡಿ ಕೃಪೆಯಿಂದ ರಾಜ್ಯದಲ್ಲಿ ಮಳೆಬೆಳೆ ಚೆನ್ನಾಗಿ ಆಗಿ ಕಷ್ಟ ನಿವಾರಣೆಯಾದರೆ ಸರ್ಕಾರ ನನ್ನ ಅಕೌಂಟಿಗೂ ಐದು ವರ್ಷದ ಹಣ ಹಾಕುತ್ತೆ ಬಿಡ್ರೀ... ಗೃಹಲಕ್ಷ್ಮಿಯ ಮೊದಲ ಕಂತನ್ನು ದೇವಿಗೆ ಸಲ್ಲಿಸಿದ ನಂತರ ರಾಜ್ಯದಲ್ಲಿ ಗ್ಯಾರಂಟಿ ಗಾಳಿ ಬೀಸಿ, ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಲು ಸಾಧ್ಯವಾಯಿತಂತೆ, ಹಾಗಾಗಿ ಸರ್ಕಾರ ಭಕ್ತಿ ಸಮರ್ಪಣೆ ಮಾಡಿದೆ' ಎಂದಳು ಸುಮಿ.

'ಕರ್ನಾಟಕದ ಗ್ಯಾರಂಟಿ ಗಾಳಿ ಪಂಚ ರಾಜ್ಯಗಳ ಅಸೆಂಬ್ಲಿ ಚುನಾವಣೆ ಮೇಲೂ ಬೀಸಿತಂತೆ. ಅಸೆಂಬ್ಲಿಗೆ ಬೀಸಿದ ಗಾಳಿ ಪಾರ್ಲಿಮೆಂಟಿಗೂ ಬೀಸದೇ ಇರುತ್ತಾ? ಬೀಸೇ ಬೀಸುತ್ತೆ...'

'ಹೌದಂತೆ, ಕರ್ನಾಟಕದ ಗ್ಯಾರಂಟಿಗಳಿಗೆ ಮನಸೋತಿರುವ 'ಇಂಡಿಯಾ' ಬಂಧುಗಳು, ಗ್ಯಾರಂಟಿ ಗಾಳಿ ದೇಶದಾದ್ಯಂತ ಬೀಸಿದರೆ, ಪಾರ್ಲಿಮೆಂಟ್ ಫೈಟ್ ಗೆದ್ದು ದೆಹಲಿ ಗದ್ದುಗೆ ಹಿಡಿಯಬಹುದು ಎಂಬ ವಿಶ್ವಾಸದಲ್ಲಿದ್ದಾರೆ'.

'ಎನ್‌ಡಿಎ ತಂಡ ಸುಮ್ಮನಿರುತ್ತಾ? ಬಿರುಗಾಳಿಯಾಗಿ ಗ್ಯಾರಂಟಿ ಗಾಳಿಯನ್ನು ದೂಳೀಪಟ ಮಾಡಿ ದೆಹಲಿಯಲ್ಲಿ ಮತ್ತೊಮ್ಮೆ ಗಾಳಿಪಟ ಹಾರಿಸಲು ತಂತ್ರ ರೂಪಿಸಿದೆಯಂತೆ'.

'ದೆಹಲಿ ಗಾಳಿಯ ಗುಣಮಟ್ಟ ಕುಸಿದು ಜನ ಉಸಿರುಕಟ್ಟುತ್ತಿದ್ದಾರಂತೆ, ಗೆಲುವಿನ ಗಾಳಿಗಿಂತ ಉಳಿವಿನ ಗಾಳಿಯ ತುರ್ತು ಅಗತ್ಯ ರಾಜಧಾನಿಗೆ ಇದೆಯಂತೆ'.

'ಶುದ್ಧ ಗಾಳಿಯ ವ್ಯವಸ್ಥೆ ಸರ್ಕಾರದ ಆದ್ಯತೆ ಆಗಬೇಕು. ಒಂದು ದೇಶ, ಒಂದು ಗಾಳಿ ಯೋಜನೆ ಜಾರಿಯಾದರೆ ಜನರಿಗೆ ಸಮಾನವಾದ ಶುದ್ಧಗಾಳಿ ಸಿಗಬಹುದು'.

'ಅಂಥಾ ಯೋಜನೆ ಬೇಡಾರೀ, ಗಾಳಿ ಕೊಟ್ಟಿದ್ದೀವಿ ಅಂತ ಸರ್ಕಾರ ನಮ್ಮ ಮೇಲೆ ಗಾಳಿ ತೆರಿಗೆ ವಿಧಿಸುವ ಅಪಾಯವಿದೆ' ಸುಮಿ ಗಾಬರಿಯಾದಳು.

ಸಂಗತ

ಭಿನ್ನ ಸಾಮರ್ಥ್ಯ, ಭಿನ್ನ ಸವಾಲು

ವಿಭಿನ್ನ ದೈಹಿಕ ಮತ್ತು ಮಾನಸಿಕ ಸವಾಲುಗಳುಳ್ಳ ಮಕ್ಕಳು ತಮ್ಮ ಭಿನ್ನ ಸಾಮರ್ಥ್ಯಗಳೊಂದಿಗೆ ಸಮನ್ವಯದಿಂದ ಒಡನಾಡುವ ಅವಕಾಶಗಳನ್ನು ಸೃಷ್ಟಿಸಬೇಕಾಗಿದೆ

• ಉದಯ ಗಾಂವಕಾರ

ಪ್ರತಿಯೊಬ್ಬರೂ ಒಂದಿಲ್ಲೊಂದು ವಿಧದ ವೈಕಲ್ಯವನ್ನು ಹೊಂದಿರುತ್ತಾರೆ ಎಂಬ ಮಾತಿದೆ. ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ 130 ಕೋಟಿ ಜನರು ಗಮನಾರ್ಹ ಎನಿಸುವಷ್ಟು ವೈಕಲ್ಯವನ್ನು ಹೊಂದಿದ್ದಾರೆ. ಅಂದರೆ, ಪ್ರತಿ ಆರು ವ್ಯಕ್ತಿಗಳಲ್ಲಿ ಒಬ್ಬ ವ್ಯಕ್ತಿಯು ತನ್ನ ವೈಕಲ್ಯದ ಕಾರಣದಿಂದ, ಇತರರಿಗೆ ದೊರೆಯುವ ಅನುಭವಗಳನ್ನು ಗಳಿಸಲು ಅಸಮರ್ಥನಾಗುತ್ತಾನೆ. ಇಂತಹ ವ್ಯಕ್ತಿಗಳಲ್ಲಿ ಎಷ್ಟೋ ಜನರು ಎಲ್ಲರಂತೆ ಸಾಮಾನ್ಯವಾಗಿ ಬದುಕು ನಡೆಸಬಹುದಾಗಿರುತ್ತದೆ. ಆದರೆ, ಅವರಿಗೆ ಅವಕಾಶಗಳು ಇರುವುದಿಲ್ಲ.

ಭಿನ್ನ ಸಾಮರ್ಥ್ಯವಿರುವ ಜನರನ್ನು ಬೇರೆ ಬೇರೆ ಕಾರಣಗಳಿಂದ ಹೊರಗಿಡಲಾಗಿರುತ್ತದೆ. ಇಲ್ಲಿ ಸಾಮಾಜಿಕ ಸ್ಥಾನಮಾನ, ಲಿಂಗ, ಆರ್ಥಿಕ ಸ್ಥಿತಿಗತಿಯಂತಹ ಸಂಗತಿಗಳು ಅವರ ಪರಿಸ್ಥಿತಿ ಎಷ್ಟು ಹೀನಾಯ ಆಗಬಹುದು ಎಂಬುದನ್ನು ನಿರ್ಧರಿಸುತ್ತವೆ. ಶಾಲೆಗಳಲ್ಲೂ ಭಿನ್ನ ಸಾಮರ್ಥ್ಯದ ಮಕ್ಕಳು ಬೇರೆ ಬೇರೆ ಕಾರಣಗಳಿಗಾಗಿ ಹೊರಗಿಡಲ್ಪಡುತ್ತಾರೆ. ಒಂದೇ ಬಗೆಯ ಅಳತೆ ಎಲ್ಲರಿಗೂ ಸರಿಹೊಂದುವುದಿಲ್ಲ. ಒಂದು ವಿಧಾನ, ಒಂದೇ ನೋಟಕ್ರಮ, ಒಂದೇ ಬಗೆಯ ಕಲಿಕೆಯ ಸನ್ನಿವೇಶಗಳು ಭಿನ್ನ ಸವಾಲು ಮತ್ತು ಸಾಮರ್ಥ್ಯಗಳುಳ್ಳ ಮಕ್ಕಳೆಲ್ಲರಿಗೂ ಹೊಂದುವುದಿಲ್ಲ.

ದೇಶದ ಶೇ 10– 12ರಷ್ಟು ಶಾಲಾ ಮಕ್ಕಳಿಗೆ ಕಲಿಕೆಗೆ ಸಂಬಂಧಿಸಿದಂತೆ ವಿಶಿಷ್ಟ ನ್ಯೂನತೆಗಳಿವೆ ಎಂಬ ಅಂದಾಜಿದೆ. ಬರವಣಿಗೆ, ಗ್ರಹಿಕೆಗೆ ಸಂಬಂಧಿಸಿದ ನಿರ್ದಿಷ್ಟ ನ್ಯೂನತೆ, ಏಕಾಗ್ರತೆಯ ಕೊರತೆ ಅಥವಾ ಅತಿ ಚಟುವಟಿಕೆಯ ಸಮಸ್ಯೆ ಇರಬಹುದು. ಆದರೆ, ಅಂತಹ ಮಕ್ಕಳಿರುವುದನ್ನು ಗುರುತಿಸಬಲ್ಲ ಶಾಲೆಗಳ ಸಂಖ್ಯೆ ಬಹಳ ಕಡಿಮೆ. ಏಕೆಂದರೆ, ಶಾಲೆಗಳು ಕೈಗಾರಿಕಾ ಯುಗದ ಉತ್ಪನ್ನಗಳು. ಅಲ್ಲಿಯವರೆಗೂ ಶಾಲೆ ಎಂಬುದು ವಿಶಾಲ ಬಯಲಾಗಿತ್ತು. ತರಗತಿ ಕೋಣೆ ಎಂಬ ಪರಿಕಲ್ಪನೆಯು ಬಯಲನ್ನು ಕೋಣೆಯೊಳಗೆ ಕಲ್ಪಿಸುವ ಅನಿವಾರ್ಯವನ್ನು ಸೃಷ್ಟಿಸಿತು.

ಕಲಿಕೆಯ ಸಂದರ್ಭಗಳನ್ನು ಒಂದು ಕೋಣೆಯೊಳಗೆ ಸೃಷ್ಟಿಸಿದ್ದರಿಂದ, ಒಂದೇ ಸಮಯದಲ್ಲಿ ಹಲವು ಮಕ್ಕಳು ಕಲಿಕೆಯ ಅನುಭವವನ್ನು ಒಟ್ಟಿಗೆ ಗಳಿಸುವ ಒಡನಾಟದ ಸೌಕರ್ಯ ದೊರೆಯಿತು. ಆದರೆ, ಒಂದೇ ಬಗೆಯಲ್ಲಿ ಎಲ್ಲರೂ ಪ್ರತಿಕ್ರಿಯಿಸಬೇಕೆಂಬ ನಿರೀಕ್ಷೆ ಬೆಳೆಯಿತು. ಕಾರ್ಖಾನೆಯಲ್ಲಿ ಒಂದೇ ಬಗೆಯ ಕಚ್ಚಾ ವಸ್ತುಗಳು, ಒಂದೇ ಬಗೆಯ ಸಂಸ್ಕರಣೆಗೊಳಪಟ್ಟು ಒಂದೇ ಬಗೆಯ ಉತ್ಪನ್ನಗಳು ದೊರೆಯುತ್ತವೆ. ಶಾಲೆಗಳನ್ನು ಕಾರ್ಖಾನೆಯ ರೀತಿಯಲ್ಲಿ ಗ್ರಹಿಸಲು ಇದೇ ಕಾರಣವಿರಬಹುದು. ಒಂದು ಅಗಳನ್ನು ಹಿಚುಕಿ ನೋಡಿ ಇಡೀ ಮಡಕೆಯ ಅನ್ನ ಬೆಂದಿದೆಯೆಂಬ ತೀರ್ಮಾನಕ್ಕೆ ಬರಬಹುದು ಎಂಬಂತಹ ಶಿಕ್ಷಣ ಶಾಸ್ತ್ರಗಳು ರೂಪುಗೊಂಡವು. ಈ ಬಗೆಯ ಕಾರ್ಖಾನೆ ಪರಿಕಲ್ಪನೆಯ ಶಿಕ್ಷಣ ಪಡೆದ ವ್ಯಕ್ತಿಗಳೇ ಮುಂದೆ ಶಿಕ್ಷಕರಾದರು. ಒಂದು ತಲೆಮಾರಿನ ಯೋಚನೆಗಳು ಹೀಗೆ ಪಡಿಯಚ್ಚಿನಲ್ಲಿ ಸಾಂದ್ರಗೊಂಡಿದ್ದರಿಂದ, ಶಾಲೆಗಳು ಬರಬರುತ್ತಾ ಜೀವಂತಿಕೆ, ಮಾನವೀಯ ಸಂವೇದನೆಯನ್ನು ಕಳೆದುಕೊಳ್ಳುತ್ತಾ ಹೋದವು.

ಗೋಡಂಬಿ ಕಾರ್ಖಾನೆಯಲ್ಲಿ ಸಾರಣಿಗೆಯಂತಹ ತೂತುಗಳುಳ್ಳ ತಟ್ಟೆಯ ಮೂಲಕ ಚಲಿಸುತ್ತಾ ಸಾಗಿ, ಬೇರೆ ಬೇರೆ ಗಾತ್ರದ ಗೋಡಂಬಿಗಳು ಪ್ರತ್ಯೇಕವಾಗುವಂತೆ, ಶಾಲೆಗಳಲ್ಲೂ ಗ್ರೇಡಿಂಗ್ ಅಥವಾ ಶ್ರೇಣೀಕರಣ ಪದ್ಧತಿ ಶುರುವಾಯಿತು. ಆದರೆ, ಮಕ್ಕಳು ಬೇರೆ ಬೇರೆ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯಿಂದ ಬಂದಿರುತ್ತಾರೆ. ಪ್ರತಿ ಮಗು ಜೈವಿಕವಾಗಿಯೂ ಅನನ್ಯ. ಪ್ರತಿ ಮಗುವಿನ ನರವ್ಯವಸ್ಥೆ, ದೇಹ ಸೌಕರ್ಯ, ಶಾಲೆಯಿಂದಾಚೆ ದೊರೆಯುವ ಒಡನಾಟದ ಪರಿಸರ ಭಿನ್ನವಾಗಿರುವುದರಿಂದ ಒಂದೇ ಬಗೆಯ ಕಲಿಕೆಯ ಸಂದರ್ಭಗಳು, 'ಒನ್ ಸೈಜ್ ಫಿಟ್ಸ್ ಆಲ್' ಎಂಬಂತೆ ಎಲ್ಲರಿಗೂ ಹೊಂದುತ್ತವೆ ಎಂದು ಭಾವಿಸಲಾಗದು. ಎಲ್ಲ ಮಕ್ಕಳೂ ಒಂದೇ ವೇಗದಲ್ಲಿ ಕಲಿಯಬೇಕು ಮತ್ತು ಒಂದೇ ಬಗೆಯಲ್ಲಿ ಜಗತ್ತನ್ನು ಗ್ರಹಿಸಬೇಕು ಎಂದು ಪೋಷಕರು ಹಾಗೂ ಶಿಕ್ಷಕರು ನಿರೀಕ್ಷಿಸುವುದು ಮಕ್ಕಳಲ್ಲಿ ಹಿಂಸೆಗೆ ಕಾರಣವಾಗುತ್ತಾ ಬಂದಿದೆ.

ಪಡಿಯಚ್ಚಿಗೆ ಸರಿಹೊಂದದ ಮಕ್ಕಳು ಶಾಲೆಯಿಂದ ಹೊರಹೋಗುತ್ತಾರೆ. ಮಕ್ಕಳು ತರಗತಿಕೋಣೆಗಳಲ್ಲಿ ಅವಮಾನಕ್ಕೊಳಗಾಗುತ್ತಾರೆ. 'ನಿಮ್ಮ ಮಗುವೊಂದೇ ಅಲ್ಲ ನಮಗೆ' ಎಂದೋ 'ಮನೆಯಲ್ಲಿ ಸರಿಯಾಗಿ ನೋಡಿಕೊಳ್ಳಲಾಗದ ಮೇಲೆ ಮಕ್ಕಳೇಕೆ ಬೇಕು ನಿಮಗೆ?' ಎಂದೋ ಬೈಗುಳ ಪಡೆಯುವ ಪೋಷಕರು ಎಲ್ಲರ ಮುಂದೆ ಕುಬ್ಜರಾಗುತ್ತಾರೆ.

ವಿಭಿನ್ನ ಹಿನ್ನೆಲೆಯ, ವಿಭಿನ್ನ ದೈಹಿಕ ಮತ್ತು ಮಾನಸಿಕ ಸವಾಲುಗಳುಳ್ಳ ಮಕ್ಕಳು ತಮ್ಮ ಭಿನ್ನ ಸಾಮರ್ಥ್ಯಗಳೊಂದಿಗೆ ಒಂದು ತಂಡವಾಗಿ, ಸಮನ್ವಯದಿಂದ ಒಡನಾಡುವ ಅವಕಾಶಗಳನ್ನು ಸೃಷ್ಟಿಸುವ ಅಗತ್ಯ ಇರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರತಿ ಮಗುವನ್ನೂ ಆಲಿಸುವ, ಅರ್ಥಮಾಡಿಕೊಳ್ಳುವ ಅವಕಾಶಗಳು ಕಲಿಕೆಯ ವಿಧಾನದಲ್ಲಿಯೇ ಮಿಳಿತಗೊಳ್ಳಬೇಕಿದೆ. ದೈಹಿಕ ಸವಾಲುಗಳು ಸಾಮಾನ್ಯವಾಗಿ ಮೇಲ್ನೋಟದಲ್ಲಿಯೇ ಕಾಣಿಸುತ್ತವೆ. ಆದರೂ, ಮಗುವಿನ ಕಣ್ಣಿನ ತೊಂದರೆಗಳು ಪೋಷಕರು ಮತ್ತು ಶಿಕ್ಷಕರಿಗೆ ಗೋಚರವಾಗದೇ ಇರಬಹುದು. ಅಂತಹುದರಲ್ಲಿ ನರವ್ಯವಸ್ಥೆಗೆ ಸಂಬಂಧಿಸಿದ ತೊಂದರೆಗಳು, ದೇಹದ ಆಂತರಿಕ ಅಂಗಾಂಗಗಳ ತೊಂದರೆಗಳು ಒಂದೇ ನೋಟದಲ್ಲಿ ಹೇಗೆ ದಕ್ಕಲು ಸಾಧ್ಯ?

ನಮ್ಮ ಶಾಲೆಗಳಲ್ಲಿ 'ದಡ್ಡ', 'ಸೋಮಾರಿ', 'ಕೆಲಸಕ್ಕೆ ಬಾರದವನು' ಎಂಬ ಅವಮಾನದ ಹಣೆಪಟ್ಟಿಯನ್ನು ಅಂಟಿಸಿಕೊಂಡಿರುವ ಸಾವಿರಾರು ಮಕ್ಕಳು ಕಲಿಯುತ್ತಿದ್ದಾರೆ. ಅವರನ್ನು ಗುರುತಿಸಬಲ್ಲ, ಗುರುತಿಸಿದರೂ ಅವರಿಗೆ ಸೂಕ್ತವಾದ ಕಲಿಕೆಯ ಪರಿಸರವನ್ನು ನೀಡಬಲ್ಲ, ಅವರಿಗಾಗಿಯೇ ವಿಶೇಷ ಕೌಶಲಾಧಾರಿತ ತರಬೇತಿ ನೀಡಬಲ್ಲ ಶಾಲೆಗಳು ಎಷ್ಟಿವೆ?

ವಾಚಕರ ವಾಣಿ

ಇವರಿಗೆ ಹೆತ್ತಮ್ಮನ ನೆನಪಾಗಲಿಲ್ಲವೇ?

ಹೆಣ್ಣುಭ್ರೂಣ ಹತ್ಯೆಯಲ್ಲಿ ತೊಡಗಿಸಿಕೊಂಡಿದ್ದ ಮತ್ತು ಈ ಎರಡು ವರ್ಷಗಳಲ್ಲಿ ಇಂಥ 900ಕ್ಕೂ ಹೆಚ್ಚು ಭ್ರೂಣಗಳನ್ನು ಇಲ್ಲವಾಗಿಸಿದ ದುರುಳರ ತಂಡವನ್ನು ಪೊಲೀಸರು ಪತ್ತೆಹಚ್ಚಿರುವುದು ಶ್ಲಾಘನೀಯ. ಈ ಕುರಿತ ಸುದ್ದಿಯನ್ನು ಓದಿದಾಗ, ನಾಗರಿಕತೆ ಮತ್ತು ಆಧುನಿಕತೆ ಬೆಳೆಯುತ್ತಾ ಹೋದಂತೆ ಮನುಷ್ಯ ಮತ್ತಷ್ಟು ಕ್ರೂರಿಯಾಗುತ್ತಿರುವುದೇಕೆ, ಹಣ ಮಾಡುವ ಹಪಹಪಿ ಅಷ್ಟೊಂದು ತೀವ್ರವಾಗಿದೆಯೇ ಎಂಬ ಪ್ರಶ್ನೆಗಳು ಮೂಡುತ್ತವೆ. ಹೆಣ್ಣುಭ್ರೂಣದ ಹತ್ಯೆ ಮಾಡಿಸಲು ಮುಂದಾದವರಿಗೆ, ಈ ಕುಕೃತ್ಯವನ್ನು ನೆರವೇರಿಸಲು ಟೊಂಕ ಕಟ್ಟಿ ನಿಂತ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗೆ, ತಮ್ಮನ್ನು ಒಂಬತ್ತು ತಿಂಗಳು ಹೊತ್ತು ಹೆತ್ತು ಈ ಭೂಮಿಗೆ ತಂದು ಹಾಲುಣಿಸಿ ಲಾಲಿಸಿ ಪಾಲಿಸಿದವಳು, ಜೋಗುಳ ಹಾಡಿ ಮಲಗಿಸಿದವಳೂ ಒಬ್ಬ ಹೆಣ್ಣು ಎಂಬ ಸಂಗತಿ ನೆನಪಾಗಲೇ ಇಲ್ಲವೆ?! ಅಷ್ಟರಮಟ್ಟಿಗೆ ಅವರನ್ನು ಭಾವಶೂನ್ಯತೆ ಆವರಿಸಿತ್ತೇ?

ಇಂಥ ನಿರ್ದಯ ಕೃತ್ಯಗಳನ್ನು ಸಂಪೂರ್ಣವಾಗಿ ಇಲ್ಲವಾಗಿಸಬೇಕು. ಮನುಷ್ಯರೇ ಮನುಷ್ಯರನ್ನು ಹೀಗೆ ತರಿದು ಹಾಕುವ ಕರಾಳ ಕೃತ್ಯಕ್ಕೆ ಪೂರ್ಣವಿರಾಮ ಬೀಳಲೇಬೇಕು.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

ಸಭ್ಯತೆಯ ಚೌಕಟ್ಟು ಮೀರುವುದು ಬೇಡ

'ಕಳ್ಳರ ಕೈಗೆ ರಾಜ್ಯದ ಬೀಗ ಕೊಟ್ಟಂತಾಗಿದೆ, ಕಳ್ಳರ ತಂಡ ಸಚಿವ ಸಂಪುಟದಲ್ಲಿದೆ' ಎಂಬ, ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರ ಹೇಳಿಕೆ (ಪ್ರ.ವಾ., ಡಿ. 1) ಓದಿ ಬಹಳ ಬೇಸರವಾಯಿತು. ರಾಜಕೀಯದಲ್ಲಿ ಟೀಕೆ, ಮಾತಿನ ಪ್ರಹಾರ ಸಾಮಾನ್ಯ. ಆದರೆ, ಅದು ಸಭ್ಯತೆಯ ಚೌಕಟ್ಟು ಮೀರಬಾರದು. ತಾವು ಹೊಂದಿರುವ ಸ್ಥಾನ, ಪ್ರತಿನಿಧಿಸುವ ಪಕ್ಷದ ಘನತೆಗೆ ಭಂಗ ಬರುವ ರೀತಿಯಲ್ಲಿ ಮಾತನಾಡುವುದು ತರವಲ್ಲ.

ಸಚಿವರು ತಪ್ಪೆಸಗಿದ್ದಾರೆ ಎಂದು ಅನ್ನಿಸಿದಾಗ ವಿರೋಧ ಪಕ್ಷಗಳ ಮುಖಂಡರು ಈ ಹಿಂದೆಯೂ ಟೀಕೆ, ವ್ಯಂಗ್ಯ, ಲೇವಡಿ ಮೂಲಕ ಅವರನ್ನು ಎಚ್ಚರಿಸುತ್ತಿದ್ದರು. ಅಟಲ್ ಬಿಹಾರಿ ವಾಜಪೇಯಿ, ಜೆ.ಎಚ್. ಪಟೇಲ್, ಡಿ.ಬಿ. ಚಂದ್ರೇಗೌಡ, ಶಾಂತವೇರಿ ಗೋಪಾಲಗೌಡ, ಎಸ್.ಎಂ.ಕೃಷ್ಣ, ಶಂಕರೇಗೌಡರಂತಹ ನಾಯಕರು ಒಂದು ಹೇಳಿಕೆ ನೀಡಿದರೆ ಜನ ಅದನ್ನು ಗಂಭೀರವಾಗಿ ಪರಿಗಣಿಸುತ್ತಿದ್ದರು. ಈಗಿನ ಜನಪ್ರತಿನಿಧಿಗಳು ಬಳಸುವ ಭಾಷೆಯನ್ನು ಕೇಳಿಸಿಕೊಂಡರೆ ಸಭ್ಯಸ್ಥರು ಬೆಚ್ಚಿಬೀಳುತ್ತಾರೆ. ಸಾರ್ವಜನಿಕವಾಗಿ ಹೇಳಿಕೆ ನೀಡುವಾಗ ನಮ್ಮ ಜನಪ್ರತಿನಿಧಿಗಳು ಸಂಯಮ ತೋರಬೇಕು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಸರಳ ನಡೆ, ಆದರ್ಶದ ಹಾದಿ

ಆದರ್ಶದ ನಡವಳಿಕೆ ಕಡಿಮೆಯಾಗುತ್ತಾ ಆಡಂಬರವೇ ಏರುಗತಿಯಲ್ಲಿರುವ ದಿನಮಾನಗಳಿವು. ಇಂತಹ ಸಂದರ್ಭದಲ್ಲಿಯೂ ಅಲ್ಲಲ್ಲಿ ಆಗಾಗ ಕೆಲವರು ತಮ್ಮ ಸರಳ ನಡೆಯಿಂದ ಅಚ್ಚರಿ ಮೂಡಿಸುತ್ತಾರೆ. ಅಂತಹುದೇ ಎರಡು ಪ್ರಕರಣಗಳು ಇತ್ತೀಚೆಗೆ ನಡೆದವು. ಜೀವನದ ಮಂಗಳಕರ ಘಟ್ಟ ಎಂದೇ ಹೇಳಬಹುದಾದ ಮದುವೆಯನ್ನು ಸದ್ಯ ಕನ್ನಡಿಗರೇ ಆಗಿರುವ ಪರಭಾಷಾ ನಟಿ ಪೂಜಾ ಗಾಂಧಿ ಅವರು, ಕುವೆಂಪು ಅವರು ರೂಪಿಸಿದ 'ಮಂತ್ರ ಮಾಂಗಲ್ಯ'ದ ಮಾದರಿಯಲ್ಲಿ ಮಾಡಿಕೊಂಡರು. ಇದು ಆದರ್ಶವೇ ಸರಿ. ಹಾಗೆಯೇ ಚಾಮರಾಜನಗರದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರೂ ಮಂತ್ರ ಮಾಂಗಲ್ಯದ ಮೂಲಕವೇ ಮದುವೆ ಮಾಡಿಕೊಂಡದ್ದು ಗಮನ ಸೆಳೆಯಿತು. ಸಾರ್ವಜನಿಕ ಕ್ಷೇತ್ರಗಳಲ್ಲಿನ ವ್ಯಕ್ತಿಗಳು ಇಂತಹ ಆದರ್ಶ ಹಾದಿಯತ್ತ ಹೆಜ್ಜೆ ಹಾಕಿದರೆ ಅದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಗಾಂಧೀಜಿ ಮನಗೆದ್ದ ಕನಕನ ರೂಪಕ!

ಕನಕ ಜಯಂತಿಯ (ನ. 30) ಈ ಸಂದರ್ಭದಲ್ಲಿ, ಮಹಾತ್ಮ ಗಾಂಧಿ ಅವರು ಕನಕನ ಭಕ್ತಿಯ ಹಿರಿಮೆ ಕುರಿತು ಹೇಳಿದ ಮಾತು ನೆನಪಿಗೆ ಬರುತ್ತಿದೆ. ಗಾಂಧೀಜಿ 1934ರ ಫೆಬ್ರುವರಿ 25ರಂದು ಉಡುಪಿಗೆ ಬಂದಿದ್ದರು. ಅಲ್ಲಿ ಅವರು ಸಾರ್ವಜನಿಕ ಭಾಷಣದಲ್ಲಿ 'ಉಡುಪಿ ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಇದೆ. ಇಲ್ಲಿಯ ಪ್ರಸಿದ್ಧ ಕೃಷ್ಣ ದೇವಾಲಯದ ಬಗ್ಗೆ ಕೇಳಿ ತಿಳಿದಿದ್ದೇನೆ. ಜಾತಿಯ ಕಾರಣದಿಂದ ಭಕ್ತ ಕನಕನಿಗೆ ದೇವಾಲಯ ಪ್ರವೇಶ ನಿರಾಕರಿಸಿದ ಕಾರಣ, ಇಲ್ಲಿನ ಕೃಷ್ಣದೇವರು ತಿರುಗಿ ಭಕ್ತನಿಗೆ ದರ್ಶನವನ್ನು ದಯಪಾಲಿಸಿದ ಕಥೆಯನ್ನು ಅರಿತಿದ್ದೇನೆ. ಇದು ಭಾರತದ ಜಾತಿ ತಾರತಮ್ಯ ನಿರಾಕರಣೆಯ ಒಂದು ಅರ್ಥಪೂರ್ಣ ರೂಪಕ. ಇದು ನನ್ನ ಮನಸ್ಸನ್ನು ಬಹಳ ಆವರಿಸಿದೆ. ದೇವರೇ ಪರಿಹಾರ ಸೂಚಿಸಿರುವುದು ನಿಜಕ್ಕೂ ಒಂದು ಅಪರೂಪದ ಸಂಗತಿಯಾಗಿದೆ. ಆದ್ದರಿಂದ ಈ ದೇವಾಲಯವನ್ನು ಪ್ರವೇಶಿಸಲು ಎಲ್ಲರಿಗೂ ಸಾಧ್ಯವಾಗುವಂತೆ ಸೌಮ್ಯ ಮಾರ್ಗದಿಂದ ಜನಾಭಿಪ್ರಾಯವನ್ನು ರೂಪಿಸಬೇಕು. ಇದು ಆತ್ಮಶುದ್ಧಿಯ ಚಳವಳಿ ಆಗಬೇಕು. ಉಡುಪಿ ದೇವಾಲಯದ ಭಕ್ತರು ಈ ಅಭಿಪ್ರಾಯ ರೂಪಿಸಿ, ದೇವಾಲಯ ಪ್ರವೇಶವನ್ನು ಸರ್ವರಿಗೂ ಮುಕ್ತ ಮಾಡಿದರೆ ಕರ್ನಾಟಕಕ್ಕೆ ಉಡುಪಿಯು ಮಾದರಿಯಾಗುವುದು' ಎಂದು ಹೇಳಿದ್ದರು.

ನಂತರ ಕನಕದಾಸರನ್ನು ಕುರಿತು 'ಕನಕರು ಶ್ರೇಷ್ಠ ಸಂತರು. ಕಾವ್ಯದ ಮೂಲಕ ಪರಿವರ್ತನೆಗೆ ಪ್ರಯತ್ನಿಸಿದರು. ಜೀವ ಯಾವ ಕುಲ ಎಂದು ಕನಕದಾಸರು ಕೇಳಿದ ಪ್ರಶ್ನೆ ಅವರ ಎತ್ತರವನ್ನು ಸೂಚಿಸುತ್ತದೆ. ಅವರ ಪದಗಳು ಜಾತ್ಯತೀತತೆಯ ಮಹತ್ವವನ್ನು ಪರಿಣಾಮಕಾರಿಯಾಗಿ ಹೇಳುತ್ತವೆ' ಎಂದು ಗಾಂಧೀಜಿ ಕೊಂಡಾಡಿದ್ದರು. ಬಳಿಕ ಅವರು ರಥಬೀದಿಯ ಮೂಲಕ ಹಾದು ಹೋಗುವ ಮಾರ್ಗದಲ್ಲಿ ಕೃಷ್ಣ ಮಂದಿರವನ್ನು ಮೊದಲ ಬಾರಿ ಕಂಡು 'ಇದು ಕೃಷ್ಣ ಮಂದಿರವೇ?' ಎಂದು ಕೇಳಿದಾಗ, ಜೊತೆಗಿದ್ದ ಹಿರಿಯರು ತಲೆಯಾಡಿಸಿದರು. ಎಲ್ಲರಿಗೂ ಪ್ರವೇಶ ಇಲ್ಲದ ಮಂದಿರಗಳಿಗೆ ತಾವು ಹೋಗುವುದಿಲ್ಲ ಎಂಬ ಸಂಕಲ್ಪದಂತೆ, ದೇವಾಲಯ ಪ್ರವೇಶಿಸದೇ ಮುಂದಕ್ಕೆ ಹೊರಟುಹೋದರು. ಅವರ ಇಚ್ಛೆಯಂತೆ ಮುಂದೆ ಕೆಲವು ದಿನಗಳಲ್ಲಿ ಕೃಷ್ಣ ಮಂದಿರ ಪ್ರವೇಶಕ್ಕೆ ಎಲ್ಲರಿಗೂ ಮುಕ್ತ ಅವಕಾಶ ಮಾಡಿಕೊಡಲಾಯಿತು. ಗಾಂಧೀಜಿ ಉಡುಪಿ ಭಾಗದಲ್ಲಿ ಮೂರು ದಿನ ಪ್ರವಾಸ ಕೈಗೊಂಡಿದ್ದರು. ಅವರಿಗೆ 3,600 ರೂಪಾಯಿ ಮೊತ್ತದ ನಿಧಿ ಅರ್ಪಿಸಲಾಯಿತು. ಗಾಂಧೀಜಿ ಭಾಷಣ ಮಾಡಿದ ಸ್ಥಳದಲ್ಲಿ ಸ್ಮಾರಕವನ್ನು ನಿರ್ಮಿಸಲಾಗಿದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೃಷಿಗೆ ಸಿಗಬೇಕು ನೀರಾವರಿ ಕಸುವು, ಕನ್ನಡ ದುಡಿಮೆಯ ಭಾಷೆಯಾಗಲು ಇರಬೇಕು ಒಲವು

ಬೇಕಿದೆ ಪರಿಸರಸ್ನೇಹಿ ಅಭಿವೃದ್ಧಿ

• ಸಿದ್ದರಾಮಯ್ಯ

ನಮ್ಮ ಭೌಗೋಳಿಕ, ಪ್ರಾಕೃತಿಕ, ಜೈವಿಕ, ಸಾಂಸ್ಕೃತಿಕ ವೈವಿಧ್ಯಗಳೇನಿವೆ ಇವೆಲ್ಲವೂ ಯಾವುದೇ ಕುಂದಿಲ್ಲದೆ ಸುಸ್ಥಿತಿಯಲ್ಲಿ ಸಮೃದ್ಧವಾಗಿ ಮುಂದಿನ ಪೀಳಿಗೆಗೆ ವರ್ಗಾವಣೆಯಾಗಬೇಕು. ಅಭಿವೃದ್ಧಿ ಮತ್ತು ಪರಿಸರ ಕಾಳಜಿ ಎರಡೂ ಒಗ್ಗೂಡಿ ಸಾಗಬೇಕು. ಸುಸ್ಥಿರ, ಸಮತೋಲಿತ ಪ್ರಗತಿ ನಮ್ಮ ಅಭಿವೃದ್ಧಿ ಮಂತ್ರವಾಗಿರಬೇಕು. ಪರಿಸರಕ್ಕೆ ಪೂರಕವಲ್ಲದ ಅಭಿವೃದ್ಧಿ ಮಾದರಿಯಿಂದ ವಿಮುಖವಾಗಿ ಪರಿಸರಸ್ನೇಹಿ ಅಭಿವೃದ್ಧಿ ನಮ್ಮದಾಗಬೇಕು

ಭೂವಿಯು ತನ್ನ ಸಮಸ್ತ ಸೊಬಗನ್ನು ಪುಟ್ಟದೊಂದು ಪ್ರತಿಕೃತಿಯಲ್ಲಿ ಎರಕಹೊಯ್ದಂತಿದೆ ನಮ್ಮ ಚೆಲುವ ಕನ್ನಡ ನಾಡು. ಜಗತ್ತಿನ ಕೆಲವೇ ಭೂಭಾಗಗಳಲ್ಲಿ ಮಾತ್ರವೇ ಕರ್ನಾಟಕದಲ್ಲಿ ಕಂಡುಬರುವಂತಹ ಭೌಗೋಳಿಕ, ಪ್ರಾಕೃತಿಕ, ಜೈವಿಕ ವೈವಿಧ್ಯ ಮತ್ತು ಹವಾಗುಣ ಸಿಗಲು ಸಾಧ್ಯ. ಈ ಭೌಗೋಳಿಕ, ಪ್ರಾಕೃತಿಕ ವೈವಿಧ್ಯ ನಾವು ಬೇಡದೇ ನಮಗೆ ದೊರೆತ ವರ. ಈ ವಿಚಾರವಾಗಿ ನಾನು ಇಲ್ಲಿ ಜನಿಸಿದ ಬಗ್ಗೆ ನನಗೆ ಅಪಾರ ಧನ್ಯತೆಯಿದೆ. ಪಶ್ಚಿಮಘಟ್ಟಗಳ ದಟ್ಟ ಕಾನನ, ಹಸಿರುಹೊದ್ದ ಮುಗಿಲು ಚುಂಬಿಸುವ ಪರ್ವತಶ್ರೇಣಿ, ನೂರಾರು ಕಿಲೋಮೀಟರುಗಳನ್ನು ಮೀರುವ ಕಡಲ ತಡಿ ಒಂದು ಬದಿಗಿದ್ದರೆ ಮತ್ತೊಂದು ಬದಿಗೆ ಕಣ್ಣಿಗೆ ಕಾಣಿಸುವಷ್ಟು ದೂರಕ್ಕೆ ಹರವಾಗಿ ಕಪ್ಪು ಮೈ ಹೊದ್ದು ಮಲಗಿದಂತೆ ಕಾಣುವ ವೈವಿಧ್ಯಮಯ ಸಂಸ್ಕೃತಿ, ಸಹಿಷ್ಣುತೆಯ, ಭಾಷಾ ಮೇಳೈಸುವಿಕೆಯ ಪ್ರಸ್ಥಭೂಮಿ ಇದೆ. ಇವುಗಳಿಗೆ ಕಳಶವಿಟ್ಟಂತೆ ತನ್ನ ಹವಾಗುಣದ ಮೂಲಕವೇ ಮನಸ್ಸಿಗೆ ಮುದ ನೀಡುವ, ಸೃಜನಶೀಲತೆಯಿಂದಾಗಿ ಜಗತ್ತಿನ ಮನೆಮಾತಾಗಿರುವ ದಕ್ಷಿಣದ ಒಳನಾಡಿದೆ.

25 ವರ್ಷಗಳ ಮುನ್ನೋಟ

ನನ್ನ ಕನಸಿನ ಕರ್ನಾಟಕದಲ್ಲಿ ಮೊದಲಿಗೆ ನಮ್ಮ ಭೌಗೋಳಿಕ, ಪ್ರಾಕೃತಿಕ, ಜೈವಿಕ, ಸಾಂಸ್ಕೃತಿಕ ವೈವಿಧ್ಯಗಳೇನಿವೆ ಇವೆಲ್ಲವೂ ಯಾವುದೇ ಕುಂದಿಲ್ಲದೆ ಸುಸ್ಥಿತಿಯಲ್ಲಿ ಸಮೃದ್ಧವಾಗಿ ಮುಂದಿನ ಪೀಳಿಗೆಗೆ ವರ್ಗಾವಣೆಯಾಗಬೇಕು. ಅಭಿವೃದ್ಧಿ ಮತ್ತು ಪರಿಸರ ಕಾಳಜಿ ಎರಡೂ ಒಗ್ಗೂಡಿ ಸಾಗಬೇಕು. ಸುಸ್ಥಿರ, ಸಮತೋಲಿತ ಪ್ರಗತಿ ನಮ್ಮ ಅಭಿವೃದ್ಧಿ ಮಂತ್ರವಾಗಿರಬೇಕು. ಪರಿಸರಕ್ಕೆ ಪೂರಕವಲ್ಲದ ಅಭಿವೃದ್ಧಿ ಮಾದರಿಯಿಂದ ವಿಮುಖವಾಗಿ ಪರಿಸರಸ್ನೇಹಿ ಅಭಿವೃದ್ಧಿ ನಮ್ಮದಾಗಬೇಕು.

ಈ ದಿಸೆಯಲ್ಲಿ ಮೊದಲಿಗೆ ನಾವು ನಮ್ಮ ಭವಿಷ್ಯದ ಇಂಧನ ಶಕ್ತಿ, ಇಂಧನ ಮೂಲಗಳು ಯಾವುದಿರಬೇಕು ಎನ್ನುವ ಬಗ್ಗೆ ಖಚಿತತೆ ಹೊಂದಬೇಕು. ನಮ್ಮ ಸರ್ಕಾರ ಸುಸ್ಥಿರ ಅಭಿವೃದ್ಧಿಗಾಗಿ ನವೀಕರಿಸಲ್ಪಡುವ ಶಕ್ತಿ ಮೂಲಗಳಿಂದ ಮಾತ್ರವೇ ಶಕ್ತಿಯ ಉತ್ಪಾದನೆಗೆ ಒತ್ತು ನೀಡಿದೆ. ಸೌರಶಕ್ತಿ, ಪವನಶಕ್ತಿ, ಜೈವಿಕ ತ್ಯಾಜ್ಯವನ್ನು ಆಧರಿಸಿರುವ ವಿದ್ಯುತ್ ಉತ್ಪಾದನೆಗೆ ಒತ್ತು ನೀಡಿದೆ. ನವೀಕರಿಸಲ್ಪಡುವ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ರಾಜ್ಯಗಳಲ್ಲಿ ಕರ್ನಾಟಕ ಇಂದು ಮುಂಚೂಣಿಯಲ್ಲಿದ್ದು ದೇಶಕ್ಕೇ ಮಾದರಿಯಾಗಿದೆ.

ಕರ್ನಾಟಕದ ಎಲ್ಲ ಭೂಪ್ರದೇಶಗಳಲ್ಲಿಯೂ ಕೃಷಿ ಚಟುವಟಿಕೆಗೆ ಒತ್ತು ನೀಡಲು ನೀರಾವರಿ ಲಭ್ಯತೆಗೆ ಪಣತೊಟ್ಟು ಬೃಹತ್ ನೀರಾವರಿ ಯೋಜನೆಗಳ ಸಾಕಾರಕ್ಕೆ ನಮ್ಮ ಸರ್ಕಾರ ಮುಂದಾಗಿದೆ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಹಾಗೂ ಮಧ್ಯ ಕರ್ನಾಟಕವನ್ನು ಒಳಗೊಳ್ಳುವ ಉತ್ತರ ಹಾಗೂ ಮಧ್ಯ ಕರ್ನಾಟಕದ ಪ್ರಸ್ಥಭೂಮಿಯೇನಿದೆ ಇದು ಸರ್ವಋತುಗಳಲ್ಲಿಯೂ ಕೃಷಿಯೋಗ್ಯವಾಗಬೇಕು ಎನ್ನುವುದು ನನ್ನ ಮಹತ್ವದ ಕನಸುಗಳಲ್ಲಿ ಒಂದು.

ಕರ್ನಾಟಕದ ಎಲ್ಲ ದುಡಿಯುವ ಕೈಗಳಿಗೆ ಕೆಲಸವಿರಬೇಕು ಎನ್ನುವುದು ನನ್ನ ಕನಸು. ಕೌಶಲಾಧಾರಿತ ಕೆಲಸಗಳಲ್ಲಿ ತೊಡಗಲು ಮಾತ್ರವೇ ಜನತೆ ವಲಸೆ ಹೋಗಬೇಕೆ ಹೊರತು ಯಾವುದೇ ಕೆಲಸವಿಲ್ಲ ಎನ್ನುವ ಕಾರಣಕ್ಕೆ ಅವರು ವಲಸೆ ಹೋಗಬಾರದು ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ಮಳೆ ಬರಲಿಲ್ಲ ಎನ್ನುವ ಕಾರಣಕ್ಕೆ ಕೃಷಿ ಕಾರ್ಮಿಕರು ದೈಹಿಕ ಶ್ರಮದ ಕೆಲಸಗಳಿಗಾಗಿ ನಗರಗಳಿಗೆ ವಲಸೆ ಹೋಗುವ ಪರಿಸ್ಥಿತಿ ಈ ನಾಡಿನಲ್ಲಿ ಇರಬಾರದು.

ಇದು ಸಾಧ್ಯವಾಗಬೇಕೆಂದರೆ ಮಳೆಯ ಕೊರತೆಯಿದ್ದರೂ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗದಂತೆ ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವುದು ಸಾಧ್ಯವಾಗಬೇಕು. ಕಡಿಮೆ ನೀರಿನಲ್ಲಿ ಬೆಳೆ ಬೆಳೆಯುವ ತಂತ್ರಜ್ಞಾನ ಸುಲಭ ಸಾಧ್ಯವಾಗಬೇಕು. ಕೃಷಿ ಮಾತ್ರವೇ ಅಲ್ಲದೆ ಕೃಷಿಗೆ ಪೂರಕವಾದ ಹೈನುಗಾರಿಕೆ, ಆಹಾರ ಸಂಸ್ಕರಣಾ ಕೈಗಾರಿಕೆಗಳು, ಗೃಹ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು, ಕೃಷಿ ಆಧಾರಿತ ಉದ್ಯಮಗಳು ಬಲಗೊಳ್ಳಬೇಕು. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತಷ್ಟು ಬಲವರ್ಧನೆಗೊಳ್ಳಬೇಕು. ಈ ನಿಟ್ಟಿನಲ್ಲಿ ರಾಜ್ಯಗಳಿಗಿರುವಷ್ಟೇ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೂ ಇದೆ. ನನ್ನ ಕನಸಿನ ಕರ್ನಾಟಕದಲ್ಲಿ ಗ್ರಾಮೀಣ ಭಾಗಗಳಿಂದ ಜನರು, ಬದುಕಿಗಾಗಿ ನಗರಗಳಿಗೆ ಗುಳೆ ಹೋಗುವ ಪರಿಸ್ಥಿತಿ ಇರಬಾರದು.

ಕನ್ನಡವು ಆಡಳಿತ ಭಾಷೆಯಾದರೆ ಮಾತ್ರವೇ ಸಾಲದು, 'ಅನ್ನದ ಭಾಷೆ'ಯಾಗಿಯೂ ಸಮರ್ಥವಾಗಬೇಕು ಎನ್ನುವುದು ನನ್ನ ಬಹುಕಾಲದ ಕನಸು. ಇಂದು ಕನ್ನಡಿಗರಿಗೆ ಕನ್ನಡವು ಮನೆಮನದ ಭಾಷೆಯಾಗಿದೆ, ಆಡಳಿತ ಭಾಷೆಯಾಗಿಯೂ ರೂಪುಗೊಂಡಿದೆ. ಆದರೆ ಇಂದಿನ ಜಾಗತೀಕರಣದ ಯುಗದಲ್ಲಿ ಕನ್ನಡವು ಬಹುತೇಕ ಪ್ರಾಂತೀಯ ಭಾಷೆಗಳಂತೆ ಅನ್ನದ ಭಾಷೆಯಾಗುವಲ್ಲಿ ಹಿನ್ನಡೆ ಅನುಭವಿಸಿದೆ. ಆ ಸ್ಥಾನವನ್ನು ಇಂಗ್ಲಿಷ್ ಆಕ್ರಮಿಸಿಕೊಂಡಿದೆ. ಇಂಗ್ಲಿಷ್ ಭಾಷೆ ಕಲಿತರೆ ಹೇಗಾದರೂ ಕೆಲಸವನ್ನು ಗಿಟ್ಟಿಸಿಕೊಳ್ಳಬಹುದು ಎನ್ನುವ ಭಾವನೆ ನಮ್ಮ ಜನಮಾನಸದಲ್ಲಿ ಮೂಡಿದೆ. ನಾವು ಇದನ್ನು ತೊಡೆಯಬೇಕೆಂದರೆ ನಮಗಿರುವುದು ಎರಡೇ ಹಾದಿ– ಒಂದು ಕನ್ನಡವನ್ನು ಜ್ಞಾನದ ಭಾಷೆಯಾಗಿ ಬೆಳೆಸುವುದು, ಮತ್ತೊಂದು ಕರ್ನಾಟಕದಲ್ಲಿ ಯಾವುದೇ ಸೇವೆಯನ್ನು ನೀಡಬೇಕೆಂದರೆ ಅದನ್ನು ಕನ್ನಡದಲ್ಲಿಯೇ ಕಡ್ಡಾಯವಾಗಿ ನೀಡುವಂತೆ ಆಗ್ರಹಿಸುವುದು.

ಕನ್ನಡವು ಜ್ಞಾನದ ಭಾಷೆಯಾಗಿ ಬೆಳೆದಷ್ಟೂ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯದಂತಹ ಕ್ಷೇತ್ರಗಳಲ್ಲಿ ಕನ್ನಡ ಭಾಷೆಯ ಮೂಲಕವೇ ಕಲಿಕೆ, ಸಂಶೋಧನೆಗಳು ಸಾಧ್ಯವಾಗುತ್ತವೆ. ಜ್ಞಾನವನ್ನು ಪಡೆಯಲು ಇಂಗ್ಲಿಷ್ ಭಾಷೆಯಿಂದ ಉಂಟಾಗಿರುವ ತೊಡಕು ನಿವಾರಣೆಯಾಗಿ ಕನ್ನಡವು ಈ ಕ್ಷೇತ್ರಗಳಲ್ಲಿ ಸಕಾಲಿಕವಾಗಿ ಸಲ್ಲಲಿದೆ. ಯಾವ ಭಾಷೆಯಲ್ಲಿ ಜ್ಞಾನ ಸೃಷ್ಟಿಯಾಗುತ್ತದೆಯೋ ಆ ಭಾಷೆಯಲ್ಲಿ ಸಹಜವಾಗಿಯೇ ವಿಪುಲ ಉದ್ಯೋಗಾವಕಾಶಗಳೂ ಸೃಷ್ಟಿಯಾಗುತ್ತವೆ. ಯಾವ ಭಾಷೆ ಜ್ಞಾನದ ಭಾಷೆಯಾಗುತ್ತದೆಯೋ ಆ ಭಾಷೆ ಜಾಗತಿಕ ಭಾಷೆಯಾಗಿಯೂ ವಿಸ್ತರಿಸುತ್ತದೆ. ಇದೆಲ್ಲ ಸಾಧ್ಯವಾಗಬೇಕಾದರೆ ಮೂಲದಲ್ಲಿ ಕನ್ನಡದಲ್ಲಿಯೇ ಉನ್ನತ ಶಿಕ್ಷಣ ಸಾಧ್ಯವಾಗಬೇಕು. ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣಗಳೂ ಸೇರಿದಂತೆ ವಿಜ್ಞಾನ, ವಾಣಿಜ್ಯ, ಕಲೆ ಈ ಎಲ್ಲ ವಿಷಯಗಳ ಉನ್ನತ ಶಿಕ್ಷಣವು ಕನ್ನಡದಲ್ಲಿಯೇ ಸಾಧ್ಯವಾಗಬೇಕು. ಈ ಕ್ಷೇತ್ರಗಳಲ್ಲಿ ಜಗತ್ತಿಗೇ ಕೊಡುಗೆಯನ್ನು ನೀಡುವಂತಹ ಸಂಶೋಧನಾ ಸಂಸ್ಥೆಗಳು ಕರ್ನಾಟಕದಲ್ಲಿ, ಕನ್ನಡ ಭಾಷೆಯಲ್ಲಿಯೇ ಸಾಧ್ಯವಾಗಬೇಕು.

ಬಹುಮುಖ್ಯವಾಗಿ ಕರ್ನಾಟಕವು ಸೌಹಾರ್ದ, ಸಹಿಷ್ಣುತೆಯ ತವರಾಗಿದ್ದು ವೈವಿಧ್ಯಮಯ ಸಂಸ್ಕೃತಿಗಳು ಮೇಳೈಸಿರುವ ಬೀಡಾಗಿದೆ. ಮಾನವೀಯತೆ, ವಿಶ್ವಮಾನವ ಪ್ರಜ್ಞೆಯ ಉದಾತ್ತತೆಯನ್ನು ಹೊಂದಿರುವ ನೆಲೆವೀಡಾಗಿದೆ. ನನ್ನ ಕನಸಿನ ಕರ್ನಾಟಕದಲ್ಲಿ ಯಾವುದೇ ವಿಭಜಕ ಶಕ್ತಿಗಳಿಗೆ ಸ್ಥಾನವಿರುವುದಿಲ್ಲ. ಬಸವಾದಿ ಶರಣರು ಬೋಧಿಸಿದ ಸಮತೆ ಈ ನೆಲದ ಕಣಕಣದಲ್ಲಿಯೂ ಬೆರೆತು ಮನೆಮನಗಳಲ್ಲಿ ನೆಲೆ ನಿಲ್ಲಬೇಕು. ಕೋಮುಗ್ರಸ್ತ ಮನಸ್ಸುಗಳು ಪರಿವರ್ತಿತವಾಗಿ ಸಮಸಮಾಜದ ಕನಸು ಈಡೇರಬೇಕು. ಪ್ರೀತಿ, ಭ್ರಾತೃತ್ವ, ಸಹಿಷ್ಣುತೆ, ಸಹಕಾರದ ಮನೋಭಾವ ಸಮಾಜದಲ್ಲಿ ಹಾಸುಹೊಕ್ಕಾಗಿ ಜಗತ್ತಿಗೇ ಕರ್ನಾಟಕವು ಮಾನವೀಯತೆ, ಶಾಂತಿ, ಸಹನೆಗಳಿಗೆ ಮಾದರಿಯಾಗಬೇಕು. ಅಭಿವೃದ್ಧಿಯ ವಿಚಾರದಲ್ಲಿ ಸಂಪತ್ತು, ಉದ್ಯೋಗ, ಮೂಲಸೌಕರ್ಯಗಳ ಸೃಜನೆಗೆ ಮಾತ್ರವೇ ಸೀಮಿತವಾಗದೆ ಮಾನವಿಕ ಅಭಿವೃದ್ಧಿ ಸೂಚ್ಯಂಕದಲ್ಲಿ ಜಗತ್ತಿನಲ್ಲಿಯೇ ಅಗ್ರಗಣ್ಯವಾಗಬೇಕು. ಇದು ನನ್ನ ಕನಸಿನ ಕರ್ನಾಟಕ.

ನಗರಗಳು, ಗ್ರಾಮಗಳು ಎನ್ನುವ ಭೇದವಿಲ್ಲದೆ ನಮ್ಮನ್ನು ಆವರಿಸಿರುವ ಇಂಗ್ಲಿಷ್ ಮಾಧ್ಯಮ ಶಿಕ್ಷಣದ ಹಿಂದಿನ ಹಂಬಲವೂ ಇದೇ ಅಗಿರುವುದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಕನ್ನಡ ಅಥವಾ ಭಾರತೀಯ ಭಾಷೆಗಳು ಮಾತ್ರವೇ ಅಲ್ಲ, ಜಾಗತಿಕವಾಗಿ ಎಲ್ಲ ಅಭಿವೃದ್ಧಿಶೀಲ ದೇಶಗಳಲ್ಲಿಯೂ 'ಅನ್ನದ ಭಾಷೆ'ಯಾಗಿ ಅನ್ಯ ಭಾಷೆಯೊಂದಕ್ಕೆ ಮುಖ ಮಾಡಿರುವ ವಾಸ್ತವ ನಮ್ಮ ಮುಂದೆ ಕಂಡುಬರುತ್ತದೆ. ಇಪ್ಪತ್ತೊಂದನೆಯ ಶತಮಾನದ, ಮೂರನೇ ದಶಕದಲ್ಲಿ ನಿಂತು ಕನ್ನಡದ ನನ್ನ ಬಂಧುಬಾಂಧವರನ್ನು ಉದ್ದೇಶಿಸುವಾಗ ನನಗೆ ಇಂದಿನ ಕಟುವಾಸ್ತವಗಳಿಗೆ ಬೆನ್ನುಹಾಕುವ ಮನಸ್ಸಿಲ್ಲ. ಏಳೂವರೆ ದಶಕವನ್ನು ಮೀರಿದ ನನ್ನ ಬದುಕಿನ ಅನುಭವಕ್ಕೆ ಇಪ್ಪತ್ತು-ಮೂವತ್ತರ ವಯೋಮಾನದ ಇಂದಿನ ಯುವಕ-ಯುವತಿಯರ ತಲ್ಲಣಗಳ ಅರಿವಿಲ್ಲದೇ ಹೋದೀತೇ? ನನ್ನ ಮಕ್ಕಳು, ಮೊಮ್ಮಕ್ಕಳು, ಅವರನ್ನೂ ಮೀರಿದ ಸಾವಿರಾರು ಸಂಖ್ಯೆಯ ಹಿರಿ, ಕಿರಿಯ ವಿದ್ಯಾರ್ಥಿಗಳ ತಲ್ಲಣಗಳಿಗೆ ಮುಖಾಮುಖಿಯಾಗುತ್ತಲೇ ಬಂದವನು ನಾನು.

ಹಾಗಾಗಿಯೇ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಎರಡು ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿರುವ, ಜಗತ್ತಿನ ಶ್ರೇಷ್ಠ ಸಂಸ್ಕೃತಿ, ಚಿಂತನೆಯನ್ನು ಪೊರೆದಿರುವ ಈ ನನ್ನ ಭಾಷೆ ಕನ್ನಡ ಮುಂದಿನ ದಿನಗಳಲ್ಲಿಯೂ ತನ್ನ ಪಾರಮ್ಯವನ್ನು ಮೆರೆಯಬೇಕೆಂದರೆ ಅದು ಮನೆ, ಮನದ ಭಾಷೆಯಾಗಿ ಮಾತ್ರವೇ ಉಳಿಯಬಾರದು, ಕನ್ನಡಿಗರ ಭವ್ಯ ಭವಿತವ್ಯದ ಭಾಷೆಯೂ ಆಗಬೇಕು. ಕನ್ನಡಿಗರಿಗೆ ಅನ್ನವಿಕ್ಕುವ ಭಾಷೆಯಾಗಿ, ಕರುನಾಡಿನ ಭವಿತವ್ಯವನ್ನು ಮುನ್ನಡೆಸುವ ಕಹಳೆಯಾಗಿ ಕಂಗೊಳಿಸಬೇಕು. ಹೃದಯಕ್ಕೆ ಒಂದು ಭಾಷೆ, ಬದುಕಲಿಕ್ಕೆ, ದುಡಿಮೆಗೆ ಇನ್ನೊಂದು ಭಾಷೆ ಎನ್ನುವ ಇಂದಿನ ಇಬ್ಬಂದಿತನದ ಪರಿಸ್ಥಿತಿಯನ್ನು ತೊಡೆದು ನಲಿಯಲು, ಕಲಿಯಲು, ದುಡಿಯಲು, ಬದುಕಲು, ಬಾಳಲು, ನಮ್ಮದೆಲ್ಲವನ್ನೂ ಜಗತ್ತಿನೊಂದಿಗೆ ಹಂಚಿಕೊಳ್ಳಲು, ಜಗತ್ತಿನದೆಲ್ಲದನ್ನೂ ನಮ್ಮೊಳಗೆ ತಂದುಕೊಳ್ಳಲು ಇರುವ ಸಶಕ್ತ, ಸಮರ್ಥ ಭಾಷೆಯಾಗಿ ಕನ್ನಡ ರಾರಾಜಿಸಬೇಕು.

ನನ್ನ ಕನ್ನಡ ನಾಲ್ಕು ಗೋಡೆಗಳ ನಡುವೆ ಉಳಿಯುವ ಭಾಷೆ ಎಂದೂ ಆಗಿರಲಿಲ್ಲ, ಹಾಗೆ ಅದು ಇಂದೂ, ಮುಂದೂ, ಎಂದೂ ಆಗಬಾರದು ಕೂಡ. ನನ್ನ ಕನ್ನಡ ಜಗತ್ತಿನ ಅಷ್ಟೂ ತಿಳಿವನ್ನು ನನಗೆ ಉಣಬಡಿಸುವ ಜ್ಞಾನದ, ಕೌಶಲದ ಭಾಷೆಯಾಗಿ ಈ ಹಿಂದೆಯೂ ವಿಜೃಂಭಿಸಿತ್ತು, ಇಂದೂ, ಮುಂದೂ ಅದು ಹಾಗೆಯೇ ವಿಜೃಂಭಿಸಬೇಕು. ಕನ್ನಡವೆನ್ನುವುದು ಸಭ್ಯತೆಯ, ಸಜ್ಜನಿಕೆಯ ಗುರುತು ಮಾತ್ರವೇ ಅಲ್ಲ, ಅದು ಮಹತ್ವಾಕಾಂಕ್ಷೆಯ, ಮಹಾನ್ ಅನ್ವೇಷಣೆಯ ಭಾಷೆ ಕೂಡ ಎನ್ನುವುದನ್ನು ನನ್ನ ಜನ ಮರೆಯಬಾರದು.

ಲೇಖಕ: ಮುಖ್ಯಮಂತ್ರಿ

ಗುರಿಯಿಲ್ಲದ, ತಿರುವಿಲ್ಲದ ಪ್ರೇಮಕಥೆ!

ಅರ್ದಂಬರ್ಧ ಪ್ರೇಮಕಥೆ

- **ನಿರ್ದೇಶನ: ಅರವಿಂದ್ ಕೌಶಿಕ್**
- **ನಿರ್ಮಾಣ: ಕಾರ್ತಿಕ್ ಗೌಡ**
- **ತಾರಾಗಣ: ಅರವಿಂದ್ ಕೆಪಿ, ದಿವ್ಯಾ ಉರುಡುಗ, ಅಭಿಲಾಶ್ ದ್ವಾರಕೀಶ್ ಮತ್ತಿತರರು**

ತೆರೆಯ ಹಿಂದೆ ಪರಿಚಿತವಾಗಿರುವ ಹುಡುಗ–ಹುಡುಗಿಯನ್ನು ಮನಬಂದಂತೆ ಸುತ್ತಾಡಲು ಬಿಟ್ಟು, ಅವರ ಹುಡುಗಾಟಿಕೆಗಳನ್ನೇ ಸೆರೆ ಹಿಡಿದು ತೆರೆಯ ಮೇಲೆ ತಂದರೆ ಏನಾಗಬಹುದೆಂಬುದಕ್ಕೆ ಹಿಡಿದ ಕನ್ನಡಿಯಂತಿದೆ 'ಅರ್ದಂಬರ್ಧ ಪ್ರೇಮಕಥೆ!'. ಹಾಗಂತ ಇದೇ ಚಿತ್ರದ ಉದ್ದೇಶಿತ ಕಥೆಯಾಗಿದ್ದರೆ ನಿರ್ದೇಶಕರ ಈ ಯತ್ನಕ್ಕೊಂದು ಅರ್ಥ ಬರುತ್ತಿತ್ತು. ಆದರೆ ಒಂದೊಳ್ಳೆ ಕಥಾವಸ್ತುವಿನೊಂದಿಗೆ ಗುರಿಯೇ ಇಲ್ಲದ ಈ ಪ್ರೇಮಪಯಣ ಅಂತಿಮವಾಗಿ ಈ ಕಥೆಯ ಉದ್ದೇಶವನ್ನೂ ಅರ್ಧಂಬರ್ಧವಾಗಿಸಿಬಿಡುತ್ತದೆ.

ಪ್ರಾಯೋಗಿಕ ಕಥೆಯ ಸಿನಿಮಾಗಳಿಗೆ, ಕಂಟೆಂಟ್ ಸಿನಿಮಾಗಳಿಗೆ ಬರವಣಿಗೆಯೇ ಬಂಡವಾಳ. ಕಥೆಯ ಉದ್ದಕ್ಕೂ ಲಾಜಿಕ್ ಬಹಳ ಮುಖ್ಯ. ಇವೆರಡೂ ಸಫಲವಾಗದಿದ್ದರೆ ಇಡೀ ಯತ್ನವೇ ವಿಫಲವಾಗುತ್ತದೆ. ನಿರ್ದೇಶಕ ಅರವಿಂದ್ ಕೌಶಿಕ್ ಒಂದೊಳ್ಳೆ ಪ್ರೇಮಕಥೆಯ ಎಳೆ ಎತ್ತಿಕೊಂಡಿದ್ದಾರೆ. ಅದಕ್ಕಾಗಿ ಕಟ್ಟಿರುವ ಪಾತ್ರಗಳು ವಿಭಿನ್ನವಾಗಿವೆ. ಆದರೆ ಲಾಜಿಕ್ ಇಲ್ಲದ, ಒಂದು ಸ್ಪಷ್ಟ ಚೌಕಟ್ಟಿಲ್ಲದ ನಿರೂಪಣೆಯಿಂದಾಗಿ ಇಡೀ ಸಿನಿಮಾ ನೀರಸವೆನಿಸಿಬಿಡುತ್ತದೆ.

ಮೊದಲ ಸಲ ನಟನೆಗಿಳಿದಿರುವ ಅರವಿಂದ್ ಕೆ.ಪಿ. ಕೆಲವೆಡೆ ನಟಿಸಲು ಯತ್ನಿಸಿ ಸಫಲವಾಗಿದ್ದಾರೆ. ಹಲವೆಡೆ ವಿಫಲವಾಗಿದ್ದಾರೆ. ಈ ವೈಫಲ್ಯ ಮುಚ್ಚಲು ನಿರ್ದೇಶಕರು ಮಾಡಿರುವ ಯತ್ನಗಳು ಚಿತ್ರಕಥೆಯನ್ನು ಇನ್ನಷ್ಟು ಹದಗೆಡಿಸುತ್ತದೆ. ಅಲ್ಲಲ್ಲಿ ಅರವಿಂದ ಅನವಶ್ಯವಾಗಿ ನಗುವ ದೃಶ್ಯಗಳು ಇದಕ್ಕೆ ಉದಾಹರಣೆಯಂತಿವೆ. ದಿವ್ಯಾ ನಟನೆ ಕೂಡ ಅಲ್ಲಲ್ಲಿ ಅತಿ ಎನ್ನಿಸುತ್ತದೆ. 'ಬ್ರೊ' ಪಾತ್ರಧಾರಿಯಾಗಿ ಅಭಿಲಾಶ್ ದ್ವಾರಕೀಶ್ ಸಹಜವಾಗಿ ನಗಿಸುತ್ತಾರೆ. ಇಡೀ ಸಿನಿಮಾದಲ್ಲಿ ಸಂಭಾಷಣೆ ಸಾಕಷ್ಟು ಕಚಗುಳಿ ನೀಡುತ್ತದೆ.

ಸೂರ್ಯ ಅವರ ಛಾಯಾಗ್ರಹಣ ಸೊಗಸಾಗಿದೆ. ಅರ್ಜುನ್ ಜನ್ಯ ದೃಶ್ಯಗಳಿಗೆ ತಕ್ಕ ಹಿನ್ನೆಲೆ ಸಂಗೀತ ನೀಡಿದ್ದಾರೆ. ಆದರೆ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಸಿನಿಮಾ ಮುಗಿದ ನಂತರವೂ ನೆನಪಿನಲ್ಲಿ ಉಳಿಯುವ ಏಕೈಕ ವಿಷಯವೆಂದರೆ 'ಜಿಂಗಲಕ, ಜಿಂಗಲಕ...' ಎಂದು ಸಿನಿಮಾದಲ್ಲಿ ಅರವಿಂದ್ ಹೇಳಿಕೊಡುವ 'ಭೂ' ಮಂತ್ರವಷ್ಟೇ!

ವಿನಾಯಕ ಕೆ.ಎಸ್.

ಹಿಂಸಾವಿನೋದದ ಪರಾಕಾಷ್ಠೆ

ನಾವು ನೋಡಿದ ಸಿನಿಮಾ



ಅನಿಮಲ್ (ಹಿಂದಿ)

- **ನಿರ್ಮಾಣ: ಭೂಷಣ್‌ಕುಮಾರ್, ಕೃಷನ್ ಕುಮಾರ್, ಮುರಾದ್ ಖೇತಾನಿ, ಪ್ರಣಯ್ ರೆಡ್ಡಿ ವಂಗ**
- **ನಿರ್ದೇಶನ: ಸಂದೀಪ್ ರೆಡ್ಡಿ ವಂಗ**
- **ತಾರಾಗಣ: ರಣಬೀರ್ ಕಪೂರ್, ರಶ್ಮಿಕಾ ಮಂದಣ್ಣ, ಅನಿಲ್ ಕಪೂರ್, ಬಾಬ್ಬಿ ಡಿಯೋಲ್**

ವಿಲಕ್ಷಣ ನಾಯಕನನ್ನು ಲಾಕ್ಷಣಿಕ ತಾಂತ್ರಿಕ ಚೌಕಟ್ಟಿನಲ್ಲಿಟ್ಟ ಸಿನಿಮಾ 'ಅನಿಮಲ್'. ಶೀರ್ಷಿಕೆಯೇ ಹೇಳುವಂತೆ ಅವನ ಮನಸ್ಸು ಪ್ರಾಣಿಯಂತೆ. ಬಾಲ್ಯದಿಂದಲೇ ತಂದೆಯ ಮೇಲೆ ಅವನಿಗೆ ವಿಪರೀತ ಪ್ರೀತಿ. ಅದೇ ತಂದೆಯಿಂದ ತನಗೆ ಆ ಪ್ರೀತಿಯಲ್ಲಿ ಎಳ್ಳಷ್ಟೂ ಸಿಗದೇಹೋದ್ದರಿಂದ ಕನಲಿದ್ದಾನೆ. ಅವನ ನರತಂತುಗಳಲ್ಲಿ ಎಂತೆಂಥದೋ ಮಿಡಿತ. ಅವನ್ನೆಲ್ಲ ನಿರ್ದೇಶಕ ಸಂದೀಪ್ ರೆಡ್ಡಿ ವಂಗ ತೆರೆಮೇಲೆ ಭಿಡೆಯೇ ಇಲ್ಲದೆ ಮೂಡಿಸಿದ್ದಾರೆ.

ಇದೇ ನಿರ್ದೇಶಕರು 'ಅರ್ಜುನ್ ರೆಡ್ಡಿ' ತೆಲುಗು ಚಿತ್ರದಲ್ಲಿ ಕೋಪಾವೇಶದ ನಾಯಕನ ಪಾತ್ರವನ್ನು ಮುಚ್ಚಟೆ ಮಾಡಿದ್ದರು. ಈ ಸಿನಿಮಾದಲ್ಲಿ ಕೋಪಾವೇಶ–ಹಿಂಸೆಯ ಒಂದು ಪದರದಿಂದ ಪಾತ್ರವನ್ನು ಮೇಲೆತ್ತಿ, ಅದರ ಮೇಲೆ ಪುರುಷಾಹಂಕಾರದ ಮತ್ತೊಂದು ಪದರವನ್ನೂ ಮೂಡಿಸಿ, ರಕ್ತದ ಬಣ್ಣವನ್ನು ಅದಕ್ಕೆ ಮೆತ್ತಿದ್ದಾರೆ. ಇದನ್ನು 'ಪೇಂಟಿಂಗ್' ಎಂದು ಕರೆದುಬಿಟ್ಟರೆ, ಆ ಬಣ್ಣದಲ್ಲಿ ಕಾಡುವ ನೆತ್ತರು, ಮೂಗಿಗೆ ಅಡರುವ ಕಮಟಿಗೆ ಏನೆನ್ನಬೇಕೋ?

ನಾಯಕನ ಪಾತ್ರವನ್ನು ಅತಿಯಾಗಿ ಕಾಡುವಂತೆ ಮಾಡಬೇಕೆನ್ನುವುದು ಸಂದೀಪ್ ರೆಡ್ಡಿ ಉದ್ದೇಶ. ಅದಕ್ಕೆ ಪೂರಕವಾಗಿಯೇ ಅವರು ಚಿತ್ರಕಥಾ ಬರವಣಿಗೆಯಲ್ಲಿ ಉಳಿದೆಲ್ಲ ಪಾತ್ರಗಳನ್ನು ತಂದಿದ್ದಾರೆ. ನಾಯಕನನ್ನು ಅಪರಾಧಿ ಎಂದೇ ದೂಷಿಸುವ ಅಪ್ಪ, ಅವನ ತಂದೆಪ್ರೀತಿಯ ಹುಚ್ಚುತನವನ್ನು ಅಡಿಗಡಿಗೂ ನಿಕಷಕ್ಕೆ ಒಡ್ಡುವ ರೀತಿಯಲ್ಲಿ ತರ್ಕ ಮುಂದಿಡುವ ಪತ್ನಿ, ಅಣ್ಣನ ಕ್ರೋಧಕ್ಕೆ ಪದೇಪದೇ ಕಿಡಿಯಾಗುವ ಸಹೋದರಿಯರು, ಹುಚ್ಚುತನದಲ್ಲೇ ಮಿಂದೆದ್ದವರಂತೆ ಇರುವ ಸೋದರ ಸಂಬಂಧಿಗಳು, ಇವರೆಲ್ಲರನ್ನೂ ಮೀರಿಸುವಷ್ಟು ರಕ್ತವರ್ಷದಲ್ಲಿ ತೋಯ್ದ ಖಳನಾಯಕ–ಹೀಗೆ ನಾಯಕನ ಹೀರೊಗಿರಿಗೆ ಪೂರಕವಾಗಿಯೇ ಪಾತ್ರಗಳ ವರ್ತನೆಯನ್ನು ನಿರ್ದೇಶಕರು ನಿಯಂತ್ರಿಸುತ್ತಾ ಹೋಗಿದ್ದಾರೆ. ಚಿತ್ರದುದ್ದಕ್ಕೂ ಪ್ರಾಮಾಣಿಕತೆಯ ಚುಚ್ಚುಮದ್ದನ್ನು ನಾಯಕನಿಗೆ ಕೊಡುವ ಅವರಿಗೆ, ಹಿಂಸಾಪ್ರವೃತ್ತಿಗೆ ಬ್ರೇಕ್ ಹಾಕುವಂತಹ ಔಷಧ ಕೊಡಬೇಕು ಎಂದು ಎಲ್ಲಿಯೂ ಅನಿಸಿಯೇ ಇಲ್ಲ. ಉಳಿದ ಪಾತ್ರಗಳ ಬುದ್ಧಿಮಾತೂ ಗಾಳಿಯಲ್ಲಿ ತೇಲಿಹೋಗುತ್ತದೆ. ಬಾಲ್ಯದಿಂದಲೇ ಮಾನಸಿಕವಾಗಿ ಅಷ್ಟು ಹಿಂಸಾಪ್ರಿಯನಾಗುವ ನಾಯಕನ ಮನಸ್ಸನ್ನು ಸರಿಮಾಡಬೇಕೆಂದು ಅವನನ್ನು ಮುದ್ದಿಸುವ ಅಮ್ಮನಿಗೂ ಯಾಕೆ ಅನ್ನಿಸಲಿಲ್ಲ ಎನ್ನುವ ಪ್ರಶ್ನೆಗೆ ಕೊನೆಗೂ ಉತ್ತರ ಸಿಗುವುದಿಲ್ಲ.

ಐನೂರು ಆರುನೂರು ಜನರನ್ನು ಆಧುನಿಕ ಶಸ್ತ್ರಾಸ್ತ್ರಗಳಿಂದ ಮುಗಿಸಿಹಾಕುವ ದೃಶ್ಯವೊಂದು ಸಿನಿಮಾದ ಹೈಲೈಟ್‌ಗಳಲ್ಲಿ ಒಂದು. ಅಂತಹ ಮಾರಣಹೋಮವಾದ ಮೇಲೆ, ನಾಯಕ ಬಹು ಅಂಗಾಂಗಗಳ ಸಮಸ್ಯೆಗೆ ತುತ್ತಾಗುತ್ತಾನೆ. ಆಗ ಅವನಿಗೆ ಹೃದಯವನ್ನೇ ಕಸಿ ಮಾಡಬೇಕಾಗುತ್ತದೆ. ಅಷ್ಟೆಲ್ಲ ಆದ ನಂತರವೂ ಅವನ ಪುರುಷಾಹಂಕಾರ ಕರಗದೆ, ತುಪ್ಪ ಸುರಿದ ಅಗ್ನಿಕುಂಡದಂತೆ ಆಗುವುದು ಭೂತ–ಪ್ರೇತದ ಸಿನಿಮಾಗಳಿಗಿಂತ ಹೆಚ್ಚು ಭೀತಿ ಹುಟ್ಟಿಸುತ್ತದೆ. ಎಲ್ಲಕ್ಕೂ ಸಮರ್ಥನೆಯಾಗಿ ಸಿನಿಮಾದ ಶೀರ್ಷಿಕೆಯನ್ನು ನೋಡಿ ಬಾಯಿಮುಚ್ಚಬೇಕಷ್ಟೆ.

ಹರ್ಷವರ್ಧನ್, ರಾಮೇಶ್ವರ್ ಹಿನ್ನೆಲೆ ಸಂಗೀತ, ಅಮಿತ್ ರಾಯ್ ಸಿನಿಮಾಟೊಗ್ರಫಿ ಎರಡೂ ನಾಯಕ ರಣಬೀರ್ ಕಪೂರ್ ಅಭಿನಯದ ಗ್ರಾಫ್ ಅನ್ನು ಎತ್ತರೆತ್ತರ ಮಾಡಿವೆ. ಬಿಟ್ಟ ಕಣ್ಣು ಬಿಟ್ಟ ಹಾಗೆಯೇ ಮಾಡುವಂತೆ ರಣಬೀರ್ ನಟಿಸಿದ್ದಾರೆ. ದೇಹಾಕಾರದಲ್ಲಿ ಅವರು ಮಾಡಿಕೊಂಡಿರುವ ಹಲವು ಮಾರ್ಪಾಟುಗಳೂ ಆಸಕ್ತಿಕರ. ನಾಯಕಿ ರಶ್ಮಿಕಾ ಮಂದಣ್ಣ ಅವರಿಗೆ ದೊಡ್ಡ ಮಟ್ಟದ ಅಭಿನಯಾವಕಾಶ ಇರುವ ಚಿತ್ರವಿದು. ಅದನ್ನು ಅವರು ಸದುಪಯೋಗ ಪಡಿಸಿಕೊಂಡಿದ್ದಾರೆ. ಅನಿಲ್ ಕಪೂರ್ ಹಾಗೂ ಬಾಬ್ಬಿ ಡಿಯೋಲ್ ಅಭಿನಯವೂ ಹದವರಿತದ್ದು.

ಇನ್ನೂರೊಂದು ನಿಮಿಷಗಳ ಸುದೀರ್ಘಾವಧಿಯ ಈ ಸಿನಿಮಾ ತನ್ನ ಚುರುಕಾದ ತಾಂತ್ರಿಕತೆಯಿಂದಾಗಿ ನೋಡಿಸಿಕೊಳ್ಳುತ್ತದೆಯಾದರೂ, ಕ್ರೌರ್ಯ ಕಥಾನಕದ ರಕ್ತಸಿಕ್ತ ಅಧ್ಯಾಯಗಳು ಕಾಡುವ ಅವಧಿ ಅದಕ್ಕಿಂತ ತುಂಬಾ ಹೆಚ್ಚು.

ವಿಶಾಖ ಎನ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5517

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಹಿರಿಯ ಸಹೋದರನಿವನು (2)
3.ಹೆರಿಗೆಯ ಸೆತ್ತೆ (2)
5.ಇದು ಉಪಯೋಗವಿಲ್ಲದ್ದು (5)
6.ಮಿತಿ ಮೀರಿದ ಕೋಪವಿದು (3)
7.ಮುಳ್ಳುಗಳ ನಡುವೆ ಅರಳುವ ಹೂ (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರದ ಸ್ವಾಮ್ಯ (5)
9.ಒಳ್ಳೆಯ ಅವಕಾಶ (3)
10.ಅರ್ಧ ಚಂದ್ರಾಕೃತಿಯ ರಚನೆ (3)
13.ಮಾನವನ್ನು ಹೊಂದಿದ ಒಣ ಹೆಮ್ಮೆ (5)
14.ತರಲೆಯ ಶಿರ (2)
15.ರಹಸ್ಯ ಅಥವಾ ಗೋಪ್ಯ (2)

ಮೇಲಿಂದ ಕೆಳಕ್ಕೆ

1.ಅನುಭವ ಉಳ್ಳವನು (4)
2.ಪಥದ ಹತ್ತಿರ ಮಾಡಿದ ಪ್ರತಿಜ್ಞೆ (3)
4.ತಿರುಗಿ ನಿಂತಾಗ ಚಿಲ್ಲರೆ ಹಣ ಕಾಣಿಸಿತಲ್ಲಾ (4)
5.ಈತ ಅಪರಾಧವನ್ನು ಮಾಡದಿರುವವ (5)
7.ಗುಣವನ್ನು ಹೊಗಳುವುದು (5)
9.ಒಳ್ಳೆಯ ಮಾತು (4)
11.ಗಡಿಯ ಹತ್ತಿರ ಗಟ್ಟಿಯಾಗಿ ಹೇಳಿದ ಗಾದೆ (4)
12.ಸಭೆಯಲ್ಲಿ ಕುಳಿತಿರುವವನು (3)

5516ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಅವಗುಣ
3.ಅಲೌಕಿಕ 5.ತಮಟೆ
6.ತಿಲೋದಕ
7.ಅತಿಕ್ರಮಪ್ರವೇಶ
10.ಪರಿಮಾಣ
11.ಸುಗುಣ
14.ತಿಳಿಗೇಡಿ
15.ಅನಿಶ್ಚಿತ

ಮೇಲಿನಿಂದ ಕೆಳಕ್ಕೆ
1.ಅಕ್ಕ 2.ಗುಲಾಮ
4.ಕಟುಕ 5.ತದ್ಭುಅ
6.ತಿಗಪ್ರ 8.ಕ್ರಮೇಣ
9.ಶರಣ 10.ಪದಾತಿ
12.ಗುಮಾನಿ 13.ಪ್ಲುತ

ಸುಡೊಕು 5903

7	9			3			6	
4					7			9
	8			9		1		7
		4			9		8	
	2	6		5				3
8			2				4	
	4			2		8		
			9					5
2		8		7			3	4

5902 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ | ಶನಿವಾರ ಡಿಸೆಂಬರ್ 2, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಪಂಚಮಿ ಗಂ. 17-15 ನಕ್ಷತ್ರ: ಪುಷ್ಯ ಗಂ. 18-54 ಯೋಗ: ಬ್ರಹ್ಮ ಗಂ 20-19 ಕರಣ: ತೈತಿಲ ಗಂ. 17-15, ವೃಶ್ಚಿಕ ಮಾಸದ 16 ನೇ ದಿನ, ಮಳೆನಕ್ಷತ್ರ: ಅನುರಾಧ 4.
ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-42 **ಸೂರ್ಯಾಸ್ತ :** 05-58
ಮುಸ್ಲಿಂ ದಿನಾಂಕ : 17 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 2, 10

ಮೇಷ: ಇಂದು ನಡೆಯುವ ಮಗಳ ವಿವಾಹ ಪ್ರಸ್ತಾವನೆಯು ಶುಭ ತೀರ್ಮಾನದಲ್ಲಿ ಮುಕ್ತಾಯವಾಗಲಿದೆ. ಹಳೆಯ ಕೆಲಸಗಳನ್ನು ಪೂರ್ಣಗೊಳಿಸಿಕೊಂಡು ಹೊಸ ಕೆಲಸಗಳಿಗೆ ಕೈ ಹಾಕುವ ಯೋಚನೆ ಮಾಡಲಿದ್ದೀರಿ.

ವೃಷಭ: ರೇಷ್ಮೆ ವ್ಯವಹಾರದಲ್ಲಿ ಹೆಚ್ಚಿನ ಆದಾಯವಿದ್ದು, ವ್ಯವಹಾರ ವಿಸ್ತರಿಸುವ ಬಗ್ಗೆ ಯೋಚಿಸುವಿರಿ. ಕುಡಿಯುವ ನೀರಿನ ಶುದ್ಧತೆ ಬಗ್ಗೆ ಗಮನವಿರಲಿ. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು.

ಮಿಥುನ: ಕಾರ್ಮಿಕರು ಕೊಡುವ ಸಲಹೆಯಿಂದ ನಿಮಗೆ ಅನುಕೂಲವಾಗುವ ಸನ್ನಿವೇಶ ಒದಗಿ ಬರಲಿದೆ. ಈ ದಿನ ಯಾರಲ್ಲಿಯೂ ಸಾಲ ಮಾಡುವುದು ಸರಿಯಲ್ಲ. ಮನಸ್ಸಿನ ನಾಗಾಲೋಟಕ್ಕೆ ಕಡಿವಾಣ ಹಾಕುವುದು ಉತ್ತಮ.

ಕರ್ಕಾಟಕ: ಇನ್ನೊಬ್ಬರಿಗೆ ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಸಹಾಯ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಿ. ಇನ್ನೊಬ್ಬರನ್ನು ಅವಹೇಳನ ಮಾಡುವ ನಿಮ್ಮ ಮನಸ್ಥಿತಿ ಸರಿಪಡಿಸಿಕೊಳ್ಳುವುದರಿಂದ ನಿಮ್ಮ ವ್ಯಕ್ತಿತ್ವಕ್ಕೆ ಶೋಭೆ ತರಲಿದೆ.

ಸಿಂಹ: ಇನ್ನೊಬ್ಬರಿಗೆ ಗೌರವ ಕೊಟ್ಟು ನಂತರ ನೀವು ಅವರಿಂದ ಗೌರವ ಅಪೇಕ್ಷಿಸಬಹುದು. ಮಂಗಳ ಕಾರ್ಯದ ಸಲುವಾಗಿ ಬಂಗಾರ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕಥೆ ನಡೆಯಲಿದೆ. ಆರೋಗ್ಯದ ತೊಂದರೆ ದೂರವಾಗಲಿದೆ.

ಕನ್ಯಾ: ಕೆಲವೊಂದು ಅನಿರೀಕ್ಷಿತ ಹಾಗೂ ಉತ್ತಮ ಘಟನೆಗಳು ಈ ದಿನ ನಿಮ್ಮ ಬದುಕಿನಲ್ಲಿ ಜರುಗಲಿದೆ. ಒಂದೆಡೆ ಉಳಿತಾಯಕ್ಕೆ ಯತ್ನಿಸುತ್ತಿದ್ದರೆ ಮತ್ತೊಂದು ಕಡೆ ಖರ್ಚು ಹೆಚ್ಚಾಗಲಿದೆ. ತುರ್ತು ಪರಿಸ್ಥಿತಿಗಳು ಎದುರಾಗಬಹುದು.

ತುಲಾ: ಕೆಲಸದಲ್ಲಿ ಬಹಳ ಅವಸರ ತೋರುವ ನಿಮ್ಮ ಸ್ವಭಾವದಿಂದ ಇತರರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಬೇಕು. ವೃತ್ತಿಯಲ್ಲಿ ವೇತನ ಕಡಿಮೆ ಇದ್ದರೂ ಸದ್ಯಕ್ಕೆ ಹೊಂದಾಣಿಕೆ ಸರಿಯಾದ ಮಾರ್ಗ ಎಂದು ಅನಿಸಲಿದೆ.

ವೃಶ್ಚಿಕ: ಕಾಲಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವುದು ಬಾಳಿನಲ್ಲಿ ಅನಿವಾರ್ಯವಾಗಲಿದೆ. ಆಸ್ತಿ ಖರೀದಿ ಮಾಡುವ ಬಗ್ಗೆ ಯೋಚನೆ ಮಾಡಬಹುದು. ಅದಕ್ಕೆ ಬೇಕಾದ ಆರ್ಥಿಕ ನೆರವು ತಾನಾಗಿಯೇ ಒದಗಿಬರಲಿದೆ.

ಧನು: ನೀವು ಈ ದಿನ ಮಾಡುವ ಕೆಲಸದಿಂದ ಗುಂಪಿನಲ್ಲಿ ಗುರುತಿಸುವ ವ್ಯಕ್ತಿಯಾಗುವ ಲಕ್ಷಣ ಕಾಣುತ್ತಿದೆ. ಮಕ್ಕಳ ವಿದ್ಯಾಭ್ಯಾಸವು ಉತ್ತಮವಾಗಿದ್ದು, ಕುಟುಂಬದಲ್ಲಿ ಸುಖ-ಶಾಂತಿ ತುಂಬಿರಲಿದೆ.

ಮಕರ: ಹೊಸ ಯೋಜನೆ ಪ್ರಾರಂಭಿಸುವ ಬಗ್ಗೆ ಸರಿಯಾಗಿ ಯೋಚಿಸಿ ತೀರ್ಮಾನ ಕೈಗೊಳ್ಳಿ. ಹಿರಿಯರ ಮಾತಿನಂತೆ ನಡೆಯುವುದು ಒಳ್ಳೆಯದು. ಸುದೀರ್ಘವಾಗಿ ಆಲೋಚಿಸಿ ತೀರ್ಮಾನಿಸಿದಲ್ಲಿ ಜಯವಾಗಲಿದೆ.

ಕುಂಭ: ಉನ್ನತ ವ್ಯಾಸಂಗದಲ್ಲಿರುವ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗಲಿದೆ. ವಾಣಿಜ್ಯ, ವ್ಯವಹಾರಗಳು ಹೆಚ್ಚಿನ ಲಾಭ ತರಲಿವೆ. ಹೊಟ್ಟೆಗೆ ಸಂಬಂಧಿಸಿದ ಸಣ್ಣಪುಟ್ಟ ಅನಾರೋಗ್ಯ ಉಂಟಾಗಬಹುದು.

ಮೀನ: ಸಮಯಕ್ಕೆ ಸರಿಯಾಗಿ ಕಾರ್ಯ ಸಾಧಿಸಲು ಸ್ವಲ್ಪ ಪರಿಶ್ರಮ ಬೇಕಾಗಲಿದೆ. ಹೋಟೆಲ್ ಉದ್ಯಮಿಗಳಿಗೆ ವ್ಯಾಪಾರದಲ್ಲಿ ಅನುಕೂಲವಾಗುತ್ತದೆ. ಕೆಲಸಗಾರರ ಸಮಸ್ಯೆಗಳಿಗೆ ಉತ್ತರ ಸಿಗುವುದು ಕಷ್ಟವೆನಿಸಲಿದೆ.

ಷೇರುಪೇಟೆ ವಹಿವಾಟು ▲493



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,133
ಇಂದಿನ ಅಂತ್ಯ	20,267
▲	134
ದಿನದ ಗರಿಷ್ಠ	20,291

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹530
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1615)
ಸೋಯಾ (ರಿಫೈನ್ಡ್)	₹942 (945)
ಸೂರ್ಯಕಾಂತಿ (ರಿಫೈನ್ಡ್)	₹950 (950)
ಪಾಮೋಲಿನ್	₹845 (842)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹300-496
ದ್ವಿತಳಿ (ಬಿ.ವಿ)	₹270-546

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹129

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹3800-4400
ಮಧ್ಯಮ	₹3000-3800
ಸಣ್ಣ	₹2000-3000

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7200-8070
ಕೆ.ಆರ್.ಪೇಟೆ	₹8250-8250
ತಿಪಟೂರು	₹7500-8136
ತುರುವೇಕೆರೆ	₹8000-8000

‘ಟೆಸ್ಲಾಗೆ ವಿನಾಯಿತಿ: ಇನ್ನೂ ತೀರ್ಮಾನ ಆಗಿಲ್ಲ’

ನವದೆಹಲಿ (ಪಿಟಿಐ): ಟೆಸ್ಲಾ ಕಂಪನಿಗೆ ಸುಂಕ ವಿನಾಯಿತಿ ನೀಡುವ ಸಂಬಂಧ ಆಂತರಿಕವಾಗಿ ಚರ್ಚೆಗಳು ನಡೆದಿವೆ. ಆದರೆ, ಯಾವುದೇ ಅಂತಿಮ ತೀರ್ಮಾನಕ್ಕೆ ಬರಲಾಗಿಲ್ಲ ಎಂದು ಸರ್ಕಾರದ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದ್ದಾರೆ.

ಎಲೆಕ್ಟ್ರಿಕ್ ಕಾರುಗಳಿಗೆ ಎಂಜಿನ್ ಗಾತ್ರ ಮತ್ತು ವೆಚ್ಚದ ಆಧಾರದ ಮೇಲೆ ಸದ್ಯ ಶೇ 60–100ರವರೆಗೆ ಆಮದು ಸುಂಕ ಇದೆ. ಆದರೆ, ಎಲ್ಲ ಕಾರುಗಳಿಗೂ ಶೇ 40ರಷ್ಟು ಸುಂಕ ನಿಗದಿಪಡಿಸಬೇಕು ಎನ್ನುವುದು ಟೆಸ್ಲಾ ಬೇಡಿಕೆ ಆಗಿದೆ. ವಿದ್ಯುತ್ ಚಾಲಿತ ವಾಹನ ವಲಯದಲ್ಲಿ ಕಂಪನಿ ಅಥವಾ ಉದ್ದಿಮೆಗೆಂದೇ ನಿರ್ದಿಷ್ಟವಾದ ಪ್ರೋತ್ಸಾಹಧನ ನೀಡುವುದಿಲ್ಲ ಎಂದು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

|| ಭಾವಪೂರ್ಣ ಶ್ರದ್ಧಾಂಜಲಿ ||

ಶ್ರೀ. ದೇವರಾಜ್ ಸಿ.ಎಚ್.
ಜನನ: 18/03/1942 ನಿಧನ: 30/11/ 2023
ಇವರ ಆತ್ಮಕ್ಕೆ ಶಾಂತಿ ಹಾಗೂ ಸದ್ಗತಿ ಸಿಗಲಿ.
ದುಃಖಿತ ಕುಟುಂಬ ಸದಸ್ಯರು:
ಪತ್ನಿ- ಶ್ರೀಮತಿ. ಶಕುಂತಲಾ ದೇವರಾಜ್
ಮಕ್ಕಳು- ಸಂಜಯ್ ರಾಜ್, ವಿಜಯ್ ರಾಜ್ ಹಾಗೂ ಕುಟುಂಬಸ್ಥರು.

ಬಿಒಬಿ: ಕಿಸಾನ್ ದಿವಸ್ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡ (ಬಿಒಬಿ) ನವೆಂಬರ್ 16ರಿಂದ 29ರವರೆಗೆ ಬರೋಡಾ ಕಿಸಾನ್ ದಿವಸ್ ಕಾರ್ಯಕ್ರಮ ನಡೆಸಿತು. ಎರಡು ವಾರಗಳ ಅವಧಿಯಲ್ಲಿ ಬ್ಯಾಂಕ್‌ನ ಗ್ರಾಮೀಣ, ಅರೆ–ನಗರ, ಮತ್ತು ನಗರ ಶಾಖೆಗಳು ಸಕ್ರಿಯವಾಗಿ ಭಾಗವಹಿಸಿದ್ದವು. ಕೃಷಿ ಉತ್ಪನ್ನಗಳು, ಯೋಜನೆಗಳು ಮತ್ತು ವಿತರಣಾ ವ್ಯವಸ್ಥೆಗಳ ಕುರಿತು ರೈತರಿಗೆ ಜಾಗೃತಿ ಮೂಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಬ್ಯಾಂಕ್ ತಿಳಿಸಿದೆ.

ಬೆಂಗಳೂರು ವಲಯ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಸಭೆಗಳು, ಕಿಸಾನ್ ಮೇಳಗಳಂತಹ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ. ರೈತ ಸಮುದಾಯಗಳ ಭಾಗವಹಿಸುವಿಕೆ ಹೆಚ್ಚಿಸಲು ಮತ್ತು ನಮ್ಮ ಕೃಷಿ ಗ್ರಾಹಕರ ಬ್ಯಾಂಕಿಂಗ್ ಮತ್ತು ಹಣಕಾಸು ಅಗತ್ಯ ಪೂರೈಸಲು ಈ ಕಾರ್ಯಕ್ರಮ ಸಹಾಯ ಮಾಡುತ್ತಿವೆ ಎಂದು ಬ್ಯಾಂಕ್‌ನ ಬೆಂಗಳೂರು ವಲಯದ ಮುಖ್ಯಸ್ಥ ದೇವವ್ರತ ದಾಸ್ ಹೇಳಿದ್ದಾರೆ.

ವಿನಿಮಯ ದರ

$ ಡಾಲರ್	83.28
£ ಪೌಂಡ್	105.53
€ ಯುರೊ	90.80
¥ ಯೆನ್ (100ಕ್ಕೆ)	56

ನವೆಂಬರ್‌ನಲ್ಲಿ ದೇಶಿ ಚಟುವಟಿಕೆ, ಹಬ್ಬದ ಋತುವಿನ ಬೇಡಿಕೆ ಹೆಚ್ಚಳ

ಜಿಎಸ್‌ಟಿ ಸಂಗ್ರಹ ಶೇ 15ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ನವೆಂಬರ್‌ನಲ್ಲಿ ₹1.68 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. 2022ರ ನವೆಂಬರ್‌ನಲ್ಲಿ ಸಂಗ್ರಹ ಆಗಿದ್ದ ₹1.45 ಲಕ್ಷ ಕೋಟಿಗೆ ಹೋಲಿಸಿದರೆ ಈ ಬಾರಿ ಶೇ 15ರಷ್ಟು ಹೆಚ್ಚು ವರಮಾನ ಸಂಗ್ರಹ ಆಗಿದೆ.

ದೇಶಿ ಚಟುವಟಿಕೆಗಳು ಹೆಚ್ಚಾಗಿರುವುದು ಮತ್ತು ಹಬ್ಬದ ಋತುವಿನ ಖರೀದಿಯಿಂದಾಗಿ ವರಮಾನ ಸಂಗ್ರಹ ಹೆಚ್ಚಾಗಿದೆ ಎಂದು ಹಣಕಾಸು ಸಚಿವಾಲಯ ಮಾಹಿತಿ ನೀಡಿದೆ. ಆದರೆ ಅಕ್ಟೋಬರ್‌ನಲ್ಲಿ ಸಂಗ್ರಹ ಆಗಿದ್ದ ₹1.72 ಲಕ್ಷ ಕೋಟಿಗೆ ಹೋಲಿಸಿದರೆ ನವೆಂಬರ್‌ನಲ್ಲಿ ತೆರಿಗೆ ಸಂಗ್ರಹ ತುಸು ಇಳಿಕೆ ಆಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ನವೆಂಬರ್ ತಿಂಗಳ ಅಂತ್ಯದವರೆಗೆ ಒಟ್ಟು ₹13.32 ಲಕ್ಷ ಕೋಟಿಯಷ್ಟು ಜಿಎಸ್‌ಟಿ ವರಮಾನ ಸಂಗ್ರಹ ಆಗಿದ್ದು, ತಿಂಗಳ ಸರಾಸರಿ ₹1.66 ಲಕ್ಷ ಕೋಟಿಯಷ್ಟು ಇದೆ. ಹಿಂದಿನ ಹಣಕಾಸು ವರ್ಷದ ನವೆಂಬರ್ ತಿಂಗಳ ಅಂತ್ಯದವರೆಗೆ ಸಂಗ್ರಹ ಆಗಿದ್ದಕ್ಕೆ ಹೋಲಿಸಿದರೆ (₹11.90 ಲಕ್ಷ ಕೋಟಿ) ಶೇ 11.9ರಷ್ಟು ಏರಿಕೆ ಆಗಿದೆ.

ಸತತ ಆರನೇ ಬಾರಿಗೆ ಜಿಎಸ್‌ಟಿ ಸಂಗ್ರಹವು ₹1.60 ಲಕ್ಷ ಕೋಟಿಯನ್ನು ದಾಟಿದೆ.

ಯಾವ ಮೂಲದಿಂದ ಎಷ್ಟು? (ಕೋಟಿಗಳಲ್ಲಿ)



‘ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಿಜೋರಾಂ, ತ್ರಿಪುರಾ, ಲಡಾಖ್ ರಾಜ್ಯಗಳಲ್ಲಿ ಹೆಚ್ಚಿನ ತೆರಿಗೆ ಸಂಗ್ರಹ ಆಗಿದೆ. ದೇಶದಲ್ಲಿ ಖರೀದಿ ಸಾಮರ್ಥ್ಯದಲ್ಲಿ ಏರಿಕೆ ಕಂಡುಬರುತ್ತಿದೆ ಎನ್ನುವುದನ್ನು ಇದು ಸೂಚಿಸುತ್ತಿದೆ ಎಂದು ಇವೈನ ತೆರಿಗೆ ಸಲಹೆಗಾರ ಸೌರಭ್ ಅಗರ್ವಾಲ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷಕ್ಕೆ ಸಿಜಿಎಸ್‌ಟಿ ಸಂಗ್ರಹವು ಬಜೆಟ್ ಅಂದಾಜಿಗಿಂತಲೂ ತುಸು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಐಸಿಆರ್‌ಎನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ತಿಳಿಸಿದ್ದಾರೆ.

ರಿಟರ್ನ್ಸ್ ಸಲ್ಲಿಕೆ ವ್ಯವಸ್ಥೆಯಲ್ಲಿ ಆಗುತ್ತಿರುವ ಸುಧಾರಣೆ ಮತ್ತು ತೆರಿಗೆ ವಂಚನೆ ತಡೆಯಲು ತೆಗೆದುಕೊಳ್ಳುತ್ತಿರುವ ಕ್ರಮಗಳಿಂದಾಗಿ ಹೆಚ್ಚಿನ ಕಂಪನಿಗಳು ಜಿಎಸ್‌ಟಿ ವ್ಯಾಪ್ತಿಗೆ ಬರುತ್ತಿವೆ ಎಂದು ಡೆಲಾಯ್ಟ್ ಇಂಡಿಯಾದ ತೆರಿಗೆ ಸಲಹೆಗಾರ ಎಂ.ಎಸ್. ಮಣಿ ಹೇಳಿದ್ದಾರೆ.

ಭತ್ತ ದಾಸ್ತಾನು: ಅಕ್ಕಿ ಬೆಲೆ ಏರಿಕೆ

ಪ್ರಜಾವಾಣಿ ವಾರ್ತೆ

ತೆಕ್ಕಲಕೋಟೆ: ಸಿರುಗುಪ್ಪ ತಾಲ್ಲೂಕಿನಲ್ಲಿ ಭತ್ತದ ನಾಟಿಯ ಕೊರತೆಯ ನಡುವೆಯೂ ಉತ್ತಮ ಫಸಲು ಬೆಳೆದಿದ್ದಾರೆ. ಮುಂಗಾರು ಹಂಗಾಮಿಗೆ 65 ಸಾವಿರ ಹೆಕ್ಟೇರ್ ಭತ್ತ ನಾಟಿ ಮಾಡುತ್ತಿದ್ದ ತಾಲ್ಲೂಕಿನ ರೈತರು ಈ ಬಾರಿ 32 ಸಾವಿರ ಹೆಕ್ಟೇರ್‌ನಲ್ಲಿ ಮಾತ್ರ ಭತ್ತ ನಾಟಿ ಮಾಡಿದ್ದಾರೆ.

ಮಾರುಕಟ್ಟೆಯಲ್ಲಿ ಭತ್ತದ ದರ ಕ್ವಿಂಟಲ್‌ಗೆ ಆರ್‌ಎನ್‌ಆರ್ ₹3,150 ಹಾಗೂ ಸೋನಾ ಮಸೂರಿಗೆ ₹2,700 ಇದೆ. ಕಳೆದ ಬಾರಿ ಇದೇ ಹಂಗಾಮಿನಲ್ಲಿ ಮಾರುಕಟ್ಟೆ ದರ ಕ್ವಿಂಟಲ್‌ಗೆ ₹2 ಸಾವಿರ ಇತ್ತು. ಈ ಸಲ ಕ್ವಿಂಟಲ್‌ಗೆ ₹1 ಸಾವಿರ ದರ ಏರಿಕೆಯಾದರೂ ರೈತರು ಭತ್ತ ಮಾರುತ್ತಿಲ್ಲ.

ಇದರಿಂದ ಅಕ್ಕಿ ಬೆಲೆ ಏರಿದ್ದು, ಸದ್ಯ ಸೋನಾ ಮಸೂರಿ ಅಕ್ಕಿ ಕ್ವಿಂಟಲ್‌ಗೆ ₹4,800 ಮತ್ತು ಆರ್‌ಎನ್‌ಆರ್ ₹5,200 ದಾಟಿದೆ. ಹೊಸ ಅಕ್ಕಿ ಆರ್‌ಎನ್‌ಆರ್ ಕೆಜಿಗೆ ₹57 ಹಾಗೂ ಸೋನಾ ಮಸೂರಿ ಕೆಜಿಗೆ ₹50ಕ್ಕೆ ಮಾರಾಟವಾಗುತ್ತಿದೆ.

‘ಭತ್ತಕ್ಕೆ ಮುಂದಿನ ದಿನಗಳಲ್ಲಿ ಹೆಚ್ಚಿನ ದರ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ರೈತರು ಭತ್ತದ ದಾಸ್ತಾನು ಮಾಡುತ್ತಿದ್ದಾರೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ’ ಎಂದು ಎಂಆರ್ ಇಂಡಸ್ಟ್ರಿ ಅಕ್ಕಿ ಗಿರಣಿ ಮಾಲೀಕ ಬದ್ರಿನಾಥ ತಿಳಿಸಿದರು.

‘ಸ್ಟಾರ್ಟ್‌ಅಪ್‌ಗಳ ಉತ್ತೇಜನ: ಬೌದ್ಧಿಕ ಆಸ್ತಿ ನೀತಿಗೆ ಬದಲಾವಣೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೌದ್ಧಿಕ ಆಸ್ತಿ (ಐಪಿ) ನೀತಿಯಲ್ಲಿ ಒಂದಷ್ಟು ಬದಲಾವಣೆ ತರುವ ಮೂಲಕ ಸ್ಟಾರ್ಟ್‌ಅಪ್‌ಗಳಿಗೆ ರಾಜ್ಯ ಸರ್ಕಾರ ಇನ್ನಷ್ಟು ಉತ್ತೇಜನ ನೀಡಬೇಕು. ಆ ಮೂಲಕ ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಕ್ಷೇತ್ರಗಳಿಗೆ ಹೊಸ ದಿಕ್ಕು ನೀಡುವವರಿಗೆ ಸಬ್ಸಿಡಿ ನೀಡುವ ಯೋಜನೆಯನ್ನು ಜಾರಿಗೆ ತರುವ ಪ್ರಯತ್ನ ಮಾಡಬೇಕು’ ಎಂದು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಸಿಎಸ್‌ಐಆರ್) ಮಾಜಿ ಮಹಾ ನಿರ್ದೇಶಕ ಡಾ. ಆರ್.ಎ. ಮಶೇಲ್ಕರ್ ಅಭಿಪ್ರಾಯಪಟ್ಟರು.

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ ಮೂರನೇ ದಿನವಾದ ಶುಕ್ರವಾರ ನಡೆದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

‘ಈಗಾಗಲೇ ಕರ್ನಾಟಕವು ಸ್ಟಾರ್ಟ್‌ಅಪ್‌ಗಳ ತಾಣವಾಗಿದೆ. ಹೊಸ ಆಲೋಚನೆವುಳ್ಳವರಿಗೆ ವೇದಿಕೆ ಕಲ್ಪಿಸುತ್ತಿದೆ. ಈ ಬೆಳವಣಿಗೆ ಇನ್ನಷ್ಟು ವೇಗ ಪಡೆದುಕೊಳ್ಳುವ ಅನಿವಾರ್ಯ ಇದೆ. ಆ ಮೂಲಕ ಹೊಸಬರಿಗೆ ಮತ್ತಷ್ಟು ಉತ್ತೇಜನ ನೀಡಬೇಕಿದೆ. ಸ್ಟಾರ್ಟ್‌ಅಪ್‌ಗಳಿಗೆ ಬಲ ನೀಡಬೇಕೆಂದರೆ ಇದಕ್ಕಿರುವ ನೀತಿಗಳ ಬದಲಾವಣೆಯಲ್ಲೂ ಅವಶ್ಯಕತೆ ಇದೆ’ ಎಂದರು.

‘ಯಾವುದೇ ಕ್ಷೇತ್ರವಾದರೂ ಅದನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಆತ್ಮವಿಶ್ವಾಸ ಅಗತ್ಯ. ಅದರ ಜತೆಗೆ ಕ್ಷೇತ್ರದಲ್ಲಿ ವಿಶ್ವಾಸಾರ್ಹತೆ ಕಾಪಾಡಿಕೊಳ್ಳಬೇಕಾದ್ದು ಬಹಳ ಮುಖ್ಯ. ಇದು ಹಂತಹಂತವಾಗಿ ಯಶಸ್ಸನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲಿದೆ’ ಎಂದು ಮಶೇಲ್ಕರ್ ಸಲಹೆ ನೀಡಿದರು.

‘ಭಾರತವು ಅತ್ಯಧಿಕ ಬೌದ್ಧಿಕ ಬಂಡವಾಳವನ್ನು ಹೊಂದಿದೆ. ಬೇರೆ ಯಾವುದೇ ದೇಶಗಳಿಗೆ ಹೋಲಿಸಿದಲ್ಲಿ ಭಾರತದಲ್ಲಿ ಸಂಪನ್ಮೂಲ ಅತ್ಯಧಿಕವಾಗಿದೆ. ಇದರ ಸದ್ಬಳಕೆ ಅತ್ಯಗತ್ಯ. ರಾಷ್ಟ್ರೀಯ ರಾಸಾಯನಿಕ ಪ್ರಯೋಗಾಲಯವು ಒಂದು ವರ್ಷದೊಳಗೆ ಅಂತರ ರಾಷ್ಟ್ರೀಯ ಕನ್ಸಲ್ಟಿಂಗ್ ಸಂಸ್ಥೆಯಾಗಿ ಬದಲಾದ ಉದಾಹರಣೆ ಇದೆ. ಮತ್ತೊಂದೆಡೆ ಯುಪಿಐ ಆವಿಷ್ಕಾರ ಬಳಿಕ 2022ರಲ್ಲಿ ನಡೆದ ₹74.05 ಶತಕೋಟಿ ವಹಿವಾಟಿನಿಂದ ಭೂತಾನ್ ಹಾಗೂ ಸಿಂಗಪೂರ ರಾಷ್ಟ್ರಗಳೂ ಈ ವ್ಯವಸ್ಥೆಯನ್ನು ಅಂಗೀಕರಿಸಿವೆ. ಇವೆಲ್ಲವೂ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಷ್ಟ್ರದ ಸಾಧನೆಯಾಗಿದೆ’ ಎಂದರು.

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ ಮೂರನೇ ದಿನ ಗೋಷ್ಠಿಯಲ್ಲಿ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಸಿಎಸ್‌ಐಆರ್) ಮಾಜಿ ಮಹಾ ನಿರ್ದೇಶಕ ಡಾ. ಆರ್.ಎ. ಮಶೇಲ್ಕರ್ ಸಂವಾದ ನಡೆಸಿದರು. ಕೆಡಿಇಎಂ ಸಿಇಒ ಸಂಜೀವ್ ಗುಪ್ತ ಇದ್ದಾರೆ. – ಪ್ರಜಾವಾಣಿ ಚಿತ್ರ

ಸ್ಟಾರ್ಟ್‌ಅಪ್‌ಗಳಿಗೆ ಮಶೇಲ್ಕರ್ ಸೂತ್ರ

- ಸುಲಭವಾಗಿ ಜನರ ಕೈಗೆಟಕುವ ಯೋಜನೆಗಳನ್ನು ರೂಪಿಸಬೇಕು
- ವ್ಯವಹಾರವನ್ನು ಸುಸ್ಥಿರವನ್ನಾಗಿಸಬೇಕು
- ಉತ್ಪನ್ನ ಅಥವಾ ನೀಡುವ ಸೇವೆಯು ಸಾರ್ವತ್ರಿಕವಾಗಿ ಅಂಗೀಕಾರಗೊಂಡಿರಬೇಕು
- ಉತ್ತಮ ಮಾರುಕಟ್ಟೆ ನೀತಿ ಹೊಂದಿರಬೇಕು
- ವಿಭಿನ್ನ ವ್ಯಾಪಾರ ಪರಿಕಲ್ಪನೆ ಹೊಂದಿರಬೇಕು

BTS 2023 ಬೆಂಗಳೂರು ಟೆಕ್ ಸಮಿಟ್
ಬೆಂಗಳೂರು ಟೆಕ್ ಶೃಂಗಸಭೆ

ದೇಶದ ಯುವ ಪ್ರತಿಭೆಗಳಲ್ಲಿ ಶೇ 40ರಷ್ಟು ಕರ್ನಾಟಕದಲ್ಲೇ ನೆಲೆಯೂರಿದ್ದಾರೆ. ಐಟಿ ಸೇರಿದಂತೆ ಹಲವು ಕ್ಷೇತ್ರದಲ್ಲಿ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದ್ದಾರೆ.
ಡಾ. ಆರ್.ಎ. ಮಶೇಲ್ಕರ್, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಸಿಎಸ್‌ಐಆರ್) ಮಾಜಿ ಮಹಾ ನಿರ್ದೇಶಕ

ಜಿಡಿಪಿ ಹೆಚ್ಚಳ, ತಯಾರಿಕಾ ವಲಯದಲ್ಲಿ ಏರಿಕೆ

ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದ ನಿಫ್ಟಿ

ಮುಂಬೈ (ಪಿಟಿಐ): ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ ಶುಕ್ರವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿತು. ಬಿಎಸ್‌ಇ ಸೆನ್ಸೆಕ್ಸ್ 493 ಅಂಶ ಏರಿಕೆ ಕಂಡು 11 ವಾರಗಳ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯವಾಯಿತು.

ಜಿಡಿಪಿ, ತಯಾರಿಕಾ ವಲಯದ ಬೆಳವಣಿಗೆ ಸಕಾರಾತ್ಮಕ ಮಟ್ಟದಲ್ಲಿ ಇರುವುದು ಹಾಗೂ ವಿದೇಶಿ ಬಂಡವಾಳ ಹೂಡಿಕೆಯು ಷೇರುಪೇಟೆ ಓಟಕ್ಕೆ ಬೆಂಬಲ ನೀಡಿವೆ. ಸೆನ್ಸೆಕ್ಸ್ 67,481 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ಸೆಪ್ಟೆಂಬರ್ 18ರ ನಂತರ ವಹಿವಾಟಿನ ಗರಿಷ್ಠ ಅಂತ್ಯ ಇದಾಗಿದೆ. ನಿಫ್ಟಿ ದಾಖಲೆಯ 20,268 ಅಂಶಗಳಿಗೆ ತಲುಪಿತು.

ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಜಿಡಿಪಿ ಬೆಳವಣಿಗೆಯು ನಿರೀಕ್ಷೆಯನ್ನೂ ಮೀರಿದೆ. ಇದು ಷೇರುಪೇಟೆಗೆ ಉತ್ತೇಜನ ನೀಡಿತು. ಯುರೋಪ್‌ನ ಕೇಂದ್ರೀಯ ಬ್ಯಾಂಕ್ ಬಡ್ಡಿದರ ಏರಿಕೆ ಪ್ರವೃತ್ತಿಗೆ ಅಂತ್ಯ ಹಾಡುವ ಭರವಸೆಯೊಂದಿಗೆ ಜಾಗತಿಕ ಮಾರುಕಟ್ಟೆಗಳಲ್ಲಿಯೂ ಸೂಚ್ಯಂಕಗಳು ಏರಿಕೆ ಕಂಡವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಇನ್ನು, ಹಬ್ಬದ ಬೇಡಿಕೆಯು ವಾಹನ ಮಾರಾಟ ಹೆಚ್ಚಾಗುವಂತೆ ಮಾಡಿದೆ. ಇದು ಸಹ ವಹಿವಾಟಿನ ಮೇಲೆ ಪ್ರಭಾವ ಬೀರಿತು ಎಂದು ಅವರು ತಿಳಿಸಿದ್ದಾರೆ. ವಲಯವಾರು ವಿದ್ಯುತ್ ಶೇ 1.57, ಎಫ್‌ಎಂಸಿಜಿ ಶೇ 1.53, ಯುಟಿಲಿಟಿ ಶೇ 1.46, ರಿಯಾಲ್ಟಿ ಶೇ 1.32ರಷ್ಟು ಏರಿಕೆ ಕಂಡಿತು.

ಬಿಎಸ್‌ಇ ಮೌಲ್ಯ ₹337.67 ಲಕ್ಷ ಕೋಟಿ

ನವದೆಹಲಿ: ಬಿಎಸ್‌ಇನಲ್ಲಿ ನೋಂದಾಯಿತ ಕಂಪನಿಗಳ ಒಟ್ಟು ಬಂಡವಾಳ ಮೌಲ್ಯವು ₹337.67 ಲಕ್ಷ ಕೋಟಿಗೆ ತಲುಪುವ ಮೂಲಕ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ.

ನಾಲ್ಕು ದಿನಗಳ ವಹಿವಾಟಿನಲ್ಲಿ ಮಾರುಕಟ್ಟೆ ಮೌಲ್ಯವು ₹8.95 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ. ಆರ್ಥಿಕ ಬೆಳವಣಿಗೆಯನ್ನು ಸೂಚಿಸುವ ಅಂಶಗಳು ಸಕಾರಾತ್ಮಕವಾಗಿ ಇದೆ. ಇದರ ಜೊತೆಗೆ ವಿದೇಶಿ ಬಂಡವಾಳ ಒಳಹರಿವು ಹೆಚ್ಚಾಗುತ್ತಿರುವುದು ದೇಶಿ ಮಾರುಕಟ್ಟೆಯಲ್ಲಿ ಸೂಚ್ಯಂಕಗಳ ಏರಿಕೆಗೆ ಕಾರಣವಾಗುತ್ತಿದೆ.

ವಾಣಿಜ್ಯ ಬಳಕೆ ಸಿಲಿಂಡರ್ ದರ ₹21 ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ 19 ಕೆ.ಜಿ ತೂಕದ ಸಿಲಿಂಡರ್ ದರವನ್ನು ₹21 ಹೆಚ್ಚಿಸಿವೆ.

ಈ ದರ ಪರಿಷ್ಕರಣೆಯಿಂದಾಗಿ ದೆಹಲಿಯಲ್ಲಿ ಪ್ರತಿ ಸಿಲಿಂಡರ್ ದರವು ₹1,796.5ಕ್ಕೆ ಏರಿಕೆ ಕಂಡಿದೆ. ಮುಂಬೈನಲ್ಲಿ ₹1,749ಕ್ಕೆ ಏರಿಕೆ ಆಗಿದೆ. ನವೆಂಬರ್ 16ರಂದು ಪ್ರತಿ ಸಿಲಿಂಡರ್‌ಗೆ ₹77.5ರಷ್ಟು ಕಡಿಮೆ ಮಾಡಲಾಗಿತ್ತು.

ಜಾಗತಿಕ ಮಾರುಕಟ್ಟೆಯಲ್ಲಿ ಎಲ್‌ಪಿಜಿ ದರದಲ್ಲಿ ಆಗಿರುವ ಏರಿಕೆಗೆ ಅನುಗುಣವಾಗಿ ಈ ಬೆಲೆ ಪರಿಷ್ಕರಣೆ ಮಾಡಲಾಗಿದೆ ಎಂದು ಕಂಪನಿಗಳು ತಿಳಿಸಿವೆ. ಆದರೆ ಅಡುಗೆ ಅನಿಲ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಎಟಿಎಫ್ ದರ ಇಳಿಕೆ: ವಿಮಾನ ಇಂಧನ (ಎಟಿಎಫ್) ದರ ಕಿಲೋ ಲೀಟರಿಗೆ ₹5,189ರಂತೆ ಇಳಿಕೆ ಮಾಡಲಾಗಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್). ದೆಹಲಿಯಲ್ಲಿ ಪ್ರತಿ ಕಿಲೋ ಲೀಟರ್ ದರ ₹1.06 ಲಕ್ಷಕ್ಕೆ ಇಳಿಕೆ ಕಂಡಿದೆ. ನವೆಂಬರ್ 1ರಂದು ₹6,854 ಇಳಿಕೆ ಮಾಡಲಾಗಿತ್ತು.

ಮುಂಬೈ ಧಾರಣೆ

ಶೇಂಗಾ

01-12-2023

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	922 (930)
ಪಾಮ್ ವಾರದ ಡೆಲಿವರಿ	843 (844)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,500 (62,400)
ಬೆಳ್ಳಿ ಕೆ.ಜಿ 76,450 (76,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೊಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	585
ಅಡಿಕೆ	
ಬಂಟ್ವಾಳ	
ಹಳತು	43500-45500
ಕೋಕ	15000-27500
ಕಾರ್ಕಳ	
ಹೊಸತು	25000-36500
ಹಳತು	30000-47000
ಕುಮಟ	
ಚಿಪ್ಪು	25609-34609
ಕೋಕ	19169-32089
ಫ್ಯಾಕ್ಟರಿ	10569-23849
ಹಳೆಚಾಲಿ	37299-39509
ಹೊಸಚಾಲಿ	32899-35010
ಶಿವಮೊಗ್ಗ	
ಗೊರಬಾಲು	20014-46899
ಹೊಸತು	45059-46899
ರಾಶಿ	38109-46899
ಸರಕು	49210-76700
ಸಿದ್ದಾಪುರ	
ಬಿಳಿಗೋಟು	31800-35346
ಚಾಲಿ	37409-39299
ಕೋಕ	30019-32689
ಕೆಂಪುಗೋಟು	31909-31909
ರಾಶಿ	43899-46639
ತಟ್ಟಿಬೆಟ್ಟೆ	38009-41659
ಶಿರಸಿ	
ರಾಶಿ	45009-47349
ಬೆಟ್ಟೆ	40099-45499
ಬಿಳಿಗೋಟು	29199-35476
ಚಾಲಿ	37049-40899
ಯಲ್ಲಾಪುರ	
ಅಪಿ	56179-56179
ಬಿಳಿಗೋಟು	23499-35699
ಚಾಲಿ	36019-39899
ಕೋಕ	17601-31899
ಕೆಂಪುಗೋಟು	24899-35399
ರಾಶಿ	46489-53369
ತಟ್ಟಿಬೆಟ್ಟೆ	36806-45899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12500	12250	-	-
ಎಸಿ	6750	7000	-	
ಆರ್‌ಪಿ	10200	10000	-	-
ಆರ್‌ಸಿ	6095	6000	-	-

ನವೆಂಬರ್‌ನಲ್ಲಿ ತಯಾರಿಕಾ ಚಟುವಟಿಕೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯವು ನವೆಂಬರ್ ತಿಂಗಳಿನಲ್ಲಿ ಉತ್ತಮ ಬೆಳವಣಿಗೆ ಕಂಡಿದೆ. ತಯಾರಿಕಾ ವೆಚ್ಚ ಕಡಿಮೆ ಆಗುತ್ತಿರುವುದು ಮತ್ತು ಬೇಡಿಕೆ ಹೆಚ್ಚಾಗುತ್ತಿರುವುದೇ ಇದಕ್ಕೆ ಕಾರಣ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ತಯಾರಿಕಾ ವಲಯದ ಬೆಳವಣಿಗೆಯನ್ನು ತಿಳಿಸುವ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಅಕ್ಟೋಬರ್‌ನಲ್ಲಿ 55.5 ಇದ್ದಿದ್ದು ನವೆಂಬರ್‌ನಲ್ಲಿ 56ಕ್ಕೆ ಏರಿಕೆ ಕಂಡಿದೆ. ತಯಾರಿಕಾ ವೆಚ್ಚವು 40 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತಲೂ ಕೆಳಗಿನ ಮಟ್ಟದಲ್ಲಿ ಇದ್ದರೆ ನಕಾರಾತ್ಮಕ ಎಂದು ಪರಿಗಣಿಸಲಾಗುತ್ತದೆ. ಹೀಗಾಗಿ ಸತತ 29ನೇ ತಿಂಗಳಿನಲ್ಲಿಯೂ ಒಟ್ಟಾರೆ ಬೆಳವಣಿಗೆಯು ಸಕಾರಾತ್ಮಕವಾಗಿಯೇ ಮುಂದುವರಿದಿದೆ.

ಹೊಸ ವಹಿವಾಟುಗಳಿಗೆ ದೇಶಿ ಮತ್ತು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಬಂದಿದೆ. 2023ನೇ ವರ್ಷವು ಮುಗಿಯುವ ಹಂತದಲ್ಲಿದ್ದು, ಭಾರತದ ತಯಾರಿಕಾ ವಲಯವು ಉತ್ತಮ ಸ್ಥಿತಿಯಲ್ಲಿದೆ. ಹೀಗಾಗಿ 2024ರಲ್ಲಿಯೂ ಇದೇ ರೀತಿ ಬೆಳವಣಿಗೆ ನಿರೀಕ್ಷಿಸಲಾಗುತ್ತಿದೆ ಎಂದು ಎಸ್ ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಅಕ್ಟೋಬರ್‌ನಲ್ಲಿ 8 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದ್ದ ಬೆಳವಣಿಗೆಯು ನವೆಂಬರ್‌ನಲ್ಲಿ ಮತ್ತೆ ಹೆಚ್ಚಾಗಿದೆ. ತಯಾರಿಕೆ ಮತ್ತು ಬೇಡಿಕೆಯು ಹೆಚ್ಚಾಗುತ್ತಿರುವುದು ವಲಯದ ಒಟ್ಟಾರೆ ಪ್ರಗತಿಗೆ ಪೂರಕವಾಗಿದೆ ಎಂದು ಸಮೀಕ್ಷೆಯು ತಿಳಿಸಿದೆ.

ಕಚ್ಚಾ ಸರಕುಗಳ ದರವು ನವೆಂಬರ್‌ನಲ್ಲಿಯೂ ಏರಿಕೆ ಕಂಡಿದೆ. ಆದರೆ, ಕಚ್ಚಾ ಸರಕುಗಳಿಗೆ ಜಾಗತಿಕ ಬೇಡಿಕೆ ತಗ್ಗಿರುವುದರಿಂದ ಭಾರತದಲ್ಲಿ ಪೂರೈಕೆಯಲ್ಲಿ ಸುಧಾರಣೆ ಕಂಡುಬಂದಿದೆ. ಇದು ಬೆಲೆ ಏರಿಕೆ ಮೇಲಿನ ಒತ್ತಡವನ್ನು ಕಡಿಮೆ ಮಾಡಿದೆ ಎಂದು ಲಿಮಾ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮ ಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Agricultural Land
Out-Station
ಮಳವಳ್ಳಿ ಹತ್ತಿರದಲ್ಲಿ 2 ಎಕರೆ ಕೃಷಿ ಭೂಮಿ ಮಾರಾಟಕ್ಕಿದೆ, 100 ತೆಂಗಿನಮರ, 1000- ಅಡಿಕೆಮರ, ಬೆಲೆ 1.5 ಕೋಟಿ 9886772838

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ವ್ಯಾಪಾರ
Business Offers
Distributors
ಬೆಂಗಳೂರಿನಾದ್ಯಂತ ರಾಗಿ ತಿಂಡಿ ಮತ್ತು ಧಾನ್ಯಗಳನ್ನು ಮಾರಾಟ ಮಾಡಲು ಎಫ್‌ಎಂಸಿಜಿ ವಿತರಕರನ್ನು ಹುಡುಕುತ್ತಿದೆ. ಸಂಪರ್ಕಿಸಿ 9606021700

ವೈಯಕ್ತಿಕ
Lost
ಕಳೆದಿದೆ
ಬೆಂಗಳೂರಿನ ಶಿವಾಜಿನಗರದಲ್ಲಿ ವಾಸವಾಗಿರುವ ಕಿರಣ್ ಕುಮಾರಿ ಎನ್ ಆದ ನಾನು ಈ ಮೂಲಕ ತಿಳಿಸುವುದೇನೆಂದರೇ ನಮ್ಮ ಮೂಲ ಶುದ್ಧ ಕ್ರಯಪತ್ರದ ಸಂಖ್ಯೆ 2642/ 2013-14, ಸೈಟ್ ನಂ. 31 ಖಾತೆ ನಂ. 82, ಕಣಿಮಿಣಿಕೆ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಇದಕ್ಕೆ ಸಂಬಂಧ ಪಟ್ಟ ಮೂಲ ಶುದ್ಧ ಕ್ರಯ ಪತ್ರಗಳು ಮನೆ ಬದಲಾವಣೆ ಮಾಡುವಾಗ ಕಳೆದಿರುತ್ತವೆ. ಸಿಕ್ಕಿದಲ್ಲಿ ಸಂಪರ್ಕಿಸಿ: 9945237966

ಭವಿಷ್ಯ
Astrology
“ಕೆಲಸ ಆದ ನಂತರ ಕಾಣಿಕೆ” ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಪ್ರವಾಸ
Travel
ಶಿವನಂದಿ ಟ್ರಾವಲ್ಸ್,(ರಿ.) ಹನುಮಂತನಗರ,ಬೆಂಗಳೂರು 17.1.2024 5ದಿನಗಳ ತಮಿಳುನಾಡು:ಮದುರೈ ತಿರುಪುರಕುಂಡ್ರಮ್ ಕನ್ಯಾಕುಮಾರಿ,ರಾಮೇಶ್ವರ ಶ್ರೀರಂಗಂ. 15.2.2024, 13ದಿನಗಳ ಗುಜರಾತ್, ಮಧ್ಯಪ್ರದೇಶ್: ಅಹಮದಾಬಾದ್ ನಿಷ್ಕಳಂಕ ಮಹದೇವ್ ದ್ವಾರಕ,ಮಾತೃಗಯ ಓಂಕಾರೇಶ್ವರ್`ಉಜ್ಜೈನಿ. 6.3.2024 12ದಿನಗಳ ಹರಿದ್ವಾರ್ ಮನಾಲಿ,ಕಟ್ರಾ ವೈಷ್ಣನೋದೇವಿ ಹರಿದ್ವಾರ್,ಅಮೃತಸರ್. 21.3.2024 11ದಿನಗಳ ನೇಪಾಳ ಮುಕ್ತಿನಾಥ್: ಬಾಬಾಬೈದ್ಯನಾಥ್ ಗೋರಕ್`ಪುರ ಸೋನಾಲಿಬಾರ್ಡರ್ ಲುಮ್`ಬಿನಿ ಪೋಕ್ರಾ`ಕಟ್ಮಂಡು ಮುಕ್ತಿನಾಥ್ ಮನೋಕಾಮನ ಚಿತ್ವಾನ್. ವಿಮಾನ/ಬಸ್ಸಿನಲ್ಲಿ. 9036056352 9481027363

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು. 18.01.2024 ಅಹೋಬಲ,ನವನರಸಿಂಹ ಮಂತ್ರಾಲಯ,ಶ್ರೀಶೈಲ ಇತ್ಯಾದಿ 8000/-. 02.02.2024 ರಾಮೇಶ್ವರ,ಕನ್ಯಾಕುಮಾರಿ ಇತ್ಯಾದಿ 8000/-. 13.02.2024 ವೈಷ್ಣೋದೇವಿ,ಅಮೃತಸರ್,ದೆಹಲಿ ಇತ್ಯಾದಿ. 14.03.2024 ಗುರುವಾಯೂರು,ಮುನ್ನಾರ್ ತ್ರಿವೇಂಡ್ರಮ್,ಪಳನಿ ಇತ್ಯಾದಿ. 9448390735 9449721678

10 ದಿನಗಳ ಗುಜರಾತ್. 8 ದಿನಗಳ ಕಾಶಿಯಾತ್ರೆ. 12 ದಿನಗಳ ಮಧ್ಯಪ್ರದೇಶ. 6 ದಿನಗಳ ದುಬೈ ಪ್ರವಾಸ. ಶ್ರೀನಂದಿ ಹಾಲಿಡೇಸ್ 9740228186 9980270467

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
JOB
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9731810277 | +91 9900428036 |
+91 9886213331 | +91 9845114560 | 080-45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಟಿ20 ಕ್ರಿಕೆಟ್ ಟೂರ್ನಿ • ದೀಪಕ್ ಚಾಹರ್, ಅಕ್ಷರ್ ಪಟೇಲ್ ಮಿಂಚು • ಅಬ್ಬರಿಸಿದ ರಿಂಕು ಸಿಂಗ್

ಚುಟುಕು ಸರಣಿ ಭಾರತದ ಕೈವಶ

ರಾಯಪುರ್ (ಪಿಟಿಐ): ದೀಪಕ್ ಚಾಹರ್ ಮತ್ತು ಸ್ಪಿನ್ನರ್ ಅಕ್ಷರ್ ಪಟೇಲ್ ಅವರ ಉತ್ತಮ ಬೌಲಿಂಗ್‌ನಿಂದಾಗಿ ಭಾರತ ತಂಡವು ಆಸ್ಟ್ರೇಲಿಯಾ ಎದುರಿನ ನಾಲ್ಕನೇ ಟಿ20 ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಶುಕ್ರವಾರ ಇಲ್ಲಿ ನಡೆದ ಹಣಾಹಣಿಯಲ್ಲಿ 20 ರನ್‌ಗಳಿಂದ ಗೆದ್ದ ಭಾರತ ತಂಡವು ಐದು ಪಂದ್ಯಗಳ ಸರಣಿಯನ್ನು 3–1ರಿಂದ ಕೈವಶ ಮಾಡಿಕೊಂಡಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಭಾರತ ತಂಡವು ರಿಂಕು ಸಿಂಗ್ ಮತ್ತು ಜಿತೇಶ್ ಶರ್ಮಾ ಅವರ ಆಟದ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 174 ರನ್ ಗಳಿಸಿತು. ಗ್ಲೆನ್ ಮ್ಯಾಕ್ಸ್‌ವೆಲ್ ಸೇರಿದಂತೆ ಪ್ರಮುಖ ಆಟಗಾರರ ಗೈರುಹಾಜರಿಯಲ್ಲಿ ಪ್ರವಾಸಿ ಬಳಗವು ಈ ಗುರಿಯನ್ನು ಬೆನ್ನಟ್ಟುವಲ್ಲಿ ವಿಫಲವಾಯಿತು. 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 154 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಸ್ಪಿನ್ನರ್ ಅಕ್ಷರ್ ಪಟೇಲ್ ಮೂರು ವಿಕೆಟ್ ಗಳಿಸಿದರು. ಸರಣಿಯಲ್ಲಿ ಇದೇ ಮೊದಲ ಪಂದ್ಯ ಆಡಿದ ದೀಪಕ್ ಚಾಹರ್ ಎರಡು ವಿಕೆಟ್ ಗಳಿಸಿದರು. ಇದರಿಂದಾಗಿ ಆಸ್ಟ್ರೇಲಿಯಾ ತಂಡದಲ್ಲಿ ದೊಡ್ಡ ಜೊತೆಯಾಟಗಳು ಹೊರಹೊಮ್ಮಲಿಲ್ಲ.

ಕಳೆದ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದ್ದ ಬೌಲಿಂಗ್ ವಿಭಾಗವು ಇಲ್ಲಿ ಗೆಲುವಿನ ಕಾಣಿಕೆ ನೀಡಿತು. ಪಂದ್ಯದ ಕೊನೆಯ ಎರಡು ಓವರ್‌ಗಳಲ್ಲಿ ಆಸ್ಟ್ರೇಲಿಯಾ ತಂಡಕ್ಕೆ ಜಯಿಸಲು 40 ರನ್‌ಗಳ ಅಗತ್ಯವಿತ್ತು. 19ನೇ ಓವರ್‌ನಲ್ಲಿ ಮಧ್ಯಮವೇಗಿ ಮುಕೇಶ್ ಕುಮಾರ್ 9 ರನ್ ಕೊಟ್ಟರು. ಕೊನೆಯ ಓವರ್‌ನಲ್ಲಿ 31 ರನ್ ಹೊಡೆಯುವ ಆಸ್ಟ್ರೇಲಿಯಾದ ಬ್ಯಾಟರ್‌ಗಳ ಪ್ರಯತ್ನಕ್ಕೆ ಆವೇಶ್ ಖಾನ್ ಅಡ್ಡಿಯಾದರು. ಈ ಓವರ್‌ನ ನಾಲ್ಕನೇ ಎಸೆತದಲ್ಲಿ ಮ್ಯಾಥ್ಯೂ ವೇಡ್ ಒಂದು ಸಿಕ್ಸರ್ ಹೊಡೆದರು.

ವಿಕೆಟ್ ಪಡೆದ ಅಕ್ಷರ್ ಪಟೇಲ್ ಅವರನ್ನು ಅಭಿನಂದಿಸಿದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್ –ಪಿಟಿಐ ಚಿತ್ರ

₹ 3.16 ಕೋಟಿ ವಿದ್ಯುತ್ ಬಿಲ್ ಬಾಕಿ

ರಾಯಪುರದ ಶಹೀದ್ ವೀರನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದ ₹ 3.16 ಕೋಟಿ ಮೊತ್ತ ವಿದ್ಯುತ್ ಬಿಲ್ ಬಾಕಿ ಇದೆ. ಆದ್ದರಿಂದ ವಿದ್ಯುತ್ ಸರಬರಾಜು ನಿಲ್ಲಿಸಲಾಗಿದೆ.

ಕ್ರೀಡಾಂಗಣದ ಒಡೆತನ ಹೊಂದಿರುವ ರಾಜ್ಯ ಸರ್ಕಾರವು ಬಿಲ್ ಬಾಕಿ ಪಾವತಿಸಿಲ್ಲ. ಆದರೆ ಪ್ರತಿ ಬಾರಿ ಇಲ್ಲಿ ಪಂದ್ಯವಿದ್ದಾಗ ರಾಜ್ಯ ವಿದ್ಯುತ್ ಸರಬರಾಜು ಕಂಪೆನಿಯಿಂದ ಛತ್ತೀಸಗಢ ರಾಜ್ಯ ಕ್ರಿಕೆಟ್ ಸಂಘವು (ಸಿಎಸ್‌ಸಿಎಸ್) ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳುತ್ತದೆ. ಇದರಿಂದಾಗಿ ಶುಕ್ರವಾರ ನಡೆದ ಪಂದ್ಯಕ್ಕೂ ಇದೇ ರೀತಿಯ ಸಂಪರ್ಕ ಪಡೆಯಲಾಗಿತ್ತು.

‘2010ರಲ್ಲಿಯೇ ಈ ಕ್ರೀಡಾಂಗಣಕ್ಕೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ. ಕ್ರೀಡಾಂಗಣ ನಿರ್ಮಾಣ ಸಮಿತಿಯ ಅನುಮತಿ ಪಡೆದಿತ್ತು. 2018ರಿಂದ ಇಲ್ಲಿಯವರಿಗೆ ಬಿಲ್ ₹3.16 ಕೋಟಿ ಬಾಕಿಯಾಗಿದೆ’ ಎಂದು ಸಿಎಸ್‌ಪಿಡಿಸಿಎಲ್ ರಾಯಪುರ ವೃತ್ತದ ಸೂಪರಿಂಟೆಂಡಿಂಗ್ ಎಂಜಿನಿಯರ್ ಅಶೋಕ್ ಖಂಡೇಲವಾಲಾ ತಿಳಿಸಿದ್ದಾರೆ. ಅಗತ್ಯವಿದ್ದಾಗ ತಾತ್ಕಾಲಿಕ ಸಂಪರ್ಕ ಪಡೆಯಲು ಸಂಘವು ₹ 10 ಲಕ್ಷ ಡಿಪಾಸಿಟ್ ನೀಡಿದೆ ಎಂದೂ ತಿಳಿಸಿದ್ದಾರೆ.

ರಿಂಕು, ಜಿತೇಶ್ ಮಿಂಚು: ಸರಣಿಯಲ್ಲಿ ತಮ್ಮ ಬೀಸಾಟದ ಮೂಲಕ ಗಮನ ಸೆಳೆದಿರುವ ರಿಂಕು ಸಿಂಗ್ ಈ ಪಂದ್ಯದಲ್ಲಿಯೂ ನಿರಾಶೆಗೊಳಿಸಲಿಲ್ಲ.

ಕೇವಲ 29 ಎಸೆತಗಳಲ್ಲಿ 46 ರನ್ ಸಿಡಿಸಿದ ಅವರು ತಂಡವು ಗೌರವಾರ್ಹ ಮೊತ್ತ ಗಳಿಸಲು ಕಾರಣರಾದರು. ಅವರು ಎರಡು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಬಾರಿಸಿದರು. ಅವರೊಂದಿಗೆ ಜಿತೇಶ್ ಶರ್ಮಾ ಕೂಡ ಮಿಂಚಿದರು. 19 ಎಸೆತಗಳಲ್ಲಿ 35 ರನ್ ಗಳಿಸಿದರು. ಅವರು ಮೂರು ಸಿಕ್ಸರ್ ಸಿಡಿಸಿದರು. ರಿಂಕು ಮತ್ತು ಋತುರಾಜ್ ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 48 ರನ್ ಸೇರಿಸಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ ರಿಂಕು ಮತ್ತು ಜಿತೇಶ್ 56 ರನ್ ಗಳಿಸಿದರು.

ಯಶಸ್ವಿ ಜೈಸ್ವಾಲ್ ಮತ್ತು ಋತುರಾಜ್ ಮೊದಲ ವಿಕೆಟ್ ಜೊತೆಯಾಟದಲ್ಲಿ 50 ರನ್ ಗಳಿಸಿ ಉತ್ತಮ ಆರಂಭ ನೀಡಿದರು.

ಆದರೆ ಯಶಸ್ವಿ ಔಟಾದ ನಂತರ ಅನುಭವಿ ಶ್ರೇಯಸ್ ಅಯ್ಯರ್ ಮತ್ತು ನಾಯಕ ಸೂರ್ಯ ಒಂದಂಕಿ ಮಾತ್ರ ಗಳಿಸಿದರು. ಇದರಿಂದಾಗಿ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಾಗಿತ್ತು. ಅದನ್ನು ರಿಂಕು ದೂರ ಮಾಡಿದರು.

ಸ್ಕೋರ್ ಕಾರ್ಡ್

ಭಾರತ 9ಕ್ಕೆ174 (20 ಓವರ್‌ಗಳಲ್ಲಿ)
ಯಶಸ್ವಿ ಸಿ ಮೆಕ್‌ಡರ್ಮಾಟ್ ಬಿ ಹಾರ್ಡಿ 37 (28ಎ, 4X6, 6X1)
ಋತುರಾಜ್ ಸಿ ದ್ವಾರ್ಶುಯಿಸ್ ಬಿ ಸಂಘಾ 32 (28ಎ, 4X3, 6X1)
ಶ್ರೇಯಸ್ ಸಿ ಕ್ರಿಸ್ ಗ್ರೀನ್ ಬಿ ಸಂಘಾ 8 (7ಎ)
ಸೂರ್ಯಕುಮಾರ್ ಸಿ ವೇಡ್ ಬಿ ದ್ವಾರ್ಶುಯಿಸ್ 1 (2ಎ)
ರಿಂಕು ಸಿಂಗ್ ಎಲ್‌ಬಿಡಬ್ಲ್ಯು ಬಿ ಬೆಹ್ರನ್‌ಡಾರ್ಫ್ 46 (29ಎ, 4X4, 6X2)
ಜಿತೇಶ್ ಸಿ ಹೆಡ್ ಬಿ ದ್ವಾರ್ಶುಯಿಸ್ 35 (19ಎ, 4X1, 6X3)
ಅಕ್ಷರ್ ಸಿ ಸಂಘಾ ಬಿ ದ್ವಾರ್ಶುಯಿಸ್ 0 (1ಎ)
ಚಾಹರ್ ಸಿ ಕ್ರಿಸ್ ಬಿ ಬೆಹ್ರನ್‌ಡಾರ್ಫ್ 9 (2ಎ)
ರವಿ ರನ್‌ಔಟ್ (ಫಿಲಿಪ್/ಹೆಡ್) 4 (3ಎ)
ಆವೇಶ್ ಔಟಾಗದೆ 1 (1ಎ)
ಇತರೆ: 10 (ಬೈ 4, ಲೆಗ್‌ಬೈ 2, ವೈಡ್ 4)
ವಿಕೆಟ್ ಪತನ: 1–50 (ಯಶಸ್ವಿ ಜೈಸ್ವಾಲ್; 5.6), 2–62 (ಶ್ರೇಯಸ್ ಅಯ್ಯರ್; 7.5), 3–63 (ಸೂರ್ಯಕುಮಾರ್ ಯಾದವ್; 8.1), 4–111 (ಋತುರಾಜ್ ಗಾಯಕವಾಡ; 13.2), 5–167 (ಜಿತೇಶ್ ಶರ್ಮಾ; 18.4), 6–168 (ರಿಂಕು ಸಿಂಗ್; 19.1), 8–169 (ದೀಪಕ್ ಚಾಹರ್; 19.3), 9–174 (ರವಿ ಬಿಷ್ಣೋಯಿ; 19.6) 9–174 (ರವಿ ಬಿಷ್ಣೋಯಿ; 19.6)
ಬೌಲಿಂಗ್: ಆ್ಯರನ್ ಹಾರ್ಡಿ 3–1–20–1, ಜೇಸನ್ ಬೆಹ್ರನ್‌ಡಾರ್ಫ್ 4–0–32–2, ಬೆನ್ ದ್ವಾರ್ಶುಯಿಸ್ 4–0–40–3, ಕ್ರಿಸ್ ಗ್ರೀನ್ 4–0–36–0, ತನ್ವೀರ್ ಸಂಘಾ 4–0–30–2, ಮ್ಯಾಥ್ಯೂ ಶಾರ್ಟ್ 1–0–10–0.

ಆಸ್ಟ್ರೇಲಿಯಾ: 7ಕ್ಕೆ154 (20 ಓವರುಗಳಲ್ಲಿ)
ಹೆಡ್ ಸಿ ಮುಕೇಶ್ ಬಿ ಪಟೇಲ್ 31 (16ಎ, 4X5, 6X1)
ಫಿಲಿಪ್ ಬಿ ಬಿಷ್ಣೋಯಿ 8 (7ಎ, 4X2)
ಮೆಕ್‌ಡರ್ಮಾಟ್ ಬಿ ಪಟೇಲ್ 19 (22ಎ, 4X1)
ಹಾರ್ಡಿ ಬಿ ಪಟೇಲ್ 8 (9ಎ, 4X1)
ಡೇವಿಡ್ ಸಿ ಜೈಸ್ವಾಲ್ ಬಿ ಚಾಹರ್ 19 (20ಎ, 6X1)
ಶಾರ್ಟ್ ಸಿ ಜೈಸ್ವಾಲ್ ಬಿ ಚಾಹರ್ 22 (19ಎ, 4X2, 6X1)
ವೇಡ್ ಔಟಾಗದೇ 36 (23ಎ, 4X2, 6X2)
ದ್ವಾರ್ಶುಯಿಸ್ ಬಿ ಆವೇಶ್ 1 (2ಎ)
ಕ್ರಿಸ್ ಗ್ರೀನ್ ಔಟಾಗದೇ 2 (3ಎ)
ಇತರೆ: 8 (ಲೆಗ್ ಬೈ 2, ನೋಬಾಲ್ 1, ವೈಡ್ 5)
ವಿಕೆಟ್ ಪತನ: 1–40 (ಜೋಶ್ ಫಿಲಿಪ್, 3.1), 2–44 (ಟ್ರಾವಿಸ್ ಹೆಡ್, 4.4), 3–52 (ಆರನ್ ಹಾರ್ಡಿ, 6.2), 4–87 (ಬೆನ್ ಮೆಕ್‌ಡರ್ಮಾಟ್, 11.2), 5–107 (ಟಿಮ್ ಡೇವಿಡ್, 14.4), 6–126 (ಮ್ಯಾಥ್ಯೂ ಶಾರ್ಟ್, 16.4), 7–133 (ಬೆನ್ ದ್ವಾರ್ಶುಯಿಸ್, 17.3).
ಬೌಲಿಂಗ್: ದೀಪಕ್ ಚಾಹರ್ 4–0–44–2, ಮುಕೇಶ್ ಕುಮಾರ್ 4–0–42–0, ರವಿ ಬಿಷ್ಣೋಯಿ 4–0–17–1, ಅಕ್ಷರ್ ಪಟೇಲ್ 4–0–16–3, ಆವೇಶ್ ಖಾನ್ 4–0–33–1.
ಪಂದ್ಯದ ಆಟಗಾರ: ಅಕ್ಷರ್ ಪಟೇಲ್

ಫಲಿತಾಂಶ: ಭಾರತಕ್ಕೆ 20 ರನ್ ಜಯ

ದೇವದತ್ತ ಶತಕ: ಕರ್ನಾಟಕಕ್ಕೆ 5ನೇ ಜಯ

ನಿಕಿನ್ ಚೆಂದದ ಬ್ಯಾಟಿಂಗ್: ಚಂಡೀಗಡದ ಅರ್ಸಲನ್ ಶತಕ

ಆನಂದ್, ಗುಜರಾತ್: ಮತ್ತೆ ಮಿಂಚಿದ ದೇವದತ್ತ ಪಡಿಕ್ಕಲ್ ಶತಕದ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಅಜೇಯ ಓಟ ಮುಂದುವರಿಸಿತು.

ಎಡಿಎಸ್‌ಎ ರೈಲ್ವೆ ಕ್ರಿಕೆಟ್ ಮೈದಾನದಲ್ಲಿ ಶುಕ್ರವಾರ ನಡೆದ ಸಿ ಗುಂಪಿನ ಪಂದ್ಯದಲ್ಲಿ ಕರ್ನಾಟಕವು 22 ರನ್‌ಗಳಿಂದ ಚಂಡೀಗಡದ ವಿರುದ್ಧ ಗೆದ್ದಿತು. ಇದರೊಂದಿಗೆ ಸತತ ಐದನೇ ಜಯ ದಾಖಲಿಸಿತು. ಒಟ್ಟು 20 ಅಂಕಗಳು ಈ ಕರ್ನಾಟಕದ ಖಾತೆಯಲ್ಲಿವೆ. ಆದರೆ ಇಷ್ಟೇ ಅಂಕಗಳಿರುವ ಹರಿಯಾಣ ತಂಡವು ಉತ್ತಮ ನೆಟ್ ರನ್ ರೇಟ್ ನಿಂದಾಗಿ ಮೊದಲ ಸ್ಥಾನದಲ್ಲಿದೆ.

ಟಾಸ್ ಗೆದ್ದ ಕರ್ನಾಟಕ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಸಮರ್ಥ್ (5 ರನ್) ಮತ್ತು ಮಯಂಕ್ ಅಗರವಾಲ್ (19 ರನ್) ಅವರ ವೈಫಲ್ಯ ಮುಂದುವರಿಯಿತು. ದೇವದತ್ತ (114; 103ಎ, 4X9, 6X6) ಮತ್ತು ನಿಕಿನ್ ಜೋಸ್ (96; 114ಎ, 4X6, 6X1) ಮೂರನೇ ವಿಕೆಟ್ ಜೊತೆಯಾಟದಲ್ಲಿ 171 ರನ್ ಸೇರಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 299 ರನ್ ಗಳಿಸಿತು. ಅನುಭವಿ ಆಟಗಾರ ಮನೀಷ್ ಪಾಂಡೆ ಅಜೇಯ ಅರ್ಧಶತಕ (ಔಟಾಗದೆ 53; 48ಎ, 6X3) ಹೊಡೆದರು.

ಗುರಿ ಬೆನ್ನಟ್ಟಿದ ಚಂಡೀಗಡ ತಂಡಕ್ಕೆ ಉತ್ತಮ ಆರಂಭ ನೀಡುವಲ್ಲಿ ಅರ್ಸಲನ್ ಖಾನ್ (102; 103ಎ) ಮತ್ತು ನಾಯಕ ಮನನ್ ವೊಹ್ರಾ ಯಶಸ್ವಿಯಾದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 108 ರನ್ ಸೇರಿಸಿದರು. ಆದರೆ, ಕೌಶಿಕ್ (44ಕ್ಕೆ 2) ಮತ್ತು ಉಳಿದ ಬೌಲರ್‌ಗಳ ಸಂಘಟಿತ ಹೋರಾಟದಿಂದಾಗಿ ಚಂಡೀಗಡ ತಂಡಕ್ಕೆ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 277 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ದೇವದತ್ತ ಎರಡನೇ ಶತಕ: ಎಡಗೈ ಬ್ಯಾಟರ್ ದೇವದತ್ತ ಅಮೋಘ ಲಯವನ್ನು ಮುಂದುವರಿಸಿದರು. ಟೂರ್ನಿಯಲ್ಲಿ ಅವರಿಗೆ ಇದು ಎರಡನೇ ಶತಕವಾಗಿದೆ. ಒಟ್ಟು ಐದು ಪಂದ್ಯಗಳಿಂದ 465 ರನ್ ಪೇರಿಸಿದ್ದಾರೆ. ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ನಿಕಿನ್ ಜೋಸ್ ಕೇವಲ ನಾಲ್ಕು ರನ್‌ಗಳ ಅಂತರದಲ್ಲಿ ಶತಕ ಕೈತಪ್ಪಿಸಿಕೊಂಡರು.

ದೇವದತ್ತ ಪಡಿಕ್ಕಲ್

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 6 ವಿಕೆಟ್‌ಗೆ 299 (ಪಡಿಕ್ಕಲ್ 114, ನಿಕಿನ್ ಜೋಸ್ 96, ಮನೀಷ್ ಪಾಂಡೆ ಔಟಾಗದೆ 53, ಸಂದೀಪ್ ಶರ್ಮಾ 51ಕ್ಕೆ2, ಮನದೀಪ್ ಸಿಂಗ್ 31ಕ್ಕೆ2) **ಚಂಡೀಗಡ:** 50 ಓವರ್‌ಗಳಲ್ಲಿ 7 ವಿಕೆಟ್‌ಗೆ 277 (ಅರ್ಸಲನ್ ಖಾನ್ 102, ಮನನ್ ವೊಹ್ರಾ 34, ಅಂಕಿತ್ ಕೌಶಿಕ್ 51, ಭಾಗಮೆಂದರ್ ಲಾಥರ್ 32, ಕರಣ್ ಕೈಲಾ 20, ವಿ. ಕೌಶಿಕ್ 44ಕ್ಕೆ2) **ಫಲಿತಾಂಶ:** ಕರ್ನಾಟಕ ತಂಡಕ್ಕೆ 22 ರನ್‌ಗಳ ಜಯ.

ಮಗನ ಆಟ ವೀಕ್ಷಿಸಿದ ರಾಹುಲ್ ದ್ರಾವಿಡ್ ದಂಪತಿ

ಧೀರಜ್ ದಾಳಿ: ಕರ್ನಾಟಕದ ಬಿಗಿ ಹಿಡಿತ

ಪ್ರಜಾವಾಣಿ ವಾರ್ತೆ

ಮೈಸೂರು: ಮಧ್ಯಮ ವೇಗಿ ಇಶಾನ್ ಎಸ್. (49ಕ್ಕೆ3) ಹಾಗೂ ಆಫ್ ಸ್ಪಿನ್ನರ್ ಧೀರಜ್ ಗೌಡ (62ಕ್ಕೆ 3) ಅವರ ಉತ್ತಮ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡ ಶುಕ್ರವಾರ ಆರಂಭವಾದ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಟೂರ್ನಿಯ ಪಂದ್ಯದಲ್ಲಿ ಉತ್ತರಾಖಂಡದ ವಿರುದ್ಧ ಬಿಗಿ ಹಿಡಿತ ಸಾಧಿಸಿದೆ.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಉತ್ತರಾಖಂಡ ತಂಡಕ್ಕೆ ನಿಗದಿತ 90 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 232 ರನ್ ಗಳಿಸಲಷ್ಟೇ ಸಾಧ್ಯವಾಯಿತು.

13 ರನ್‌ಗಳಿಗೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡು ಆರಂಭಿಕ ಕುಸಿತ ಕಂಡ ಉತ್ತರಾಖಂಡ ತಂಡಕ್ಕೆ ನಾಯಕ ಆರವ್ ಮಹಾಜನ್ (127, 18x4) ಶತಕ ಬಾರಿಸಿ ಆಸರೆಯಾದರು. 82.7 ಓವರ್‌ಗಳವರೆಗೂ ಕ್ರೀಸಿನಲ್ಲಿ ಹೋರಾಟ ನಡೆಸಿದರು. ಅವರಿಗೆ ವಿಕೆಟ್ ಕೀಪರ್ ಸಂಸ್ಕಾರ್ ರಾವತ್ (43) ಕೈಜೋಡಿಸಿದರು. ಈ ಜೋಡಿಯ 94 ರನ್‌ಗಳ ಜೊತೆಯಾಟದಿಂದ ತಂಡ ಚೇತರಿಸಿಕೊಂಡಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರಾಖಂಡ 90 ವಿಕೆಟ್‌ಗೆ 9 ವಿಕೆಟ್‌ಗೆ 232 (ಆರವ್ ಮಹಾಜನ್ 127, ಸಂಸ್ಕಾರ್ ರಾವತ್ 43, ಯೋಗೇಶ್ 29, ಇಶಾನ್ ಎಸ್. 49ಕ್ಕೆ3, ಧೀರಜ್ ಗೌಡ 62ಕ್ಕೆ3, ಸಮರ್ಥ್ ಎನ್. 17ಕ್ಕೆ2).

ದ್ರಾವಿಡ್ ಆಕರ್ಷಣೆ: ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು ಪಂದ್ಯ ವೀಕ್ಷಿಸಲು ಬಂದಿದ್ದವರ ಆಕರ್ಷಣೆಯಾಗಿದ್ದರು. ತಮ್ಮ ಪುತ್ರ ಸಮಿತ್ ದ್ರಾವಿಡ್ ಆಟ ನೋಡಲು ಅವರು ಪತ್ನಿ ವಿಜೇತಾ ಅವರೊಂದಿಗೆ ಬಂದಿದ್ದರು. ಮೈದಾನದ ಕಲ್ಲುಕಟ್ಟೆಯ ಮೇಲೆ ಕುಳಿತು ಅವರು ಪಂದ್ಯವನ್ನು ವೀಕ್ಷಿಸಿದರು.. 5 ಓವರ್ ಬೌಲಿಂಗ್ ಮಾಡಿದ ಸಮಿತ್ 11 ರನ್‌ಗಳನ್ನಷ್ಟೆ (2 ಮೇಡನ್) ನೀಡಿದರು.

ಪತ್ರಕರ್ತರೊಂದಿಗೆ ಹೆಚ್ಚು ಮಾತನಾಡಲು ದ್ರಾವಿಡ್ ಬಯಸಲಿಲ್ಲ. ‘ಎಲ್ಲ ಅಪ್ಪಂದಿರಂತೆ ನಾನೂ ಮಗನ ಆಟ ನೋಡಲು ಬಂದಿದ್ದೇನೆ. ಇದರಲ್ಲಿ ವಿಶೇಷವೇನಿಲ್ಲ’ ಎಂದಷ್ಟೇ ಪ್ರತಿಕ್ರಿಯಿಸಿದರು.

ಕರ್ನಾಟಕ ಹಾಗೂ ಉತ್ತರಾಖಂಡ ತಂಡಗಳ ನಡುವಿನ ಪಂದ್ಯವನ್ನು ಭಾರತೀಯ ಕ್ರಿಕೆಟ್ ಕೋಚ್ ರಾಹುಲ್ ದ್ರಾವಿಡ್ ಹಾಗೂ ಪತ್ನಿ ವಿಜೇತಾ ಪೆಂಡಾರ್ಕರ್ ವೀಕ್ಷಿಸಿದರು. ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಐಪಿಎಲ್: ಹೆಡ್‌ಗೆ ₹ 2 ಕೋಟಿ, ರಚಿನ್‌ಗೆ ₹ 50 ಲಕ್ಷ ಮೂಲಬೆಲೆ

ನವದೆಹಲಿ (ಪಿಟಿಐ): ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್ ಪಂದ್ಯದ ಹೀರೊ ಟ್ರಾವಿಸ್ ಹೆಡ್ ಮತ್ತು ಮಿಚೆಲ್ ಸ್ಟಾರ್ಕ್ ಅವರಿಗೆ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಹರಾಜು ಪ್ರಕ್ರಿಯೆಯಲ್ಲಿ ತಲಾ ₹2 ಕೋಟಿ ನಿಗದಿಪಡಿಸಲಾಗಿದೆ. ಭಾರತದ ಬೌಲರ್ ಹರ್ಷಲ್ ಪಟೇಲ್ ಅವರಿಗೂ ಇದೇ ಮೌಲ್ಯ ಇಡಲಾಗಿದೆ.

ದುಬೈನಲ್ಲಿ ಇದೇ 19ರಂದು ಆಟಗಾರರ ಹರಾಜು ಪ್ರಕ್ರಿಯೆ ನಡೆಯಲಿದೆ. ನ್ಯೂಜಿಲೆಂಡ್ ತಂಡದಲ್ಲಿ ಆಡುವ ಬೆಂಗಳೂರು ಮೂಲದ ಆಲ್‌ರೌಂಡರ್ ರಚಿನ್ ರವೀಂದ್ರ ಅವರಿಗೆ ₹ 50 ಲಕ್ಷ ಮೂಲಬೆಲೆ ನಿಗದಿಯಾಗಿದೆ. 1166 ಆಟಗಾರರು ಬಿಡ್‌ಗೆ ನೋಂದಣಿ ಮಾಡಿಕೊಂಡಿದ್ದಾರೆ. ಈ ಪಟ್ಟಿಯನ್ನು ಫ್ರ್ಯಾಂಚೈಸಿಗಳಿಗೆ ಕಳುಹಿಸಲಾಗಿದೆ ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೋ ವರದಿ ಮಾಡಿದೆ. ಒಟ್ಟು 77 ಆಟಗಾರರ ಆಯ್ಕೆಗೆ ಅವಕಾಶ ಇದೆ. ಅದರಲ್ಲಿ 30 ವಿದೇಶಿ ಆಟಗಾರರನ್ನು ಖರೀದಿಸಬೇಕು. ಹತ್ತು ತಂಡಗಳು ಸೇರಿ ₹ 262. 95 ಕೋಟಿ ವೆಚ್ಚ ಮಾಡಲು ಅವಕಾಶವಿದೆ.

ಆರ್‌ಸಿಬಿಯಿಂದ ಬಿಡುಗಡೆ ಯಾಗಿರುವ ಶ್ರೀಲಂಕಾದ ವಣಿಂದು ಹಸರಂಗಾ ಅವರಿಗೆ ₹ 1.5 ಕೋಟಿ ಮೂಲಬೆಲೆ ನಿಗದಿಪಡಿಸಲಾಗಿದೆ.



ಟ್ರಾವಿಸ್ ಹೆಡ್

ರಚಿನ್ ರವೀಂದ್ರ

ಟೆನಿಸ್: ಸೆಮಿಗೆ ರಾಮಕುಮಾರ್

ಕಲಬುರಗಿ: ಭರ್ಜರಿ ಏಳು ಏಸ್‌ಗಳನ್ನು ಸಿಡಿಸಿದ ಭಾರತದ ರಾಮಕುಮಾರ್ ರಾಮನಾಥನ್ ಅವರು ಕಲಬುರಗಿ ಓಪನ್ ಐಟಿಎಫ್ ಪುರುಷರ ಟೆನಿಸ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದರು.

ಇಲ್ಲಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಅವರಿಗೆ 7–5, 6–0ಯಿಂದ ಸ್ವದೇಶದ ಮನೀಷ್ ಸುರೇಶ್ ಕುಮಾರ್ ವಿರುದ್ಧ ಗೆಲುವು ಒಲಿಯಿತು.

ಸೆಮಿಫೈನಲ್‌ಗೆ ಕಾಲಿಟ್ಟಿರುವ ರಾಮನಾಥನ್ ಅವರಿಗೆ ಶನಿವಾರ ಜಪಾನ್‌ನ ರಿಯೊತಾರೊ ತಗುಚಿ ಸವಾಲು ಎದುರಾಗಿದೆ. ಎಂಟರಘಟ್ಟದ ಮತ್ತೊಂದು ಸೆಣಸಾಟದಲ್ಲಿ ತಗುಚಿ 6–3, 6–2ರಿಂದ ಭಾರತದ ಆರ್ಯನ್ ಶಾ ಅವರನ್ನು ಪರಾಭವಗೊಳಿಸಿದರು.

ಇತರ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಭಾರತದ ರಿಷಭ್ ಅಗರವಾಲ್ 0–6, 4–6ರಿಂದ ಜಪಾನ್‌ನ ರೂಕಿ ಮತ್ಸುದಾ ಎದುರು ಎಡವಿದರೆ, ಆಸ್ಟ್ರಿಯಾದ ಡೇವಿಡ್ ಪಿಚ್ಲರ್ 6–2, 6–0ಯಿಂದ ಜಪಾನ್‌ನ ಸಿಯೆಟಾ ವಾಟನಬೆ ಎದುರು ಜಯ ಗಳಿಸಿದರು.

‘ಹರಭಜನ್ ಸಿಂಗ್ ಭಾವುಕರಾಗಿದ್ದರು..’

ಬೆಂಗಳೂರು: ‘ತಮ್ಮ ಜೀವನಕಥೆ ಆಧರಿಸಿದ ‘800’ ಚಿತ್ರವನ್ನು ನೋಡಿದ ನಂತರ ಭಾರತದ ಬೌಲರ್ ಹರಭಜನ್ ಸಿಂಗ್ ಅವರು ಭಾವುಕರಾಗಿದ್ದರು. ಅವರೂ ನನ್ನಂತೆ ‘ಚಕ್’ (ಚೆಂಡನ್ನು ಎಸೆದ) ಮಾಡಿದ ಆರೋಪಕ್ಕೆ ಒಳಗಾಗಿದ್ದರು. ಅವರೂ ಕಷ್ಟದ ದಿನಗಳನ್ನು ಎದುರಿಸಿದ್ದರು’ ಎಂದು ಶ್ರೀಲಂಕಾದ ಬೌಲರ್ ಮುತ್ತಯ್ಯ ಮುರಳೀಧರನ್ ಹೇಳಿದರು.

ಜಿಯೊ ಸಿನಿಮಾದಲ್ಲಿ ಶನಿವಾರ ಪ್ರಸಾರಗೊಳ್ಳಲಿರುವ ತಮ್ಮ ಚಿತ್ರಕ್ಕೆ ಪೂರ್ವಭಾವಿಯಾಗಿ ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮುಂಬೈನಲ್ಲಿ ನಡೆದ ಪ್ರದರ್ಶನದಲ್ಲಿ ಹರಭಜನ್, ಸೆಹ್ವಾಗ್ ಮತ್ತಿತರ ಆಟಗಾರರನ್ನು ಆಹ್ವಾನಿಸಿದ್ದೆ. ಶ್ರೀಲಂಕಾದಲ್ಲೂ ಮೊದಲ ಪ್ರದರ್ಶನಕ್ಕೆ (ಅಕ್ಟೋಬರ್ 6) ನನ್ನ ಜೊತೆ ಅರ್ಜುನ ರಣತುಂಗ, ಸನತ್ ಜಯಸೂರ್ಯ ಸೇರಿದಂತೆ ಹಲವರು ಬಂದಿದ್ದರು’ ಎಂದರು.

‘ನನ್ನ ಬೌಲಿಂಗ್ ಶೈಲಿ ಅಸಾಂಪ್ರದಾಯಿಕವಾದುದು. ಅದನ್ನೇ ಪರಿಪೂರ್ಣವಾಗಿ ಅನುಕರಿಸುವುದಕ್ಕಿಂತ ನಾನು ಬಾಲ್ಯದಲ್ಲಿ ಪಟ್ಟ ಬವಣೆಗಳು, ಕ್ರೀಡಾಂಗಣದಲ್ಲಿ ಮತ್ತು ಆಚೆ ಎದುರಿಸಿದ ಕಷ್ಟ, ಸವಾಲುಗಳನ್ನು ಬಿಂಬಿಸುವುದು ಮುಖ್ಯ ಎಂದು ನಟ ಮಧುರ್‌ಗೆ ಹೇಳಿದ್ದೆ’ ಎಂದು ಟೆಸ್ಟ್‌ಗಳಲ್ಲಿ 800 ವಿಕೆಟ್ ಪಡೆದಿರುವ ಆಫ್ ಸ್ಪಿನ್ ದಿಗ್ಗಜ ಹೇಳಿದರು.

ಮುತ್ತಯ್ಯ ಮುರಳೀಧರನ್ (ಮಧ್ಯ) ಅವರ ಆತ್ಮಕಥೆ ಆಧರಿಸಿದ '800' ಸಿನಿಮಾದ ಒಟಿಟಿ ಪ್ರಸಾರ ಮುಂಚಿನ ಪತ್ರಿಕಾಗೋಷ್ಠಿಯಲ್ಲಿ ನಟ ಮಧುರ್ ಮಿತ್ತಲ್ ಮತ್ತು ನಿರ್ದೇಶಕ ಎಂ.ಎಸ್. ಶ್ರೀಪತಿ ಇದ್ದರು.

ಟ್ರೋಫಿ ಮೇಲೆ ಕಾಲು: ನಡೆ ಸಮರ್ಥಿಸಿಕೊಂಡ ಮಾರ್ಷ್

ಮೆಲ್ಬರ್ನ್ (ಪಿಟಿಐ): ವಿಶ್ವಕಪ್ ಟ್ರೋಫಿ ಮೇಲೆ ಕಾಲುಚಾಚಿ ಕುಳಿತಿದ್ದ ನಡೆಯನ್ನು ಆಸ್ಟ್ರೇಲಿಯಾದ ಆಲ್‌ರೌಂಡರ್ ಮಿಚೆಲ್ ಮಾರ್ಷ್ ಶುಕ್ರವಾರ ಸಮರ್ಥಿಸಿಕೊಂಡಿದ್ದು, ಇದನ್ನು ಪುನರಾವರ್ತಿಸಲು ಹಿಂಜರಿಯುವುದಿಲ್ಲ ಎಂದೂ ಹೇಳಿದ್ದಾರೆ.

ಮಾರ್ಷ್ ತಮ್ಮ ಈ ನಡೆಗಾಗಿ ಭಾರತದ ಕ್ರಿಕೆಟ್‌ಪ್ರಿಯರಿಂದ ಸಾಮಾಜಿಕ ಮಾಧ್ಯಮದಲ್ಲಿ ಟೀಕಾಪ್ರಹಾರ ಎದುರಿಸಿದ್ದರು. ತಮ್ಮ ಈ ವರ್ತನೆ ಅಗೌರವವೇನೂ ಅಲ್ಲ ಎಂದು ಹೇಳಿದ್ದಾರೆ.

ನ. 19ರಂದು ಫೈನಲ್‌ನಲ್ಲಿ ಭಾರತ ತಂಡವನ್ನು ಸೋಲಿಸಿದ ಮರುದಿನ ಮಾರ್ಷ್ ಟ್ರೋಫಿ ಮೇಲೆ ಕಾಲುಚಾಚಿ ಕುಳಿತ ಚಿತ್ರವನ್ನು ವಿಶ್ವಕಪ್ ಗೆದ್ದ ತಂಡದ ನಾಯಕ ಪ್ಯಾಟ್ ಕಮಿನ್ಸ್ ಇನ್‌ಸ್ಟಾದಲ್ಲಿ ಹಂಚಿಕೊಂಡಿದ್ದರು. ಇದರ ವಿರುದ್ಧ ಭಾರತದ ಹಲವಾರು ಕ್ರಿಕೆಟ್ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿ ಜಾಲತಾಣಗಳಲ್ಲಿ ತರಾಟೆಗೆ ತೆಗೆದುಕೊಂಡಿದ್ದರು.

‘ಆ ಫೋಟೊ ವಿಶ್ವಕಪ್‌ಗೆ ಅಗೌರವ ತೋರಿಸುವ ರೀತಿಯಲ್ಲೇನೂ ಇಲ್ಲ’ ಎಂದು ಮಾರ್ಷ್ ಆಸ್ಟ್ರೇಲಿಯಾದ ‘ಸೆನ್ ರೇಡಿಯೊ’ಗೆ ತಿಳಿಸಿದ್ದಾರೆ.

‘ಅದರ ಬಗ್ಗೆ ತುಂಬಾ ಯೋಚಿಸಿಲ್ಲ. ಹಲವರು ನನಗೆ ಅದರ ವಿಷಯ ಹೇಳಿದ್ದರೂ, ನಾನು ಸಾಮಾಜಿಕ ಮಾಧ್ಯಮದಲ್ಲಿ ನೋಡಿಲ್ಲ. ಅಂಥದ್ದೇನೂ ಆ ಚಿತ್ರದಲ್ಲಿಲ್ಲ’ ಎಂದು ತಮ್ಮ ವರ್ತನೆ ಸಮರ್ಥಿಸಿಕೊಂಡರು.

ಬ್ಯಾಡ್ಮಿಂಟನ್: ಪ್ರಿಯಾಂಶು ಸೆಮಿಗೆ

ಲಖನೌ (ಪಿಟಿಐ): ಭಾರತದ ಯುವ ಆಟಗಾರ ಪ್ರಿಯಾಂಶು ರಾಜಾವತ್, ಸೈಯ್ಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಕ್ರವಾರ ಇಂಡೊನೇಷ್ಯಾದ ಅಲ್ವಿ ಫರ್ಹಾನ್ ಅವರನ್ನು ಸೋಲಿಸಿ ಪುರುಷರ ಸಿಂಗಲ್ಸ್ ಸೆಮಿಫೈನಲ್ ತಲುಪಿದರು.

ಮಧ್ಯಪ್ರದೇಶದ 21 ವರ್ಷದ ಆಟಗಾರ ಪ್ರಿಯಾಂಶು ಕ್ವಾರ್ಟರ್‌ಫೈನಲ್‌ನಲ್ಲಿ 21–15, 21–16 ರಿಂದ ಫರ್ಹಾನ್ ಮೇಲೆ ಗೆಲುವನ್ನು ದಾಖಲಿಸಿದರು. ಗೆಲುವಿಗೆ ಅವರು 49 ನಿಮಿಷ ತೆಗೆದುಕೊಂಡರು.

ಬಿಡಬ್ಲ್ಯುಎಫ್ ವಿಶ್ವ ಟೂರ್ ಸೂಪರ್ 300 ಮಟ್ಟದ ಈ ಟೂರ್ನಿ ಯಲ್ಲಿ ಪ್ರಿಯಾಂಶು ತಮ್ಮ ಮುಂದಿನ ಪಂದ್ಯದಲ್ಲಿ ಚೀನಾ ತೈಪೆಯ ಚೀ ಯು ಜೆನ್ ಅವರನ್ನು ಎದುರಿಸಲಿದ್ದಾರೆ.

‘ಶ್ರೀಮಂತ ದೇಶಗಳು ಪರಿಸರಕ್ಕೆ ಇಂಗಾಲ ಸೇರ್ಪಡೆ ತಗ್ಗಿಸಲಿ’

ಒಂದನೇ ಪುಟದಿಂದ

ಹವಾಮಾನ ಬದಲಾವಣೆ ಪರಿಣಾಮ ತಗ್ಗಿಸುವುದಕ್ಕಾಗಿ ಸ್ಥಾಪಿಸಿರುವ ಎರಡು ನಿಧಿಗಳಿಗೆ (‘ಗ್ರೀನ್ ಕ್ಲೈಮೇಟ್ ಫಂಡ್’ ಹಾಗೂ ಅಡಾಪ್ಟೇಷನ್ ಫಂಡ್) ಹಣದ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಈ ನಿಧಿಗಳಲ್ಲಿನ ಹಣ ಖರ್ಚಾದಂತೆ ತಕ್ಷಣವೇ ಮತ್ತೆ ಭರ್ತಿ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದರು.

ಚಾಲನೆ: ಪರಿಸರ ಸಂರಕ್ಷಣೆಗೆ ಪೂರಕವಾದ ಕಾರ್ಯಕ್ರಮಗಳಲ್ಲಿ ಜನರು ಹಾಗೂ ಸಂಘ–ಸಂಸ್ಥೆಗಳ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಉದ್ದೇಶದ ‘ಗ್ರೀನ್ ಕ್ರೆಡಿಟ್’ ಉಪಕ್ರಮಕ್ಕೆ ಮೋದಿ ಇದೇ ಸಂದರ್ಭ ಚಾಲನೆ ನೀಡಿದರು.

ಈಗ ಚಾಲ್ತಿಯಲ್ಲಿರುವ ‘ಇಂಗಾಲದ ಆದಾಯ’ (ಕಾರ್ಬನ್ ಕ್ರೆಡಿಟ್) ಕಾರ್ಯಕ್ರಮವು ಪರಿಸರ ಸಂರಕ್ಷಣೆಗಿಂತ ಹಣ ಗಳಿಕೆಗೆ ಹೆಚ್ಚು ಒತ್ತು ನೀಡುತ್ತದೆ. ‘ಗ್ರೀನ್ ಕ್ರೆಡಿಟ್’ ಉಪಕ್ರಮದಲ್ಲಿ ಜನರ ಪಾಲ್ಗೊಳ್ಳುವಿಕೆಗೆ ಒತ್ತು ಇರುವ ಕಾರಣ ಇದು ಭೂಗ್ರಹ ಸ್ನೇಹಿ ಕಾರ್ಯಕ್ರಮವಾಗಿದೆ ಎಂದರು.

> **ಕಳೆದ ಶತಮಾನದಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸಲು ಈಗ ಹೆಚ್ಚು ಸಮಯ ಇಲ್ಲ. ಹೀಗಾಗಿ ಪರಿಸರ ಸಂರಕ್ಷಣೆಗೆ ಎಲ್ಲರೂ ಕೈಜೋಡಿಸುವುದು ಇಂದಿನ ತುರ್ತು**
> **ನರೇಂದ್ರ ಮೋದಿ**
> ಪ್ರಧಾನಿ

ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯಲ್ಲಿ ಸಮತೋಲನ ಕಾಯ್ದುಕೊಳ್ಳುವ ವಿಷಯದಲ್ಲಿ ಭಾರತ ಉತ್ತಮ ಸಾಧನೆ ಮಾಡಿದ್ದು, ಆ ಮೂಲಕ ದೊಡ್ಡ ನಿದರ್ಶನವೊಂದನ್ನು ಜಗತ್ತಿನ ಮುಂದಿಟ್ಟಿದೆ ಎಂದು ಹೇಳಿದರು.

ಹವಾಮಾನ ಬದಲಾವಣೆ ಪರಿಣಾಮಗಳನ್ನು ತಡೆಯುವುದಕ್ಕೆ ನಿಗದಿಪಡಿಸಿರುವ ಗುರಿ ಸಾಧಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವ ಕೆಲವೇ ದೇಶಗಳ ಪೈಕಿ ಭಾರತವೂ ಸೇರಿದೆ ಎಂದರು.

‘ಹವಾಮಾನ ಬದಲಾವಣೆ ಸವಾಲು’

ನವದೆಹಲಿ(ಪಿಟಿಐ): ಹವಾಮಾನ ಬದಲಾವಣೆ ಎಂಬುದು ಎಲ್ಲ ದೇಶಗಳು ಎದುರಿಸಬೇಕಾದ ಸವಾಲು. ಅದಕ್ಕೆ ಅನುಗುಣವಾದ ಪ್ರತಿಕ್ರಿಯೆ ಜಾಗತಿಕ ಮಟ್ಟದಲ್ಲಿಯೇ ವ್ಯಕ್ತವಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ಹವಾಮಾನ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ದುಬೈಗೆ ಭೇಟಿ ನೀಡಿರುವ ಅವರು, ಯುಎಇ ಮೂಲದ ‘ಅಲ್–ಇತಿಹಾದ್’ ಪತ್ರಿಕೆಗೆ ಸಂದರ್ಶನ ನೀಡಿರುವ ಅವರು, ಹವಾಮಾನ ಬದಲಾವಣೆ ಒಡ್ಡಿರುವ ಸವಾಲುಗಳು, ಭಾರತ ಮತ್ತು ಯುಎಇ ದ್ವಿಪಕ್ಷೀಯ ಸಂಬಂಧ ಸೇರಿದಂತೆ ಹಲವು ವಿಷಯಗಳ ಕುರಿತು ಮಾತನಾಡಿದ್ದಾರೆ.

ಹವಾಮಾನ ಬದಲಾವಣೆಯಿಂದಾಗಿ ಉದ್ಭವಿಸಿರುವ ಸಮಸ್ಯೆಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಪಾಲು ಕಡಿಮೆ. ಆದಾಗ್ಯೂ, ಈ ದೇಶಗಳು ಈ ಜಾಗತಿಕ ಸಂಕಷ್ಟದ ಪರಿಹಾರದ ಭಾಗವಾಗಲು ಬಯಸುತ್ತವೆ ಎಂಬುದನ್ನು ಶ್ರೀಮಂತ ರಾಷ್ಟ್ರಗಳು ಅರಿಯಬೇಕು ಎಂದು ಮೋದಿ ಪ್ರತಿಪಾದಿಸಿದರು.

ಹವಾಮಾನ ಬದಲಾವಣೆ ಪರಿಣಾಮಗಳನ್ನು ತಡೆಯುವ ಕಾರ್ಯಕ್ರಮಕ್ಕೆ ಅಂತರರಾಷ್ಟ್ರೀಯ ಸಹಕಾರ ಖಾತ್ರಿಪಡಿಸುವ ಪ್ರಯತ್ನಗಳಿಗೆ ದುಬೈನಲ್ಲಿ ನಡೆಯುತ್ತಿರುವ ‘ಸಿಒಪಿ28’ ಹವಾಮಾನ ಶೃಂಗಸಭೆಯು ಉತ್ತೇಜನ ನೀಡುತ್ತದೆ ಹಾಗೂ ಪ್ಯಾರಿಸ್ ಒಪ್ಪಂದ ಹಾಗೂ ಯುಎನ್‌ಎಫ್‌ಸಿಸಿಸಿ ಗುರಿಗಳ ಸಾಧನೆಗೆ ಮೆಟ್ಟಿಲಾಗುತ್ತದೆ ಎಂಬ ವಿಶ್ವಾಸವನ್ನು ಮೋದಿ ವ್ಯಕ್ತಪಡಿಸಿದರು.

ಬೈಡನ್, ಷಿ ಗೈರು: ಅಮೆರಿಕ ಅಧ್ಯಕ್ಷ ಜೋ ಬೈಡನ್, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಶೃಂಗಸಭೆಗೆ ಗೈರಾಗಿದ್ದಾರೆ. ಸೌದಿ ಅರೇಬಿಯಾ ರಾಜ ಮೊಹಮ್ಮದ್ ಬಿನ್ ಸಲ್ಮಾನ್, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್, ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಫೋಸಾ, ಈಜಿಪ್ಟ್‌ನ ಅಬ್ದೆಲ್ ಫತ್ತಾ ಎಲ್–ಸಿಸಿ, ಟರ್ಕಿಯ ರಿಸೆಪ್ ತಯ್ಯಿಪ್ ಎರ್ಡೋಗನ್ ಪಾಲ್ಗೊಂಡಿದ್ದಾರೆ.

ಶೃಂಗಸಭೆಯ ಉಳಿದ ದಿನಗಳಲ್ಲಿ ನಡೆಯುವ ಗೋಷ್ಠಿಗಳನ್ನು ಉದ್ದೇಶಿಸಿ ವಿವಿಧ ದೇಶಗಳ 130ಕ್ಕೂ ಅಧಿಕ ನಾಯಕರು ಮಾತನಾಡುವರು.

ರಾಜೀನಾಮೆ: ‘ಸಿಒಪಿ28’ ಅಧ್ಯಕ್ಷ ಸ್ಥಾನದಲ್ಲಿರುವ ಯುಎಇ ತೈಲ, ಅನಿಲ ವ್ಯಾಪಾರಕ್ಕಾಗಿ ಹವಾಮಾನ ಶೃಂಗಸಭೆಯನ್ನು ಬಳಸಿಕೊಂಡಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ‘ಸಿಒಪಿ28’ರ ಸಲಹಾ ಮಂಡಳಿ ಸದಸ್ಯೆ ಹಿಲ್ಡಾ ಹೀನೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

‘ನೈಸರ್ಗಿಕ ಅನಿಲ ಸೇರಿದಂತೆ ತನ್ನ ಇತರ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿ ಒಪ್ಪಂದ ಮಾಡಿಕೊಳ್ಳಲು ಯುಎಇ ಚರ್ಚೆಗೆ ಮುಂದಾಗಿತ್ತು ಎಂದು ತಿಳಿದು ನಿರಾಸೆಯಾಗಿದೆ. ಇದು ಬಹುಪಕ್ಷೀಯ ಒಪ್ಪಂದಗಳ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತದೆ’ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

‘ಕೈಲಾಸ’ದೊಂದಿಗೆ ಒಪ್ಪಂದ: ಪೆರುಗ್ವೆ ಹಿರಿಯ ಅಧಿಕಾರಿ ವಜಾ

ಅಸುನ್‌ಸಿಯೋನ್ (ಪೆರುಗ್ವೆ) (ಎಎಫ್‌ಪಿ): ಅಸ್ತಿತ್ವದಲ್ಲಿಯೇ ಇಲ್ಲದ ದೇಶವಾದ ‘ಯುನೈಟೆಡ್ ಸ್ಟೇಟ್ಸ್ ಆಫ್ ಕೈಲಾಸ’ದೊಂದಿಗೆ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದ್ದಕ್ಕಾಗಿ ಪೆರುಗ್ವೆ ಹಿರಿಯ ಅಧಿಕಾರಿಯೊಬ್ಬರನ್ನು ವಜಾಗೊಳಿಸಲಾಗಿದೆ.

‘ದಕ್ಷಿಣ ಅಮೆರಿಕದ ದ್ವೀಪರಾಷ್ಟ್ರ’ ಎಂದು ಪರಿಚಯಿಸಿಕೊಂಡ ‘ಯುನೈಟೆಡ್ ಸ್ಟೇಟ್ಸ್ ಆಫ್ ಕೈಲಾಸ’ ದೇಶದ ಅಧಿಕಾರಿಗಳೊಂದಿಗೆ ಒಪ್ಪಂದಕ್ಕೆ ಸಹಿ ಮಾಡಿದ್ದರಿಂದ ತಮ್ಮನ್ನು ಹುದ್ದೆಯಿಂದ ವಜಾಗೊಳಿಸಲಾಗಿದೆ’ ಎಂದು ಕೃಷಿ ಸಚಿವರ ಮುಖ್ಯ ಅಧಿಕಾರಿ ಅರ್ನಾಲ್ಡೊ ಚಾಮೊರ್ರೊ ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಪೆರುಗ್ವೆಗೆ ಸಹಾಯ ಮಾಡುವು ದಾಗಿ ಅವರು (ಅಧಿಕಾರಿಗಳು) ತಿಳಿಸಿ ದರು. ಹಲವು ಯೋಜನೆಗಳನ್ನು ನಮ್ಮ ಮುಂದಿಟ್ಟರು. ನಕಲಿ ಅಧಿಕಾರಿಗಳು ಸಚಿವ ಕಾರ್ಲೋಸ್ ಜಿಮಿನೆಝ್ ಅವರನ್ನು ಭೇಟಿಯಾಗಿದ್ದರು’ ಎಂದೂ ಹೇಳಿದರು.

ಒಪ್ಪಂದದ ಪತ್ರವು ಸಚಿವಾಲಯದ ಅಧಿಕೃತ ಮುದ್ರೆಯನ್ನು ಒಳಗೊಂಡಿದ್ದು, ಅದರಲ್ಲಿ ‘ದೇಶದ ಸಾರ್ವಭೌಮರಾದ ಗೌರವಾನ್ವಿತ ನಿತ್ಯಾನಂದ ಪರಮಶಿವಂ’ ಹಾಗೂ ‘ಹಿಂದೂ ಧರ್ಮ, ಮಾನವೀಯತೆ, ಪೆರುಗ್ವೆ ದೇಶಕ್ಕೆ ನಿಮ್ಮ ಕೊಡುಗೆ ಅಪಾರ’ ಎಂದು ಚಾಮೊರ್ರೊ ಶ್ಲಾಘಿಸಿದ್ದಾರೆ.

‘ನಿತ್ಯಾನಂದ ಅವರ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಭಾರತ ಅವರಿಗಾಗಿ ಹುಡುಕಾಟ ನಡೆಸುತ್ತಿದೆ’ ಎಂದು ಇಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

ಈ ಮಧ್ಯೆ ಒಪ್ಪಂದವನ್ನು ಅಧಿಕೃತ ಎಂದು ಪರಿಗಣಿಸಲಾಗುವುದಿಲ್ಲ ಎಂದು ಕೃಷಿ ಸಚಿವಾಲಯ ತಿಳಿಸಿದೆ.

ನಾಗಾರ್ಜುನ ಸಾಗರ ಜಲಾಶಯಕ್ಕೆ ಆಂಧ್ರ ಪೊಲೀಸ್ ಸರ್ಪಗಾವಲು

ಹೈದರಾಬಾದ್: ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ನಾಗಾರ್ಜುನ ಸಾಗರ ಜಲಾಶಯದ 26 ಗೇಟ್‌ಗಳ ಪೈಕಿ 13 ಗೇಟ್‌ಗಳನ್ನು ಆಂಧ್ರಪ್ರದೇಶದ ಪೊಲೀಸರು ತಮ್ಮ ವಶಕ್ಕೆ ಪಡೆದಿದ್ದಾರೆ. ಇದು ನೂತನ ಸರ್ಕಾರ ರಚನೆಯಾಗಲಿರುವ ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಮಧ್ಯೆ ಹೊಸ ಬಿಕ್ಕಟ್ಟಿಗೆ ಕಾರಣವಾಗುವ ಸಾಧ್ಯತೆ ಇದೆ.

ತೆಲಂಗಾಣ ವಿಧಾನಸಭೆ ಚುನಾವಣೆ ನಡೆದ ಗುರುವಾರ ಬೆಳಿಗ್ಗೆ ಈ ಪ್ರಕ್ರಿಯೆ ನಡೆದಿದ್ದು ಜಲಾಶಯದ ಬಳಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಈ ಸಂಬಂಧ ನಲಗೊಂಡ ಜಿಲ್ಲೆಯ ವಿಜಯಪುರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿರುವ ತೆಲಂಗಾಣ ಸರ್ಕಾರವು, ಈ ವಿಷಯವನ್ನು ಕೇಂದ್ರ ಜಲಶಕ್ತಿ ಸಚಿವಾಲಯದ ಗಮನಕ್ಕೂ ತಂದಿದೆ.

ಶಸ್ತ್ರಸಜ್ಜಿತರಾಗಿ ಬಂದಿದ್ದ ಆಂಧ್ರಪ್ರದೇಶದ 500 ಪೊಲೀಸ್ ಸಿಬ್ಬಂದಿ ನಾಗಾರ್ಜುನ ಸಾಗರ ಜಲಾಶಯದ 26 ಗೇಟ್‌ಗಳ ಪೈಕಿ 13 ಗೇಟ್‌ಗಳು ಮತ್ತು ಬಲನಾಲೆಯನ್ನು ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ. 13ನೇ ಗೇಟ್‌ನಿಂದ ಹಿಡಿದು ಇಡೀ ಪ್ರದೇಶದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ಬಲನಾಲೆಯ ಮೂಲಕ ನೀರನ್ನು ಹರಿಸಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಪೊಲೀಸರೇ ಎ–1 ಆರೋಪಿಗಳಾಗಿದ್ದಾರೆ ಎಂದು ತೆಲಂಗಾಣ ಸರ್ಕಾರ ದೂರಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಆಂಧ್ರಪ್ರದೇಶದ ನೀರಾವರಿ ಸಚಿವ ಅಂಬತಿ ರಾಮಬಾಬು, ‘ನಾಗಾರ್ಜುನ ಸಾಗರ ಜಲಾಶಯದ ಕುರಿತು ಕೆಲವು ಮಾಧ್ಯಮಗಳು ತಪ್ಪಾಗಿ ಬಿಂಬಿಸುತ್ತಿವೆ. ಸರ್ಕಾರವು ಯಾವುದೇ ಒಪ್ಪಂದವನ್ನು ಉಲ್ಲಂಘಿಸಿಲ್ಲ. ಕೃಷ್ಣಾ ನದಿಯ ಶೇ 66ರಷ್ಟು ಪ್ರಮಾಣದ ನೀರು ಆಂಧ್ರಪ್ರದೇಶಕ್ಕೆ ಸೇರಿದ್ದು, ಉಳಿದ ಶೇ 34ರಷ್ಟು ನೀರು ತೆಲಂಗಾಣಕ್ಕೆ ಸೇರಿದ್ದಾಗಿದೆ. ನಮಗೆ ಸಂಬಂಧಿಸಿಲ್ಲದ ಒಂದೇ ಒಂದು ಹನಿ ನೀರನ್ನು ಸಹ ಬಳಸಿಕೊಂಡಿಲ್ಲ. ನಮ್ಮ ವ್ಯಾಪ್ತಿಯಲ್ಲಿರುವ ನಾಲೆಯನ್ನು ತೆರೆಯಲು ನಾವು ಪ್ರಯತ್ನಿಸಿದ್ದೇವೆ. ಈ ನೀರು ನಮಗೆ ಸೇರಿದ್ದಾಗಿದೆ’ ಎಂದು ಹೇಳಿದ್ದಾರೆ.

ಈ ವಿಚಾರದ ಕುರಿತು ಉಭಯ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಶೀಘ್ರವೇ ಮಾತುಕತೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ.

ತೆಲಂಗಾಣದಲ್ಲಿ ಕೆಸಿಆರ್ ನೇತೃತ್ವದ ಬಿಆರ್‌ಎಸ್ ಪಕ್ಷಕ್ಕೆ ಚುನಾವಣೆಯಲ್ಲಿ ಅನುಕೂಲ ಮಾಡಿಕೊಡಲು ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ನೇತೃತ್ವದ ಸರ್ಕಾರವು ಮತದಾನ ಆರಂಭಕ್ಕೂ ಮುನ್ನವೇ ಈ ರಾಜಕೀಯ ನಾಟಕ ಶುರು ಮಾಡಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

12 ತಂಡಗಳ ಪೈಪೋಟಿ • 8ರಿಂದ ಬೆಂಗಳೂರು ಲೆಗ್ ಪಂದ್ಯಗಳು

ಪ್ರೊ ಕಬಡ್ಡಿ: 10ನೇ ಆವೃತ್ತಿ ಇಂದಿನಿಂದ

ಅಹಮದಾಬಾದ್: ಬಹುನಿರೀಕ್ಷಿತ ಪ್ರೊ ಕಬಡ್ಡಿ ಲೀಗ್‌ನ (ಪಿಕೆಎಲ್) 10ನೇ ಆವೃತ್ತಿಯ ಪಂದ್ಯಗಳು ಶನಿವಾರದಿಂದ ನಡೆಯಲಿವೆ. 2014ರಲ್ಲಿ ಆರಂಭವಾದ ಪಿಕೆಎಲ್, ಭಾರತದಲ್ಲಿ ಐಪಿಎಲ್ ಬಳಿಕ ಅತಿ ಹೆಚ್ಚು ವೀಕ್ಷಣೆ ಹೊಂದಿರುವ ಎರಡನೇ ಕ್ರೀಡಾ ಲೀಗ್ ಆಗಿದೆ. ಈ ಬಾರಿಯೂ 12 ತಂಡಗಳು ಚಾಂಪಿಯನ್ ಕಿರೀಟಕ್ಕಾಗಿ ಪೈಪೋಟಿ ನಡೆಸಲಿವೆ.

ಶನಿವಾರ ರಾತ್ರಿ 8ಕ್ಕೆ ಆರಂಭವಾಗುವ ಹೈವೋಲ್ಟೇಜ್ ಪಂದ್ಯದಲ್ಲಿ ತೆಲುಗು ಟೈಟನ್ಸ್ ವಿರುದ್ಧ ಗುಜರಾತ್ ಜೈಂಟ್ಸ್ ಸೆಣಸಲಿದೆ. ಮೊದಲ ಪಂದ್ಯದಲ್ಲೇ ಇರಾನ್‌ನ ಸ್ಟಾರ್ ಆಟಗಾರ ಫಝಲ್ ಅತ್ರಾಚಲಿ ಮತ್ತು ಭಾರತ ಕಬಡ್ಡಿ ತಂಡದ ನಾಯಕ ಪವನ್ ಸೆಹ್ರಾವತ್ ಮುಖಾಮುಖಿಯಾಗಲಿದ್ದಾರೆ.

ರಾತ್ರಿ 9ಕ್ಕೆ ನಡೆಯುವ ಎರಡನೇ ಪಂದ್ಯದಲ್ಲಿ ಯು ಮುಂಬಾ ತಂಡವು ಯುಪಿ ಯೋಧಾಸ್ ಜತೆ ಸೆಣಸಲಿದೆ. ಬೆಂಗಳೂರು ಬುಲ್ಸ್ ತಂಡವು ಡಿ. 3ರಂದು ಗುಜರಾತ್ ಜೈಂಟ್ಸ್ ವಿರುದ್ಧದ ಪಂದ್ಯದೊಂದಿಗೆ ತನ್ನ ಅಭಿಯಾನ ಆರಂಭಿಸಲಿದೆ.

ತವರು ನೆಲದಲ್ಲಿ ಪಂದ್ಯಗಳು: ಈ ಬಾರಿ ಎಲ್ಲ ಫ್ರಾಂಚೈಸ್‌ಗಳ ತವರು ನೆಲದಲ್ಲಿ ಪಂದ್ಯಗಳು ಆಯೋಜನೆಯಾಗಿವೆ. ಮೊದಲ ಲೆಗ್‌ನ ಪಂದ್ಯಗಳು ಅಹಮದಾಬಾದ್‌ನಲ್ಲಿ ಡಿ.2 ರಿಂದ 7ರವರೆಗೆ, ಎರಡನೇ ಲೆಗ್‌ನ ಪಂದ್ಯಗಳು ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಡಿ.8 ರಿಂದ 13ರ ವರೆಗೆ ಆಯೋಜನೆಯಾಗಿವೆ. ನಂತರ ಕ್ರಮವಾಗಿ ಪುಣೆ (ಡಿ.15–20), ಚೆನ್ನೈ (ಡಿ.22–27), ನೋಯ್ಡಾ (ಡಿ.29–ಜ.3, 2024), ಮುಂಬೈ (ಜ.5–10), ಜೈಪುರ (ಜ.12–17), ಹೈದರಾಬಾದ್ (ಜ.19–24), ಪಟ್ನಾ (ಜ.26–31), ದೆಹಲಿ (ಫೆ. 2–7), ಕೋಲ್ಕತ್ತ (ಫೆ.9–14), ಪಂಚಕುಲದಲ್ಲಿ (ಫೆ.16–21) ಲೀಗ್ ಹಂತದ ಪಂದ್ಯಗಳು ನಡೆಯಲಿವೆ.

ಅದ್ಧೂರಿ ಚಾಲನೆ: ಅಹಮದಾಬಾದ್‌ನ ಸಾಬರಮತಿ ನದಿಯಲ್ಲಿ ಅಕ್ಷರ್ ರಿವರ್ ಕ್ರೂಸ್‌ನಲ್ಲಿ ಶುಕ್ರವಾರ ಟೂರ್ನಿಗೆ ಅದ್ಧೂರಿಯಾಗಿ ಚಾಲನೆ ನೀಡಲಾಯಿತು. ಪ್ರೊ ಕಬಡ್ಡಿ ಕಮಿಷನರ್ ಅನುಪಮ್ ಗೋಸ್ವಾಮಿ, ಹಾಲಿ ಚಾಂಪಿಯನ್ ತಂಡದ ನಾಯಕ ಸುನಿಲ್ ಕುಮಾರ್ (ಜೈಪುರ್ ಪಿಂಕ್ ಪ್ಯಾಂಥರ್ಸ್), ಈ ಆವೃತ್ತಿಯ ಆರಂಭಿಕ ಪಂದ್ಯದ ನಾಯಕರಾದ ಪವನ್ ಸೆಹ್ರಾವತ್ (ತೆಲುಗು ಟೈಟನ್ಸ್) ಮತ್ತು ಫಜಲ್ ಅತ್ರಾಚಲಿ (ಗುಜರಾತ್ ಜೈಂಟ್ಸ್) ಇದ್ದರು.

ಅಹಮದಾಬಾದ್‌ನಲ್ಲಿ ಶುಕ್ರವಾರ ಟೂರ್ನಿಗೆ ಚಾಲನೆ ನೀಡಲಾಯಿತು. ಪ್ರೊ ಕಬಡ್ಡಿ ಲೀಗ್‌ನ ಕಮಿಷನರ್ ಅನುಪಮ್ ಗೋಸ್ವಾಮಿ ಹಾಗೂ 12 ತಂಡಗಳ ನಾಯಕರು ಇದ್ದರು.

ಪ್ರೊ ಕಬಡ್ಡಿ ಲೀಗ್ ಪ್ರಶಸ್ತಿ ಪಡೆದ ತಂಡಗಳು

ಆವೃತ್ತಿ	ವಿಜೇತರು
1	ಜೈಪುರ್ ಪಿಂಕ್ ಪ್ಯಾಂಥರ್ಸ್
2	ಯು ಮುಂಬಾ
3	ಪಟ್ನಾ ಪೈರೆಟ್ಸ್
4	ಪಟ್ನಾ ಪೈರೆಟ್ಸ್
5	ಪಟ್ನಾ ಪೈರೆಟ್ಸ್
6	ಬೆಂಗಳೂರು ಬುಲ್ಸ್
7	ಬೆಂಗಾಲ್ ವಾರಿಯರ್ಸ್
8	ದಬಾಂಗ್ ಡೆಲ್ಲಿ
9	ಜೈಪುರ್ ಪಿಂಕ್ ಪ್ಯಾಂಥರ್ಸ್

ಇಂದಿನ ಪಂದ್ಯಗಳು

- ತೆಲುಗು ಟೈಟನ್ಸ್– ಗುಜರಾತ್ ಜೈಂಟ್ಸ್ (ರಾತ್ರಿ **8**)
- ಯು ಮುಂಬಾ– ಯುಪಿ ಯೋಧಾಸ್ (ರಾತ್ರಿ **9**)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಹಾಟ್‌ಸ್ಟಾರ್

ಹಾಕಿ: ಜರ್ಮನಿಗೆ ಮಣಿದ ಭಾರತ

ಸ್ಯಾಂಟಿಯಾಗೊ (ಚಿಲಿ): ಭಾರತ ತಂಡ, ಎಫ್‌ಐಎಚ್ ಮಹಿಳೆಯರ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯ ತೀವ್ರ ಹೋರಾಟದ ಪಂದ್ಯದಲ್ಲಿ ಗುರುವಾರ 3–4 ಗೋಲುಗಳಿಂದ ಕಳೆದ ಬಾರಿಯ ರನ್ನರ್ ಅಪ್ ಜರ್ಮನಿಗೆ ಶರಣಾಯಿತು.

ಭಾರತ ಪರವಾಗಿ ಅನ್ನು (11ನೇ ನಿಮಿಷ), ರೋಪ್ನಿ ಕುಮಾರಿ (14ನೇ) ಮತ್ತು ಮುಮ್ತಾಜ್ ಖಾನ್ (24ನೇ) ಗೋಲು ಬಾರಿಸಿದರೆ, ಸೋಫಿಯಾ ಶ್ವಾಬೆ (17ನೇ), ಲಾರಾ ಪ್ಲುತ್ (21ನೇ, 36ನೇ ನಿ) ಮತ್ತು ಕ್ಯಾರೊಲಿನ್ ಸೀಡೆಲ್ (32ನೇ) ಅವರ ಗೋಲುಗಳ ನೆರವಿನಿಂದ ಜರ್ಮನಿ ಗೆಲುವು ದಾಖಲಿಸಿತು.

ಆಟದ ಕೊನೆ ಕ್ಷಣಗಳಲ್ಲಿ ದೊರೆತ ಸತತ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲುಗಳಾಗಿ ಪರಿವರ್ತಿಸಲು ಭಾರತ ವಿಫಲವಾಯಿತು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಶ್ರೀ ಕೃಷ್ಣ ಕುಟೀರ

Charigan Group

ಈಶಾ ಫೌಂಡೇಶನ್ ಸಮೀಪ
ಚಿಕ್ಕಬಳ್ಳಾಪುರ, ಸರ್ಕಾರಿ ಮೆಡಿಕಲ್ ಕಾಲೇಜು ಬಳಿ, ಪೆರೇಸಂದ್ರ.

A khatha

Just ₹12.99 Lakhs*

HOUSE + SITE

ಕನಸಿನ ಮನೆ ನಿಮ್ಮದಾಗಿಸಿಕೊಳ್ಳಿ

ಬ್ಯಾಂಕುಗಳಿಂದ ಸಾಲ ಸೌಲಭ್ಯವಿದೆ

9880202820, 6364260003, 9611946222

ರೈಲು ಗಾಲಿ ಕಾರ್ಖಾನೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ನೋ)

RAIL WHEEL FACTORY EMPLOYEES HOUSE BUILDING CO-OPERATIVE SOCIETY LTD

(ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಕಾಯ್ದೆಗೆ ಒಳಪಟ್ಟಿದೆ)

Invest in Your Future, Invest in Land

RERA REG NO. PRM/KA/RERA/1250/301/PR/10523/005930



ಉಳಿಕೆ ನಿವೇಶನಗಳಿಗೆ ಅರ್ಜಿ ಆಹ್ವಾನ

RESIDENTIAL PLOTS AVAILABLE

SOCIETY SITES READY TO ALLOTMENT WITH PREMIUM AMENITIES

Civil Work Completed

Bank Loan Available

9632022210 BOOK NOW

ಚಿತ್ರದುರ್ಗದಲ್ಲಿ Commercial Sites Avalable
National Highway Entrance ಚಿತ್ರದುರ್ಗ New Ring Road
contact 9632066650

A Project of Sharanya Farms & Resorts
Create your own Sunshine
www.sharanyafarms.com

ಶರಣ್ಯ ಸ್ಯಾಂಡಲ್ ವ್ಯಾಲಿ ಫಾರ್ಮ್ಸ್

ಮೈಸೂರು-ಮಳವಳ್ಳಿ ರಾ.ಹೆ. ಸಮೀಪ

High earning with Sandal Farming

Grand Launch on **December 2nd**

ಸ್ಪಾಟ್ ಬುಕಿಂಗ್ ಮಾಡಿದವರಿಗೆ ವಿಶೇಷ ಕೊಡುಗೆ

0% ಇಎಂಐ

5.5 ಗುಂಟೆ ಭೂಮಿ ಅಥವಾ ಹೆಚ್ಚಿನ ದೊಂದಿಗೆ ಪ್ರಾರಂಭಿಸಿ

ಗಂಧದ ಕೃಷಿಯಿಂದ ಅಧಿಕ ಆದಾಯ

ಸೌಲಭ್ಯಗಳು: ಕ್ಲಬ್ ಹೌಸ್, ಕಾಟೇಜ್, ಈಜುಕೊಳ, ಆಟದ ಮೈದಾನ, ಧ್ಯಾನ ಮಂದಿರ, ದೇವಾಲಯ, ಜಿಮ್, ಇನ್ನು ಅನೇಕ...

ಹೆಚ್ಚಿನ ವಿವರಗಳಿಗೆ ಕರೆ ಮಾಡಿ: **70 2626 2233**

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER

ಕ್ಲಾಸಿಫೈಡ್ಸ್

REAL ESTATE SELLING

Sites

Banashankari

COLDWELL BANKER
VALUE ADD REALTY
#1 REAL ESTATE AGENCY IN BANGALORE
Exceptional BDA corner plots for both commercial and residential ventures in BANASHANKARI, JAYANAGAR, ANJANAPURA, SIR M VISHVESHWARAIAH LAYOUT, KEMPEGOWDA LAYOUT, RR NAGAR, and UTTRAHALLI. Your perfect opportunity for prime real estate is here.
Act fast and secure your corner of success.
99165 92400

BANASHANKARI 6TH Stage, Vishweswaraiah BDA/A Katha 20x30, 30x40, 40x60,50x80, Buying/ Selling, Immediate Settlement. SHIVARAJU: 9845390290, 7676547557.

BSK-6TH STAGE 7th Block 50x80 Site For Sale in Good Location Near Proposal BDA Complex (Agents Excuse) Call:9845555666

Basaweshwaranagar

COMMERCIAL NORTH East Corner Site, Fully Developed Area, 2230Sft. Near Pushpanjali Theatre, Shivanagar, Banglore 9343782958

Jakkur

Jakkur Gated community layout 30*40 sites sale 30ft roads adjacent to Arkavathi 7th block 40, 60ft accessible roads very close Jakkur double road. **9740004984/ 9880124482**

Kengeri

30X40 NORTH, BBMP A katha, Kengeri Metro Station, Uttarahalli Road, (BGS Global) 7,000/- Negotiable. 9148914809, 9740075563.

60X40 SITE Very Near to Kengeri Metro Station, Ready For Immediate Sale. Contact 9341949146/ 9916103086

Kanakapura Road

KANAKAPURA ROAD Kaggalipura BMRDA APPROVED 'E" Khatha 30x40, 30x50, East Facing, 3500/- Negotioble: 9538680364/ 9986146147

Kempegowda Layout

KEMPEGOWDA LAYOUT BDA Site, 50×80 1st block K Sector Near Peripheral Ring Road Commercial Property: 9035151657

KEMPEGOWDA LAYOUT BDA Sites for Sale Commercial, 100 feet and 80 feet Road: 9731594565, 9449556869

NADAPRABHU KEMPEGOWDA LAYOUT and Vishweshwaraiah Layout BDA Sites Buying, Selling 20x30, 30x40, 40x60. 9742568746, 9480186666.

Nagarabhavi

NAGARABHAVI 30X40 West Commercial. Vishweswaraiah Layout 40x50 North West Corner BDA Commercial Site Sale. 9980409820.

Rajarajeshwari Nagar

RAJARAJESHWARI NAGAR Ideal Homes Sale 40X60 BDA Site, Excellent Location. Direct Owner Meeting, Contact: 8073768787

Vishweshwariah Layout

SALE:BDA SIR. M.VISHVESWARAIAH Layout 6th-block 40x60_N/F_40feet road,near_BDA Complex_80feet-road back-side. 9844533371/ 9341733480

BDA VISHWESHWAR Layout, 4th Block 30x40 N/F, Vishweshwaraya Layout, 1st Block, 20x30, E/F. 9980239748/ 8792207829.

FOR SALE: Vishweshwariah Layout 4th Block. Near BDA Complex. 1000 Sft NW Corner. Mallathahalli NGEF Layout. 30×40 West face. 40 Feet Road. 9242197954

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

DIRECT OWNER 40x60 East Facing BDA Site Sale VISHVESWARAIAH LAYOUT 1st Block, 60ft Road. 9886634578

VISHVESWARAIAH LAYOUT Site For Sale 8th Block 30x40, 20x30 AKatha Near Vidyaniketana School: 9036373915/7899626574

BDA VISHWESHWARAYA Layout, 6th Block, Site #2398, 40x60, S/F, Near Oxford College, Good Location. 9945266212.

Yeshwanthpur

YESHWANTHPUR PRIME Location, Residential site, 15x47 East (old Building will be demolished) 12,500/-psqft. Call. 9980496944.

Tumkur

11.6 GUNTA DC CONVERTED PLOT SALE at Gubbi Town Near Police Station Clear Title: 9880419865

Arkavathi Layout

ARKAVATHI LAYOUT Site For Sale 55x100 Both-Sides Road Adjacent_to BDA_Layout In Good_Location Call: 86602-20048 76769-00174

Anjanapura

SITE FOR SALE 7TH BLOCK ANJANAPURA 30X40 N/F NEAR BDA COMPLEX GOOD LOCATION GENUINE BUYERS:9880776950

Nelamangala



CNR Infocity
Building Future
READY TO BUILD PLOTS FOR EVERY DREAM HOME
BMRDA Approved Sites available @ NEELAMANGALA
CALL +91 8722227780 +91 8660981179

BMRDA/ NPA 30x50 West Facing Site 60ft Road, Near NH-4 Highway and Mangalore Highway: 8310681025

RERA No.PRM/KA/RERA/1250/307/PR/240723/006089
Sri Thulasi Ranganatha Gardenia
BMRDA & RERA APPROVED
Residential Sites

SPECIAL OFFER Price Rs. 1749 Per Sft
Near Nelamangala ನಿವೇಶನಗಳು
Close to Thyamagondlu Industrial area
Ready For Registration & Construction
Bank Loan Available
Call: 8956 412 000

Flat

Basavanagudi

3 BHK fully furnished Brand new Flats in Basavangudi, Hanumanthanagar, Srinivasanagar for Sale. 9663468538

Cambridge Layout

ARTILLARY ROAD Spacious Four Bedrooms, Private Entrance, Garden, Backyard, Car-parking. 3700 sft. 2.9 Cr. 9620204637/ 9880346216

Devanahalli

FOR SALE- 3BHK Ready to move flat at Banayan, Brigade Orchid, Devanahalli, Price: INR.65lakhs: 9886214023

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Nagarabhavi

FLATS FOR-SALE 2 & 3 BHK Near Nagarabhavi circle under construction 1 km from metro-station 95388-28808 98450-66608

Uttarahalli

3/4 BHK New Luxurious Flats Sale, Fully Furnished, Italian Marble, Cauvery, Security, Car-parking. 70L/90L. 9844394444, 9945224058.

Vidyaranyapura

PROPERTY FOR Sale 3 BHK flat of 1650 sqft (A Khatha) East facing for Sale at 2nd block, BEL layout, Vidyaranyapura main road. For details contact +91 9108268406

House

Magadi Road

SALE GF Single Bedroom House 1st & 2nd Floor 3Bed House Kadabagere Contact Gangadhar: 9632824856

Mathikere

FOR SALE in Mathikere Independent East Facing, Semi Furnished 3 Bedroom Single Floor House 1400 sft. on 2037 sft. Site. Near Mathikere Bus Stop and JPN Park. Call: 9972535997.

Nagarabhavi

"NAGARABHAVI BDA-30X40 West facing Newly constructed G+4 Commercial Building Rental income 1.60 Lakhs,for sale. 9901405391"

Farm House/ Land/ Resorts

Mysore Road

11GUNTAS/ 12000SFT with Fencing Near Channapatana from Bangalore Mysore Highway 5min 20L & 1Acre Land Sale 52L: 9845169300

Commercial Building

Bannerghatta Road

FOR SALE- Industrial/ Commercial property BBMP`A`KATHA Bannerghatta Road BTM NS.PALYA 3600sq.ft(60x60) SW Corner With`built-up 4500sq.ft suitable`for hotel,PG, showroom or`educational institution. 100`Meters from-upcoming JP.Nagar 3rd`phase metro-station. Brokers please excuse.Contact: 8867097007 9986494684

Villas/Bunglows

Sarjapur Road

VILLA PLOTS Sale Near Kodathi WIPRO/ Nemesia Academy/ Mullur And Muthanallur Cross Excellent Locations :8884501767

Commerical

Mysore Road

MYSORE ROAD Kumbalgodu Prime Industrial Hub 13200 sqft Commercial Shed, 3 Side Road, Corner property available for RENT (Rs 25/- per sqft) or for SALE (Cost 4.5 cr). Contact : owner 9844027560.

RAMANAGARA HIGHWAY Commercial Conversion 40000 Sqft Close to Giriyas 4500/-1Acre 05Guntas Green Belt,3Cr :9845600007

Seshadripuram

FULLY-FURNISHED, PLUG&PLAY OFFICE space 520Sq.ft, with Executive-Cabin Newly Renovated Bathroom cum`Toilet Ceiling AC 2nd`Floor,Lift, Seshadripuram College MainRoad, 300meters from`Mantri Mall Metro`and opposite Seshadripuram Bus-stop SALE:Rs.85 Lakhs Call: 8310317198.

General

Multiple Locations

ALL AREAS in Bangalore Sale/ Rent. Commercial, Industrial, Residential, Farmland and Office space. Contact. 9380586105

Agricultural Land Converted

Mysore Road

MYSORE ROAD, Dodda Aaladamara 10 Acre`Land, Yellow Zone,Clear Title, General Property Prime`Land 2,10,00,000/- Per Acre, near ISRO -9845000299

REAL ESTATE BUYING

Sites

Banashankari

BDASITES WANTED Anjanapura Arkhavathy Banashankari 6th Stage, Vishweshwaraiah, Kempegowda Any BDA LayoutContact: 9845062822 8660751654

Kanakapura Road

WANTED SITE 30x40, 40x60 Anjanapura, NarayanaNagar, BCMC Layout, J.P.Nagar, Gubblala, BCC Layout. Agents Excuse. 9380647082.

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

"WANTED BDA-SITES Banashankari, J.P.Nagar, Jayanagar, Vishveshwaraiah Layout, only owners Contact: "Krishna"- 9092028055. NO_Brokers/ Resellers"

Mysore

WANTED MUDA Allotted Sites Measuring 20/30, 30/40, 40/60 and 50/80 Genuine Owners contact: 9845495879, 9902066606

Vishweshwariah Layout

WANTED 50X80 Residential Site Vishweshwaraiah Layout 8th Block. Direct Owner meeting required. Contact: 9342833999

BUILDERS ESSENTIAL

Water Proofing

WE FIX LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

NEWLY BUILT Office Accommodation To-let 1700 sft in F Block, Sahakarnagar. Contact: 9448271016/ 6361963863.

RENT 5000 sft posh office in 2 flrs 50 work station conference /executive rooms pantry toilets carpets A.C Owner 9886030621

Godown

TOTAL 10000 Sqft Area, 3000 Sqft Shed Built up for Rent at Tumkur Industrial Area. Suitable for Godown. Call: 9880201335

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

DH DECCAN HERALD The Power of Good
Classifieds
More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property

#1 PLACE YOUR AD HERE
www.dhclassifieds.com BOOK NOW
Book your ad with us now! For more details contact:
+91 9886213331 | +91 9901641752 | +91 9845114560 |
+91 9731810277 | +91 9900428036 | 080-45557163/164

DH DECCAN HERALD The Power of Good
Classifieds
More value, more impact
ಪ್ರಜಾವಾಣಿ
BOOK ONLINE
BOOK YOUR AD IN 5 SIMPLE STEPS
STEP 01 Log onto www.dhclassifieds.com
STEP 02 Choose the category
STEP 03 Choose the Ad dates
STEP 04 Compose the matter
STEP 05 Confirm and pay
Our Categories
Job Hunt
Lost & Found
Real Estate
Business
Name Change
Education
Matrimonial
Health
Automobile
Astrology
Public Notice
Travel
www.dhclassifieds.com
BOOK NOW
For more details contact:
+91 9845114560 | +91 9731810277 |
+91 9886213331 | +91 9901641752 |
+91 9900428036 | 080- 45557163/164

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

JOB OPPORTUNITIES

Engg/ Production Technical

CIVIL ENGINEERS, Quality and Safety 3-5 years experiance to work at our Bangalore project. Intrested sent resumes to gvrconst@yahoo.co.in

Drivers

REQUIRED SCHOOL Van Driver for Kenmore school, Basavanagudi, opp M N Krishanarao park Basavanagudi, Bangalore 04 contact 9901501185. Room provided if needed.

General

WANTED:
EXPERIENCED
SUPERVISORS 8
DRIVERS 10
MARKETING 2
Good`Salary Contact:
KS TRAVELS PVT.LTD
Kempapura Hebbal
Bangalore
9844660412
9478650832

Multiple Vacancy

VACANCY FOR Company Secretary: Conversant with ROC, RBI & CIC Matters. Accountant: Knowledge of working with TALLY ERP9. Contact: B K Bhalotia/ Anjana, Mobile- 9901247170/ 9632215753. Please reply with Resume with Expected Salary toImpact Corporate Investment (P) Ltd. 34, 2nd Floor, Gold Coin Buildings- 1, Bangalore - 560042 Email: coronaton01@gmail.com

Teachers/ Professors

REQUIRED PART time Full time,Teachers for Maths, Science and Kannada for Primary and High school. Contact The Kenmore School, Basavanagudi, Bangalore 04 ph 9901501185, kenmoreschool@gmail.com

WEEKEND CORNER

ಕ್ಲಾಸಿಫೈಡ್ಸ್

Yoga Teachers Training Course
(ONLINE)

Deepayan yoga Sansthan
You can do it

Admission Open

Good Chance to Earn
₹15000 to ₹30000 Per Month.

Two certificates- Yoga Certification Board (YCB) of India
Yoga Alliance, USA

1. Weekdays Batch:
Classes: Monday to Friday
Duration: 3 Months
• Time: 12pm to 2pm

2. Weekend Batch:
Duration: Three Months
Classes: Saturday & Sundays
• Time: 8am to 11am

• Will Cover Both Theory & Practical.

For Registration: +91 99209 62991

Deepayan Yoga Sansthan
Web : www.deepayan.yoga

PERSONAL

Lost

I, AARON Joseph has irretrievably lost the Statement of Marks and Certificate Statement of Examination Results of ICSE Class X Examinations conducted in 2023. UID is: 7795959 and Index Number is 1233560/011. Year of passing is 2023 and studied in Greenwood High Bengaluru.

Change of Name

I, RATHNA LATHA REDDY, W/o. Tirupati Reddy R/o. #B401, Mantri Alpyne Banashankari 5th Stage, Bangalore-61, have changed my name to RATHNA LATHA vide affidavit dated 01/12/2023, before notary D.K. Rameshappa, Bangalore. Henceforth I shall be called RATHNA LATHA only.

I, RANGANATHA GOWDA, Residing at #19, 2nd main 2nd cross, 2nd Block Nandini Layout, Bangalore-96 have changed my name as DEVENDRAPPA RANGANATHA GOWDA, vide,affidavit dated 28/11/2023 before Notary V.Nagarajan, Bangalore

WE, SYED MAUZAM ALI and MISBAH SUMAIYA residing No.7, 4th Main, 1st Cross, Adi Kaber Ashram, Matadahalli, Banglaore-560032 have changed my minor daughter's name from SYED ZUNAISHA to UROOJ FATHIMA vide affidavit dated 09/11/2023 sworn before noatry A.Idinabba, Bangalore

CHANGE OF NAME
I, **NAGATHAN JYOTHI HANUMANT RAO,** R/at Flat No. 205, 'Malnad Rasidency', Hanuma Hills Layout, Near Chitanya Techno School, Subramanyapura Post, Bangalore-61, have changed my name to **POOJA RAJENDRA JOSHI**, vide affidavit dt:1-12-2023, before Notary K.V. Bachi Reddy, Bangalore. Henceforth I shall be called **POOJA RAJENDRA JOSHI** only.

CHANGE OF NAME
I, **PUSHPALATHA. U.B.,** R/at# 266, Karumada, 1st 'C' Main Road, 12th Cross, West of Chord Road, Mahalakshmipuram, Bangalore-86 have changed my name to **LATHA PRABHU** vide affidavit dated 01-12-2023, before Notary B.S. Hemanth Kumar, Bangalore. Henceforth I shall be called **LATHA PRABHU** only.

EDUCATION
To Place your Classified Ads Contact:
9845114560

15+ YEARS OF EXPERTISE

FREE INTERIOR PAINTING

ROOF LEAKAGE?!
BATH ROOM / SIDE WALL / SUMP
Permanent Solution with Guarantee
95911 64233
www.noleakage.in
We do Constructions and Painting also.

I, MAHESH M.S., Residing at #115, Srigandhkaval, Nagarabhavi, Bangalore-72, have changed my name as MAHESH, vide affidavit dated 30/11/2023 before Notary Kodi Nagappaya, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Property Investment EXPO North Bengaluru 2023

REALTY INVESTMENT EXPO

OPEN TODAY & TOMORROW

THE BIGGEST REAL ESTATE EXPO

Platinum Sponsor
Assetz
empowered innovation
Redesigning the Way People Live.

Why Visit RIE ?
1. 25 + Reputed Builders
2. 100 + Projects
3. Properties at Prime Location with Best R.O.I
4. Verified & RERA Registered Properties
5. 100 % Value for Money
6. Exclusive Deals for Early Bird Registration

VISIT US

Banking Partner
Central Bank of India

SAVE THE DATE
DEC 2ND SATURDAY & 3RD SUNDAY 2023
HILTON HOTEL & CONVENTION CENTRE
MANYATA TECH PARK NAGAWARA, HEBBAL
11 AM • 7 PM
FREE ENTRY | FREE PARKING
25+ TOP BUILDERS | 100+ PROJECTS

98451 66756 | 99864 42255
www.realtyinvestmentexpo.com

IIFJAS

Grow your business by connecting directly with Indias best manufacturers and suppliers

900413792
www.iifjs.com

BENGALURU
2•3•4 DEC . 2023

MANPHO CONVENTION CENTER
NEAR MANYATA TECH PARK

GRAND BUSINESS NETWORKING WITH SILVER JEWELLERY, FASHION JEWELLERY & FORMING JEWELLERY SUPPLIERS FROM OVER 20 CITIES OF INDIA



BIRTHPLACE OF FASHION JEWELLERY TRENDS FROM ALL PARTS OF INDIA

FREE ENTRY FOR ALL :: 10:30 AM - 6:30 PM
GENERAL VISITOR ENTRY STARTS AT 3:00 PM

GOLD SPONSOR: JAI CREATIONS
SILVER SPONSOR: RAJMANI Jewellers
SILVER SPONSOR: M.R GOLD COVERING
ORGANIZER: RADIAANT UNIFY LTD

Orchid Travel & Tours

INTERNATIONAL TOURS ON OFFER PRICE



Australia and Newzeland (20 days)
Departure : March and April 2024.
Places covered : Melbourn, Cairns, Gold Coast, Sydney and Christchurch, QueensTown, Wanaka Auckland and Rotorua

USA -12 days and 18days
Departure : May and June 2024.
Places covered: East coast and west coast Orlando & Bahamas cruise.

Grand UK and Europe (18days)
Departure : April /May/June and July 2024.
Covering 10 Countries : UK, France, Netherlands, Belgium, Germany Switzerland, Austria, Lichtenstein, Italy, Vatican.

Vietnam (7 days)
Departure : Feb / March and April
Places to cover : Hanoi city, Da nang, Ha long Bay, Ho chi minh city.

Singapore - Malaysia - Thailand (11 days)
Departure : April / May 2024

Cambodia and Thailand (08 Days)
Departure :
Places to cover : Bangkok, Pattaya, Siem Reap, Angkor Wat, Ta Pom, Boyan, Angkor Thom....etc

Wonders of Japan (7 Days)
Departure :
Places to cover :Tokyo, Osaka, Kyoto, Nara, Hiroshima

Nepal Muktinath (08 Days)
Departure :
Places to cover : Sri Mukthinatha (Saligramam), Gandaki River, Narasimha Temple, Jwala Mai, Ramanuja Kuta, Pokhara, Bindhya Basini Temple, Fewalake Devi Temple, Jomsom, Manaokamana Devi Temple by Cable Car, Kathmandu, city tour

OUR OTHER TOURS : Dubai, Srilanka, Egypt, South Africa, South America, Bhaku ect.

For more details please Contact :
#98, 1st Floor, DVG Road, BASAVANAGUDI, Bangalore
Phone : 080 26617178 / 9900080796 / 9900080793

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

DMR

ಇದು ನಿಮ್ಮದೇ ತೋಟ
ನೆಲಮಂಗಲದ ಬಳಿ ಇದೆ..!

ಬೆಂಗಳೂರು - ಮಂಗಳೂರು ಹೈವೇಗೆ ಹೊಂದಿಕೊಂಡಿದೆ.

Actual Photos

ಅತ್ಯುತ್ತಮ ಕೊಡುಗೆ
ಆದಿತ್ಯ DMR ವತಿಯಿಂದ

ಬೆಂಗಳೂರಿಗೆ ಹತ್ತಿರ ಕೃಷಿ ಭೂಮಿ
ಕೊಳ್ಳುವುದು ನಿಜಕ್ಕೂ ಒಳ್ಳೆಯ ನಿರ್ಧಾರ

ಕೃಷಿ ಭೂಮಿಗೆ ಪ್ರತಿ ವರ್ಷವೂ ಬೇಡಿಕೆ
ಹೆಚ್ಚುತ್ತಲೇ ಇದೆ.

ವಾರಾಂತ್ಯವನ್ನು ನಿಮ್ಮದೇ
ಫಾರ್ಮ್ ಹೌಸ್ ನಲ್ಲಿ ಆನಂದಿಸಿ
ತಕ್ಷಣ ತೋಟಗಾರಿಕೆ
ಆರಂಭಿಸಲು ನೀರಿನ ಸೌಲಭ್ಯವಿದೆ

ಇಲ್ಲಿ ತೋಟದ ಭೂಮಿ ಖರೀದಿಸಿದವರಿಗೆ
ಕ್ರಿಕೆಟ್ ಕ್ರೀಡಾಂಗಣದ ಸದಸ್ಯತ್ವ ಉಚಿತ

ನಿಮ್ಮದೇ ತೋಟ ನಿರ್ಮಿಸಿ
ನಿಮ್ಮಿಷ್ಟದ ಹಣ್ಣು ತರಕಾರಿ ಬೆಳೆಯಿರಿ

ಜಮೀನು ಬಾಡಿಗೆ ನೀಡಿ ಸಂಪಾದಿಸಿ

- ನಿಮ್ಮದೇ ಫಾರ್ಮ್ ಹೌಸ್ ನಿರ್ಮಿಸಿಕೊಳ್ಳಲು ಇದು ಸಕಾಲ
- ಆರ್ಗಾನಿಕ್ ಫಾರ್ಮಿಂಗ್ ಅಥವಾ ಫ್ಲೋರಿಕಲ್ಚರ್ ಮಾಡಿ ಲಾಭಗಳಿಸಿ
- ಬೆಂಗಳೂರು ಹತ್ತಿರದಲ್ಲಿ ತೋಟದ ಭೂಮಿ ಕೊಳ್ಳುವುದು ಹೆಚ್ಚು ಲಾಭದಾಯಕ

99000 99607, 99000 99503, 90365 58777, 98458 49990